ರಂಜನೆ ಬೋಧನೆ ಪ್ರಬೋಧನೆ

ಲಂಕೇಶ್

29 ಏಪ್ರಿಲ್ 2015 ಪುಟ 20 ರೂ. 15/-




ಕೀಟ ಜಗತ್ತಿನ ವಿಸ್ಮಯ






ಮತ್ತೆ ಹೆಡೆಯೆತ್ತಿದ ಜಿದ್ದು!







ಉತ್ತರಕನ್ನಡ ಪ್ರೇಮ್ ಕಹಾನಿ ಔರ್ ಸಂಘಿ' ಗುಮಾನಿ




ಕೊಡಗು ಜನರನ್ನು ಗುಲಾಮರಂತೆ ನೋಡುವ ಡಿ.ಸಿ.

ಕನ್ಯಾ ಸಂಸ್ಕಾರ' ಕಥಾ!



ಅಂಚಿನಿಂದ...



ಡಾ.ವಾಸು ಎಚ್.ವಿ.

ರಾಜೀವ್ ಆವಾಸ್ ಯೋಜನೆ

ಒಂದು ಅತ್ಯುತ್ತಮ ಯೋಜನೆಯನ್ನು ವಿಫಲಗೊಳಿಸುವುದು ಹೇಗೆ

ಸರ್ಕಾರ ಏನೇ ಮಾಡಿದರೂ ಅದನ್ನು ಜನಪರವಾಗಿ ಮಾಡುವುದಿಲ್ಲ; ಅದನ್ನು ಪ್ರಬಲ ಹಿತಾಸಕ್ತಿಗಳ ಪರವಾಗಿಯೇ ಮಾಡುತ್ತದೆ ಎಂಬ ಮಾತು ಸಂಪೂರ್ಣ ನಿಜವಲ್ಲ. ಆದರೆ ಎಂತಹುದೇ ಜನಪರ ಯೋಜನೆ ತಂದಾಗಲೂ, ಒಂದಲ್ಲ ಒಂದು ಪ್ರಬಲ ಹಿತಾಸಕ್ತಿಯು ಅದನ್ನು ತನ್ನ ಅನುಕೂಲಕ್ಕೆ ಹೇಗೆ ಬಳಸಿಕೊಳ್ಳಬಹುದು ಎಂಬ ಉಪಾಯವನ್ನು ಹೊಂದಿರುವ ಸಾಧ್ಯತೆ ಇದ್ದೇ ಇರುತ್ತದೆ. ಜನಪರವಾದ ಯೋಜನೆಗಳೂ ಸಹ ತನ್ನಿಂದ ತಾನೇ ಜಾರಿಗೆ ಬರುವುದೂ ಬಹಳ ಕಡಿಮೆ. ಅಂದರೆ, ಜನರ/ಚಳವಳಿಯ ಒತ್ತಾಸೆಯಿಲ್ಲದೇ, ಕೇವಲ ಅಧಿಕಾರದಲ್ಲಿರುವವರ ಒಳ್ಳೆಯತನದಿಂದಾಗಿ ರೂಪುಗೊಳ್ಳುವುದಿಲ್ಲ. ಒಂದು ವೇಳೆ ರೂಪುಗೊಂಡರೂ, ಈ ವ್ಯವಸ್ಥೆಯು ಅದನ್ನು ಜನಪರವಾಗಿ ಜಾರಿಯಾಗಲು ಬಿಡುವುದಿಲ್ಲ.

ಯುಪಿಎ ಸರ್ಕಾರವು ರಾಜೀವ್ ಆವಾಸ್ ಯೋಜನೆಯೆಂಬ ಉತ್ತಮ ಯೋಜನೆಯೊಂದನ್ನು ತಂದಿತ್ತು. ಇದೀಗ ಮೋದಿಯ 'ಅಚ್ಛೇ ದಿನ್ ಸರ್ಕಾರ'ವು ಅದನ್ನು ರದ್ದುಗೊಳಿಸಲು ಹೊರಟಿದೆ. ಈ ಯೋಜನೆಯ ಜೊತೆಗಿನ ಒಂದು ಪ್ರತ್ಯಕ್ಷ ಅನುಭವವು ನಮ್ಮ ವ್ಯವಸ್ಥೆಯ ಕುರಿತು ಬಹುಮುಖ್ಯ ಸಂಗತಿಗಳನ್ನು ಕಲಿಸಿತು. ಇದನ್ನು ಒಂದು **case study**ಯಾಗಿ ನೋಡಿದರೆ, ಅದು ಪ್ರಭುತ್ವದ ಸ್ವರೂಪ ಹಾಗೂ ಸಮಕಾಲೀನ ರಾಜಕಾರಣದ ಕುರಿತ ಕೆಲವು ಅಂಶಗಳನ್ನು ನಮ್ಮ ಮುಂದೆ ತೆರೆದಿಡುತ್ತದೆ.

ಅಸಮಾನ ಬೆಳವಣಿಗೆಯಿರುವ ದೇಶಗಳಲ್ಲಿ ನಗರೀಕರಣದ ಜೊತೆಜೊತೆಗೇ ಸ್ಲಂಗಳ ಸೃಷ್ಟಿಯೂ ಆಗುತ್ತಿರುತ್ತದೆ. ಇದಕ್ಕೆ ಅಸಮಾನ ಬೆಳವಣಿಗೆ ಕಾರಣವೇ ಹೊರತು, ಸ್ಲಂಗಳಿಗೆ ಹೋಗಿ ಸೇರಿಕೊಳ್ಳುವ ಜನರು ಕಾರಣರಲ್ಲ ಎಂಬುದನ್ನು ಎಲ್ಲಾ ದೇಶಗಳ ಆಳುವವರೂ 'ಅಧಿಕೃತವಾಗಿ' ಒಪ್ಪಿಕೊಂಡಿರುವ ಸಂಗತಿ. ಆದರೂ, ಸ್ಲಂಗಳ ಸೃಷ್ಟಿಗೆ ಮತ್ತು ಅವುಗಳ ಬೆಳವಣಿಗೆಗೆ ಹಾಗೂ ಅದರಿಂದುಂಟಾಗುವ ಸಮಸ್ಯೆಗಳಿಗೆ ಸ್ಲಂ ಜನರನ್ನೇ ದೂರುವ ಮನಸ್ಥಿತಿ ಅಧಿಕಾರಸ್ಥರಲ್ಲೇ ವ್ಯಾಪಕವಾಗಿಯೇ ಇದೆ. ಇರಲಿ, ಇಂತಹ ಸ್ಲಂಗಳಲ್ಲಿನ ಜನರು ಎತ್ತಂಗಡಿಯಾಗದಂತೆ ರಕ್ಷಣೆ ನೀಡಿ, ಅವುಗಳಿಗೆ ಮೂಲಸೌಕರ್ಯ ಕಲ್ಪಿಸಿ, ಸಾಧ್ಯವಾದರೆ ಮನೆಗಳನ್ನೂ ನಿರ್ಮಾಣ ಮಾಡಿ, ಸ್ಲಂಗಳ 'ನಿರ್ಮೂಲನ' ಮಾಡಲು ಕಾಯ್ದೆ, ಯೋಜನೆಗಳು ಬಂದಿವೆ. ಅವು ಈ ದೇಶದಲ್ಲಿ ವ್ಯವಸ್ಥಿತವಾಗಿ ರೂಪುಗೊಂಡು 40 ವರ್ಷಗಳಾಗುತ್ತಾ ಬಂದಿವೆ.

ಈ ಎಲ್ಲಾ ಕಾಯ್ದೆ, ಯೋಜನೆಗಳು ಅಂತಿಮವಾಗಿ ಎಷ್ಟರಮಟ್ಟಿಗೆ ಸಫಲವಾದವು ಅಥವಾ ವಿಫಲವಾದವು ಎಂದು ನೋಡಿದರೆ, ಬಹಳ ಒಳ್ಳೆಯ ಚಿತ್ರಣವೇನೂ ಸಿಗುವುದಿಲ್ಲ. ಹಲವು ಒಳ್ಳೆಯ ಯೋಜನೆಗಳು ರೂಪುಗೊಂಡಿದ್ದೂ ನಿಜ, ಕೆಲವು ಒಳ್ಳೆಯ ಅಧಿಕಾರಿಗಳು ಕೆಲಸ ಮಾಡಿದ್ದೂ ನಿಜ. ಆದರೆ, ಅದ್ಭುತ ಫಲಿತಾಂಶವೇನೂ ಸಿಕ್ಕಲಿಲ್ಲ. ಅಸಮಾನ ಬೆಳವಣಿಗೆ (ಪ್ರಾದೇಶಿಕ, ನಗರ-ಹಳ್ಳಿಗಳು, ವಿವಿಧ ಜನವರ್ಗಗಳು, ವಿವಿಧ ಜಾತಿಗಳ ನಡುವಿನ ಅಸಮಾನತೆ) ಹೆಚ್ಚಾಯಿತೇ ಹೊರತು ಕಡಿಮೆಯಾಗಲಿಲ್ಲ. ಹೀಗಾಗಿ ಹೊಸ ಸ್ಲಂಗಳ ಸೃಷ್ಟಿಯನ್ನು ತಡೆಗಟ್ಟುವುದು ಸಾಧ್ಯವಾಗಲಿಲ್ಲ. ಇರುವ ಸ್ಲಂಗಳನ್ನು ಸುಧಾರಿಸುವ ಕೆಲಸವಾದರೂ ಪರಿಣಾಮಕಾರಿಯಾಗಿ ಆಯಿತೇ?

ಈ ಬಗ್ಗೆ ನಮ್ಮದೇ ಹೊಸ ವಿಶ್ಲೇಷಣೆ ಮಾಡುವುದು ಬೇಡ. ಸ್ವತಃ ಸರ್ಕಾರದ ಸಮೀಕ್ಷೆಯನ್ನೇ ನೋಡೋಣ. ವಿಶೇಷವಾಗಿ ಯುಪಿಎ ಸರ್ಕಾರದ ಅವಧಿಯಲ್ಲಿ ನಡೆದ ಸಮೀಕ್ಷೆಗಳು. ಅವುಗಳ ಪ್ರಕಾರ, 'ಈ ಹಿಂದಿನ ಯೋಜನೆಗಳಲ್ಲಿ ಗಂಭೀರವಾದ ಹಲವು ಕೊರತೆಗಳಿದ್ದವು'. ಇದು ಸರ್ಕಾರದ ಭಾಷೆ. ಇದನ್ನು ನಾವು ಹಿಂದಿನ ಯೋಜನೆಗಳು ಪರಿಣಾಮಕಾರಿಯಾಗಿರಲಿಲ್ಲ; ಅವುಗಳಿಂದ ನಿಜಕ್ಕೂ ಸ್ಲಂ ನಿರ್ಮೂಲನೆ ಆಗಲಿಲ್ಲ. ಬೇರೆ ರೀತಿ ಹೇಳುವುದಾದಲ್ಲಿ, ಬಹಳಷ್ಟು ಕಡೆ ಗುಡಿಸಲುಗಳಿದ್ದ ಸ್ಲಂಗಳ ಜಾಗದಲ್ಲಿ ಕಾಂಕ್ರೀಟ್ ಸ್ಲಂಗಳ ನಿರ್ಮಾಣವಾಯಿತು. ಇದಕ್ಕೆ ಅಧಿಕಾರಿಗಳ ಅಥವಾ ಜನಪ್ರತಿನಿಧಿಗಳ ಅದಕ್ಷತೆ, ಭ್ರಷ್ಟತೆ ಮತ್ತು ಜನವಿರೋಧಿತನ ಮಾತ್ರ ಕಾರಣವೇ? ಇದು ಒಂದು ಸಾರಾಸಗಟು ತೀರ್ಮಾನವಾಗಿ ಬಿಡುತ್ತದೆ. ಅತ್ಯಂತ ದಕ್ಷತೆ, ಜನಪರ ಕಾಳಜಿ ಮತ್ತು ಕಠಿಣ ಶ್ರಮದೊಂದಿಗೆ ಕೆಲಸ ಮಾಡಿದ ಅಧಿಕಾರಿಗಳು ಹಿಂದೆಯೂ ಇದ್ದರು; ಈಗಲೂ ಇದ್ದಾರೆ. ಅದೇ ರೀತಿ ಭ್ರಷ್ಟತೆ, ಸೋಮಾರಿತನ,



ಜನವಿರೋಧಿ ಧೋರಣೆ ಹೊಂದಿದ್ದ ಅಧಿಕಾರಿಗಳು ಹಿಂದೆಯೂ ಇದ್ದರು; ಈಗಲೂ ಇದ್ದಾರೆ. ಇವೆರಡರ ನಡುವೆ ಮಿಶ್ರ ಮಾದರಿಯವರೂ ಸಹ ಇದ್ದರು; ಇದ್ದಾರೆ.

ಮೂಲಸಮಸ್ಯೆ ಜಾರಿ ಮಾಡುವವರಲ್ಲಿ ಇದ್ದುದಲ್ಲ. ಹಾಗೆ ನೋಡಿದರೆ, ಸ್ಲಂ ಜನರ ಗೊಂದಲ, ಮುಖಂಡರ ಹಿತಾಸಕ್ತಿಗಳು, ಸ್ವಾರ್ಥ, ಸಣ್ಣತನ, ವಿಶಾಲ ಮನೋಭಾವದ ಕೊರತೆಗಳೂ ಸಮಸ್ಯೆ ಬಿಗಡಾಯಿಸುವುದಕ್ಕೆ ತಮ್ಮ ಕೊಡುಗೆಯನ್ನು ನೀಡಿವೆ. ಆದರೆ ಮೂಲಸಮಸ್ಯೆ ಇದ್ದುದು ಯೋಜನೆಯ ಮೂಲ ರೂಪುರೇಷೆಯಲ್ಲೇ ಆಗಿತ್ತು. ಎಷ್ಟು ಹಣಕಾಸನ್ನು ನೀಡಬೇಕು, ಸ್ಲಂ ಜನರಿಗೆ ಕಟ್ಟಿಕೊಡುವ ಮನೆಯ ವಿಸ್ತೀರ್ಣ ಎಷ್ಟಿರಬೇಕು, ಮನೆಯ ಸ್ವರೂಪ ಹೇಗಿರಬೇಕು, ಈ ಶ್ರಮಿಕ ಸಮುದಾಯಗಳ ಸಾಮಾಜಿಕ, ಸಾಂಸ್ಕೃತಿಕ ಬದುಕಿನ ಆಯಾಮಗಳನ್ನು ಎಷ್ಟರಮಟ್ಟಿಗೆ ಪರಿಗಣನೆಗೆ ತೆಗೆದುಕೊಳ್ಳಬೇಕು, ಒಮ್ಮೆ ಮನೆ ಕಟ್ಟಿ ಕೊಟ್ಟ ನಂತರ ಸಂಬಂಧಪಟ್ಟ ಇಲಾಖೆಗಳ ಕರ್ತವ್ಯವೇನಾಗಿರಬೇಕು, ಎಲ್ಲಕ್ಕಿಂತ ಮುಖ್ಯವಾಗಿ ಯೋಜನೆಯನ್ನು ರೂಪಿಸುವುದು ಮತ್ತು ಜಾರಿ ಮಾಡುವುದರಲ್ಲಿ ಫಲಾನುಭವಿಗಳ (ಈ ಪದವೂ ಸರ್ಕಾರೀ ಪದವೇ. ವಸತಿಯೂ ಒಳಗೊಂಡಂತೆ ಮನುಷ್ಯರ ಮೂಲ ಅವಶ್ಯಕತೆಗಳನ್ನು ಹಕ್ಕೆಂದು ಪರಿಗಣಿಸುವ ಬದಲು, ಸರ್ಕಾರ ಮಾಡುತ್ತಿರುವ ಉಪಕಾರವೆಂದು ಭಾವಿಸುವುದರಿಂದ ಸೃಷ್ಟಿಯಾಗಿರುವ ಪದವಿದು) ಭಾಗೀದಾರಿಕೆ ಎಷ್ಟಿರಬೇಕು ಎಂಬುದರ ಕುರಿತು ಪ್ರಜಾತಾಂತ್ರಿಕವಾದ, ಜನಪರವಾದ ನಿಲುವು ಇಲ್ಲದಿದ್ದುದು ಈ ಹಿಂದಿನ ಯೋಜನೆಗಳ ಸಮಸ್ಯೆಯಾಗಿತ್ತು.

ಇವೆಲ್ಲವನ್ನೂ ಸುದೀರ್ಘ ಕಾಲದ ಸ್ಲಂ ಜನರ ಹೋರಾಟದ ಭಾಗವಾಗಿ ಹೋರಾಟಗಾರರು ಮತ್ತು ತಜ್ಞರು ಹಾಗೂ ಕೆಲವು ಅಧಿಕಾರಿಗಳು ಅರ್ಥ ಮಾಡಿಕೊಂಡರು. ಅವುಗಳ ಫಲವಾಗಿ ಯುಪಿಎ 2ರ ಕಾಲದಲ್ಲಿ ರಾಜೀವ್ ಆವಾಸ್ ಯೋಜನೆಯು ರೂಪುಗೊಂಡಿತು. ಅದರ ಇತರ ಅಂಶಗಳ ಕುರಿತು ಚರ್ಚಿಸುವ ಮುನ್ನ ಇದುವರೆಗಿನ ಯೋಜನೆಗಳಲ್ಲಿ ಪ್ರತೀ ಮನೆಗೆ ನಿಗದಿಪಡಿಸಲಾದ ಹಣಕಾಸಿನ ಪ್ರಮಾಣ ಎಷ್ಟು ಎಂಬುದನ್ನು ನೋಡೋಣ. (ಕೆಲವು ಪ್ರದೇಶಗಳಲ್ಲಿ ಸ್ಥಳೀಯ ಎಸ್‌ಆರ್ ದರಕ್ಕೆ ತಕ್ಕಂತೆ ಅಲ್ಪಸ್ವಲ್ಪ ವ್ಯತ್ಯಾಸವಿರುತ್ತದೆ)

1985-2000 ಹುಡ್ಕೋ ಯೋಜನೆಯಲ್ಲಿ: **6,433** ರೂ.ನಿಂದ ಆರಂಭಿಸಿ **20,000**ರೂ, **25,000**ರೂ.ವರೆಗೆ

1998-2000 ಎಸ್‌ಸಿಪಿ ಯೋಜನೆಯಲ್ಲಿ: **35,000** ರೂ.

2002-2006 ವಾಂಬೇ ಯೋಜನೆಯಲ್ಲಿ: **40,000** ರೂ.

2008-2014 ಐಎಚ್‌ಎಸ್‌ಡಿಪಿ ಯೋಜನೆಯ **1,35,000 — 1,55,000** ರೂ.


2014-2022 ರಾಜೀವ್ ಆವಾಸ್ ಯೋಜನೆಯ **4,19,000** ರೂ.

ಮೊದಲಿನ ಯೋಜನೆಗಳಲ್ಲಿ ಮನೆ ಬಿಟ್ಟು ಉಳಿ ಮೂಲ ಸೌಕರ್ಯಗಳಿಗೆ ಪ್ರತ್ಯೇಕ ಹಣ ನಿಗದಿಯಾಗಿರಲಿ ಆದರೆ, ಈಗ ಅದಕ್ಕೆ ಪ್ರತ್ಯೇಕ ಹಣ ನಿಗದಿಯಾಗಿ ರಾಜೀವ್ ಆವಾಸ್ ಯೋಜನೆಯಲ್ಲಿ ಪ್ರತಿ ಮನೆಯ ವಿಸ್ತೀರ್ಣ 25 ಚದರ ಮೀಟರ್‌ಗಳಾಗಿರುತ್ತವೆ. ಬಹಳ ಸ್ಪಷ್ಟವಾ ಈ ಯೋಜನೆಯ ಮಾರ್ಗದರ್ಶಿ ಸೂತ್ರಗಳ ಫಲಾನುಭವಿಗಳ ಭಾಗೀದಾರಿಕೆಗೆ ವಿಶೇಷ ಒತ್ತ ನೀಡಲಾಗಿದೆ. ಅವರ ಸಾಮಾಜಿಕ, ಸಾಂಸ್ಕೃತಿಕ ಆಯಾಮಗ ಗಮನ ಕೊಡಲು ಸೂಚಿಸಲಾಗಿದೆ. ಯೋಜನೆ ಮುಗಿ ನಂತರವೂ ಆಯಾ ಸ್ಲಂಗಳ ಸಮಗ್ರ ಅಭಿವೃದ್ಧಿಗೆ ಬೇಕಾ ಕಾರ್ಯಕ್ರಮಗಳನ್ನು ರೂಪಿಸಬೇಕೆಂದು ಹೇಳಲಾಗಿ ಸ್ಥಳೀಯ ಭೂಮಿ ಲಭ್ಯತೆಗನುಗುಣವಾಗಿ ಮ ನೆಲಮಹಡಿಯ, ಎರಡು ಮಹಡಿಗಳ, ಮೂರು ಮಹಡಿ ಕಟ್ಟಡಗಳನ್ನು ಕಟ್ಟಲು ಅನುವು ಮಾಡಿಕೊಡಲಾಗಿ ಯೋಜನೆಯನ್ನು ವ್ಯವಸ್ಥಿತವಾಗಿ ಜಾರಿಗೊಳಿಸಲು ಮ ಮೇಲುಸ್ತುವಾರಿ ನಡೆಸಲು ನಗರ ಮಟ್ಟದ, ರಾಜ್ಯಮಟ್ಟ ಮತ್ತು ಕೇಂದ್ರ ಮಟ್ಟದ ಉನ್ನತಾಧಿಕಾರಿ ಸಮಿತಿಗಳ ರಚಿಸಲಾಗಿದೆ.

ಈ ಯೋಜನೆಗೆ ಬೇಕಾದ ಹಣದಲ್ಲಿ ಶೇ.75ರಷ್ಟ ಕೇಂದ್ರ ಸರ್ಕಾರವೂ, ಶೇ.15ರಷ್ಟನ್ನು ರಾಜ್ಯ ಸರ್ಕಾರವ ಶೇ.10ರಷ್ಟನ್ನು ಫಲಾನುಭವಿಗಳೂ ಭರಿಸಬೇಕಾಗುತ್ತ ಮೂಲ ಸೌಕರ್ಯಗಳಿಗೆ ಬೇಕಾದ ಹಣವನ್ನು ಕೇಂ ಹಾಗೂ ರಾಜ್ಯ ಸರ್ಕಾರಗಳು 75:25 ಅನುಪಾತದ ಹಂಚಿಕೊಳ್ಳುತ್ತವೆ. ಈ ಯೋಜನೆಯ ಕೊರತೆಗಳಿಲ್ಲವೆಂದಲ್ಲ, ಬದಲಿಗೆ ಇದುವರೆಗೆ ಬಂದಿರು ಯೋಜನೆಗಳಲ್ಲಿ ಇದು ಅತ್ಯುತ್ತಮ ಯೋಜನೆಯಾಗಿ

ರಾಜೀವ್ ಆವಾಸ್ ಯೋಜನೆಯಡಿ ಅತ್ಯಂತ ಹೆ ಮನೆಗಳನ್ನು ಪಡೆದುಕೊಂಡ ರಾಜ್ಯ ಕರ್ನಾಟಕವಾಗಿ ಅದರ ಭಾಗವಾಗಿ ಮಂಡ್ಯ ನಗರದಲ್ಲಿ 1335 ಮನೆಗಳ ಕಟ್ಟುತ್ತೇವೆಂದು ಪ್ರಸ್ತಾಪವನ್ನು ಕಳಿಸಲಾಯಿತು. ಇಲ್ಲಿ ಮುಂದಿನ ಕಥೆಯನ್ನು ನೀವು ಗಮನಿಸಬೇಕು. 30 ವರ್ಷ ಕೆಳಗೆ ಇದೇ ಸ್ಲಂಬೋರ್ಡ್ ಅತ್ಯಂತ ಕಳಪೆಯಾಗಿ ಕ ಕಟ್ಟಿದ ಕೆಲವೇ ವರ್ಷಗಳಲ್ಲಿ ದುಸ್ಥಿತಿಗೆ ಈಡಾದ ಹಾಲಹ ಬಡಾವಣೆಯಲ್ಲಿ ಈ ಮನೆಗಳನ್ನು ಕಟ್ಟುತ್ತೇವೆಂ ಸ್ಲಂಬೋರ್ಡ್ ಪ್ರಸ್ತಾಪದಲ್ಲಿ ಹೇಳಲಾಗಿತ್ತು. ಅಲ್ಲಿನ 7 ಮನೆಗಳು ಎರಡು ಅಂತಸ್ತಿನ ಕಟ್ಟಡದಲ್ಲಿದ್ದವು (ನೆಲಮಹ +1). ರಾಜೀವ್ ಆವಾಸ್ ಯೋಜನೆಯ ಕಡ್ಡಾಯವಾಗಿರುವಂತೆ, ಅಧಿಕಾರಿಗಳು ಅಲ್ಲಿಗೆ ತೆರಳಿ ನಿವ

▶▶| 0



ಅತ್ಯುತ್ತಮ ಯೋಜನೆಯನ್ನು ಸಫಲಗೊಳಿಸುವುದು ಹೇಗೆ - ಮಂಡ್ಯ ಸ್ಲಂ ಒಕ್ಕೂಟದ ಪ್ರಯೋಗ

ಸದರಿ ಯೋಜನೆ ವಿಫಲಗೊಳ್ಳಲು ಮಂಡ್ಯದ ಸ್ಲಂ ಜನರು ಬಿಡಲಿಲ್ಲ. ಮಂಡ್ಯ ನಗರ ಸ್ಲಂ ನಿವಾಸಿಗಳ ಒಕ್ಕೂಟದ ನೇತೃತ್ವದಲ್ಲಿ ಸತತವಾಗಿ ಅಧಿಕಾರಸ್ಥರ ಮೇಲೆ ಒತ್ತಡ ಹೇರುತ್ತಾ ಬಂದರು. ವಿವಿಧ ರೀತಿಯ ಮನವೊಲಿಕೆ ಪ್ರಯತ್ನಗಳು ನಡೆದಾಗಲೂ ಅದಕ್ಕೆ ಬಗ್ಗಲಿಲ್ಲ. ಎರಡು ಬಾರಿ ಭಾರೀ ದೊಡ್ಡ ಸಂಖ್ಯೆಯಲ್ಲಿ ಪ್ರತಿಭಟನೆ ನಡೆಸಿದರು. ಪ್ರತ್ಯೇಕವಾಗಿ ವ್ಯಕ್ತಿಗತ ಆಕ್ಷೇಪಣೆಗಳನ್ನು ಸಲ್ಲಿಸಿದರು. ಮಂಡ್ಯ ನಗರದ ಪ್ರಜ್ಞಾವಂತರೆಲ್ಲರ ಬೆಂಬಲ ಕೋರಿದರು. ಅಂತಿಮವಾಗಿ ಅಂಬೇಡ್ಕರ್ ಜಯಂತಿಯ ಮುನ್ನಾದಿನ ಅಹೋರಾತ್ರಿ ಪ್ರತಿಭಟನೆ ಆರಂಭಿಸಿದರು. (ಈ ವಾರದಲ್ಲೇ ನಡೆದ ಘಟನೆ ಇದು)


ಅವರ ಬಗ್ಗೆ ಅಂಬೇಡ್ಕರ್ [illegible] ಇದ್ದುದರಿಂದ ಅಲ್ಲಿಯೇ ಸರ್ಕಾರೀ ಅಂಬೇಡ್ಕರ್ ಜಯಂತಿ ಕಾರ್ಯಕ್ರಮ ನಡೆಯಬೇಕಿ[illegible] ಅಂಬೇಡ್ಕರ್ [illegible] ಹೋರಾಟದ ರಥವನ್ನು ಮುಂದಕ್ಕೊಯ್ಯುವ ಪ್ರತಿಭಟನೆ ನಡುಂಬೆ. ಅದರ [illegible] ಸರ್ಕಾರದ [illegible] ಕಾರ್ಯಕ್ರಮ. ಪ್ರತಿಭಟನೆಯ ಘೋಷಣೆಗಳು ಅಧಿಕಾರಸ್ಥರನ್ನು [illegible]. [illegible] ಪ್ರತಿಭಟನೆಯ ಸ್ಥಳಕ್ಕೆ ಬಂದು ಜನರು ಒಪ್ಪಿದ ರೀತಿಯಲ್ಲಿ [illegible] ಘೋಷಿಸಬೇಕಾಯಿತು. ಆ ರೀತಿ ಘೋಷಣೆ ಮಾಡಲೇಬೇಕಾಗಿ ಬಂದುದಕ್ಕೆ [illegible] 3 ತಿಂಗಳ [illegible] ಹೊಸ [illegible] ನಿರ್ಮಾಣ ಮಾಡಿತ್ತು.

ಅತ್ಯುತ್ತಮ ಯೋಜನೆಗಳನ್ನು ರದ್ದುಗೊಳಿಸುವುದ ಹೇಗೆ- ಮೋದಿ ಮಹಾಶಯರ ಕೊಡುಗೆ

ರಾಜೀವ್ ಗಾಂಧಿ ಹೆಸರಿನಲ್ಲಿರುವ ಈ ಯೋಜನೆಯನ್ನು ಬದಲಿಸಲು ಮೋದಿ ಸರ್ಕಾರ ತೀರ್ಮಾನಿಸಿ ಬ ಕಾಲವಾಯಿತು. ಕೇವಲ ಹೆಸರನ್ನಷ್ಟೇ ಬದಲಿಸಿದ್ದರೆ ಪರವಾಗಿರಲಿಲ್ಲ. ಆದರೆ, ಇಡೀ ಯೋಜನೆಯ ಸ್ವರೂಪ ಬದಲಾಗುತ್ತಿದೆ. ಇದಕ್ಕೆ ಬೇಕಾದ ಒಂದು ಎಳೆ ರಾಜೀವ್ ಆವಾಸ್ ಯೋಜನೆಯಲ್ಲಿಯೇ ಇತ್ತು. ಅದು ಈ ಮೋದಿ ಆವಾಸ್‌ಅನ್ನು ಸಂಪೂರ್ಣ ಆವರಿಸಿಕೊಂಡಿದೆ. ಪ್ರತೀ ಸ್ಲಂನ ಅರ್ಧದಷ್ಟನ್ನು ಬಿಲ್ಡರ್ ಒಬ್ಬನಿಗೆ ಬಿಟ್ಟುಕೊಡುವು ಉಳಿದರ್ಧದಲ್ಲಿ ಬಿಲ್ಡರ್ ಬಹುಮಹಡಿ ಬೆಂಕಿಪೊಟ್ಟಣಗಳನ್ನು ಕಟ್ಟಿಕೊಟ್ಟು, ಅದರಲ್ಲಿ ಸ್ಲಂ ಜನರು ವಾಸಿಸುವು ಒಂದು ವೇಳೆ ಕಾರ್ಪೋರೇಟ್ ಬಿಲ್ಡರ್‌ಗೆ ಹಣ ಸಾಲದೇ ಬಂದರೆ, ಅದನ್ನು ಫಲಾನುಭವಿಗಳೇ ಭರಿಸಬೇಕು. ಸ ಒಂದು ರೂ.ಅನ್ನೂ ಕೊಡುವುದಿಲ್ಲ. ಇದಲ್ಲವೇ ಅಚ್ಛೇ ದಿನ್?

ಈ ಕಾರ್ಪೋರೇಟ್ ದರೋಡೆಯನ್ನು ಎದುರಿಸಲು ಒಂದು ಊರಿನ ಜನರು, ಒಂದು ಊರಿನ ಸ್ಲಂ ಜನರ ಜೊತೆಗೂಡಿದರೆ ಸಾಲದು. ಅದಕ್ಕೆ ಇನ್ನೊಂದು ಸ್ವಾತಂತ್ರ್ಯ ಹೋರಾಟವೇ ನಡೆಯಬೇಕು ಅಲ್ಲವೇ?

ಅಂಬೇಡ್ಕರ್ ಮತ್ತು ಚೆಡ್ಡಿಗಳ ಹೊಸ ವರಸೆ



ಕಂಡಹಾಗೆ

• ಗೌರಿ ಲಂಕೇಶ್
editorlankesh@gmail.com

ಕಳೆದ ಮಂಗಳವಾರ ಡಾ.ಬಿ.ಆರ್.ಅಂಬೇಡ್ಕರ್ ಅವರ ...ನೇ ಜನ್ಮೋತ್ಸವವನ್ನು ಅದ್ದೂರಿಯಾಗಿ ಆಚರಿಸುವ ...ಲಕ ಬಿಜೆಪಿ ಅಂಬೇಡ್ಕರ್ ಅವರೂ ತನ್ನ ಐಕಾನ್‌ಗಳಲ್ಲಿ ...ರು ಎಂದು ಬಿಂಬಿಸಲು ಯತ್ನಿಸಿದೆ. ಬಿಜೆಪಿ ಎಷ್ಟೇ ...ರೂ ಹಿಂದೂತ್ವ ಕೋಮುವಾದಿ ಆರೆಸ್ಸೆಸ್‌ನ ಅಂಗ. ...ರಿಂದ ಬಿಜೆಪಿಗೂ, ಅಂಬೇಡ್ಕರ್ ಅವರಿಗೂ ...ದೆತ್ತಣ ಸಂಬಂಧ? ಈ ಹಿನ್ನೆಲೆಯಲ್ಲಿ ಅಂಬೇಡ್ಕರ್ ...ರು ಹಿಂದೂ ಧರ್ಮದ ಬಗ್ಗೆ ಹೇಳಿದ್ದನ್ನು ಇಲ್ಲಿ ...ಸಿ ಕೊಡುತ್ತಿದ್ದೇನೆ.

"ವೇದಗಳು ಮತ್ತು ಸ್ಮೃತಿಗಳು ಹೇಳುವ ಪ್ರಕಾರ ಈ ...ದೂ ಧರ್ಮವು ಹಲವು ಯಜ್ಞಗಳು ಮತ್ತು ಸಾಮಾಜಿಕ, ...ಕೀಯ ಹಾಗು ನೈರ್ಮಲ್ಯ ನಿಯಮಗಳನ್ನು ...ಂದಿರುವ ಮಿಶ್ರಣ. ಯಾವುದನ್ನು ಒಂದು ಧರ್ಮ ...ವು ಹಿಂದೂಗಳು ಕರೆಯುತ್ತಾರೋ ಅದು ಹಲವು ...ಮಗಳು ಮತ್ತು ನಿಬಂಧನೆಗಳು. ಕಟ್ಟಳೆಗಳು ಮಾತ್ರ ...ರೆ ತಪ್ಪಾಗಲಾರದು. ಒಂದು ನಿಜವಾದ ಆಧ್ಯಾತ್ಮಿಕ ...ರ್ಮದಲ್ಲಿ ಎಲ್ಲ ಕಾಲಕ್ಕೂ, ದೇಶಗಳಿಗೂ, ಎಲ್ಲ ...ಮುದಾಯಗಳಿಗೂ ವಿಶ್ವವ್ಯಾಪಿಯಾಗಿ ಅನ್ವಯಿಸುವ ತತ್ತ್ವ...ರುತ್ತವೆ. ಅಂತಹ ಯಾವ ಅಂಶಗಳೂ ಹಿಂದೂ ಎಂಬ ...ರ್ಮದಲ್ಲಿ ಇಲ್ಲ."

"ನಾವು ಮೊದಲು ಅರ್ಥ ಮಾಡಿಕೊಳ್ಳಬೇಕಿರುವ ... ಯಾವುದೆಂದರೆ 'ಹಿಂದೂ ಸಮುದಾಯ' ಎಂಬುದೇ ...ು ಮಿಥ್ಯೆ. ಹಿಂದೂ ಎಂಬ ಪದ ಕೂಡ ವಿದೇಶಿ ...ಲದ್ದು. ಸ್ಥಳೀಯರಿಂದ ತಮ್ಮನ್ನು ಪ್ರತ್ಯೇಕಿಸಿಕೊಳ್ಳಲು ...ಹಮ್ಮದಿಯರು ಕೊಟ್ಟ ಹೆಸರಿದು. ಮೊಹಮ್ಮದಿಯರು ...ತಕ್ಕೆ ಆಗಮಿಸುವ ಮುನ್ನ ಈ ಹಿಂದೂ ಪದ ಯಾವ ...ತ ಕೃತಿಯಲ್ಲೂ ಕಂಡುಬರುವುದಿಲ್ಲ. ಅಲ್ಲಿಯತನಕ ...ನ ಜನರಿಗೆ ತಮ್ಮ ಸಮುದಾಯಕ್ಕೆ ಒಂದು ಹೆಸರು ... ಎಂದೂ ಅನ್ನಿಸಿರಲಿಲ್ಲ. ಯಾಕೆಂದರೆ ತಮ್ಮದು ...ು ಸಂಯುಕ್ತ ಸಮುದಾಯ ಎಂಬ ಭಾವನೆಯೇ ...ವರಲ್ಲಿ ಇರಲಿಲ್ಲ. ಹಿಂದೂ ಸಮುದಾಯ ಎಂಬುದು ...ತ್ವದಲ್ಲೇ ಇಲ್ಲ. ಬದಲಾಗಿ ಇಲ್ಲಿರುವುದು ಹಲವಾರು ...ಗಳ ಗುಂಪು. ಪ್ರತಿ ಜಾತಿಗೆ ತನ್ನ ಅಸ್ತಿತ್ವವೇ ಮುಖ್ಯ. ...ಅಸ್ತಿತ್ವಕ್ಕಾಗಿ ಅವುಗಳು ಹಪಹಪಿಸುತ್ತಿರುತ್ತವೆ. ಇಂತಹ ಜಾತಿಗಳಿಂದಾಗಿ ಇಲ್ಲೊಂದು ಸಂಯುಕ್ತ ಸಮುದಾಯವೇ ರೂಪುಗೊಂಡಿಲ್ಲ. ಹಿಂದೂ ಮತ್ತು ಮುಸಲ್ಮಾನರ ನಡುವೆ ಗಲಭೆಗಳಾದಾಗ ಮಾತ್ರ ಜಾತಿಗಳ ನಡುವೆ ತಾತ್ಕಾಲಿಕ ಸಂಬಂಧ ಸೃಷ್ಟಿಯಾಗುತ್ತದೆ. ಇತರೆ ಎಲ್ಲಾ ಸಂದರ್ಭಗಳಲ್ಲಿ ಪ್ರತಿ ಜಾತಿ ಪ್ರತ್ಯೇಕವಾಗುಳಿಯಲು ಯತ್ನಿಸುತ್ತಿರುತ್ತದೆ."

"ಭಾರತದ ಇತಿಹಾಸದಲ್ಲಿ ಮೌರ್ಯರ ಕಾಲದಲ್ಲಿ ಮಾತ್ರ ಎಲ್ಲರೂ ಸ್ವತಂತ್ರರಾಗಿ, ವೈಭವ ಮತ್ತು ಹಿರಿಮೆಯಿಂದ ಜೀವಿಸಿದರು. ಇತರೆ ಎಲ್ಲಾ ಕಾಲದಲ್ಲೂ ಇಲ್ಲಿನ ಜನ ಅಂಧಕಾರದಲ್ಲಿ ಮತ್ತು ಸೋಲಿನಲ್ಲೇ ಬದುಕು ನಡೆಸಿದರು. ಮೌರ್ಯರ ಕಾಲ ಯಾಕೆ ಚೆನ್ನಾಗಿತ್ತೆಂದರೆ ಆಗ ಚಾತುರ್ವರ್ಣ ವ್ಯವಸ್ಥೆ ಸಂಪೂರ್ಣವಾಗಿ ವಿನಾಶವಾಗಿ ಬಹುಸಂಖ್ಯೆಯಲ್ಲಿದ್ದ ಶೂದ್ರರು ತಮ್ಮ ಸಾಮರ್ಥ್ಯವನ್ನು ಬಳಸಿ ರಾಜಾಧಿಕಾರವನ್ನು ಹಿಡಿದಿದ್ದರು."

"ಓರ್ವ ಆದರ್ಶ ಹಿಂದೂ ಹೇಗಿರಬೇಕೆಂದರೆ ಆತ ಬೇರೆಯವರೊಂದಿಗೆ ಸಂಪರ್ಕ ಇಟ್ಟುಕೊಳ್ಳಲು ನಿರಾಕರಿಸಿ ಇಲಿಯೊಂದು ಹೇಗೆ ತನ್ನ ಬಿಲದಲ್ಲಿ ಇರುತ್ತದೋ ಹಾಗೆ ತನ್ನ ಇಡೀ ಜೀವನವನ್ನು ತನ್ನ ಬಿಲದಲ್ಲೇ ಕಳೆಯಬೇಕು."

"ಹಿಂದೂಗಳಿಗೆ ಚೆನ್ನಾಗಿ ಗೊತ್ತು, ತಾವು ಭಾರತದ ರೋಗಗ್ರಸ್ತ ಮನುಷ್ಯರು ಎಂದು ಮತ್ತು ತಮ್ಮ ರೋಗ ಇತರೆ ಭಾರತೀಯರ ಆರೋಗ್ಯ ಮತ್ತು ನೆಮ್ಮದಿಯನ್ನು ಹಾಳುಮಾಡುತ್ತದೆ ಎಂದು."

"ಜಾತಿ ಎಂಬುದು ಒಂದೇ ಜನಾಂಗಕ್ಕೆ ಸೇರಿದ ಜನರನ್ನು ವಿವಿಧ ಸಾಮಾಜಿಕ ಗುಂಪುಗಳಾಗಿ ವಿಂಗಡಿಸುವ ಪದ್ಧತಿ. ಈ ಪದ್ಧತಿ ದೈವದತ್ತ ಎಂದು ಜನರನ್ನು ನಂಬಿಸಲಾಗಿದೆ. ಆದ್ದರಿಂದ ಜಾತಿಪದ್ಧತಿಯನ್ನು ನಾಶ ಮಾಡಬೇಕೆಂದರೆ ಈ ದೈವದತ್ತ ಕಲ್ಪನೆಯನ್ನು ನಾಶ ಮಾಡಬೇಕು. ಅರ್ಥಾತ್ ಶಾಸ್ತ್ರ ಮತ್ತು ವೇದಗಳನ್ನು ಮೊದಲು ನಾಶ ಮಾಡಬೇಕು. ಬುದ್ಧ ಮತ್ತು ನಾನಕ್ ಅವರುಗಳು ಶಾಸ್ತ್ರಗಳ ಅಧಿಕಾರವನ್ನು ನಿರಾಕರಿಸಿದಂತೆ ಎಲ್ಲರೂ ಅವುಗಳನ್ನು ತ್ಯಜಿಸಬೇಕು. ಜಾತಿ ಪದ್ಧತಿಯ ಬುನಾದಿಯಾಗಿರುವ ಶಾಸ್ತ್ರಗಳು ಪವಿತ್ರವಲ್ಲ ಎಂದು ಜನರಿಗೆ ಮನದಟ್ಟಾದರೆ ಮಾತ್ರ ಅವರು ಬದಲಾಗುತ್ತಾರೆ. ಪ್ರತಿ ಪುರುಷ ಮತ್ತು ಮಹಿಳೆ ಶಾಸ್ತ್ರಗಳ ದಾಸ್ಯದಿಂದ ಹೊರಬಂದು, ಅವುಗಳಲ್ಲಿರುವ ಮೌಲ್ಯಗಳನ್ನು ತ್ಯಜಿಸಿದರೆ, ನೀವು ಹೇಳುವ ಮುನ್ನ ಅವರೇ ಸ್ವಯಂಪ್ರೇರಣೆಯಿಂದ ಸಹಭೋಜನವನ್ನಲ್ಲದೆ ಅಂತರಜಾತಿ ವಿವಾಹಗಳನ್ನೂ ಒಪ್ಪುತ್ತಾರೆ."

"ಯಾವುದಾದರೂ ಒಂದು ಕಾನೂನನ್ನು ರೂಪಿಸಿ ಪುರೋಹಿತಶಾಹಿಗಳನ್ನು ನಿಯಂತ್ರಣದಲ್ಲಿಡಬೇಕು. ಆಗ ಮಾತ್ರ ಜನರನ್ನು ದಾರಿ ತಪ್ಪಿಸುವ ಅವರ ಕಿತಾಪತಿ ಪ್ರವೃತ್ತಿಯನ್ನು ನಿಗ್ರಹಿಸಬಹುದು. ಹಾಗೆ ಮಾಡಿದಾಗ ಮಾತ್ರ ಬ್ರಾಹ್ಮಣ್ಯವನ್ನು ಮತ್ತು ಜಾತಿಪದ್ಧತಿಯನ್ನು ನಿರ್ಮೂಲನೆ ಮಾಡಬಹುದು."

"ಹಿಂದೂ ಧರ್ಮದಲ್ಲಿ ವಾಕ್ ಸ್ವಾತಂತ್ರ್ಯ ಎಂಬುದೇ ಇಲ್ಲ. ಹಿಂದೂ ಆದವನು ಮೊದಲು ವಾಕ್ ಸ್ವಾತಂತ್ರ್ಯವನ್ನು ಬಿಟ್ಟುಕೊಡಬೇಕು. ಜೊತೆಗೆ ವೇದಗಳ ನಿಯಮಗಳ ಪ್ರಕಾರ ನಡೆದುಕೊಳ್ಳಬೇಕು. ಜೀವನವನ್ನು ಹೇಗೆ ನಡೆಸಬೇಕೆಂದು ವೇದ ಮತ್ತು ಸ್ಮೃತಿಗಳಿಂದ ತಿಳಿದುಕೊಳ್ಳಬೇಕು. ಹಿಂದೂ ಆದವನು ಎಂದೂ ಸ್ವತಂತ್ರವಾಗಿ ಚಿಂತಿಸಕೂಡದು. ಅಂದರೆ ಎಲ್ಲಿಯತನಕ ನೀನು ಹಿಂದೂ ಧರ್ಮದಲ್ಲಿರುತ್ತೀಯೋ ಅಲ್ಲಿಯತನಕ ಸ್ವತಂತ್ರವಾಗಿ ಯೋಚಿಸುವ ಅಧಿಕಾರ ನಿನಗಿರುವುದಿಲ್ಲ."

"ತುಳಿತಕ್ಕೊಳಗಾದ ವರ್ಗಗಳ ಜನರೂ ದೇವಸ್ಥಾನಗಳಲ್ಲಿರುವ ಮೂರ್ತಿಗಳ ಆರಾಧಕರಾಗಲಿ ಎಂಬ ಕಾರಣಕ್ಕೆ ನಾನು ದೇವಸ್ಥಾನಗಳಿಗೆ ಪ್ರವೇಶ ಕೊಡಬೇಕೆಂಬ ಆಂದೋಲನವನ್ನು ಪ್ರಾರಂಭಿಸಲಿಲ್ಲ. ಬದಲಾಗಿ ಹಿಂದೂ ಸಮಾಜದಲ್ಲಿ ಅವರೂ ಸಮಾನರು ಎಂಬ ಆತ್ಮವಿಶ್ವಾಸ ಆ ವರ್ಗಗಳಲ್ಲಿ ಉಂಟಾಗಲಿ ಎಂಬ ಕಾರಣಕ್ಕೆ ಆ ಚಳವಳಿಯನ್ನು ಪ್ರಾರಂಭಿಸಿದ್ದು. ಆದ್ದರಿಂದ ತುಳಿತಕ್ಕೊಳಗಾದ ವರ್ಗಗಳು ತಮ್ಮನ್ನು ಹಿಂದೂ ಸಮಾಜದೊಂದಿಗೆ ಗುರುತಿಸಿಕೊಳ್ಳುವ ಮುನ್ನ ಹಿಂದೂ ಸಮಾಜದಲ್ಲಿ ಮತ್ತು ಹಿಂದೂ ಸಿದ್ಧಾಂತದಲ್ಲಿ ಸಂಪೂರ್ಣವಾದ ಬದಲಾವಣೆಗೆ ಅವರು ಒತ್ತಾಯಿಸಬೇಕು ಎಂದು ಸೂಚಿಸುತ್ತೇನೆ. ದಮನಿತ ವರ್ಗಗಳಲ್ಲಿ ಜಾಗೃತಿಯನ್ನು ಮೂಡಿಸಲು ದೇವಸ್ಥಾನದ ಪ್ರವೇಶವೇ ಸೂಕ್ತ ಮಾರ್ಗ ಎಂಬ ಕಾರಣಕ್ಕೆ ಆ ಹೋರಾಟವನ್ನು ಕೈಗೆತ್ತಿಕೊಂಡಿದ್ದೆ. ನನ್ನ ಉದ್ದೇಶವನ್ನು ಸಾಧಿಸಿದ್ದರಿಂದ ಈಗ ನನ್ನ ಜನರಲ್ಲಿ ಜಾಗೃತಿ ಮೂಡಿದ್ದು ಈಗ ದೇವಸ್ಥಾನಕ್ಕೆ ಪ್ರವೇಶ ನನಗೆ ಬೇಕಿಲ್ಲ. ದಮನಿತ ವರ್ಗಗಳು ಈಗ ತಮ್ಮ ಶಕ್ತಿ ಮತ್ತು ಸಂಪನ್ಮೂಲಗಳನ್ನು ರಾಜಕೀಯ ಮತ್ತು ಶೈಕ್ಷಣಿಕದತ್ತ ಹರಿಸಬೇಕೆಂಬುದು ನನ್ನ ಇಚ್ಛೆ."

ಆರೆಸ್ಸೆಸ್ ಆಗಲಿ, ಅದರ ರಾಜಕೀಯ ದಾಳವಾದ ಬಿಜೆಪಿಯಾಗಲಿ, ಅಂಬೇಡ್ಕರ್ ಅವರು ಹಿಂದೂ 'ಧರ್ಮ'ದ ಬಗ್ಗೆ ಹೇಳಿರುವುದನ್ನೆಲ್ಲ ಒಪ್ಪಿಕೊಳ್ಳುತ್ತವೆಯೇ? ಇಲ್ಲವಾದರೆ ಅಂಬೇಡ್ಕರ್ ಅವರನ್ನು ತನ್ನ ಐಕಾನ್‌ಗಳಲ್ಲಿ ಒಬ್ಬರೆಂದು ತೋರಿಸಲು ಅವರಿಗೆ ಯಾವ ನೈತಿಕತೆ ಇದೆ?

ಬಿಜೆಪಿಯ ಹಿರಿಯ ನಾಯಕ ಅರುಣ್ ಶೌರಿ ಬರೆದ 'ವರ್ಶಿಪಿಂಗ್ ಫಾಲ್ಸ್ ಗಾಡ್ಸ್' ಪುಸ್ತಕದಲ್ಲಿ ಅಂಬೇಡ್ಕರ್ ಅವರನ್ನು ಅವಹೇಳನ ಮಾಡಿದ್ದ, ಅವರು ಸ್ವಾತಂತ್ರ ಸಂಗ್ರಾಮದಲ್ಲಿ ಭಾಗವಹಿಸಿರಲಿಲ್ಲ ಎಂದು ಆರೋಪಿಸಿದ್ದ. ಈಗ ಅಂಬೇಡ್ಕರ್ ಅವರನ್ನು ಕೊಂಡಾಡುತ್ತಿರುವ ಚೆಡ್ಡಿಗಳು ಶೌರಿ ಮತ್ತು ಆತನ ಪುಸ್ತಕವನ್ನು ತಿರಸ್ಕರಿಸುತ್ತಾರೆಯೇ?

ಅಂಬೇಡ್ಕರ್ ಅವರು ಹಿಂದೂ ಮಹಾಸಭಾ ಒಂದು ಪ್ರತಿಗಾಮಿ ಸಂಘಟನೆಯನ್ನು ತಿರಸ್ಕರಿಸಿದ್ದರು. ಮಾತ್ರವಲ್ಲ, ಹಿಂದೂ ಧರ್ಮವನ್ನೇ ತ್ಯಜಿಸಿದ ಅಂಬೇಡ್ಕರ್, ಸಂಘ ಪರಿವಾರದ ಹೆಡ್‌ಕ್ವಾರ್ಟರ್ಸ್ ಆದ ನಾಗಪುರದಲ್ಲೇ ಬೌದ್ಧ ಧರ್ಮವನ್ನು ಸ್ವೀಕರಿಸಿ 'ಕೊನೆಗೂ ನರಕದಿಂದ ಪಾರಾದೆ' ಎಂದಿದ್ದರು. ಯಾವ ಮಹಾರಾಷ್ಟ್ರ ಮತ್ತು ಹರಿಯಾಣದಲ್ಲಿ ಬಿಜೆಪಿ ಸರ್ಕಾರಗಳು ದನದ ಮಾಂಸವನ್ನು ನಿಷೇಧಿಸಿವೆಯೋ, ಅದೇ ದನದ ಮಾಂಸವನ್ನು ಬ್ರಾಹ್ಮಣರೂ ಸೇವಿಸುತ್ತಿದ್ದರು ಎಂದು ಅಂಬೇಡ್ಕರ್ ಅವರು ತಮ್ಮ ಹಲವಾರು ಬರವಣಿಗೆಗಳಲ್ಲಿ ಆಧಾರಸಹಿತ ಹೇಳಿದ್ದರು. ಇವೆಲ್ಲವುಗಳನ್ನು ಚೆಡ್ಡಿಗಳು ಒಪ್ಪುತ್ತಾರೆಯೇ?

ಸುತರಾಮ್ ಒಪ್ಪುವುದಿಲ್ಲ. ಆದರೂ ಅಂಬೇಡ್ಕರ್ ಅವರನ್ನು ಕೊಂಡಾಡುವುದನ್ನು ನಿಲ್ಲಿಸುವುದಿಲ್ಲ. ಅವರೀಗ ಯಾವ ಮಟ್ಟಕ್ಕೆ ಹೋಗಿದ್ದಾರೆಂದರೆ ಅಂಬೇಡ್ಕರ್ ಅವರು ಆರೆಸ್ಸೆಸ್‌ನ ಕೋಮುವಾದಿ ಸಿದ್ಧಾಂತವನ್ನು ಬೆಂಬಲಿಸುತ್ತಿದ್ದರೆಂದೂ, ವಿ.ಡಿ.ಸಾವರ್ಕರ್ ಮತ್ತು ಗೋಲ್ವಾಲ್ಕರ್ ತರಹವೇ ಅಂಬೇಡ್ಕರ್ ಅವರೂ ಹಿಂದೂ ರಾಷ್ಟ್ರೀಯವಾದಿ ಆಗಿದ್ದರು ಎಂದೂ ಸುಳ್ಳು ಹೇಳುತ್ತಿದ್ದಾರೆ.

ಈ ಎಲ್ಲಾ ಸರ್ಕಸ್ ಯಾಕೆ ಗೊತ್ತ? ಸದ್ಯದಲ್ಲೇ ಬಿಹಾರ ಮತ್ತು ಉತ್ತರ ಪ್ರದೇಶ ರಾಜ್ಯಗಳಲ್ಲಿ ವಿಧಾನಸಭೆಗಳಿಗೆ ಚುನಾವಣೆಗಳು ನಡೆಯಲಿವೆ. ಬಿಹಾರದಲ್ಲಿ ಲಾಲು ಪ್ರಸಾದ್ ಮತ್ತು ನಿತೀಶ್ ಕುಮಾರ್ ಕೈಜೋಡಿಸಿರುವುದರಿಂದ ಅವರಿಬ್ಬರ ವಿರುದ್ಧ ದಲಿತ ಮತಗಳನ್ನು ಗಳಿಸುವ ಹುನ್ನಾರ ಇದು. ಜೊತೆಗೆ ಉತ್ತರಪ್ರದೇಶದಲ್ಲಿ ಮಾಯಾವತಿ ನೇತೃತ್ವದ ಬಿಎಸ್‌ಪಿ ಈಗ ಕಳೆಗುಂದಿರುವುದರಿಂದ ಆ ರಾಜ್ಯದಲ್ಲಿ ಶೇ. 22 ಇರುವ ದಲಿತರ ಮತಗಳನ್ನೂ ಆಕರ್ಷಿಸುವ ಪ್ಲಾನ್ ಇದಾಗಿದೆ.

ರಾಜಕೀಯ ಲಾಭ ಪಡೆಯಲು ಮತ್ತು ತಮ್ಮ ಹಿಂದೂತ್ವವಾದವನ್ನು ಹಬ್ಬಿಸಲು ಚೆಡ್ಡಿಗಳು ಯಾವ ಮಟ್ಟಕ್ಕೂ ಇಳಿಯಲು ಸಿದ್ಧ. ಅವರ ಮುಖಕ್ಕೆ ಕ್ಯಾಕರಿಸಿ ಉಗಿದಿದ್ದ ಅಂಬೇಡ್ಕರ್ ಅವರನ್ನೂ ಆಪೋಶನ ಮಾಡಿಕೊಳ್ಳಲೂ ಅವರು ಹಿಂಜರಿಯುವುದಿಲ್ಲ. ಚೆಡ್ಡಿಗಳ ಇಂತಹ ವರಸೆಗಳನ್ನು ಕಣ್ಣುಮುಚ್ಚಿ ನಂಬುವ ಮುನ್ನ ಶೂದ್ರರು, ಹಿಂದುಳಿದ ವರ್ಗದವರು, ದಲಿತರು ಮತ್ತು ಪ್ರಜಾತಂತ್ರದಲ್ಲಿ ಮತ್ತು ಸಮಾಜವಾದದಲ್ಲಿ ನಂಬಿರುವವರೆಲ್ಲರೂ ಸ್ವಲ್ಪ ಯೋಚಿಸಬೇಕು. ■

ಸಾಹಿತ್ಯ ಪರಿಷತ್ತಿನಲ್ಲಿ ಸಂಭ್ರಮ



...ನ್ನೆ, ಬುಧವಾರ ಸಂಜೆ, ಕನ್ನಡ ಸಾಹಿತ್ಯ ಪರಿಷತ್ತಿನ ...ಣದಲ್ಲಿ ನಮ್ಮ ಕುಟುಂಬ ಮತ್ತು ಆಪ್ತ ಸ್ನೇಹಿತರ ...ಸಮಾಚರಣೆ! ಕಾರಣ ಅಲ್ಲಿ ಅಮ್ಮ ಇಂದಿರಾ ...ಕೇಶರಿಗೆ 'ಡಾ. ಬಿ.ಸರೋಜಾದೇವಿ ಸಾಹಿತ್ಯ ಪ್ರಶಸ್ತಿ ...ನ' ಕಾರ್ಯಕ್ರಮ ನಡೆಯಿತು.

...ಪರಿಷತ್ತಿನ ಅಧ್ಯಕ್ಷರೂ, ಅಪ್ಪನ ಶಿಷ್ಯರೂ ಆದ ...ವಲೀಕ ಹಾಲಂಬಿ ಅವರು ಅಮ್ಮ ಮತ್ತು ಅಮ್ಮನ ... ಮೆಚ್ಚುಗೆಯ ಮಾತುಗಳನ್ನಾಡಿದರು. ಕವಯಿತ್ರಿ ...ಎಲ್.ಪುಷ್ಪಾ ಅಮ್ಮ ಬರೆದಿರುವ 'ಹುಳಿಮಾವು ...ತ್ತು ನಾನು' ಪುಸ್ತಕವನ್ನು ಕುರಿತು ಅಭಿಪ್ರಾಯ ...ಚಿಕೊಂಡರು. ಬಿ.ಸರೋಜಾದೇವಿ ಅವರು ಅಮ್ಮನ ...ತನದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ 'ಇಂದಿರಾ ಅವರು ...ರಿಗೂ ಮಾದರಿ ಮಹಿಳೆ' ಎಂದರು.


...ತನ್ನ ಜೀವಮಾನದಲ್ಲೇ ಮೊದಲ ಬಾರಿಗೆ ಮೈಕ್ ...ಂದೆ ನಿಂತ ಅಮ್ಮ ಅಚ್ಚರಿ ಮೂಡಿಸುವಂತೆ ಸರಳವಾಗಿ ...ತ್ತು ಹೃದಯಸ್ಪರ್ಶಿಯಾಗಿ ಹಲವು ಅನಿಸಿಕೆಗಳನ್ನು ...ಚಿಕೊಂಡರು. ಆಮೇಲೆ "ಅಯ್ಯೋ, ಗೌರು, ನೀನು ...ಪ್ರಸ ಮಾಡದಿದ್ದರೆ ನಾನು ಈ ಪುಸ್ತಕವನ್ನು ...ಯುತ್ತಿರಲಿಲ್ಲ ಎಂದು ಹೇಳುವುದಕ್ಕೇ ಮರೆತೆ, ಸಾರಿ" ಎಂದು ಪೇಚಾಡಿದರು. "ಪರವಾಗಿಲ್ಲ ಬಿಡು" ಎಂದು ಅಮ್ಮನಿಗೆ ಮುತ್ತು ಕೊಟ್ಟೆ.

ಗೆಳತಿ ಡಾ.ಎಂ.ಎಸ್.ಆಶಾದೇವಿ ಅಮ್ಮನಿಗೆ ಒಂದು ಸುಂದರವಾದ ಸೀರೆಯನ್ನು ಉಡುಗೊರೆಯಾಗಿ ನೀಡಿದರು. ಅಮ್ಮನ ಹಲವು ಗೆಳತಿಯರು, ಸರೋಜಾದೇವಿಯವರ ಅಭಿಮಾನಿಗಳು, ಸಾಹಿತ್ಯಾಸಕ್ತರು ಅದೆಷ್ಟು ಜನ ಬಂದಿದ್ದರೆಂದರೆ ಸಭಾಂಗಣ ತುಂಬಿತುಳುಕುತ್ತಿತ್ತು.

ಅಜಿತು ತನ್ನ ಹೊಸ ಸಿನಿಮಾದ ಕೆಲಸಕ್ಕೆಂದು ಚೆನ್ನೈಗೆ ಹೋಗಿದ್ದರಿಂದ ಅವನಿಗೆ ಬರಲಾಗಲಿಲ್ಲ. ಆದರೆ ನಾನು, ಕವಿತಾ, ಅರ್ಪಿತಾ, ಸಮರ್, ಇಶಾ ಮತ್ತು ಸಮಯ್ ಹಾಜರಿದ್ದೆವು. ಬೇಸಿಗೆ ರಜೆಯಲ್ಲಿ ಫೋಟೋಗ್ರಫಿ ಕ್ಯಾಂಪ್ ಸೇರಿರುವ ಇಶಾ ನಮ್ಮ ಫ್ಯಾಮಿಲಿಯ ಅಧಿಕೃತ ಫೋಟೋಗ್ರಾಫರ್ ಆಗಿದ್ದಳು. ಹಾಗೆಯೇ ಸಮರ್ ವೀಡಿಯೋಗ್ರಾಫರ್ ಆಗಿದ್ದ! ಬಟ್ಲರ್ ಇಂಗ್ಲಿಷ್ ಮಾತನಾಡುವ ಪುಟಾಣಿ ಸಮಯ್‌ಗೆ ಭಾಷಣಗಳು ಅರ್ಥವಾಗದೆ ತೂಕಡಿಸುತ್ತಿದ್ದ!!

ಅಮ್ಮನಿಗೆ ಪ್ರಶಸ್ತಿ ಬಂದದ್ದು ನಮ್ಮ ಇಡೀ ಬಳಗಕ್ಕೆ ಸಂತೋಷತಂದಿರುವುದರಿಂದ ಇಲ್ಲಿ ಫೋಟೋ ಹಂಚಿಕೊಂಡಿದ್ದೇನೆ.


■ ಗೌರು



ಕೊಳಕೇಶ್ವರ ಸ್ವಾಮಿಯ ಕನ್ಯಾ 'ಸಂಸ್ಕಾರ' ಕಥಾ!!



ರಾಮಚಂದ್ರಾಪುರ ಮಠದ ಮಲಿನ ಪೀಠಾಧಿಪತಿ ರಾಘವೇಶ್ವರ ಸ್ವಾಮಿ ಈಗ ಕೊಳಕೇಶ್ವರ ಸ್ವಾಮಿ ಎಂದೇ ಕುಖ್ಯಾತನಾಗಿಬಿಟ್ಟಿದ್ದಾನೆ. ಈ ಕಾಮ ದುರಂಧರನ ಪೀಕಲಾಟ-ಪುಂಡಾಟ ತಡೆರಹಿತವಾಗಿ ಮುಂದುವರಿದಿದೆ. ಕಳ್ಳಾಟದ ಸನ್ಯಾಸಿ ರಾಘುನ ಪೀಠತ್ಯಾಗ ಹವ್ಯಕರ ಹಿತದೃಷ್ಟಿಯಿಂದ ಅನಿವಾರ್ಯ ಎಂಬ ಚರ್ಚೆಗಳು ಜೋರಾಗುತ್ತಿರುವಂತೆಯೇ ಅತ್ತ ಸಿಐಡಿ ಪೊಲೀಸರು ಈತನ ರೇಪ್ ಕೇಸ್‌ನ ಚಾರ್ಜ್‌ಶೀಟ್ ತಯಾರಿಯಲ್ಲಿದ್ದಾರೆ. ನಿರ್ಲಜ್ಜ ರಾಘು ಮಾತ್ರ ಏನೇ ಆಗಲಿ ಪುಕ್ಕಟೆಯಾಗಿ 'ಸಕಲ ಸುಖ' ಕೊಡುವ ಮಠ ಬಿಟ್ಟು ಹೋಗಲಾರೆನೆಂದು ರಚ್ಚೆ ಹಿಡಿದು ಕೂತುಬಿಟ್ಟಿದ್ದಾನೆ.



ರಾಘುನ ಕಾಮ-ಕ್ರೋಧ-ಮದ-ಮತ್ಸರ ಮತ್ತು ಅವ್ಯವಹಾರದ ಅನಾಹುತಕಾರಿ ವ್ಯಕ್ತಿತ್ವ ಬಯಲು ಮಾಡುವ ಮೂಲಕ ಹವ್ಯಕ ಸಮುದಾಯವನ್ನು ಆತನ ಹಿಟ್ಲರ್ ಹಿಡಿತದಿಂದ ಮುಕ್ತಗೊಳಿಸುವ ಉದ್ದೇಶದಿಂದ "ಸಮಾನ ಮನಸ್ಕ ಹವ್ಯಕ ವೇದಿಕೆ" ಹುಟ್ಟಿಕೊಂಡಿದೆ. ಹವ್ಯಕರು ಒಟ್ಟಾಗಿ ಹೆಣ್ಣುಬಾಕನೆಂಬ ಅಪವಾದಕ್ಕೆ ಈಡಾಗಿರುವ ರಾಘುನನ್ನು ಪೀಠದಿಂದ ಉಚ್ಚಾಟಿಸಿದರೆ ತಮ್ಮ ಜಾತಿಯ ಘನತೆ-ಗೌರವ ಇನ್ನಷ್ಟು ಹೆಚ್ಚುತ್ತದೆ; ಬ್ರಾಹ್ಮಣರ ಪ್ರಜ್ಞಾವಂತಿಕೆ ಲೋಕಮಾನ್ಯವಾಗುತ್ತದೆಂಬ ವಾದ ಈ ಸಮಾನ ಮನಸ್ಕರದು. ಇದಕ್ಕೆ ತದ್ವಿರುದ್ಧವಾಗಿ ಸುಳ್ಳು ಹಾಗು ಅಪಪ್ರಚಾರದ ಅಭಿಯಾನ ರಾಘುನ ಗೂಂಡಾಪಡೆ ಶುರು ಹಚ್ಚಿಕೊಂಡಿದೆ. ಸಮಾನ ಮನಸ್ಕ ವೇದಿಕೆಗೆ ಪ್ರತಿಯಾಗಿ "ನಾವಿದ್ದೇವೆ ಗುರುವೇ ನಿಮ್ಮೊಂದಿಗೆ ನಾವಿದ್ದೇವೆ" ಎಂಬ ಪಕ್ಕಾ ಪುಂಡರ ದಂಡನ್ನು ರಾಮಚಂದ್ರಾಪುರ ಮಠದ ಪಾರುಪತ್ಯಗಾರರು ಕಟ್ಟಿ ಅಖಾಡಕ್ಕೆ ಛೂಬಿಟ್ಟಿದ್ದಾರೆ.


ಈ "ನಾವಿದ್ದೇವೆ" ಬಳಗವಿದೆಯಲ್ಲ, ಅದು ಎಂದೂ ಸುಸಂಬದ್ಧ ಚರ್ಚೆಗೆ, ವಾದಕ್ಕೆ ಸಿದ್ಧವೇ ಇಲ್ಲ. ಆ ಗ್ಯಾಂಗಿನದು ಏನಿದ್ದರೂ ಜಗಳ, ಬೈಗುಳ, ಅಪಪ್ರಚಾರ-ಹೊಡಿ-ಬಡಿ ಸಂಸ್ಕೃತಿ! ರಾಘು ಕಾವಿ ಹಾಕಿಕೊಂಡೇ ನಡೆಸುತ್ತಿರುವ ರಸಿಕತೆ-ರಗಳೆ-ರಾದ್ಧಾಂತ ಯಾರಾದರೂ ಸಾಕ್ಷಿ-ಪುರಾವೆ-ಆಧಾರಸಹಿತ ಹೊರಹಾಕಿದರೆ, ಅಂಥವರ ವಿರುದ್ಧ "ನಾವಿದ್ದೇವೆ" ರೌಡಿಗಳು ತಿರುಗಿ ಬೀಳುತ್ತಾರೆ. ಗುರುವಿನ ಬಣ್ಣ ಬಯಲಾಗಿಸುವವರ ಬಾಯಿ ಮುಚ್ಚಿಸಲು ಅಪಪ್ರಚಾರ ಮಾಡಲಾಗುತ್ತದೆ. ಅವರ ಕುಟುಂಬದ ಚಾರಿತ್ಯ ಹನನಕ್ಕೆ ಹರಾಜು ನಡೆಯುತ್ತದೆ. ಜಾಲತಾಣಗಳಲ್ಲಿ-ಸಮಾಜದಲ್ಲಿ ಬಾಯಿಗೆ ಬಂದಂತೆ ವಿರೋಧಿಗಳ ಖಾಸಗಿ ಬದುಕಿನ ಮೇಲೆ ಅಮಾನುಷ ದಾಳಿ ಮಾಡಲಾಗುತ್ತದೆ. ಇದ್ಯಾವುದೂ ವರ್ಕ್‌ಔಟ್ ಆಗದಿದ್ದಾಗ ದೈಹಿಕ ಹಲ್ಲೆ ಮಾಡೋದು, ಅಟ್ರಾಸಿಟಿ ಕೇಸ್ ಹಾಕಿಸೋದು, ಪೊಲೀಸರ ಛೂ ಬಿಡುವುದು "ನಾವಿದ್ದೇವೆ" ಸೈತಾನರ ನಿತ್ಯ ಕರ್ಮದಂತಾಗಿ ಹೋಗಿದೆ!!

ರಾಘು ಮತ್ತವನ ಕೇಡಿ ರಕ್ಷಕರು ನೈತಿಕ ಅಧಃಪತನದಲ್ಲಿದ್ದಾರೆ. ಹೀಗಾಗಿ ಈ ಗ್ಯಾಂಗ್ ಹಸಿ-ಹಸೀ ಸುಳ್ಳು-ಅಪಪ್ರಚಾರ ಮತ್ತು ದಾದಾಗಿರಿ ಸಾಮ್ರಾಜ್ಯ ಸ್ಥಾಪಿಸಿಕೊಂಡು ಹವ್ಯಕರನ್ನು ಆಳುತ್ತಿದೆ. ಕಾಮ ಕಥಾದ ಬಲಿಪಶು ಪ್ರೇಮಲತಾ ಶಾಸ್ತ್ರಿ ರಾಘುನ ಮೇಲೆ ರೇಪ್ ಆರೋಪ ಮಾಡುವ ಮೊದಲೇ ಆತ ತಾನು ಕೆಕ್ಕಾರಿನ ಚಾತುರ್ಮಾಸ ಮುಗಿದ ಬಳಿಕ ಪೀಠತ್ಯಾಗ ಮಾಡುವುದಾಗಿ ಹೇಳಿದ್ದ; ಹಿಮಾಲಯಕ್ಕೆ ತಪಸ್ಸಿಗೆಂದು ಹೋಗುವುದಾಗಿ ಹೇಳಿದ್ದ. ಆದರೆ ಆತ ಗೂಟ ಜಡಿದು ಪೀಠದಲ್ಲಿ ಕುಕ್ಕರು ಬಡಿದುಬಿಟ್ಟ! ಪ್ರೇಮಲತಾ ಮೇಲೆ ಸುಳ್ಳು ಬ್ಲಾಕ್‌ಮೇಲ್ ಕೇಸು ಹಾಕಿಸಿ ಕಾಮಕಾಂಡ ದಕ್ಕಿಸಿಕೊಳ್ಳಲು ಸ್ಕೆಚ್ ಹೆಣೆದ.


ಯಾವ ಕಾರಣಕ್ಕೂ ಪೀಠ ಬಿಟ್ಟೋಗುವುದಿಲ್ಲ ಎಂದು ಲೌಕಿಕ ದೌರ್ಬಲ್ಯದ ಸಂಸಾರಿಗಿಂತ ಕೀಳಾಗಿ ಈ 'ಸನ್ಯಾಸಿ' ಹಾರಾಡತೊಡಗಿದ!!

ಸೋಗಲಾಡಿತನ-ಸುಳ್ಳು-ವಿರೋಧಾಭಾಸದ ರಾಘುನ ವಿಕೃತಿಗಳು ಆತನ ಸನ್ಯಾಸತ್ವದ ಬಗ್ಗೇ ಹಲವು ಅನುಮಾನ ಮೂಡಿಸಿಬಿಟ್ಟಿತು. ಚರ್ಚೆಗಳನ್ನು ಹುಟ್ಟುಹಾಕಿತು. ರಾಘುಗೆ ಜನರೇ ತಮ್ಮೂರಿಗೆ ಬರದಂತೆ ಬಹಿಷ್ಕಾರ ಹಾಕತೊಡಗಿದರು. ಈ ಬಹಿಷ್ಕಾರ ಆತ ತನ್ನ ವಿರೋಧಿಗಳಿಗೆ ಹಾಕುತ್ತಿದ್ದ ಬಹಿಷ್ಕಾರಗಳಿಗಿಂತಲೂ ಪರಿಣಾಮಕಾರಿ ಆಗಿತ್ತು! ಪುತ್ತೂರಿನ ದೇವಾಲಯದಿಂದ ಸಿಗಂದೂರು ದೇವಸ್ಥಾನದ ತನಕದ ಹಲವು ಧಾರ್ಮಿಕ ಸ್ಥಳಗಳಲ್ಲಿ ರೇಪಿಸ್ಟ್ ರಾಘು ಪ್ರವಚನ ಕೊಡಕೂಡದೆಂದು ಸರ್ಕಾರವೇ ಆದೇಶಿಸುವ ಪರಿಸ್ಥಿತಿ ಬಂತು. ಅಷ್ಟು ದೊಡ್ಡ ಸಾರ್ವಜನಿಕ ವಿರೋಧ ದಗಲುಬಾಜಿ ಸಾಧು ರಾಘುಗೆ ಎದುರಾಯ್ತು. ಈ ನಡುವೆ ರಾಘುನ 'ಗುರು ಶಾಪ'ದ ಅಸ್ತ್ರ ಪ್ರಯೋಗ ತುಂಬ ವ್ಯವಸ್ಥಿತವಾಗಿ ಪ್ರಯೋಗ ಆಗಲಾರಂಭಿಸಿತ್ತು.

ಹವ್ಯಕ ಸಮುದಾಯದಲ್ಲಿ ಮಠ-ಗುರುಪೀಠದ ಬೆದರಿಕೆ ಬತ್ತಿ ಅಸ್ತಿತ್ವ ಉಳಿಸಿಕೊಳ್ಳಲು ರಾಘು ಪಟಾಲಮ್ ಮಾಡಿದ ಕೀಳು ಟ್ರಿಕ್ಕುಗಳು ಒಂದೆರಡಲ್ಲ. ಯಾರು ರಾಘುನ 'ದಶಾವತಾರ'ಗಳ ಬಗ್ಗೆ ಮಾತಾಡುತ್ತಾರೋ ಅಂಥವರಿಗೆ ಮಹಾರೋಗ ಬಂದಿದೆಯೆಂದೋ, ಹೃದಯಾಘಾತ ಆಗಿದೆಯೆಂದೋ, ಅಪಘಾತದಿಂದ ನರಳುತ್ತಿದ್ದಾರೆಂದೋ ಅಪಪ್ರಚಾರ ಹಬ್ಬಿಸುವ "ನಾವಿದ್ದೇವೆ" ಜಾಲ ಹವ್ಯಕರಲ್ಲಿ ಕಾರ್ಯಾಚರಣೆಗೆ ಇಳಿಯಿತು. ಹೊನ್ನಾವರ ನ್ಯಾಯಾಲಯದಲ್ಲಿ ಪ್ರೇಮಲತಾ ದಂಪತಿ ಪರ ವಕಾಲತ್ತು ಮಾಡಿದ್ದ ವಕೀಲ ಎಂ.ಎನ್. ನಾಯ್ಕ ಮತ್ತವರ ಜೂನಿಯರ್‌ಗೆ ಆಕ್ಸಿಡೆಂಟ್ ಆಗಿದೆ ಎಂದು ಮೊದಲು ಜಾಲತಾಣಗಳಲ್ಲಿ ಸುಳ್ಳು ಸುದ್ದಿ ಹಬ್ಬಿಸಲಾಯ್ತು. ಆ ನಂತರ ನಾಯ್ಕ ವಕೀಲರಿಗೆ ಹೃದಯಾಘಾತ ಆಗಿದೆ ಎಂದು ಗುಲ್ಲು ಎಬ್ಬಿಸಿತು ಮಠಾವಲಂಬಿ ಜೀವಿ ಜಾಲ! ಈಗ ಪ್ರೇಮಲತಾರ ಮೈ-ಮುಖಕ್ಕೆಲ್ಲ ಕಜ್ಜಿಯಾಗಿ ಆಕೆ ವಿರೂಪಗೊಂಡಿದ್ದಾರೆಂಬ "ಗುರು ಗಾಸಿಪ್" ಪಸರಿಸಲಾಗಿದೆ. ಇದಕ್ಕೆಲ್ಲ ಗುರುಶಾಪ-ರಾಮನ ಮನಸ್ತಾಪವೇ ಕಾರಣವೆಂಬುದು "ನಾವಿದ್ದೇವೆ" ದಂಡಿನ ವಿಶ್ಲೇಷಣೆ!!



ರಾಘುನ ತಂಟೆಗೆ ಯಾರೂ ಹೋಗದೆ ಎಲ್ಲರೂ ಆತನ ಅನುಯಾಯಿಗಳಾಗಿರುವಂಥ 'ಶಾಪ'ದ ಹಿಕಮತ್ತು




ರಾಘವೇಶ್ವರ ಭಾರತಿ

ಮಠದ ಗೂಂಡಾ ಪಡೆ ಎಷ್ಟು ನಾಜೂಕಾ[gi]
ಮಾಡುತ್ತಿದೆಯೆಂದರೆ, ಪ್ರೇಮಲತಾ ಶಾ[stri]
ದಂಪತಿಗೆ ಬೆಂಬಲಿಸಿದ, ನೆರವಾದ
ನೈತಿಕವಾಗಿ ಸಹಕರಿಸಿದವರಿಗೆಲ್ಲ ಒಂದ
ಒಂದು ರೀತಿಯ ಅನಾಹುತ, ಅಡಚ
ತೊಂದರೆ, ಕಷ್ಟ, ನಷ್ಟ, ನೋವ
ಆಗಿದೆಯೆಂದು ಪುಕಾರು ಪಸರಿಸಲಾಗುತ್ತಿ
ಪ್ರೇಮಲತಾರ ಹತ್ತಿರದ ಸಂಬಂಧಿಯೊಬ್ಬ
ಕಿಡ್ನಿಯೇ ವಿಫಲವಾಗಿದೆ; ಆತನಿಗೆ ಮಠ
ಶಿಷ್ಯ ಕೋಟಿಯೇ ಹಿಡಿದು ತದುಕಿ
ಎಂದೆಲ್ಲ ಸುಳ್ಳು ಡಂಗೂರ ಸಾರಲಾಗಿ
ಪ್ರೇಮಲತಾರ ಅಕ್ಕನ ಗಂಡ ವೈ.ವಿ. ಭಟ
ಎಂಬುವವರು ಸಿಐಡಿ, ನ್ಯಾಯಾಲಯ
ಲಂಚದಂತೆ ಕೆಲಸ ಮಾಡುತ್ತದೆಂದು ಹೇಳಿದ್ದಾರೆಂದು ಒಂದ
ನಕಲಿ ಸಿಡಿಯೂ ತಯಾರಿಸಲಾಯ್ತು. ಅದನ್ನು ಅಡ್ವೊಕೇಟ
ಜನರಲ್‌ಗೂ ಕಳಿಸಿ ಪ್ರೇಮಲತಾ ದಂಪತಿಗಳ ಕೇಸ
ಹಳ್ಳ ಹಿಡಿಸುವ ಹರಾಮಿತನ ರಾಘು ಮಾಡಿದ್ದಾನೆ. ಒಂದ
ಕಾಲದಲ್ಲಿ ಸದ್ರಿ ಭಟ್ ಮಠದ ಆಯಕಟ್ಟಿನ ಜಾಗದಲ್ಲಿದ್ದರ
ಈಗಾತ ಗುರುವಿನ ಅಸಲಿಯತ್ತು ಅರಿವಾ
ಹೊರಹೋಗಿದ್ದಾರೆ. ಈ ಸೇಡು ರಾಘು ಅಂಡ್ ಕೊ
ತೀರಿಸಿಕೊಳ್ಳುತ್ತಿದೆ.

ಇಂಥ ಕಂತ್ರಿ ವಿದ್ಯೆಯಲ್ಲಿ ರಾಘು ನಿಸ್ಸೀಮ! ಈತ
ಷಡ್ಯಂತ್ರಕ್ಕೆ ಅದೆಷ್ಟೋ ಕುಟುಂಬಗಳು ನಾಶವಾಗಿಹೋಗಿ
ಅಮಾಯಕ ಹೆಂಗಸರೆಷ್ಟೋ ಎಲ್ಲವನ್ನೂ ಕಳೆಕೊಂಡ
ಒದ್ದಾಡುತ್ತಿದ್ದಾರೆ. ಈತನ ಗಿಂಡಿ ಮಾಣಿಗಳಿ
ಮದುವೆಯಾದ ಬಡ ಕುಟುಂಬದ ಹುಡುಗಿರನೇಕ
ಅಕ್ಷರಶಃ ಗುರುವಿನ 'ಗುಲಾಮಿ'ಗಳಾಗಿದ್ದಾರೆ. ಗಿಂಡಿ ಮಾ
ಮತ್ತವರ 'ಕಾಮ ಕೋಟೆ' ಗುರುವಿನ ಬಂಧನದಿಂ
ಹೊರಬರಲು ಡೈವೋರ್ಸ್‌ಗೆ ಪ್ರಯತ್ನಿಸಿದರ
ಸಾಧ್ಯವಾಗುತ್ತಿಲ್ಲ. ಇವರೆಲ್ಲ ತನ್ನ ಹಿಡಿತದಿಂ
ಹೊರಹೋದರೆ ಜೈಲೇ ತನಗೆ ಗತಿಯಾಗುವ ಭಯದಿಂ
ರಾಘು ಆ ಹೆಂಗಸರಿಗೆ ಡೈವೋರ್ಸ್ ಸಿಗದಂತೆ ಕುತಂ
ಮಾಡುತ್ತಿದ್ದಾನೆ. ದಿವಾಕರ ಶಾಸ್ತ್ರಿಯ ಸಹೋದರ ಶಾ
ಶಾಸ್ತ್ರಿ ಆತ್ಮಹತ್ಯೆ ಮಾಡಿಕೊಂಡಿದ್ದು ರಾಘುನ ರೌಡಿ ಗ್ಯಾಂಗಿ
ಬೆದರಿಕೆ ತಾಳಲಾಗದೇ ತಾನೇ?!

ಸಿಐಡಿ ಆರೋಪ ಪಟ್ಟಿ ಸಲ್ಲಿಸಲು ತಡವಾಗುತ್ತಿರುವು
ರಾಘು ತನ್ನ 'ಸಂಭಾವಿತಕೆ' ಪ್ರದರ್ಶಿಸ
ಬಳಸಿಕೊಳ್ಳುತ್ತಿದ್ದಾನೆ. ಪ್ರೇಮಲತಾ ದಂಪತಿ ರಾಘುಗೆ ಸೋ
ಶರಣಾಗಿದ್ದಾರೆ ಎಂಬ ಗುಲ್ಲು ಹಬ್ಬಿಸಿ ಹವ್ಯಕರಲ್ಲಿ ಆ
'ದೈವೀ ಶಕ್ತಿ'ಯ ಪ್ರಭಾವದ ಮಹಿಮೆ ತೋರಿಸಲಾಗುತ್ತಿ
ತನ್ಮೂಲಕ ಡ್ಯಾಮೇಜು ಕಂಟ್ರೋಲ್ ಪ್ರಯತ್ನ ಸಾಗಿ
ಸಮಾನ ಮನಸ್ಕ ಹವ್ಯಕ ವೇದಿಕೆಯ ಸಭೆಯ
ಭಾಗವಹಿಸಿದ್ದರೆಂಬ ಸಿಟ್ಟಿಂದ ಖ್ಯಾತ ಕನ್ನಡ ಪಂಡಿ
ಮುಂಬೈ ಯುನಿವರ್ಸಿಟಿಯ ಮಾಜಿ ಪ್ರಾಧ್ಯಾಪಕ ತಾ
ಷಂತಕುಮಾರ್ ದೇರಾಜೆ ಶತಮಾನೋತ್ಸವ ಕಾರ್ಯಕ್ರಮ
ಹೋಗದಂತೆ ರಾಘುನ ರೌಡಿ ಪಡೆ ಬೆದರಿಕೆ ಹಾಕಿ
ಸದ್ಯಕ್ಕೆ ರಾಘು ಮಾಣಿ ಬದುಕಿದ್ದರೆ ಇಂಥ ಸುಳ್ಳು-ಬೆದರಿ
ಅಪಪ್ರಚಾರದಿಂದಷ್ಟೇ!

ರಾಘು ಮಾಣಿ ಕಾಮಕಾಂಡ ಘನಘೋರ!
ಕಾವಿಯಡಿ ಕಾಮ ಕರ್ಮ ನಡೆಸುವುದರಲ್ಲಿ ನಿಪು
ಆತನ ನೋಟ-ನಡೆ-ನುಡಿ ಎಲ್ಲವೂ ಕಾಮಾತುರದಲ್ಲಿರುತ್ತ
ರಾಘು ಮಹಿಳೆಯರನ್ನು ವಿಕೃತವಾಗಿ ದೃಷ್ಟಿಸುವು
ಸ್ಪರ್ಶಿಸುವುದು, ಏಕಾಂತದಲ್ಲಿ ವ್ಯವಹರಿಸುವುದು ಮ
ಆತನ 'ವಿಶಿಷ್ಟ' ಕನ್ಯಾ ಸಂಸ್ಕಾರ ಎಲ್ಲವೂ ಆಕ್ಷೇಪಾರ್ಹ
ಪ್ರೇಮಲತಾ ಪ್ರಕರಣದ ನಂತರ ರಾಘುನ ಏಕಾಂತ ದರ್ಶ
ಕನ್ಯಾ ಸಂಸ್ಕಾರದ ಬಗ್ಗೆ ದೊಡ್ಡ ವಿರೋಧ ವ್ಯಕ್ತವಾಗಿ
ಆಗ ಮಠದಿಂದ ಏಕಾಂತ ದರ್ಶನ ಪದ್ಧತಿ, ಕನ್ಯಾ ಸಂಸ



ರಾಘು ಪದ್ಮಾಸನ!

ಮಠಾಧಿಪತಿಯಾದವನು ಮಹಿಳೆಯರಿಂದ ಅಂತರ ಕಾಯ್ದುಕೊಳ್ಳಬೇಕೆಂಬುದು ಸನ್ಯಾಸ ಸಂಹಿತೆಯ ಖಡಕ್ ನೀತಿ-ನಿಯಮ. ಆದರೆ ರಾಮಚಂದ್ರಾಪುರ ಮಠದ ರಸಿಕ ರಾಘು ಸ್ವಾಮಿಗೆ ಸೆರಗಿನ ಗಾಳಿ, ಗೆಜ್ಜೆ-ಬಳೆ ನಾದ ಇಲ್ಲದಿದ್ದರೆ ಜಪ-ತಪ-ಪ್ರವಚನಕ್ಕೆ ಉಮೇದಿಯೇ ಬರದು; ರಾಘು ಮಾಣಿಗೆ ಮಹಿಳೆಯರ ಗುಂಪಿನಲ್ಲಿ ನಿಂತು ನಗುವ, ಅವರ ಮೈ-ಮುಖ ಮುಟ್ಟಿ ಗೋಪಿಕಾ ಕೃಷ್ಣನಂತೆ ಮುದಗೊಳ್ಳುವ ಚಪಲ. ಈ ನೀತಿಸಂಹಿತೆ ಆತ ಸನ್ಯಾಸ ದೀಕ್ಷೆ ಪಡೆದ ಗಳಿಗೆಯಿಂದಲೇ ಅನೂಚಾನಾಗಿ ಪಾಲಿಸುತ್ತಿದ್ದಾನೆ. ಚಪಲ ತೀರಿಸಿಕೊಳ್ಳಲು ನಾನಾ ನಮೂನೆಯ ಮಹಿಳಾ ಪರ ಆಚರಣೆ ಆತ ಶುರುವಿಟ್ಟುಕೊಂಡಿದ್ದಾನೆ.

ಚೆಂದದ ಶಿಷ್ಯೆಯರ ಕೆನ್ನೆ ಸವರುವುದು, ಮೈ ಹೊಸೆಯುವುದು, ಭುಜ-ಬೆನ್ನು ಒತ್ತುವುದು, ಕುಂಕುಮ ಹಣೆಗಿಡುವುದು ರಾಘು ಜಾರಿಗೆ ತಂದಿರುವ ಕ್ರಾಂತಿಕಾರಿ ಸನ್ಯಾಸತ್ವ!! ಏಕಾಂತ ದರ್ಶನ ಪದ್ಧತಿ ಕಂಡುಹಿಡಿದಿರುವುದು ರಾಘುನ ಪೋಲಿ ಗುರುತ್ವಕ್ಕೆ ನಿದರ್ಶನದಂತಿದೆ. ಕನ್ಯಾಸಂಸ್ಕಾರ ಎಂಬ ಮತ್ತೊಂದು ಕಾಮ ವಿಕಾರ ಕಾರ್ಯಕ್ರಮವಂತೂ ಏನೂ ಅರಿಯದ ಅಮಾಯಕ ಬಾಲಕಿಯರ ಬದುಕು ಬರ್ಬಾದ್ ಮಾಡುವ ದುಷ್ಟತನ. ಹೆಣ್ಮಕ್ಕಳನ್ನು ಚಿಕ್ಕವರಿರುವಾಗಲೇ ಮಠ-ದೇವರು-ಧಾರ್ಮಿಕತೆಯ ನೆಪದಲ್ಲಿ ಪಳಗಿಸುವ ರಾಘುನ ದೂ(ದು)ರಾಲೋಚನೆಯ ಕ್ರಿಮಿನಲ್ ಪ್ಲಾನ್ ಇದು.


ಆದರೆ ಕನ್ಯಾ ಸಂಸ್ಕಾರ, ಏಕಾಂತ ದರ್ಶನ, ಕುಂಕುಮಧಾರಣೆ, ಕೆನ್ನೆ ಸವರಿಕೆ.... ಇದ್ಯಾವುದೂ ತಾನು ಮಾಡೇ ಇಲ್ಲ ಎಂದು ರಾಘು ಸತ್ಯವನ್ನು ತಲೆ ಮೇಲೆ ಹೊಡೆದಂತೆ ಸ್ಪಷ್ಟೀಕರಣ ಕೊಡುತ್ತಾನೆ. ಈ ಸುಳ್ಳು ಅಭಿಯಾನಕ್ಕೆ ಆತ ಲಕ್ಷಾಂತರ ವ್ಯಯಿಸಿ ಅಪಪ್ರಚಾರಕರನ್ನು ನೇಮಿಸಿಕೊಂಡಿದ್ದಾನೆ. ಆದರೆ ರಾಘು ಇವತ್ತಿಗೂ ತನಗೆ ಹುಕ್ಕಿ ಬಂದಾಗೆಲ್ಲ ಬಾಲಕಿಯರ ಪಾಲಕರ ಯಾಮಾರಿಸಿ ಏಕಾಂತಕ್ಕೆ ಕರೆದೊಯ್ಯುತ್ತಿದ್ದಾನೆಂಬುದಕ್ಕೆ ಇದೇ ಏಪ್ರಿಲ್ 24ರಂದು ಸಿದ್ದಾಪುರದ ಬಾನ್ಕುಳಿ ಮಠದಲ್ಲಿ ಏರ್ಪಾಡಾಗಿರುವ ಕನ್ಯಾ ಸಂಸ್ಕಾರ ಕಾರ್ಯಕ್ರಮವೇ ನಿದರ್ಶನ! ಜಾಲತಾಣಗಳಲ್ಲಿ ರಾಘು ಹೆಂಗಸರ ಕೆನ್ನೆ ಸವರುತ್ತಿರುವ ಕಳ್ಳ ನೋಟ ಬೀರುತ್ತ ಕುಂಕುಮ ಇಡುತ್ತಿರುವ ಚಿತ್ರಗಳು ಹರಿದಾಡುತ್ತಲೇ ಇದೆ. ಇದೆಲ್ಲ ನಿರಾಕರಿಸುವ ನೈತಿಕ ಉತ್ತರ ರಾಘು ಪಟಾಲಮ್‌ನಲ್ಲಿ ಇಲ್ಲ!

ರಾಘುನ ಸಕಲ ರೊಮ್ಯಾಂಟಿಕ್ ಸರ್ಕಸ್, ಅತ್ಯಾಚಾರ, ಅನಾಚಾರಕ್ಕೆ ಧಾರ್ಮಿಕ ಸ್ಪರ್ಶ ನೀಡಿ ಸಮರ್ಥಿಸುವ ಪದ್ಮಾಭಟ್ ಎಂಬ ಪದ್ಮಾಸನ ಪ್ರವೀಣೆ ರಾಘುನ ಏಕಾಂತದರ್ಶನದಿಂದ ಪುನೀತಳಾಗಿರುವೆನಾಗಿ ದೊಡ್ಡ ಗಂಟಲಲ್ಲಿ ಒದರುತ್ತಿದ್ದಾಳೆ. ಇದನ್ನಾಕೆ ತನ್ನ 'ರಾಜಧಾನಿ ಎಕ್ಸ್‌ಪ್ರೆಸ್' ಎಂಬ ಪತ್ರಿಕೆಯಲ್ಲಿ ಬರೆದಿದ್ದಾಳೆ. ಏಕಾಂತ ದರ್ಶನದ ಫಲಾನುಭವಿ ತಾನೆಂದು ಹೇಳಿಕೊಂಡಿದ್ದಾಳೆ. ಈಕೆ ರಾಘುನ ಪರಮಾಪ್ತ ಶಿಷ್ಯೆ. ಗುರುವಿನ ಮುಖವಾಣಿಯಂತೆ ಪತ್ರಿಕೆ ಹೊರತರುತ್ತಿರುವಾಕೆ. ರಾಘು ಪರಮ ಪವಿತ್ರ ಸನ್ಯಾಸಿ, ಪ್ರೇಮಲತಾ ಕೊಳಕಿ, ಗುರುನಿಂದಕರು ಚಾರಿತ್ರ್ಯಹೀನರೆಂದು ರೀಮುಗಟ್ಟಲೆ ಸುಳ್ಳು ಹೊಸೆಯುವ ಈಕೆಯ 'ಏಕಾಂತ ದರ್ಶನ' ನಿರೂಪಣೆ ಮಠದಿಂದ ಈವರೆಗೆ ನಿರಾಕರಿಸಲ್ಪಟ್ಟಿಲ್ಲ.

ಇದರರ್ಥ ಇಷ್ಟೆ! ರಾಘು ಮಠದಲ್ಲಿ, ಆತನ ಧರ್ಮಸಭೆಗಳಲ್ಲಿ ಸ್ತ್ರೀ ಸ್ವಾಹಾ ಕಾರ್ಯ ತುಂಬ ವ್ಯವಸ್ಥಿತವಾಗಿ ಇದ್ದೇ ಇರುತ್ತದೆ ಎಂದಾಯ್ತು!!

ಯುರ ಜತೆ ಗುರುವಿನ ಸರಸಸಲ್ಲಾಪ ಸುಳ್ಳೇಸುಳ್ಳೆಂಬ ...ೇಶರಣಾ ಬಂದಿತ್ತು, ಮಜಾ ಎಂದರೆ ಈ ಮಠದ ...ಹಾಮುಹಿಮರ ಸಮುಚಾಯಿಷಿಕೆಯೇ ಢೋಂಗಿ!!

ಗಂಡ-ಹೆಂಡತಿ ನಡುವಿನ ಸಾಂಸಾರಿಕ-ಸಾಮಾಜಿಕ-...ರ್ಥಿಕ-ದಾಂಪತ್ಯಿಕ ಸಮಸ್ಯೆಗಳನ್ನು ದುರುಪಯೋಗಮಾಡಿ ...ಂಡು ಏಕಾಂತ ದರ್ಶನ ನಡೆಸುತ್ತಿದ್ದ ರಾಘು ನೊಂದ ...ಂಗಸರ ಹಳಗಿಸಲು ಪ್ರಯತ್ನಿಸುತ್ತಿದ್ದ. ಸುಲಭವಾಗಿ ಸಿಕ್ಕ ...ಮಾಯಕರನ್ನು ತಿಂದು ತೇಗುತ್ತಿದ್ದ. ಇಂಥ ಪರಕಾಯ ...ವೀಣ್ಯದ ರಾಘು ಹತ್ತು-ಹನ್ನೆರಡು ವರ್ಷದ ...ಲಕಿಯರಿಗೆ "ಮುಂಜಿ" ಮಾಡುವ 'ಕನ್ಯಾ ಸಂಸ್ಕಾರ' ...ಬ ವಿದ್ರೋಹದ ಸಂಸ್ಕೃತಿ ಹವ್ಯಕರಲ್ಲಿ ಸೃಷ್ಟಿಸಿದ್ದ! ಈ ...ಸ್ಕಾರ'ದ ವಿಧಿ-ವಿಧಾನ ರಾಘುನ ತೃಷೆ ತಣಿಕೆಗೆ ಅನು...ಲವಾಗುವಂತೆ ಹೆಣೆಯಲಾಗಿದೆ. ಬ್ರಹ್ಮೋಪದೇಶ ...ಡುವಾಗ ತಂದೆ ವಟುವಿನೊಂದಿಗೆ ಏಕಾಂತದಲ್ಲಿ ...ಬುಕು ಹಾಕಿಕೊಂಡು ಕಿವಿಯಲ್ಲಿ ಗಾಯತ್ರಿ ಮಂತ್ರ ...ಬೋಧಿಸುವ ಪದ್ಧತಿ ಬ್ರಾಹ್ಮಣರಲ್ಲಿದೆ. ಇಂಥದೇ ಸಂಸ್ಕಾರ ...ಣ್ಣು ಮಕ್ಕಳಿಗೆ ತಾನು ಕೊಡುವುದಾಗಿ ರಾಘು ಹವ್ಯಕರನ್ನು ...ರಳು ಮಾಡಿದ್ದ. ಹೆಣ್ಣು ಮಕ್ಕಳಿಗೂ ಸಮಾನತೆ-ಹಕ್ಕು ...ಡುವ ವಿಧಿಯದು ಎಂದು ಹವ್ಯಕ ಪಾಲಕರ ದಾರಿ ...ಪ್ಪಿಸಿದ್ದ.



...ಪ್ರೇಮಲತಾ, ದಿವಾಕರ ಶಾಸ್ತ್ರಿ


ಪುಟ್ಟ ಹೆಣ್ಣು ಮಕ್ಕಳಿಗೆ ಸಂಸ್ಕಾರ ಕೊಡುವ ನೆಪದಲ್ಲಿ ...ಘು ತನ್ನ ಶಯ್ಯಾಗೃಹಕ್ಕೆ ಒಯ್ಯುತ್ತಿದ್ದ. ಅಲ್ಲಿ ಬಾಲಕಿಯರನ್ನು ...ಡೆ ಮೇಲೆ ಕೂಡ್ರಿಸಿಕೊಂಡು ಕಿವಿಯಲ್ಲಿ ಏನೇನೋ ...ಳಿಯದ-ತಿಳಿಯದ ಮಂತ್ರ ಉಸುರುತ್ತ ಪಳಗಿಸಲು ...ಯತ್ನಿಸುತ್ತಿದ್ದ. ಏನೂ ತಿಳಿಯದ ಎಳೆಯ ಮಕ್ಕಳ ಕೆನ್ನೆ-...ಟಿಗೆಲ್ಲ ಮುತ್ತು ಕೊಟ್ಟು ಥ್ರಿಲ್ ಅನುಭವಿಸುತ್ತಿದ್ದ ಈ ...ಚಾತಿನೀಚ ಸ್ವಾಮೀಜಿ!! ಹವ್ಯಕರ ಹಿರಿಯ ಮುತ್ಸದ್ಧಿ-...ಾಜಿ ಮಂತ್ರಿ ಕೆ.ಎಚ್. ಶ್ರೀನಿವಾಸ್ ಮೈಸೂರು ಕಡೆಯ ...ಾಲಕಿಯೊಬ್ಬಳ ತುಟಿಗೆ ರಾಘು ಮಾಣಿ ತುಟಿ ಒತ್ತಿದ್ದನೆಂದು ...ರಾನೇರ ಆರೋಪಿಸಿದ್ದರು. ಸಣ್ಣ ಹುಡುಗಿಯರನ್ನು ಕನ್ಯಾ ...ಸ್ಕಾರದ ಸಮ್ಮೋಹಿನಿಗೆ ಒಳಪಡಿಸಿ ದೊಡ್ಡವರಾದ ಮೇಲೆ ...ಳಸುವ ಹರಾಮಿ ಹಿಕಮತ್ತು ರಾಘುನದು. ಆತನ ...ಣವವಿವಹಾ ಪಾಲಿಸಿ ಕಂತು ತುಂಬಿ ಈಚೆಗೆ ...ಸುರುವಾಸಿಯಾದ ಹೆಂಗಸು ಅದಕ್ಕೆ ಜೀವಂತ ಸಾಕ್ಷಿ!!

ರಾಘುನ 'ಕನ್ಯಾ ಸಂಸ್ಕಾರ'ದ ಬಗ್ಗೆ ರಂಗು-ರಂಗಿನ ..., ಉಪಕತೆ ಹಾರಾಡಿದಾಗ ಮಠದ ವತಿಯಿಂದ ...ಾಕರಣ ಬಿರುಸಾಗಿ ಬಂದಿತ್ತು. ಇಂಥ ಕನ್ಯಾಸಂಸ್ಕಾರವೇ ...ಲ್ಲವೆಂದು 'ಗುರುವಿನ' ಗುರುಗಳು ಬೊಬ್ಬೆ ಹೊಡೆದಿದ್ದರು. ...ದರೆ ಇವತ್ತಿಗೂ ರಾಮಚಂದ್ರಾಪುರ ಮಠ ಪುನೀತ ...ನ್ಯಾ ಸಂಸ್ಕಾರ' ಅಲ್ಲಲ್ಲಿ ನಡೆಯುತ್ತಲೇ ಇದೆ. ಇದೇ ...ಪ್ರಿಲ್ 22 ರಿಂದ 25ರವರೆಗೆ ಸಿದ್ದಾಪುರ ತಾಲ್ಲೂಕಿನ ...ಾನ್ಕುಳಿ ಮಠದಲ್ಲಿ (ರಾಮಚಂದ್ರಾಪುರ ಮಠದ ಬ್ರ್ಯಾಂಚ್ ...ಿತ) ಶಂಕರ ಪಂಚಮಿ ಎಂಬ ಸಂಭ್ರಮ ನಡೆಯಲಿದೆ. ... ವಿವಿಧ ವಿನೋದಾವಳಿಗೆ ರಾಘುನದೇ ಅಧ್ವರ್ಯ ...ಯೋಜನೆ. ಮೂರನೇ ದಿನ (24.04.15)ರಂದು ...ಳಗ್ಗೆ 7ಕ್ಕೆ ರಾಘು 'ಕನ್ಯಾ ಸಂಸ್ಕಾರ' ನಡೆಸಲಿದ್ದಾನೆ. ಇದು ...ತನ ಮಠ ಪ್ರಕಟಿಸಿರುವ ಆಮಂತ್ರಣ ಪತ್ರಿಕೆಯಲ್ಲೇ ...ಧಿಕೃತವಾಗಿ ಅಚ್ಚಿಸಲಾಗಿದೆ. ಅಂದು ಅದೆಷ್ಟು ಪಾಪದ ...ಡುಗಿಯರು ಪಾಡಿ ತಪ್ಪುತ್ತಾರೋ?!

ಹವ್ಯಕರ ದಿಕ್ಕು ತಪ್ಪಿಸಿ ಬದುಕುತ್ತಿರುವ ರಾಘು ಮಾಣಿಗೆ ...ಳ್ಳೇ ಬಂಡವಾಳ. ತಾನು ಕಠೋರ ಬ್ರಹ್ಮಚರ್ಯದ ...ನ್ಯಾಸಿ ಎಂದು ಹವ್ಯಕರ ನಂಬಿಸುತ್ತಲೇ ತನಗೆ ...ಂಬಲಿಸುವಂತೆ ಆಣೆ-ಪ್ರಮಾಣ ಮಾಡಿಸುತ್ತಿದ್ದಾನೆ. ...ತೊಂದೆಡೆ ವಿರೋಧಿಗಳ ಮುಗಿಸಲು ಅಂಡರ್‌ವರ್ಲ್ಡ್ ...ನ್‌ನಂತೆ ಭೂಗತ ಕಾರ್ಯಾಚರಣೆ ನಡೆಸುತ್ತಿದ್ದಾನೆ. ...ಘು ಅಂದ್ ಕೋ ಹೇಳೋದು ಒಂದು, ಮಾಡೋದೇ ...ತೊಂದು! ನಿಜಕ್ಕೂ ರಾಘು ಮಾಣಿ ಹವ್ಯಕ ಸಮು...ಯಕ್ಕೆ ಗಂಡಾಂತರಕಾರಿ ಹಾಯಂತೆ ಜೋತು ಬಿದ್ದಿದ್ದಾನೆ. ...ತನನ್ನು ಎಷ್ಟು ಬೇಗ ಪೀಠದಿಂದ ತೊಲಗಿಸಲಾಗುತ್ತದೋ ...ಷ್ಟು ಹವ್ಯಕರಿಗೆ ಮತ್ತು ಸಮಾಜಕ್ಕೆ ಒಳ್ಳೆಯದು.

ದಿಲ್ಲಿಯ ನಿರ್ಭಯಾ ಪ್ರಕರಣದಲ್ಲಾದಂಥ ಸಾಮಾಜಿಕ ...ಗೃತಿ- ಭುಗಿಲೆದ್ದ ಆಕ್ರೋಶ ರಾಘು ರೇಪ್ ಕೇಸ್‌ನಲ್ಲಿ ... ಮೂಡುತ್ತಿಲ್ಲ? ರಾಘುನ ಹಿಂದಿರುವ ಕೇಡಿ ...ಮಾಮಿಗಳಿಗ್ಯಾಕೆ ಸರ್ಕಾರದಿಂದ ಮುಟ್ಟಿ ಹಾಕಲಾಗುತ್ತಿಲ್ಲ? ...ದೇ ಈ ಕೇಸಿನ ನಿಗೂಢ!

■ ಶುದ್ಧೋಧನ



ಕುಮಟಾ: ಪ್ರೇಮ್ ಕಹಾನಿ ಔರ್ 'ಸಂಘಿ' ಗುಮಾನಿ


ಸತ್ತ ಹೆಣದ ಸೂತಕದಿಂದ ಹಿಡಿದು ನಿಷ್ಕಲ್ಮಶ ಪ್ರೇಮದವರೆಗೆ ಎಲ್ಲವನ್ನು ತಮ್ಮ ಕೋಮು ಕುತಂತ್ರಕ್ಕೆ ಬಳಸಿಕೊಳ್ಳುವುದು ಸಂಘ ಪರಿವಾರಿಗಳಿಗೆ ಮತ್ತು ಅವರ ರಾಜಕೀಯ ಮುಖವಾಡಗಳಿಗೆ ಸಿದ್ಧಹಸ್ತ ಎನ್ನುವುದರಲ್ಲಿ ಎರಡು ಮಾತಿಲ್ಲ. ತೀರ್ಥಹಳ್ಳಿಯ ನಂದಿತಾ ಪ್ರಕರಣದಿಂದ ಮೊದಲ್ಗೊಂಡು ಐಎಎಸ್ ಅಧಿಕಾರಿ ಡಿ.ಕೆ ರವಿ ಸಾವಿನವರೆಗೆ ಈ ಸಂಘಿಗಳು ಹೇಗೆಲ್ಲಾ ರಾಜಕೀಯ ಮಾಡಿದರು ಎಂಬುದು ರಾಜ್ಯದ ಜನರ ಕಣ್ಮುಂದೆ ಹಸಿಯಾಗಿಯೇ ಇದೆ. ಇಂತದೇ ಮತ್ತೊಂದು ಕೃತ್ಯಕ್ಕೆ ಅಂಕೋಲಾ ಕಡೆಯ ಚೆಡ್ಡಿಗಳು ಕೈಹಾಕಿದ್ದಾರೆ. ಒಂದೇಒಂದು ಸಣ್ಣ ವ್ಯತ್ಯಾಸವೆಂದರೆ, ಈ ಬಾರಿ ಸಾವಿಗೆ ಬದಲಾಗಿ ಒಂದು ನಿಷ್ಕಲ್ಮಶ ಪ್ರೇಮ ಪ್ರಕರಣವನ್ನು ತಮ್ಮ ಕಿತಾಪತಿಗೆ ಬಳಸಿಕೊಂಡಿದ್ದಾರೆ.

ಅಸಲಿಗೆ ಕುಮಟಾದ ವಿದ್ಯಾಧಿರಾಜ ಪಾಲಿಟೆಕ್ನಿಕ್ ಕಾಲೇಜ್‌ನಲ್ಲಿ ಉಪನ್ಯಾಸಕಿ ಮತ್ತು ಆಕೆಯ ಶಿಷ್ಯನ ನಡುವೆ ನಡೆದ ತೀರಾ ಖಾಸಗಿ ಪ್ರೇಮಾಂಕುರ ಸಂಗತಿ ಇದು. ಮೂವತ್ತು ವರ್ಷದ ಉಪನ್ಯಾಸಕಿ ಹಾಗೂ ಆದೇ ಕಾಲೇಜಿನಲ್ಲಿ ಕಂಪ್ಯೂಟರ್ ಸೈನ್ಸ್ ಅಂತಿಮ ವರ್ಷದ ಡಿಪ್ಲೊಮಾ ಓದುತ್ತಿದ್ದ ಅಜ್ಜಿಕಟ್ಟೆ ಮೂಲದ ವಿದ್ಯಾರ್ಥಿಯೊಬ್ಬನ ನಡುವೆ ಪ್ರೀತಿ ಮೊಳೆತಿತ್ತು. ಹಾಗೆ ಎಂಟ್ರಿ ಕೊಡದಿದ್ದರೆ ಈ ಪ್ರಕರಣವೂ ಅಷ್ಟೇ ಸುಖಾಂತ್ಯ ಕಾಣುತ್ತಿತ್ತೇನೊ? ಆದರೆ, ಇಂತಹ 'ವಿಶಿಷ್ಟ' ಪ್ರೇಮದಲ್ಲಿ ತೊಡಗಿರುವ ಇಬ್ಬರೂ ಮುಸ್ಲಿಂ ಸಮುದಾಯದವರು ಎಂಬ ಒಂದೇಒಂದು ಕಾರಣಕ್ಕೆ ಈ ಪ್ರೇಮಪ್ರಸಂಗದಲ್ಲಿ ಸಂಘಿಗಳು ಕಡ್ಡಿ ಅಲ್ಲಾಡಿಸಿ ಆ ಇಬ್ಬರ ಭವಿಷ್ಯವನ್ನೇ ಹಾಳುಗೆಡವಲು ಹುನ್ನಾರ ನಡೆಸಿದ್ದಾರೆ.

ಈ ಇಬ್ಬರೂ ಪ್ರೇಮಿಗಳ ಅನ್ಯೋನ್ಯವಾಗಿದ್ದ ಫೋಟೊಗಳಿಗೆ ತಮ್ಮ ವಿಕೃತ ಗ್ರಾಫಿಕ್ಸ್ ಲೇಪ ನೀಡಿ ಅಶ್ಲೀಲ ಮೆಸೇಜುಗಳನ್ನಾಗಿಸಿ ಸಾಮಾಜಿಕ ಜಾಲತಾಣ ಮತ್ತು ವ್ಯಾಟ್ಸ್‌ಅಪ್‌ಗಳಲ್ಲಿ ಹರಿಬಿಟ್ಟಿದ್ದಾರೆ. ಅವರ ಗ್ರಾಫಿಕ್ಸ್ ವಿಕೃತ ಅದ್ಯಾವ ವಿಪರೀತಕ್ಕೆ ಹೋಗಿದೆಯೆಂದರೆ ಆ ಪ್ರೇಮಿಗಳಿಬ್ಬರನ್ನು ಸಾಯಿಸಿ ಪೆಟ್ಟಿಗೆಯಲ್ಲಿ ತುಂಬಿದಂತೆ ಅಣಕಿಸಿ, ಅವಹೇಳನ ಮಾಡಿ ಪ್ರಚಾರ ಮಾಡುತ್ತಿದ್ದಾರೆ. ಇದೊಂದು ಶುದ್ಧ ಸೈಬರ್ ಕ್ರೈಂ ಅಪರಾಧ. ವಿಪರ್ಯಾಸವೆಂದರೆ, ಇಂತಹ ಅಪರಾಧ ಮಾಡಿದವರಿಗೆ ಶಿಕ್ಷೆ ಆಗಬೇಕಾಗಿತ್ತು. ಬದಲಿಗೆ ಕಾಲೇಜು ಆಡಳಿತ ಮಂಡಳಿ ಆ ಉಪನ್ಯಾಸಕಿಯನ್ನೇ ಕೆಲಸದಿಂದ ಕಿತ್ತೆಸೆದರೆ, ಪೊಲೀಸಿನವರು ಆ ಹುಡುಗನನ್ನು ಠಾಣೆಗೆ ಕರೆತಂದು ವಿಚಾರಣೆ ನಡೆಸುತ್ತಿದ್ದಾರೆ.

ವಿಚಾರಣೆಯ ವೇಳೆಯಲ್ಲಿ ಆ ಹುಡುಗ ತನ್ನ ಹಾಗೂ ಹುಡುಗನ ನಡುವೆ ಜಗಳವಾಗಿತ್ತು. ಆ ಮತ್ತೊಬ್ಬ ಹುಡುಗ ಹಿಂದೂ ಪರ ಕೇಸರಿ ಬ್ರಿಗೇಡ್‌ಗಳಲ್ಲಿ ಗುರುತಿಸಿಕೊಂಡಿರುವಂತವನು ಎನ್ನಲಾಗುತ್ತಿದೆ. ಮೊದಲಿಂದಲೂ ಮುಸ್ಲಿಂ ಯುವ ಸಮುದಾಯದ ಮೇಲೆ 'ಲವ್ ಜಿಹಾದ್' ಹೆಸರಿಟ್ಟುಕೊಂಡು ದಾಳಿ ಮಾಡುತ್ತಲೇ ಬರುತ್ತಿದ್ದ ಸಂಘಿಗಳಿಗೆ ನೇರ ಆಕ್ರಮಣ ಮಾಡಲು ಈ ಪ್ರಸಂಗ ದಾರಿಕೊಟ್ಟಿಲ್ಲ. ಏಕೆಂದರೆ ಇಬ್ಬರೂ ಮುಸ್ಲಿಮರೇ. ಹಾಗಾಗಿ ತಮ್ಮ ಗ್ರಾಫಿಕ್ಸ್ 'ಕು'ತಂತ್ರಜ್ಞಾನ ಬಳಸಿ ಇಂತಹ ವಿಕೃತ ಅಪಪ್ರಚಾರಕ್ಕೆ ಕೈ ಇಟ್ಟಿದ್ದಾರೆ. ಸೈಬರ್ ಕ್ರೈಂ ಅಪರಾಧದಡಿ ಪೊಲೀಸರು ಸರಿಯಾದ ಜಾಲ ಬೀಸಿದರೆ 'ಆನ್‌ಲೈನ್ ಅವಾಂತರಿ'ಗಳು ತಗುಲಿಹಾಕಿಕೊಳ್ಳುತ್ತಾರೆ. ಆದರೆ ಕೋಮುವಾದಿಗಳ ಕಾರಸ್ಥಾನದಲ್ಲಿ ಖಾಕಿ ಪಡೆ ಆ ಪರಿ ದಿಟ್ಟತನ ತೋರೀತೇ ಎನ್ನುವುದೇ ಪ್ರಶ್ನೆ?

ಇಲ್ಲೊಂದು ಸಂಗತಿಯನ್ನು ನಾವೆಲ್ಲ ಗಮನಿಸಲೇಬೇಕು. ಏನೆಂದರೆ, ಈ ಗುರು-ಶಿಷ್ಯರ ನಡುವಿನ ಪ್ರೇಮಪ್ರಕರಣಗಳಿಗೆ ಸಂಬಂಧಿಸಿದಂತೆ ಕ್ರಿಸ್ತ ಪೂರ್ವ 610-580 ರ ಸಂದರ್ಭ, ಅಂದರೆ ಸರಿಸುಮಾರು ಎರಡುಸಾವಿರದ ಆರುನೂರು ವರ್ಷಗಳ ಹಿಂದೆಯೇ ಸ್ಯಾಪ್ಫೋ ಎನ್ನುವ ಗ್ರೀಕ್ ದೇಶದ ಕವಿಯತ್ರಿ ತನ್ನ ಬರಹಗಳಲ್ಲಿ 'ಗ್ರೀಕ್ ದೇಶದಲ್ಲಿ ಗುರು ಶಿಷ್ಯರ ಖಾಸಗಿ ಸಂಬಂಧವನ್ನು ಸಮಾಜ ಒಪ್ಪುತ್ತಿತ್ತು'



ನೋಡಿದರೆ, ಇದು ಅಪರಾಧವೂ ಅಲ್ಲ; ಅಸಹಜವೂ ಅಲ್ಲ. ಯಾಕೆಂದರೆ ಇಬ್ಬರೂ ಅವಿವಾಹಿತರೆ, ಅದಕ್ಕೂ ಮಿಗಿಲಾಗಿ ಪ್ರೌಢ ವಯಸ್ಕರು. ಹುಡುಗನಿಗಿಂತ ಹುಡುಗಿಗೆ ವಯಸ್ಸು ಸ್ವಲ್ಪ ಜಾಸ್ತಿ ಎನ್ನುವ ಮಾತೊಂದು ಬಿಟ್ಟರೆ ಅಲ್ಲಿ 'ಅನೈತಿಕ' ಎನ್ನುವಂತದ್ದೇನೂ ನಡೆದಿಲ್ಲ. ಇತ್ತೀಚಿನ ದಿನಗಳಲ್ಲಿ ಕಾಲೇಜು ಹುಡುಗ-ಹುಡುಗಿಯರು ತಮ್ಮ ಉಪನ್ಯಾಸಕರ ಮೋಹಕ್ಕೆ ಬಿದ್ದು ಪ್ರೇಮಿಸುವುದು, ಮದುವೆಯಾಗುವುದು ಮಾಮೂಲಿಯಾಗಿದೆ. ಸಂಘಿಗಳ ಉಪನ್ಯಾಸಕಿ ನಡುವೆ ಪ್ರೇಮ ಇರುವುದನ್ನು ಪ್ರಾಮಾಣಿಕವಾಗಿ ಒಪ್ಪಿಕೊಂಡಿದ್ದಾನೆ. ಆದರೆ ತಮ್ಮ ಈ ಖಾಸಗಿ ವಿಷಯಕ್ಕೆ 'ಮಸಾಲೆ' ಹಚ್ಚಿ ಪ್ರಚಾರಕ್ಕೆ ಬಿಟ್ಟಿರುವವರ ಬಗ್ಗೆ ತನಗೇನೂ ಗೊತ್ತಿಲ್ಲ ಅಂತ ಹೇಳಿದ್ದಾನೆ. ಆದರೆ ದಿನದಿಂದ ದಿನಕ್ಕೆ ಈ ಕೃತ್ಯದ ಹಿಂದೆ ಅಂಕೋಲ-ಕುಮುಟಾ ಪ್ರಾಂತ್ಯದ ಕೇಸರಿ ಪಡೆಗಳ ಕರಾಮತ್ತು ಇರುವ ಶಂಕೆ ಹೆಚ್ಚಾಗುತ್ತಲೇ ಬರುತ್ತಿದೆ. ಏಕೆಂದರೆ, ಕೆಲ ದಿನಗಳ ಹಿಂದಷ್ಟೇ ಈ ಹುಡುಗ ಮತ್ತು ಅದೇ ಕಾಲೇಜಿನಲ್ಲಿ ಓದುತ್ತಿರುವ ಮತ್ತೊಬ್ಬ ಎಂಬುದನ್ನು ದಾಖಲಿಸಿದ್ದಾಳೆ. ಇವತ್ತಿಗೂ ಅಂತಹ ಹಲವಾರು ಪ್ರಕರಣಗಳನ್ನು ಸಮಾಜ ಪ್ರಶಾಂತವಾಗಿಯೇ ಸ್ವೀಕರಿಸಿ ಒಪ್ಪಿಕೊಂಡಿದೆ. ಆದರೆ ಅನಾಗರಿಕರಂತೆ, ಒಂದು ಪರಿಶುದ್ಧ ಮಾನವ ಸಂಬಂಧವನ್ನು ಕೋಮುದುರುದ್ದೇಶದಿಂದ ಎಳೆದಾಡುತ್ತಿರುವ ವಿಕೃತಿಗಳಿಗೆ ಏನನ್ನಬೇಕು?

■ ರಮೇಶ್ ಅಂಕೋಲ

ರಾಜೀವ್ ಆವಾಸ್ ಯೋಜನೆ....

02 ◀◀

ನೆಲಮಹಡಿ +3 ಅಂತಸ್ತನ್ನು ಕಟ್ಟಬಹುದೇ ಎಂದು ಕೇಳಿದಾಗ, ಸರ್ವಾನುಮತದಿಂದ ಅಲ್ಲಿನ ನಿವಾಸಿಗಳು ತಿರಸ್ಕರಿಸಿದರು ಮತ್ತು ತಮಗೆ ಈಗಿರುವಂತೆಯೇ ಕಟ್ಟಿಕೊಡಬೇಕೆಂದು ಲಿಖಿತವಾಗಿ ಕೇಳಿದರು.

ಆದರೂ, ಆದನ್ನು ಉಪೇಕ್ಷಿಸಿ ಅಧಿಕಾರಿಗಳು ಇನ್ನೂ ಎರಡು ಸ್ಲಂಗಳ ನಿವಾಸಿಗಳನ್ನೂ ಇಲ್ಲಿಗೇ ಸ್ಥಳಾಂತರಿಸಿ 1335 ಮನೆಗಳನ್ನು ನಿರ್ಮಿಸುವ ಪ್ರಸ್ತಾಪವನ್ನು ರಾಜ್ಯ ಸರ್ಕಾರದ ಮೂಲಕ ಕೇಂದ್ರಕ್ಕೆ ಕಳಿಸಿದರು. ಆ ಎರಡು ಸ್ಲಂಗಳವರು ಮಂಡ್ಯದ ಸ್ಥಾಪಿತ ಹಿತಾಸಕ್ತಿಗಳ ವಿರುದ್ಧ ಸುಮಾರು 20 ವರ್ಷಗಳ ಕಾಲ ಸತತ ಹೋರಾಟ ನಡೆಸಿ, ತಾವಿರುವ ಜಾಗದಲ್ಲೇ ಮನೆ ಬೇಕೆಂದು ಕೇಳುತ್ತಿದ್ದವರು. ಆದರೂ, ಅವರನ್ನು ಒಂದು ಮಾತೂ ಕೇಳದೇ ಅಧಿಕಾರಿಗಳು ಪ್ರಸ್ತಾಪ ಕಳಿಸಿದರು.


ಇಂತಹ ಕ್ರಮಗಳ ಕುರಿತು, ರಾಜೀವ್ ಆವಾಸ್ ಯೋಜನೆ ರೂಪುಗೊಳ್ಳುವುದಕ್ಕೆ ಪೂರ್ವಭಾವಿಯಾಗಿ ಸಾಕಷ್ಟು ಚರ್ಚೆ ನಡೆದಿತ್ತು. ಯಾರು ಇಂತಹ ಮನೆಗಳಲ್ಲಿ ಹೋಗಿ ವಾಸಿಸಬೇಕೋ, ಅವರ ಋಣದಲ್ಲಿ ಸಮಾಜವಿರುವುದರಿಂದಲೇ ಅವರಿಗೆ ಮನೆ ಕಟ್ಟಿ ಕೊಡಲಾಗುತ್ತಿದೆ. ಅವರು ಕುರಿಗಳಲ್ಲ, ತಾವು ಎಲ್ಲಿ ಹೇಗೆ ವಾಸಿಸಬೇಕು ಎಂದು ಆಯ್ದುಕೊಳ್ಳುವುದರಲ್ಲಿ ಅವರಿಗೆ ಕನಿಷ್ಠ ಹಕ್ಕಾದರೂ ಇದ್ದೇ ಇದೆ ಎಂಬುದು ಸದರಿ ಯೋಜನೆಯ ಮಾರ್ಗದರ್ಶಿ ಸೂತ್ರಗಳನ್ನು ರೂಪಿಸುವಾಗಿನ ತಿಳಿವಳಿಕೆಯಾಗಿತ್ತು. ಈ ತಿಳಿವಳಿಕೆಯು ಒಂದು ಯೋಜನೆಯ ಭಾಗವಾಗುವುದರ ಹಿಂದೆ 40 ವರ್ಷಗಳ ಅನುಭವ (ಪ್ರಧಾನವಾಗಿ ವಿಫಲ), ಸ್ಲಂ ಜನರ ಹೋರಾಟ, ಸಂಘಟನೆಗಳ ಪ್ರಯತ್ನ ಮತ್ತು ಕೆಲವು ಅಧಿಕಾರಿಗಳ ವಾಸ್ತವವಾದಿ ಹಾಗೂ ಜನಪರ ದೃಷ್ಟಿಕೋನ ಎಲ್ಲವೂ ಕೆಲಸ ಮಾಡಿತ್ತು. ಆದರೂ ಆದನ್ನು ಉಲ್ಲಂಘಿಸಿ, ಇಂತಹದೊಂದು ಪ್ರಸ್ತಾಪವನ್ನು ಅಧಿಕಾರಿಗಳು ತಯಾರಿಸಿದರು.

ತಯಾರಿಸಿದ್ದಷ್ಟೇ ಅಲ್ಲ, ಆದನ್ನು ಮಂಜೂರು ಮಾಡಿಸಿಕೊಂಡು, ಟೆಂಡರ್ ಕರೆದು, ಕೆಲಸದ ಆದೇಶವನ್ನೂ ಗುತ್ತಿಗೆದಾರರಿಗೆ ನೀಡಿದ ಮೇಲೆ ಜನರಿಗೆ ಮಾಹಿತಿ ನೀಡಿದರು. ಯಾವ ಸಭೆಯಲ್ಲಿ ಈ ಸುದ್ದಿ ಸ್ಫೋಟವಾಯಿತೋ, ಅದೇ ಸಭೆಯಲ್ಲಿ ಜನರ ಆಕ್ರೋಶವೂ ಸ್ಫೋಟಗೊಂಡಿತು. ಪಕ್ಕದ ಮನೆಯಲ್ಲಿ ಯಾರಿದ್ದಾರೆ ಎಂದು ಗೊತ್ತೇ ಇರದೇ ವಾಸಿಸುವ, ನೀರು, ವಿದ್ಯುತ್, ಗ್ಯಾಸ್ ಎಲ್ಲಾ ಸೌಲಭ್ಯಗಳನ್ನೂ ಮನೆಯೊಳಗೇ ಪಡೆದುಕೊಳ್ಳುವ, ಆನ್‌ಲೈನ್‌ನಲ್ಲಿ ಬೇಕಿದ್ದೆಲ್ಲವನ್ನೂ ಪಡೆದುಕೊಳ್ಳುವ ಸಾಧ್ಯತೆಯಿರುವ, ಎಷ್ಟು ಮಹಡಿ ಏರಬೇಕೆಂದರೂ, ಸುಲಲಿತವಾಗಿ ತಮ್ಮನ್ನು ಕರೆದುಕೊಂಡು ಹೋಗುವ ಲಿಫ್ಟ್‌ಗಳನ್ನು ಹೊಂದಿರುವ ಖಾಸಗಿ ಐಷಾರಾಮಿ ಅಪಾರ್ಟ್‌ಮೆಂಟ್‌ಗಳಿಗೂ, ಬಡಜನರ ಬಹುಮಹಡಿ ಕಟ್ಟಡಗಳಿಗೂ ಇರುವ-ಇರಬೇಕಾದ ವ್ಯತ್ಯಾಸದ ಪರಿ ಅಧಿಕಾರಿಗಳಿಗೆ ಸುಲಭವಾಗಿ ಅರ್ಥವಾಗುವಂತಿರಲಿಲ್ಲ.

ಆದರೆ ಈಗ ಏನೂ ಮಾಡುವಂತಿಲ್ಲ; ಈ ಪ್ರಸ್ತಾಪದಲ್ಲಿ ನಾವು ಪ್ರಮುಖ ಬದಲಾವಣೆ ಮಾಡಿದರೆ, ಯೋಜನೆಯೇ ರದ್ದಾಗಿ ಬಿಡುತ್ತದೆ ಎಂದು ಅಧಿಕಾರಿಗಳು ಹೇಳತೊಡಗಿದರು. ಅದು ಸಂಪೂರ್ಣ ಸುಳ್ಳಾಗಿರಲಿಲ್ಲ. ಆದರೆ ಅದಕ್ಕೆ ಜನರು ಹೊಣೆಗಾರರಾಗಿರಲಿಲ್ಲ. ಈ ರೀತಿಯ ಬಹುಮಹಡಿ ಕಟ್ಟಡವನ್ನು ಕಟ್ಟಿ, ವಿವಿಧ ಸ್ಲಂಗಳ 1335 ಕುಟುಂಬಗಳನ್ನು ಒಂದೆಡೆ ಸೇರಿಸಿದ್ದರೆ, ಅದು ಒಂದು ಕಾಂಕ್ರೀಟ್ ಸ್ಲಂ ಆಗುತ್ತಿತ್ತು ಮಾತ್ರವಲ್ಲ, ಹಲವು ರೀತಿಯ ಸಾಮಾಜಿಕ, ಸಾಂಸ್ಕೃತಿಕ ಅರಾಜಕತೆ ಉಂಟಾಗಲು ದಾರಿಯಾಗುತ್ತಿತ್ತು. ದೇಶದ 40 ವರ್ಷಗಳ ಅನುಭವ, ಜನರ ಹೋರಾಟ, ಜನರ ಹೋರಾಟಕ್ಕೆ ಒಂದು ಮಟ್ಟಿಗಾದರೂ ಕಿವಿಗೊಡುತ್ತಿದ್ದ ಸರ್ಕಾರದ ಉದ್ದೇಶ ಎಲ್ಲವೂ ಈ ಜನರ ಮಟ್ಟಿಗೆ ಹೊಳೆಯಲ್ಲಿ ಹುಣಸೇಹಣ್ಣನ್ನು ತೇಯ್ದಂತೆ.

ಇದು ಒಂದೆರಡು ಅಧಿಕಾರಿಗಳು ಮಾಡಿದ ತಪ್ಪಲ್ಲ. ಹಾಗೆ ನೋಡಿದರೆ, ಹಾಲಿ ಈ ಯೋಜನೆಯ ಜಾರಿಯಲ್ಲಿ ತೊಡಗಿಕೊಂಡಿರುವ ಅಧಿಕಾರಿಗಳು ಇದ್ದುದರಲ್ಲಿ ಜನಪರವಾಗಿಯೇ ಕೆಲಸ ಮಾಡುತ್ತಿದ್ದಾರೆ. ಇದು ಈ ವ್ಯವಸ್ಥೆಯಲ್ಲೇ ಇರುವ ಸಮಸ್ಯೆ. ಅಧಿಕಾರಸ್ಥರ ಮನೋಭೂಮಿಕೆಯು ಬದಲಾಗುವುದಿಲ್ಲ. ಏಕೆಂದರೆ, ಅವರ ಮನೋಲೋಕವನ್ನು ಸ್ಥಾಪಿತ ವರ್ಗ ಹಿತಾಸಕ್ತಿಗಳು ರೂಪಿಸುತ್ತಿರುತ್ತವೆ. ಹಾಗಾಗಿ ಒಂದು ಅತ್ಯುತ್ತಮ ಯೋಜನೆಯನ್ನೂ ವಿಫಲಗೊಳಿಸುವುದು ಸಾಧ್ಯವಾಗುತ್ತದೆ. ■

ಅಧರ್ಮ-ಅಕ್ರಮಗಳಿಗೆ ಕೊನೆಯೆಂದು?



'ಭಾರತ ರತ್ನ' ಪ್ರಶಸ್ತಿ ಬಿಟ್ಟರೆ ದೇಶದ ಎರಡನೇ ಅತಿದೊಡ್ಡ ನಾಗರಿಕ ಪ್ರಶಸ್ತಿ ಪದ್ಮವಿಭೂಷಣ ಪ್ರಶಸ್ತಿ. 2015ನೇ ಸಾಲಿನ ಪದ್ಮವಿಭೂಷಣ ಪ್ರಶಸ್ತಿ ನಮ್ಮ ಕರ್ನಾಟಕದ ಪ್ರಜೆಯೊಬ್ಬರಿಗೆ ಸಂದಿದೆ. ಅವರು ಅಂತಿಂಥ ವ್ಯಕ್ತಿಯಲ್ಲ, ಶ್ರೀಕ್ಷೇತ್ರ ಧರ್ಮಸ್ಥಳದ ಸಾಕ್ಷಾತ್ ಧರ್ಮಾಧಿಕಾರಿ ಶ್ರೀ ವೀರೇಂದ್ರ ಹೆಗ್ಗಡೆಯವರು! ಕಳೆದ ವಾರ ನವದೆಹಲಿಯ ರಾಷ್ಟ್ರಪತಿ ಭವನದಲ್ಲಿ ಪದ್ಮ ಪ್ರಶಸ್ತಿ ಸನ್ಮಾನದ ಅದ್ದೂರಿ ಕಾರ್ಯಕ್ರಮ ನಡೆಯಿತು.

ಹೆಗ್ಗಡೆ ಕುಟುಂಬ ವರ್ಗದವರು ಮತ್ತು ಅವರ ಹತ್ತಿರದ ಅನುಯಾಯಿಗಳು ಪದ್ಮವಿಭೂಷಣ ಪ್ರಶಸ್ತಿಯ ಸಂಭ್ರಮವನ್ನು ಆಚರಿಸುತ್ತಿರುವ ಹೊತ್ತಿನಲ್ಲೇ, ಧರ್ಮಸ್ಥಳ-ಬೆಳ್ತಂಗಡಿ ಭಾಗದ ಹಾಗೂ ರಾಜ್ಯಮಟ್ಟದ ಹಲವು ಸಾಮಾಜಿಕ ಸಂಘಸಂಸ್ಥೆಗಳು ಒಂದು ಪತ್ರಿಕಾ ಹೇಳಿಕೆ ನೀಡಿ, ಕರಪತ್ರ ವಿತರಣೆ ಮಾಡಿವೆ. ಪದ್ಮವಿಭೂಷಣ ಸಿಕ್ಕ ಸಂಭ್ರಮದ ಖುಷಿಗಾಗಿ ಕರಪತ್ರ ವಿತರಣೆ ಇರಬಹುದು ಎಂದುಕೊಳ್ಳಬೇಡಿ. 'ವೀರೇಂದ್ರ ಹೆಗ್ಗಡೆ ಅನರ್ಹರು, ಅವರಿಗೆ ಅಂಥಾ ಪ್ರಶಸ್ತಿ ಕೊಡಬೇಡಿ' ಎಂಬುದು ಆ ಕರಪತ್ರದ ಸಾರಾಂಶ!

ನಾಗರಿಕ ಸೇವಾ ಟ್ರಸ್ಟ್ (ಸಂಚಾಲಕ), ಕರಾವಳಿ ಮಹಿಳಾ ಜಾಗೃತಿ ವೇದಿಕೆ, ಕೃಷಿಕರ ವೇದಿಕೆ ಕರ್ನಾಟಕ, ದಲಿತ ಸಂಘರ್ಷ ಸಮಿತಿ-ಅಂಬೇಡ್ಕರ್‌ವಾದ, ಬೆಳ್ತಂಗಡಿ ತಾಲೂಕು ದಲಿತ ಸಂಘಟನೆಗಳ ಒಕ್ಕೂಟ, ಆದಿವಾಸಿ ಮಲೆಕುಡಿಯ ಸುಧಾರಣಾ ಟ್ರಸ್ಟ್, ದ.ಕ ಪರಿಸರಾಸಕ್ತರ ಒಕ್ಕೂಟ, ದಲಿತ ಅಭಿವೃದ್ಧಿ ಸಮಿತಿ ಮುಂತಾದ 100ಕ್ಕೂ ಹೆಚ್ಚು ಸಂಘಟನೆಗಳು ಕಲೆತು ಈ ಉದ್ದೇಶಕ್ಕಾಗಿ ಒಂದು 'ಜಂಟಿ ಕ್ರಿಯಾ ಸಮಿತಿ'ಯನ್ನು ರಚಿಸಿಕೊಂಡಿವೆ.



ಈ ಸಮಿತಿ ಮಾಧ್ಯಮಗಳಿಗೆ ಬಿಡುಗಡೆ ಮಾಡಿದ ಹೇಳಿಕೆಯ ಕೆಲವು ಸಾಲುಗಳು ಹೀಗಿವೆ.

"ಶ್ರೀ ಹೆಗ್ಗಡೆಯವರಿಗೆ ನೀಡಿದ ಪದ್ಮಭೂಷಣ ಪ್ರಶಸ್ತಿಯ ಶರ್ತ ಉಲ್ಲಂಘಿಸಿ ದುರುಪಯೋಗ ಮಾಡಿರುವ ಬಗ್ಗೆ ರಾಷ್ಟ್ರಪತಿಗಳಿಗೆ ಸಲ್ಲಿಸಿರುವ ದೂರುಗಳು ಮತ್ತು ಮೇಲ್ಕಾಣಿಸಿದ ಎಲ್ಲಾ ತನಿಖೆಗಳು ವಿಚಾರಣಾ ಹಂತದಲ್ಲಿರುವಾಗ ಪದ್ಮವಿಭೂಷಣ ಪ್ರಶಸ್ತಿಯನ್ನು ಶ್ರೀ ಹೆಗ್ಗಡೆಯವರು ಸ್ವೀಕರಿಸುವುದಾಗಲೀ, ಕೇಂದ್ರ ಸರಕಾರ ಇವರಿಗೆ ಪ್ರಶಸ್ತಿ ನೀಡುವುದಾಗಲೀ ಸರಿಯಲ್ಲ."

ಈ ಹೇಳಿಕೆ ಭಾರೀ ಪ್ರಶ್ನೆಗಳನ್ನು ಹುಟ್ಟಿಸುವಂಥದ್ದು. ಹೆಗ್ಗಡೆಯವರಿಂದ ಪದ್ಮಭೂಷಣದ ದುರುಪಯೋಗ ಎಂದರೇನರ್ಥ? ಅವರ ವಿರುದ್ಧ ವಿಚಾರಣಾ ಹಂತದಲ್ಲಿರುವ ತನಿಖೆಗಳಾದರೂ ಎಂಥವು? ಇದೇ ಕ್ರಿಯಾ ಸಮಿತಿ ತಮ್ಮ ಅಭಿಪ್ರಾಯವನ್ನು ಸಮರ್ಥಿಸುವಂಥಾ ನಾನಾ ದಾಖಲೆಗಳನ್ನು ಒದಗಿಸಿದೆ.

ಆ ದಾಖಲೆಗಳ ಪ್ರಕಾರ "ಡಿ.ವೀರೇಂದ್ರ ಹೆಗ್ಗಡೆ ಮತ್ತು ಇವರ ಸಂಸ್ಥೆಗಳು ಹಾಗೂ ಇವರ ಸಹೋದರ ಶ್ರೀ ಡಿ. ಹರ್ಷೇಂದ್ರ ಕುಮಾರ್ ಮೇಲೆ ದಾಖಲಾದ ನಾನಾ ಅಕ್ರಮದ ದೂರುಗಳ ಬಗ್ಗೆ ಕರ್ನಾಟಕ ಸರಕಾರ ತನಿಖೆ ಕೈಗೊಂಡಿದೆ. ಅದು ಬರೋಬ್ಬರಿ 15 ಅಕ್ರಮಗಳ ಬಗ್ಗೆ ತನಿಖೆಗೆ ಆದೇಶ."

ಈ ವೃತ್ತಾಂತ ಕೇಳಿ ಮುಗ್ಧ ಭಕ್ತಾದಿಗಳಿಗೆ ಶಾಕ್ ಆಗಿದೆ. ಅದು ಅಂತಿಂಥಾ ಶಾಕ್ ಅಲ್ಲ, ಸಾಕ್ಷಾತ್ ಧರ್ಮಸ್ಥಳ ಕ್ಷೇತ್ರದ ಬಗ್ಗೆ ಭಕ್ತರು ಇಟ್ಟಿದ್ದ ಭಕ್ತಿ, ನಂಬಿಕೆ, ಶ್ರದ್ಧೆಗಳನ್ನೇ ಅಲುಗಾಡಿಸಿಬಿಡುವಂತಾ ಶಾಕ್!

ಯಾಕೆಂದರೆ ಈ ಪ್ರಕರಣಗಳ ದಾಖಲಾತಿಗಳು ಅಷ್ಟು ಗಂಭೀರ ಸ್ವರೂಪದವು. ಕ್ರಿಯಾ ಸಮಿತಿ ನೀಡಿರುವ ಪಟ್ಟಿಯ ಮುಖ್ಯಾಂಶಗಳನ್ನು ಒಂದೊಂದಾಗಿ ನೋಡೋಣ.

1. "1300 ಎಕ್ರೆ ತನಕ ಮಿಗತೆ ಭೂಮಿ: ಶ್ರೀ ವೀರೇಂದ್ರ ಹೆಗ್ಗಡೆಯವರ ಅವಿಭಕ್ತ ಕುಟುಂಬ 4671 ಎಕ್ರೆ ಕೃಷಿ ಭೂಮಿ ಹೊಂದಿದ್ದ ಬಗ್ಗೆ ಬೆಳ್ತಂಗಡಿ ಭೂನ್ಯಾಯ ಮಂಡಳಿಗೆ LRY 72/74-75ರ ಪ್ರಕಾರ ಡಿಕ್ಲರೇಷನ್ (ಘೋಷಣೆ) ಸಲ್ಲಿಸಿತ್ತು. ಇದು ಸುಳ್ಳು ಘೋಷಣೆ ಎಂಬುದಕ್ಕೆ ಮತ್ತು ಭೂನ್ಯಾಯ ಮಂಡಳಿಯ ದಿ.6.3.2012ರ ಆದೇಶ ಕಾನೂನುಬಾಹಿರ ಎಂಬುದಕ್ಕೆ ನೂರಾರು ಸಾಕ್ಷ್ಯಾಧಾರಗಳು ಲಭಿಸಿದ್ದು ಕರ್ನಾಟಕ ಭೂಸುಧಾರಣಾ ಕಾಯ್ದೆಯ ಸ್ಪಷ್ಟ ಉಲ್ಲಂಘನೆಯಾಗಿರುತ್ತದೆ. ಮುಖ್ಯವಾಗಿ ಕೃಷಿಭೂಮಿಯಾಗಿದ್ದರೂ ಪ್ಲಾಂಟೇಶನ್, ಡೀಮ್ಡ್ ಕನ್ವರ್ಶನ್ ಎಂದು ಸುಳ್ಳು ಘೋಷಣೆ ಮಾಡಿದ್ದಾರೆ. ಈ ಬಗ್ಗೆ ಮುಖ್ಯಮಂತ್ರಿಗಳು ತಾ. 01.01.2014 ರಂದು (ಕ್ರ./CM/88189/MCA/2013) ಮತ್ತು ಕಂದಾಯ ಮಂತ್ರಿಗಳು ತಾ. 24.01.2014 ರಂದು (ಕ್ರ. ಕಂ.ಇ 27 ಎಲ್ ಆರ್ ಎ 2014) ತನಿಖೆಗೆ ಆದೇಶಿಸಿದ್ದಾರೆ. ಮೇಲ್ನೋಟಕ್ಕೆ ಉಲ್ಲಂಘನೆಗಳಾಗಿರುವುದು ಕಂಡುಬಂದಿರುವುದಾಗಿ ಜಿಲ್ಲಾಧಿಕಾರಿಗಳು ಉಲ್ಲೇಖಿಸಿದ್ದಾರೆ...

2. ಸಂಸ್ಥೆಗಳಿಂದ ಉಲ್ಲಂಘನೆ: ಶ್ರೀ ಹೆಗ್ಗಡೆಯವರ ವಿವಿಧ ಸಂಸ್ಥೆಗಳು 1974ರ ಬಳಿಕ ಕೃಷಿ ಭೂಮಿಯನ್ನು ಕಾನೂನುಬಾಹಿರವಾಗಿ ಹೊಂದಿರುವ ಬಗ್ಗೆ ದಾಖಲೆಗಳ ಸಹಿತ ನೀಡಿದ ಅರ್ಜಿಯ ಮೇರೆಗೆ ಕರ್ನಾಟಕ ಭೂಸುಧಾರಣಾ ಕಾಯ್ದೆಯ ಉಲ್ಲಂಘನೆಗಳ ಬಗ್ಗೆ ತನಿಖೆ ನಡೆಸುವಂತೆ ದ.ಕ. ಜಿಲ್ಲಾಧಿಕಾರಿಗಳು ಆದೇಶ ಮಾಡಿದ್ದಾರೆ. ಕ್ರ.ಎಲ್.ಆರ್.ಎಫ್(2)ಸಿಆರ್ 84/2014-15/139096/ಬಿ8 ತಾ.25.10.2014 ಮತ್ತು ಕ್ರ. ಎಲ್.ಆರ್.ಎಫ್(2)90/14-15 ತಾ. 16.10.2014 (ತನಿಖೆ ಪ್ರಗತಿಯಲ್ಲಿದೆ.)

3. ಡಿ.ಸಿ.ಮನ್ನಾ ಭೂಮಿ: ಉಜಿರೆಯಲ್ಲಿ 43.90ಎಕ್ರೆ Depressed Class Reserve ಭೂಮಿಯನ್ನು (ಡಿ.ಸಿ.ಮನ್ನಾ ಭೂಮಿ) ಎಸ್‌ಡಿಎಂ ಎಜುಕೇಷನಲ್ ಟ್ರಸ್ಟ್‌ಗೆ ಸರಕಾರ ಅನುದಾನವಾಗಿ ನೀಡಿತ್ತು, ಬದಲಿ ಭೂಮಿ (ದೀನದಲಿತರ ಉಪಯೋಗಕ್ಕಾಗಿ) ಒದಗಿಸಲು ಜಿಲ್ಲಾ ಜಾಗೃತಿ ಮತ್ತು ಉಸ್ತುವಾರಿ ಸಮಿತಿಯಲ್ಲಿ ಮತ್ತು ಎಸ್‌ಸಿ/ಎಸ್‌ಟಿ ಕುಂದುಕೊರತೆ ಸಭೆಯಲ್ಲಿ ಜಿಲ್ಲಾಧಿಕಾರಿಗಳು ನಿರ್ದೇಶನ ನೀಡಿದ್ದಾರೆ. ಆದರೆ ಇದರ ಮಾಹಿತಿಯ ಕಲಂ. 12 ರ ಪ್ರಕಾರ ಇದಕ್ಕೆ ಬದಲಿಯಾಗಿ ಭೂಮಿಯನ್ನು ಒದಗಿಸಿದ್ದು ಕಂಡುಬಂದಿಲ್ಲ.

4. ಶ್ರೀ ಧರ್ಮಸ್ಥಳ ಮಂಜುನಾಥಸ್ವಾಮಿ ದೇವಸ್ಥಾನಕ್ಕೆ ನೂರಾರು ಕೋಟಿ ವಾರ್ಷಿಕ ಆದಾಯವಿದೆ. (ಪತ್ರಿಕೆಗಳ ವರದಿಯಂತೆ 350 ರಿಂದ 500 ಕೋಟಿ) ಇದು ಹೆಗ್ಗಡೆ ಕುಟುಂಬದ ಖಾಸಗಿ ಆಡಳಿತದಲ್ಲಿದೆ. ಆದಾಯ-ಖರ್ಚು ವಿವರ ಯಾವತ್ತೂ ಬಹಿರಂಗಪಡಿಸಿಲ್ಲ, ಸುಪ್ರೀಂ ಕೋರ್ಟ್‌ನ ತಾ.7.8.2001ರ ಪ್ರಮುಖ ಆದೇಶವೊಂದರ ಪ್ರಕಾರ



ತನಿಖೆಗೂ ಪ್ರಶಸ್ತಿಗೂ ಎತ್ತಣಿಂದೆತ್ತ ಸಂಬಂಧವಯ್ಯಾ?

ಶ್ರೀ ವೀರೇಂದ್ರ ಹೆಗ್ಗಡೆಯವರ ಆಧ್ವರ್ಯದಲ್ಲಿರುವ ಧರ್ಮಸ್ಥಳದಲ್ಲಿ ನಡೆದಿವೆ ಎನ್ನಲಾದ ಅಕ್ರಮಗಳ ಬಗ್ಗೆ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳ ವಿವಿದ ಸಂಸ್ಥೆಗಳು ತನಿಖೆ ನಡೆಸುತ್ತಿವೆ. ಈ ತನಿಖೆಗಳು ಯಾವ ರೀತಿ ಅಂತ್ಯ ಕಾಣಬಹುದು ಎಂಬುದು ಕುತೂಹಲಕಾರಿ ಸಂಗತಿ.

2013ರ ಅಕ್ಟೋಬರ್‌ನಲ್ಲಿ ಸೌಜನ್ಯಳ ಸಾವಿನ ವಿರುದ್ಧದ ಹೋರಾಟ ತಾರಕಕ್ಕೇರಿತ್ತು, ಅದೇ ಸಂದರ್ಭದಲ್ಲಿ ವೀರೇಂದ್ರ ಹೆಗ್ಗಡೆ 'ಅಭಿಮಾನಿಗಳು' ಒಂದು ಸಭೆ ಆಯೋಜಿಸಿ ತಮ್ಮ ಶಕ್ತಿ ಸಾಮರ್ಥ್ಯ ಪ್ರದರ್ಶಿಸಿದರು. ಆ ಸಭೆಯಲ್ಲಿ ಶಾಸಕರು, ಸಂಸದರು, ಮಂತ್ರಿಗಳು ಭಾಗವಹಿಸಿದ್ದರು. ಅಂದು ಶ್ರೀಮಾನ್ ವೀರೇಂದ್ರ ಹೆಗ್ಗಡೆಯವರು ತಾವು ಅಮಾಯಕರು, ಮುಗ್ಧರು ಎಂದು ಪ್ರತಿಪಾದಿಸುತ್ತಾ ಮಾಡಿದ ಭಾಷಣ ಒಂದುರೀತಿಯ ಸಾಂದರ್ಭಿಕ ಸಾಕ್ಷ್ಯದಂತಿದೆ.

"ಸೌಜನ್ಯಳ ಸಾವಿನ ಬಗ್ಗೆ ಅವರು ಬಂದು ಹೇಳಿದ ತಕ್ಷಣ ನಾನು ಗೃಹಮಂತ್ರಿಗಳಿಗೆ ಫೋನು ಮಾಡಿದ್ದೇನೆ. ಅದು ಐಜಿ, ಡಿವೈಎಸ್‌ಪಿ, ಪೊಲೀಸ್ ಸ್ಟೇಷನ್ ಯಾರೂ ಅಲ್ಲ, ನೇರ ಗೃಹಮಂತ್ರಿಗಳಿಗೆ ಫೋನ್ ಮಾಡಿ ಕೂಡಲೇ ಕ್ರಮ ತೆಗೆದುಕೊಳ್ಳುವಂತೆ ಸೂಚಿಸಿದ್ದೇನೆ... 'ಗೃಹಮಂತ್ರಿ ಅಶೋಕ್ ಅವರು ನೇರವಾಗಿ ಕ್ರಮಕ್ಕೆಗೊಂಡಿದ್ದಾರೆ..."

"ಸರ್ಕಾರದಿಂದ ವಿಶೇಷವಾಗಿ ಅನೇಕ ಶಾಸಕರು ಸಂಸದರು ಫೋನು ಮಾಡಿ, ನಿಮ್ಮ ಬಗ್ಗೆ ನಮಗೆ ಗೌರವ ಇದೆ, ತಾವು ಮನಸ್ಸಿಗೆ ನೋವು ಮಾಡಿಕೊಳ್ಳಬೇಡಿ ಎಂದು ಕಾಳಜಿ ತೋರಿದ್ದಾರೆ... ಈ ವೇದಿಕೆಯಲ್ಲಿ ಇಬ್ಬರು ಸಚಿವರು, ಶಾಸಕರು ಇದ್ದಾರೆ, ನಮ್ಮ ಮೇಲೆ ವಿಶ್ವಾಸವಿಲ್ಲದೆ ಹೋಗಿದ್ದರೆ ಅವರು ಇಲ್ಲಿ ಕೂರುತ್ತಿದ್ದರೆ?" ಎಂದು ಸಭಿಕರನ್ನು ಪ್ರಶ್ನಿಸಿದರು.

ವೇದಿಕೆಯಲ್ಲಿದ್ದ ಹಾಲಿ ಮತ್ತು ಮಾಜಿ ಸಚಿವರುಗಳು ತಮಗೆ ವಿಶ್ವಾಸವಿದೆಯೆಂಬಂತೆ ಗೋಣು ಹಾಕುತ್ತಾ ಕೂತಿದ್ದರು.

ಇನ್ನು ಪ್ರಶಸ್ತಿಗಳ ವಿಷಯಕ್ಕೆ ಬರೋಣ. ಮಾನ್ಯ ಹೆಗ್ಗಡೆಯವರಿಗೆ ಬಂದಿರುವ ಪ್ರಶಸ್ತಿಗಳಿಗೆ ಲೆಕ್ಕವೇ ಇಲ್ಲ, ಅದರಲ್ಲೂ ನಮ್ಮ ಘನ ಸರ್ಕಾರಗಳು ಕೊಟ್ಟಿರುವ ಮೂರು ಪ್ರಶಸ್ತಿಗಳು ಇಲ್ಲಿ ಉಲ್ಲೇಖನೀಯ. 2000ನೇ ಇಸವಿಯಲ್ಲಿ ಕೇಂದ್ರದ ವಾಜಪೇಯಿ ಸರ್ಕಾರ 'ಪದ್ಮಭೂಷಣ' ಪ್ರಶಸ್ತಿ ಕೊಟ್ಟಿದೆ. 2009ರಲ್ಲಿ ಯಡಿಯೂರಪ್ಪ ಸರ್ಕಾರ 'ಕರ್ನಾಟಕ ರತ್ನ' ಪ್ರಶಸ್ತಿ ಕೊಟ್ಟಿದೆ. 2015ರ ಸಾಲಿನ 'ಪದ್ಮವಿಭೂಷಣ' ಪ್ರಶಸ್ತಿಯನ್ನು ಈಗಿನ ಮೋದಿ ಸರ್ಕಾರ ಕೊಡಮಾಡಿದೆ.

ಪದ್ಮಭೂಷಣ ಪ್ರಶಸ್ತಿಯನ್ನು ಮಾನ್ಯ ಹೆಗ್ಗಡೆಯವರು ದುರುಪಯೋಗ ಪಡಿಸಿಕೊಂಡಿದ್ದಾರೆಂಬ ದೂರು ದಾಖಲಾದ ನಂತರ, ಅದಕ್ಕಿಂತಲೂ ಉನ್ನತವಾದ ಪದ್ಮವಿಭೂಷಣ ಪ್ರಶಸ್ತಿಯನ್ನು ಕೇಂದ್ರ ಸರ್ಕಾರ ಕೊಟ್ಟಿದೆ. ಮತ್ತೊಂದು ಕಡೆ ಸೌಜನ್ಯ ಸಾವಿನ ಬಗ್ಗೆ ಕೇಂದ್ರದ ಸಿಬಿಐ ತನಿಖೆ ಕೂಡ ನಡೆಯುತ್ತಿದೆ.


ರಾಜ್ಯ ಸರ್ಕಾರದ ವಿಷಯಕ್ಕೆ ಬರುವುದಾದರೆ, ಮಂತ್ರಿಗಳು ಸಂಸದರು ಶಾಸಕರು ಹೆಗ್ಗಡೆಯವರ ಅಭಿಮಾನಿಗಳು ಆಯೋಜಿಸಿದ್ದ ವೇದಿಕೆಯಲ್ಲಿ ಭಾಗವಹಿಸಿ, ಬಹಿರಂಗವಾಗಿ ಬೆಂಬಲಕ್ಕೆ ನಿಲ್ಲುತ್ತಿದ್ದಾರೆ. ತಾವು ಮನಸ್ಸಿಗೆ ನೋವು ಮಾಡಿಕೊಳ್ಳಬೇಡಿ ಎಂದು ಸಾಂತ್ವನ ಹೇಳುತ್ತಿದ್ದಾರೆ. ಅದೇ ಸಂದರ್ಭದಲ್ಲಿ ವಿವಿಧ ಇಲಾಖೆಗಳ ತನಿಖೆಯೂ ನಡೆಯುತ್ತಿದೆ.

ಇಂಥಾ ಸನ್ನಿವೇಶದಲ್ಲಿ ನಿಷ್ಪಕ್ಷಪಾತ ತನಿಖೆ ನಡೆದು ಸತ್ಯ ಹೊರಗೆ ಬರುತ್ತದೆಯೆ? ಪ್ರಶಸ್ತಿಗಳನ್ನೂ ತನಿಖೆಗಳನ್ನೂ ಒಟ್ಟೊಟ್ಟಿಗೆ ಕಾಣುತ್ತಿರುವ ಅಮಾಯಕ ಪ್ರಜೆಗಳಿಗೆ ಇನ್ನೂ ವಿಶ್ವಾಸ ಇಟ್ಟು ಕಾಯದೇ ಬೇರೆ ದಾರಿ ಏನಿದೆ ಹೇಳಿ?

ಪ್ರಶಸ್ತಿಗಳ ಮೌಲ್ಯವೆಷ್ಟು?

ಜೆಡಿಯು ಮುಖಂಡ ಶರದ್‌ಯಾದವ್ ಈ ಪದ್ಮ ಪ್ರಶಸ್ತಿಗಳ ವಿತರಣೆಯಲ್ಲಿ ಅಕ್ರಮ ನಡೆಯುತ್ತಿರುವುದರಿಂದ ಇದನ್ನು ರದ್ದುಪಡಿಸಬೇಕೆಂದು ಒತ್ತಾಯಿಸಿದ್ದು ಒಂದು ವಿವಾದಕ್ಕೆ ಕಾರಣವಾಗಿದೆ. ಯಾಕೆಂದರೆ ಇಂಥಾ ಪ್ರಶಸ್ತಿಗಳು ಮೇಲ್ಜಾತಿ ಮೇಲ್ವರ್ಗಕ್ಕೆ ಸೀಮಿತವಾಗಿದ್ದು, ಎಸ್‌ಸಿ, ಎಸ್‌ಟಿ, ಅಲ್ಪಸಂಖ್ಯಾತರು ಹಾಗೂ ರೈತಾಪಿ ಸಮುದಾಯಗಳನ್ನು ಕಡೆಗಣಿಸುತ್ತಿದೆ ಎಂಬುದು ಅವರ ಆರೋಪ. ಸಾಮಾಜಿಕವಾಗಿ ಆರ್ಥಿಕವಾಗಿ ಹಿಂದುಳಿದ ಸಮುದಾಯಗಳಿಂದ ಬಂದಿರುವ ವ್ಯಕ್ತಿಗಳನ್ನು ಪರಿಗಣಿಸುವ ವಿಷಯದಲ್ಲಿ ಮೊದಲಿನಿಂದಲೂ ತಾರತಮ್ಯ ಮಾಡಲಾಗುತ್ತಿದೆ. ಆದರೆ ಈಗಿನ ನರೇಂದ್ರ ಮೋದಿ ಸರ್ಕಾರ ತಾರತಮ್ಯದಲ್ಲಿ ಹಿಂದಿನ ಎಲ್ಲ ದಾಖಲೆಗಳನ್ನು ಮುರಿದಿದೆ. ಅಪ್ರಾಮಾಣಿಕರು ಹಾಗೂ ಸಮಾಜದ ಮೇಲ್‌ಸ್ತರದ ಮಂದಿಯನ್ನು ಮಾತ್ರ ಪರಿಗಣಿಸಲಾಗಿದೆ ಎಂಬುದು ಅವರ ಗಂಭೀರ ಆರೋಪ.

ಅಟಲ್ ಬಿಹಾರಿ ವಾಜಪೇಯಿ ಪ್ರಧಾನಿಯಾಗಿದ್ದಾಗ ಆಗಿನ ರಾಷ್ಟ್ರಪತಿ ಅಬ್ದುಲ್ ಕಲಾಂ ಅವರು ಪದ್ಮ ಪ್ರಶಸ್ತಿ ಆಯ್ಕೆ ವಿಚಾರದಲ್ಲಿ ಅಕ್ರಮಗಳು ನಡೆದುದ್ದರ ಬಗ್ಗೆ ಪ್ರಧಾನಿಗೆ



ಪತ್ರ ಬರೆದು ತಮ್ಮ ಆಕ್ಷೇಪ ವ್ಯಕ್ತಪಡಿಸಿದ್ದರು ಎಂಬುದನ್ನು ನೆನಪಿಸಿಕೊಳ್ಳಬಹುದು. ಆಯಾ ಪಕ್ಷಗಳು ಅಧಿಕಾರಕ್ಕೆ ಬಂದಾಗ ತಮಗೆ ಪ್ರಿಯರೆನಿಸುವವರನ್ನು ಆಯ್ಕೆ ಮಾಡಿ ಪ್ರಶಸ್ತಿ ಪ್ರದಾನ ಮಾಡುವುದು ಎಗ್ಗಿಲ್ಲದೆ ನಡೆಯುತ್ತಿದೆ.

ಹೀಗೆ ನಮ್ಮ ದೇಶದಲ್ಲಿ ಪ್ರಶಸ್ತಿಗಳು ಕಾಸಿಗೊಂದು ಕೊಸರಿಗೊಂದು ಎಂಬ ಸ್ಥಿತಿ ತಲುಪಿರುವದು ಒಂದು ದೊಡ್ಡ ದುರಂತ.

ಧರ್ಮಕಾರ್ಯದ ಹಂಚಿಕೆ!!

ಧರ್ಮಸ್ಥಳದ ಭಕ್ತಾದಿಗಳಲ್ಲಿ ವೀರೇಂದ್ರ ಹೆಗ್ಗಡೆಯವರ ಬಗ್ಗೆ ಅಪಾರ ವಿಶ್ವಾಸವಿದೆ. ಆದರೆ ಅವರ ಸೋದರರ ಬಗ್ಗೆ ಅಂಥಾ ಒಳ್ಳೆ ಅಭಿಪ್ರಾಯವಿಲ್ಲ. ಒಂದು ವರ್ಷದ ಹಿಂದೆ ವೀರೇಂದ್ರ ಹೆಗ್ಗಡೆಯವರ ಸಂದರ್ಶನ ಮಾಡಿದ ಪತ್ರಕರ್ತರಾದ ಅಜಿತ್ ಹನುಮಕ್ಕನವರ್ ಒಂದು ಪ್ರಶ್ನೆ ಕೇಳಿದರು. "ಗ್ರಾಮದಲ್ಲಿ ಓಡಾಡಿದ ಸಂದರ್ಭದಲ್ಲಿ ಬಂದ ಅಭಿಪ್ರಾಯ, ಹೆಗ್ಗಡೆಯವರು ಒಳ್ಳೆಯವರು, ಆದರೆ ಅವರ ಸೋದರರ ಬಗ್ಗೆ ಹಾಗೆ ಹೇಳಲಿಕ್ಕೆ ಬರೋದಿಲ್ಲಾ ಅಂತಾ, ನೀವೇನಂತೀರಿ?"

ಈ ಪ್ರಶ್ನೆಗೆ ಹೆಗ್ಗಡೆಯವರು ಒಂದು ಉದಾಹರಣೆಯ ಮೂಲಕ ಉತ್ತರಿಸಿದರು.

"ಬ್ಯಾಂಕ್‌ನಲ್ಲಿ ಇಬ್ಬರು ಅಧಿಕಾರಿಗಳಿರ್ತಾರೆ, ಒಬ್ಬರು ಚೇರ್ಮನ್, ಮತ್ತೊಬ್ಬರು ಎಕ್ಸಿಕ್ಯೂಟಿವ್ ಡೈರೆಕ್ಟರ್. ಎಕ್ಸಿಕ್ಯೂಟಿವ್ ಡೈರೆಕ್ಟರ್ ಯಾವತ್ತೂ ಕೆಟ್ಟೋನು ಅನಿಸ್ಕೋತಾನೆ... ಅವನು ಆಡಳಿತಾತ್ಮಕ ವ್ಯವಹಾರಗಳನ್ನು ನೋಡುವಾಗ ಕಟ್ಟುನಿಟ್ಟಾಗಿ ಇರಬೇಕಾಗುತ್ತೆ, ಆದ್ದರಿಂದ ಅವರು ಅಪ್ರಿಯ ಅನಿಸಿಕೊಳ್ಳುತ್ತಾರೆ. ಆದರೆ ಚೇರ್ಮನ್ ಅಪ್ರಿಯ ಎನಿಸಿಕೊಳ್ಳುವುದಿಲ್ಲ...

ಇಲ್ಲೂ ಹಾಗೆ, ವೀರೇಂದ್ರ ಹೆಗಡೆಯವರು ಒಳ್ಳೆಯವರು. ಯಾಕೆ? ಇಂಥಾ ವ್ಯವಹಾರಗಳಲ್ಲಿ ನಾನು ಕೈಹಾಕೋದಿಲ್ಲ... ಆದರೆ ಹರ್ಷೇಂದ್ರ ವ್ಯವಹಾರಗಳನ್ನು ನೋಡಿಕೊಳ್ಳುವಾಗ ಕಟ್ಟುನಿಟ್ಟು ಇರಬೇಕಾಗುತ್ತೆ, ಇಲ್ಲದಿದ್ದರೆ ಧರ್ಮಸ್ಥಳ ಈ ಮಟ್ಟಕ್ಕೆ ಬೆಳೆಯುತ್ತಿರಲಿಲ್ಲ...


ಹೇಗಿದೆ ಧರ್ಮ ಕಾರ್ಯ ವಿಭಜನೆ? ಈ ಮಾತು ಕೇಳಿ ಹಲವಾರು ಭಕ್ತಾದಿಗಳಿಗೆ ಆಘಾತವಾಗಿರುವುದಂತೂ ಸತ್ಯ.

ಇಷ್ಟೆಲ್ಲ ಹೇಳಿದ ಮೇಲೆ ವೀರೇಂದ್ರ ಹೆಗ್ಗಡೆಯವರು ಮತ್ತೊಂದು ಮಾತನ್ನೂ ಸೇರಿಸಿದರು. "ಅವನಿಂದಲೂ ಕೆಲವು ತಪ್ಪುಗಳಾಗಿರಬಹುದು; ಅವನು ತಿದ್ದುಕೊಳ್ತಾ ಇದಾನೆ."

ಆ ಸೋದರ ಮಾಡಿದ ತಪ್ಪುಗಳೆಷ್ಟು? ಅವುಗಳಲ್ಲಿ ಯಾವ್ಯಾವ ತಪ್ಪುಗಳನ್ನು ತಿದ್ದಿಕೊಂಡಿದ್ದಾನೆ? ಇನ್ನೂ ಬಾಕಿ ಉಳಿದುಕೊಂಡಿರುವ ತಪ್ಪುಗಳು ಯಾವುವು? ಈ ಬಗ್ಗೆ ಇನ್ನೂ ಹೆಚ್ಚಿನ ವಿವರಗಳು ಸದ್ಯಕ್ಕೆ ಲಭ್ಯವಿಲ್ಲ.

ಈ ವಿವರಣೆಯಿಂದ ಒಂದೆರಡು ಗಹನವಾದ ಪ್ರಶ್ನೆಗಳು ಹುಟ್ಟುತ್ತವೆ. ವೀರೇಂದ್ರ ಹೆಗ್ಗಡೆಯವರಿಗೂ ಹರ್ಷೇಂದ್ರ ಹೆಗ್ಗಡೆಯವರಿಗೂ ಇರುವ ವ್ಯತ್ಯಾಸ ಕೇವಲ ಕಾರ್ಯ ವಿಭಜನೆಯ ವ್ಯತ್ಯಾಸ ಮಾತ್ರವೆ? ಧರ್ಮಸ್ಥಳ ಕ್ಷೇತ್ರದ ಧಾರ್ಮಿಕ ಕಾರ್ಯಗಳನ್ನು ಹೀಗೆ ಬ್ಯಾಂಕ್ ವ್ಯವಹಾರಕ್ಕೆ ಹೋಲಿಕೆ ಮಾಡುವುದು ಎಷ್ಟು ಸರಿ?





ಹಾಗೂ ಕರ್ನಾಟಕ ರಾಜ್ಯ ಧಾರ್ಮಿಕದತ್ತಿ ಕಾಯ್ದೆ-1997 ಪ್ರಕಾರ ಈ ದೇವಳ 'ಸಾರ್ವಜನಿಕ'ವಾಗುತ್ತದೆ. ಮುಖ್ಯಮಂತ್ರಿಗಳ ಪತ್ರ ಕ್ರ.CM/74793 REP-GEN 2014 ಮತ್ತು ಕಾನೂನು ಮತ್ತು ಮುಜರಾಯಿ ಸಚಿವರ ಟಿಪ್ಪಣಿ. ಕ್ರ.ಸಂ: ಕಾಪಮು: (ಟ):2392 ತಾ. 7.11.2014 ಯಂತೆ ಧಾರ್ಮಿಕ ದತ್ತಿ ಆಯುಕ್ತರಿಗೆ ಸೂಕ್ತ ಕ್ರಮಗೊಳ್ಳಲು ನಿರ್ದೇಶನ ನೀಡಲಾಗಿದೆ.

5. ಲಾಭದಾಯಕ ಪ್ರಕೃತಿ ಚಿಕಿತ್ಸಾಲಯಕ್ಕೆ ಭೂಮಿ: 'ಮಂಜುನಾಥಸ್ವಾಮಿ ದರ್ಶನಕ್ಕೆ ಬರುವ ಭಕ್ತರು ದೇವರ ದರ್ಶನದ ಬಳಿಕ ಸಂತೋಷವಾಗಿ ವಿಹರಿಸಲು ಹೂದೋಟ ಮತ್ತು ಮೃಗಾಲಯ ನಿರ್ಮಾಣ'ಕ್ಕೆಂದು ಹೆಗ್ಗಡೆಯವರು ಕಂದಾಯ ನಿರೀಕ್ಷಕರಲ್ಲಿ ಲಿಖಿತ ಹೇಳಿಕೆ ನೀಡಿ, ಧರ್ಮಸ್ಥಳ ಗ್ರಾಮದಲ್ಲಿ ಶಾಂತಿವನ ಟ್ರಸ್ಟ್‌ಗೆ ಕಡತ ನಂಬ್ರ: ಎಡಿಸ್ ಪಿಪಿಡಿಆರ್/44: 82-83/1982ರಲ್ಲಿ ಮಂಜೂರಾದ 14.65 ಎಕ್ರೆ ಸ್ಥಳವನ್ನು (ಮಂಜೂರಾತಿ ಹಂತದ ಕೊನೆಯಲ್ಲಿ) ಲಾಭದಾಯಕ 'ಪ್ರಕೃತಿ ಚಿಕಿತ್ಸಾಲಯ'ಕ್ಕೆಂದು, ಕಾನೂನುಬಾಹಿರವಾಗಿ ಮಾಡಿಕೊಂಡಿದ್ದಾರೆ. ಇದರ ತನಿಖೆಗೆ ಮುಖ್ಯಮಂತ್ರಿಗಳು ಆದೇಶಿಸಿದ್ದಾರೆ. ಕ್ರ. CM 68168 REP/GEN 2014 ತಾ.22.11.2014. ಮೊದಲ ತನಿಖೆಯಲ್ಲಿ ತಹಶಿಲ್ದಾರರು ನೀಡಿದ ಹಿಂಬರಹ ದೋಷಪೂರ್ಣವಾಗಿದ್ದು, ಜಿಲ್ಲಾಧಿಕಾರಿಗಳು ಮರು ತನಿಖೆಗೆ ಆದೇಶಿಸಿದ್ದಾರೆ. (ತನಿಖೆ ಪ್ರಗತಿಯಲ್ಲಿದೆ.)

6. 'ಭೂರಹಿತ' ಬಡವ ಹರ್ಷೇಂದ್ರ ಕುಮಾರ್: 1972ರಲ್ಲಿ ಹೆಗ್ಗಡೆ ಕುಟುಂಬ 4671 ಎಕ್ರೆಗಿಂತ ಹೆಚ್ಚು ಕೃಷಿಭೂಮಿ ಹೊಂದಿದ್ದರೂ ತಾನು 'ಭೂರಹಿತ' ಎಂದೂ ಪಿತ್ರಾರ್ಜಿತ ಭೂಮಿ ಇಲ್ಲವೆಂದೂ ಸುಳ್ಳು ಪ್ರಮಾಣಪತ್ರದೊಂದಿಗೆ 'ದರಖಾಸ್ತು ಅರ್ಜಿ' ಸಲ್ಲಿಸಿ, ವಾರ್ಷಿಕ ಆದಾಯ ರೂ.1200/- ಮೀರಿಲ್ಲ ಎಂದು ತಿಳುವಳಿಕೆ ನೀಡಿ, ಧರ್ಮಸ್ಥಳ ಗ್ರಾಮದ ಮುಖ್ಯ ರಸ್ತೆ ಬದಿಯಲ್ಲಿರುವ ಬೆಲೆಬಾಳುವ 7.59 ಎಕ್ರೆ ಸರಕಾರಿ ಸ್ಥಳವನ್ನು, ಶ್ರೀ ವೀರೇಂದ್ರ ಹೆಗ್ಗಡೆಯವರ ಲಿಖಿತ ಒಪ್ಪಿಗೆಯೊಂದಿಗೆ, ಹರ್ಷೇಂದ್ರ ಕುಮಾರ್‌ರು ದರ್ಖಾಸ್ತು ಮಂಜೂರಾತಿ ಪಡೆದಿದ್ದಾರೆ. ಈ ಬಗ್ಗೆ ತನಿಖೆಗೆ ಮುಖ್ಯಮಂತ್ರಿಗಳು ಆದೇಶಿಸಿದ್ದಾರೆ. ಕ್ರ. CM/2359/REP/GEN 2015 Dt.14.7.2015 (ತನಿಖೆ ಪ್ರಗತಿಯಲ್ಲಿದೆ).

ಧರ್ಮಸ್ಥಳದಲ್ಲಿ ಹರ್ಷೇಂದ್ರ ಕುಮಾರ್‌ರ ಪೆಟ್ರೋಲ್ ಬಂಕ್‌ಗೆ ಕೂಡ ಸರಕಾರ ಕಾನೂನುಬಾಹಿರವಾಗಿ ಭೂಮಿ ಮಂಜೂರು ಮಾಡಿದೆ.

7. ಸ್ವಸಹಾಯ ಸಂಘಗಳಿಗೆ 18% ಬಡ್ಡಿ ವಿಧಿಸಿ ಲಾಭದಾಯಕ ಮೈಕ್ರೋ ಫೈನಾನ್ಸ್ ನಡೆಸುತ್ತಿರುವ ಮತ್ತು ಇದನ್ನೇ ಗ್ರಾಮಾಭಿವೃದ್ಧಿ ಯೋಜನೆ ಎಂದು ಪ್ರತಿಪಾದಿಸುತ್ತಿರುವ ಎಸ್‌ಕೆಡಿಆರ್‌ಡಿಪಿ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ(ರಿ.), ಇದರ ವ್ಯವಹಾರಗಳ ಕುರಿತು ತನಿಖೆಗೆ ಮುಖ್ಯಮಂತ್ರಿಗಳು ಆದೇಶಿಸಿದ್ದಾರೆ. ಕ್ರ.CM/68095 REP-GEN/2014dt.22.11.14. SKDRDಯ 2012-13ರ ಬ್ಯಾಲೆನ್ಸ್ ಶೀಟ್ ಪ್ರಕಾರ ರೂ. 89.80 ಕೋಟಿ ಲಾಭ ಕಾಣುತ್ತಿದೆ. 5 ವಿದೇಶೀ ಅನುದಾನ ಸಂಸ್ಥೆಗಳಿಂದಲೂ, ನಬಾರ್ಡ್ ಮತ್ತಿತರ ಹಣಕಾಸು ಸಂಸ್ಥೆಗಳಿಂದಲೂ ಅನುದಾನ ಪಡೆಯಲಾಗಿದೆ!

8. 'ಪದ್ಮಭೂಷಣ' ಪ್ರಶಸ್ತಿಯ ಶರ್ತ ಉಲ್ಲಂಘನೆ: ಹೆಗ್ಗಡೆಯವರು ತನ್ನ ಹೆಸರಿನೊಂದಿಗೆ ಪದ್ಮಭೂಷಣ ಸೇರಿಸಿ ಅಂದರೆ "ಪದ್ಮಭೂಷಣ ಡಾ। ಡಿ. ವೀರೇಂದ್ರ ಹೆಗ್ಗಡೆ" ಎಂದು ಕೋರ್ಟ್ ದಾವೆಗಳಲ್ಲಿ ಬಳಸಿ, ನ್ಯಾಯಾಲಯವನ್ನು ಪ್ರಭಾವಗೊಳಿಸಲು ಪ್ರಯತ್ನಿಸಿರುವ ಬಗ್ಗೆ ರಾಷ್ಟ್ರಪತಿಗಳಿಗೆ ತಾ. 1.10.2014 ರಂದು ಮತ್ತು ಮೊದಲೂ ದೂರು ಸಲ್ಲಿಸಲಾಗಿದ್ದು ಇವುಗಳು ವಿಚಾರಣೆಗೆ ಬಾಕಿ ಇದೆ. ಇಂತಹ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್‌ನ ಆದೇಶ ಸ್ಪಷ್ಟವಾಗಿದ್ದು, ಶರ್ತ ಉಲ್ಲಂಘನೆ ಮಾಡಿದ್ದರಿಂದ ಈ ಪ್ರಶಸ್ತಿ ರದ್ದುಗೊಳಿಸಲೇಬೇಕಾಗುತ್ತದೆ. ತನಿಖೆ ಪೂರ್ಣಗೊಳ್ಳದೆ ಇದೀಗ 'ಪದ್ಮವಿಭೂಷಣ' ನೀಡಿದರೆ, ಕೇಂದ್ರ ಸರಕಾರ ಪ್ರಶಸ್ತಿಯ ನಿಯಮಗಳ ಉಲ್ಲಂಘನೆಯನ್ನು ಪರಿಗಣಿಸಿಲ್ಲ ಎಂದಾಗುತ್ತದೆ. ಮೇಲ್ಕಾಣಿಸಿದ ವಿವಿಧ ತನಿಖೆಗಳಲ್ಲಿ ಶಿಕ್ಷಾರ್ಹ ಅಪರಾಧಗಳ ಕೇಸ್‌ಗಳೂ ಇದ್ದು, ಈ ಕಾರಣಕ್ಕೂ, ಪದ್ಮವಿಭೂಷಣ ಈಗ ನೀಡುವುದು ಪ್ರಶ್ನಾರ್ಹವಾಗಿದೆ.

9. ಡಿ ನೋಟಿಫಿಕೇಶನ್: ಬೆಂಗಳೂರಿನ ಯಲಹಂಕ ಹೋಬಳಿಯ ಅಳ್ಳಾಳಸಂದ್ರ ಗ್ರಾಮದಲ್ಲಿ ನಿಯಮ ಉಲ್ಲಂಘಿಸಿ, ಅಕ್ರಮವಾಗಿ ಖರೀದಿಸಿದ, ಪ್ರಕೃತ ಸಾವಿರಕ್ಕೂ ಹೆಚ್ಚು ಕೋಟಿ ರೂಪಾಯಿ ಬೆಲೆಬಾಳುವ, 36.10 ಎಕ್ರೆ ಗೃಹಮಂಡಳಿಯ ಸ್ಥಳವನ್ನು ಕಾನೂನುಬಾಹಿರವಾಗಿ 2010ರಲ್ಲಿ ಡಿನೋಟಿಫಿಕೇಶನ್ ಮಾಡಿ ಹೆಗ್ಗಡೆಯವರು ಅಧ್ಯಕ್ಷರಾಗಿರುವ ಎಸ್‌ಡಿಎಂ ಎಜುಕೇಶನಲ್ ಸೊಸೈಟಿಗೆ ಅನುಕೂಲ ಮಾಡಿರುವ ಪ್ರಕರಣದ ಬಗ್ಗೆ ಕೇಂದ್ರ ಸರಕಾರದ ಉನ್ನತ ಆಡಿಟ್ ಸಂಸ್ಥೆ C.A.G ತನ್ನ ವರದಿ ಕ್ರ..6, 2014ರಲ್ಲಿ (ಪುಟ 34, 35) ಗಂಭೀರ ಆಕ್ಷೇಪದೊಂದಿಗೆ ತರಾಟೆಗೆ ತೆಗೆದುಕೊಂಡಿದೆ. ಈ ಡಿನೋಟಿಫಿಕೇಶನ್ ರದ್ದುಪಡಿಸಲು ಕಂದಾಯ ಇಲಾಖೆಗೆ ಕರ್ನಾಟಕ ಗೃಹಮಂಡಳಿ ಕೇಳಿಕೊಂಡಿದ್ದರೂ ಇನ್ನೂ ರದ್ದಾಗಿಲ್ಲ. ರದ್ದುಗೊಳಿಸಲು ಮತ್ತು ಕಾನೂನು ಉಲ್ಲಂಘನೆಗಾಗಿ ಸೊಸೈಟಿಯ ಮೇಲೆಯೂ ಕ್ರಮಕೈಗೊಳ್ಳಲು ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಗಿದೆ.

ಹೀಗೆ 15 ಅಕ್ರಮಗಳ ಪಟ್ಟಿ ಮುಂದುವರೆಯುತ್ತದೆ. (ಕ್ಷಮಿಸಿ, ಸ್ಥಳಾಭಾವದಿಂದ ಹೆಚ್ಚಿನ ವಿವರಗಳನ್ನು ಒದಗಿಸಲಾಗುತ್ತಿಲ್ಲ.)

ಮಾನ್ಯ ವೀರೇಂದ್ರ ಹೆಗ್ಗಡೆಯವರು ಭೂಮಾಫಿಯಾ ಆರೋಪದ ಬಗ್ಗೆ ತಮ್ಮ ಭಾಷಣದಲ್ಲಿ ಪ್ರತಿಕ್ರಿಯಿಸಿದ್ದು ಹೀಗೆ. "ಭೂಮಾಫಿಯಾ - ಈ ಶಬ್ದವೇ ವಿಕಾರವಾದುದು, ಇದು ಬೆಂಗಳೂರಿನಿಂದ ಬಂದದ್ದು" ಎಂದಿದ್ದರು. ಈ ವಿಕಾರವಾದ ಶಬ್ದ ಮಾನ್ಯ ಹೆಗ್ಗಡೆಯವರ ಹಲವಾರು ಭೂವ್ಯವಹಾರಗಳಿಗೆ ಅನ್ವಯವಾಗುತ್ತಿರುವುದು ದೊಡ್ಡ ವಿಪರ್ಯಾಸ. ಅಷ್ಟು ಮಾತ್ರವಲ್ಲ, ಮೇಲಿನ ಪ್ರಕರಣದಲ್ಲಿ ಡಿನೋಟಿಫಿಕೇಷನ್ ಎಂಬ ಮತ್ತೊಂದು ವಿಕಾರವೂ ಸೇರಿಕೊಂಡುಬಿಟ್ಟಿದೆ!

ಧಾರವಾಡದ ಎಸ್‌ಡಿಎಂ ಇಂಜಿನಿಯರಿಂಗ್ ಕಾಲೇಜ್‌ನ ಅನುದಾನಕ್ಕಾಗಿ ಸುಳ್ಳು ದಾಖಲೆ ಸೃಷ್ಟಿಸಿರುವುದು, ಸಿದ್ಧವನ ಗುರುಕುಲ ಸೊಸೈಟಿಗೆ ಸರ್ಕಾರದಿಂದ ಪಡೆದುಕೊಂಡ ಭೂಮಿಯನ್ನು ಅಕ್ರಮವಾಗಿ ಮಾರಾಟ ಮಾಡಿರುವುದು, ಜನಸಾಮಾನ್ಯರಿಗೆ ಕಡಿಮೆ ಬಾಡಿಗೆಗೆ ಸಿಗುತ್ತಿದ್ದ ಬೆಳ್ತಂಗಡಿ ಸಮಾಜ ಮಂದಿರ ಕಟ್ಟಡವನ್ನು ಕೆಡವಿ ಭಾರೀ ಬಾಡಿಗೆ ತರುವ ಕಲಾ ಭವನ ನಿರ್ಮಿಸಿರುವುದು ಹೀಗೆ ಹತ್ತಾರು ಅಕ್ರಮಗಳ ಆರೋಪಗಳು ತನಿಖೆಯ ವಿವಿಧ ಹಂತದಲ್ಲಿವೆ.

ವಿವಾದಗಳ ಮೂಲವೇನು?

'ನಮ್ಮ ಜನರಿಗೆ ಸಕಾರಾತ್ಮಕ ಸ್ಪಂದನೆಯೇ ಗೊತ್ತಿಲ್ಲ', 'ಧಾರ್ಮಿಕ ಕಾರ್ಯದಲ್ಲಿ ತೊಡಗಿರುವ ಇಂಥ ಗಣ್ಯರ ವಿರುದ್ಧ ಆರೋಪ ಮಾಡುವುದೇ ಇವರ ಚಾಳಿ' ಎಂದು ಗೊಣಗಾಡುವ ಮಂದಿಗೆ ನಮ್ಮಲ್ಲಿ ಕೊರತೆಯೇನಿಲ್ಲ. ಆದರೆ ಈ ಪ್ರಕರಣದ ವಾಸ್ತವ ಸ್ವಲ್ಪ ಭಿನ್ನವಾಗಿದೆ. ಒಂದು ಉದಾಹರಣೆ ನೋಡಬಹುದು.

ಕರ್ನಾಟಕದ ಧಾರ್ಮಿಕ ಕ್ಷೇತ್ರದವರೇ ಆದ ಮತ್ತೊಬ್ಬ ಗಣ್ಯರಿಗೆ ಈ ಸಾಲಿನ ಪದ್ಮಭೂಷಣ ಪ್ರಶಸ್ತಿ ಬಂದಿದೆ. ಅವರು ತುಮಕೂರಿನ ಸಿದ್ಧಗಂಗಾ ಮಠದ ಶತಾಯುಷಿ ಶಿವಕುಮಾರ ಸ್ವಾಮಿಗಳು. ಸ್ವಾಮೀಜಿಗಳಿಗೆ ಪದ್ಮ ಪ್ರಶಸ್ತಿ ಬಂದದ್ದನ್ನು ಕೇಳಿ ಭಕ್ತಾದಿಗಳು, ಇತರೆ ನಾಗರಿಕರು ಎಲ್ಲರೂ ಸಂತಸ ವ್ಯಕ್ತಪಡಿಸಿದ್ದಾರೆ. ಯಾರಿಂದಲೂ ಯಾವುದೇ ಅಪಸ್ವರ ಕೇಳಿಬಂದಿಲ್ಲ, ಅಪಸ್ವರ ಬಂದಿರುವುದು ವೀರೇಂದ್ರ ಹೆಗ್ಗಡೆಯವರ ವಿಷಯದಲ್ಲಿ ಮಾತ್ರ!

ಇದು ಹೀಗೇಕೆ? ಎಂಬ ಪ್ರಶ್ನೆ ಮೂಡುವುದು ಸಹಜ. ಇದಕ್ಕೆ ಉತ್ತರ ಧರ್ಮಸ್ಥಳದ ವಾಸ್ತವ ಸಂಗತಿಗಳಲ್ಲಿದೆ.

ಶಿವಕುಮಾರ ಸ್ವಾಮಿಗಳು ಹೇಳಿಕೇಳಿ ಸನ್ಯಾಸಿ. ಅವರು ಹೆಂಡತಿ ಮಕ್ಕಳು ಅಥವ ಸಂಸಾರದ ತಾಪತ್ರಯದಲ್ಲಿ ಸಿಲುಕಿದವರಲ್ಲ, ಲಾಭದಾಯಕ ವ್ಯವಹಾರಗಳೆಂದರೆ ಏನೆಂಬುದೇ ಅವರಿಗೆ ಗೊತ್ತಿಲ್ಲ. ಮೇಲಾಗಿ ಸಿದ್ಧಗಂಗಾ ಮಠ ಯಾರೊಬ್ಬರ ವೈಯಕ್ತಿಕ ಅಥವ ಖಾಸಗಿ ಸ್ವತ್ತೂ ಅಲ್ಲ.

ವೀರೇಂದ್ರ ಹೆಗ್ಗಡೆಯವರ ವಿಚಾರ ಇದಕ್ಕೆ ತದ್ವಿರುದ್ಧ ಎಂದರೆ ನೀವು ನಂಬಲೇಬೇಕು. ಅವರೇನು ಸನ್ಯಾಸಿಯಲ್ಲ, ಅಪ್ಪಟ ಗೃಹಸ್ಥ. ಧರ್ಮಸ್ಥಳ ಕ್ಷೇತ್ರದ ಧರ್ಮಾಧಿಕಾರಿ ಹುದ್ದೆ ಅವರಿಗೆ ವಂಶ ಪಾರಂಪರ್ಯವಾಗಿ ಬಂದದ್ದು, ನಾನಾ ರೀತಿಯ ಲಾಭದಾಯಕ ವ್ಯವಹಾರಗಳಲ್ಲಿ ತೊಡಗಿಸಿಕೊಂಡಿರುವ ಇವರ ಕುಟುಂಬದ ಗಾತ್ರ ಬಹಳ ದೊಡ್ಡದು. ವಾಸ್ತವದಲ್ಲಿ ನೂರಾರು ಕೋಟಿ ಆದಾಯವಿರುವ ಧರ್ಮಸ್ಥಳ ಮಂಜುನಾಥ ದೇವಸ್ಥಾನವು ಈ ಕುಟುಂಬದ ಖಾಸಗಿ ಒಡೆತನದಲ್ಲಿದೆ. ಭಾರೀ ವಹಿವಾಟು ನಡೆಸುವ ಮೆಡಿಕಲ್ ಕಾಲೇಜುಗಳು, ಇಂಜಿನಿಯರಿಂಗ್ ಕಾಲೇಜುಗಳು, ಆಸ್ಪತ್ರೆಗಳು, ಮೈಕ್ರೋ ಫೈನಾನ್ಸಿಂಗ್ ಸಂಸ್ಥೆಗಳು, ಪೆಟ್ರೋಲ್ ಬಂಕ್‌ನಂಥ ವಾಣಿಜ್ಯ ವ್ಯವಹಾರಗಳು ಈ ಕುಟುಂಬದ ಒಡೆತನದಲ್ಲಿವೆ. ಕಲ್ಲು ಗಣಿಗಾರಿಕೆಯಂಥ ವಿವಾದಾಸ್ಪದ ವ್ಯವಹಾರಕ್ಕೆ ಇಳಿದದ್ದೂ ಉಂಟು.

ಈ ಹಿನ್ನೆಲೆಯಲ್ಲಿ ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ಸಮಗ್ರ ತನಿಖೆಗೆ ಒಳಪಡಿಸಬೇಕಾದ ಅಗತ್ಯವಿದೆ. ಈ ಬಗ್ಗೆ ಸಮಿತಿಯ ಆಗ್ರಹ ಹೀಗಿದೆ.

"ಮುಖ್ಯಮಂತ್ರಿಗಳು, ಕಂದಾಯ ಸಚಿವರು, ಕಾನೂನು-ಮುಜರಾಯಿ ಸಚಿವರು, ಕಂದಾಯ ಇಲಾಖಾ ಪ್ರಧಾನ ಕಾರ್ಯದರ್ಶಿಗಳು, ದ.ಕ.ಜಿಲ್ಲಾಧಿಕಾರಿಗಳು ಈತನಕ ತನಿಖೆಗಳಿಗೆ ಆದೇಶ ಮಾಡಿದ್ದಾರೆ. ಈ ಆದೇಶಗಳಿಂದಾಗಲೀ, ಇವುಗಳ ಪ್ರಕಟಣೆಯಿಂದಾಗಲೀ ಮಾನನಷ್ಟವಾಗುತ್ತದೆಂದು ಅರ್ಥೈಸುವುದು ಸರಿಯಲ್ಲ. ಅಭಿವ್ಯಕ್ತಿ ಸ್ವಾತಂತ್ರ್ಯ, ವಾಕ್ ಸ್ವಾತಂತ್ರ್ಯ, ಪತ್ರಿಕಾ ಸ್ವಾತಂತ್ರ್ಯ ನಮಗಿರುವ ಸಂವಿಧಾನದತ್ತ ಹಕ್ಕುಗಳು. ಕಾನೂನು ಎಲ್ಲರಿಗೂ ಸಮಾನ."

ಈ ದಾಖಲೆಗಳ ಪ್ರತಿಗಳು ಟ್ರಸ್ಟ್ ಕಚೇರಿಯಲ್ಲಿ ಮತ್ತು ಜಂಟಿ-ಕ್ರಿಯಾ ಸಮಿತಿಯ ಸಂಘಟನೆಗಳಲ್ಲಿ ಸಾರ್ವಜನಿಕರಿಗೆ ಲಭ್ಯ. ಈ ಪೈಕಿ ಮುಖ್ಯ ದಾಖಲೆಗಳನ್ನು ಮತ್ತು ತನಿಖಾ ಆದೇಶಗಳನ್ನು ಯಥಾವತ್ತಾಗಿ ಪುಸ್ತಕ ರೂಪದಲ್ಲಿ ಶೀಘ್ರವೇ ಮುದ್ರಿಸಿ ಹಂಚುವ ಯೋಜನೆಯೂ ಈ ಸಮಿತಿಗಿದೆ. ಬಹಳ ಮಂದಿ ಆ ಪುಸ್ತಕದ ನಿರೀಕ್ಷೆಯಲ್ಲಿದ್ದಾರೆ.


ಧರ್ಮಸ್ಥಳ ಒಂದು ಪ್ರಮುಖ ಧಾರ್ಮಿಕ ಕ್ಷೇತ್ರವಾದ್ದರಿಂದ ಕೊನೆಯದಾಗಿ ಒಂದು ಮಾತು.

ಹಿಂದೂ ಪೌರಾಣಿಕ ನಂಬಿಕೆಗಳ ಪ್ರಕಾರ ಕೃತಯುಗದಲ್ಲಿ ಧರ್ಮ ಪೂರ್ಣ ಪ್ರಮಾಣದಲ್ಲಿ, ಅಂದರೆ ನಾಲ್ಕೂ ಕಾಲಿನ ಮೇಲೆ ನೆಲೆಗೊಂಡಿತ್ತಂತೆ. ಬರಬರುತ್ತಾ ತ್ರೇತಾಯುಗದಲ್ಲಿ ಮೂರು ಕಾಲಿನ ಧರ್ಮವಾಗಿ, ದ್ವಾಪರಾ ಯುಗದಲ್ಲಿ ಎರಡು ಕಾಲಿಗಿಳಿದು ಈಗ ಕಲಿಯುಗದಲ್ಲಿ ಒಂದೇ ಕಾಲಿನ ಮೇಲೆ ನಿಂತು ಅತಂತ್ರ ಸ್ಥಿತಿಯಲ್ಲಿದೆ ಎಂಬುದು ಬಹು ಪ್ರಚಲಿತ ನಂಬಿಕೆ.

ಧರ್ಮಸ್ಥಳದಂತ ಧರ್ಮಸ್ಥಳದಲ್ಲೇ ಅಕ್ರಮ, ಅಧರ್ಮ ತಾಂಡವವಾಡುತ್ತಿದೆ ಎಂಬ ಸುದ್ದಿಗಳು ಹೀಗೆ ವ್ಯಾಪಕವಾಗಿ ಕೇಳಿಬರುತ್ತಿರುವ ಹಿನ್ನೆಲೆಯಲ್ಲಿ ಮುಗ್ಧ ಭಕ್ತಾದಿಗಳಿಗೆ ಶಾಕ್ ಆಗಿದೆ. ಕಲಿಯುಗದಲ್ಲಿ ಒಂದು ಕಾಲಿನ ಮೇಲೆ ನಿಂತಿರುವ ಧರ್ಮವೂ ಕುಸಿದು ಹೋದರೆ ಹೇಗೆ ಎಂದು ಭಕ್ತರು ಆತಂಕಗೊಂಡಿದ್ದಾರೆ. ಜವಾಬ್ದಾರಿಯುತ ಸ್ಥಾನದಲ್ಲಿರುವವರು ಮುಗ್ಧಭಕ್ತರ ಈ ಆತಂಕವನ್ನು ನಿವಾರಣೆ ಮಾಡಿ, ತಮ್ಮ ಸ್ಥಾನದ ಘನತೆಯನ್ನು ಕಾಪಾಡಿಕೊಳ್ಳಲಿ ಎಂಬುದು ನಮ್ಮ ಆಶಯ.

• ದೊಡ್ಡಿಪಾಳ್ಯ ನರಸಿಂಹಮೂರ್ತಿ

ಕೊಡಗು: ಜನರನ್ನು ಗುಲಾಮರಂತೆ ನೋಡುವ ಡಿಸಿ


ಅನುರಾಗ್ ತಿವಾರಿ

ಹಿಂದೊಮ್ಮೆ ಈಗಿನ ಕೊಡಗು ಜಿಲ್ಲೆ ಪ್ರತ್ಯೇಕ ರಾಜ್ಯವಾಗಿತ್ತು, ಸ್ವಾತಂತ್ರ್ಯ ನಂತರವೂ ಪ್ರತ್ಯೇಕವಾಗಿದ್ದು 1956ರಲ್ಲಿ ಕೊಡಗು ರಾಜ್ಯವು ಮೈಸೂರು ರಾಜ್ಯದಲ್ಲಿ ವಿಲೀನವಾಯಿತು. ಇದಕ್ಕೂ ಮುನ್ನ ಕೊಡಗು ರಾಜರ ಆಡಳಿತದಲ್ಲಿ ಇತ್ತು, ರಾಜರ ಆಡಳಿತದ ನಂತರ ಅವರ ಕೋಟೆ ಹಾಗೂ ಅರಮನೆ ರಾಜ್ಯದ ವಿಧಾನಸೌಧವಾಗಿಯೂ, ಈಗ ಜಿಲ್ಲಾಧಿಕಾರಿಗಳ ಕಚೇರಿ ಮತ್ತು ಸಭೆಗಳು ನಡೆಸುವ ಸಭಾಂಗಣ ಇಲ್ಲಿಯೇ ಇದೆ. ಈ ಕಟ್ಟಡವನ್ನು ತೆರವುಗೊಳಿಸಬೇಕು ಎಂದು ಪ್ರಾಚ್ಯವಸ್ತು ಇಲಾಖೆ ತಿಳಿಸಿದ ಹಿನ್ನೆಲೆಯಲ್ಲಿ ಸುಮಾರು 14 ಕೋಟಿ ರೂಪಾಯಿ ವೆಚ್ಚದಲ್ಲಿ ಜಿಲ್ಲಾ ಆಡಳಿತದ ಸಮುಚ್ಚಯವನ್ನು ನಿರ್ಮಿಸಲಾಗಿದೆ. ಆದರೂ ಜಿಲ್ಲಾಧಿಕಾರಿಗಳ ಕಚೇರಿಯನ್ನು ನೂತನ ಕಟ್ಟಡಕ್ಕೆ ಉದ್ಘಾಟನೆಯ ನಂತರವೂ ಬದಲಿಸಿಲ್ಲ, ಇದು ಹಾಲಿ ಜಿಲ್ಲಾಧಿಕಾರಿ ಅನುರಾಗ್ ತಿವಾರಿಯವರ ಧಾರ್ಷ್ಟ್ಯತನ. ಅವರಲ್ಲಿ ತಾನು ಸಾರ್ವಜನಿಕ ಸೇವಕ ಎಂಬ ಮನೋಭಾವ ಇಲ್ಲದೇ ಇದ್ದು, ತಾನೊಬ್ಬ ಪಾಳೇಗಾರ ಎನ್ನುವಂತಹ ಮಾನಸಿಕ ವ್ಯವಸ್ಥೆ ಇದೆ. ಪಾಳೆಗಾರನ ರಾಜ್ಯಭಾರ ಅರಮನೆಯಿಂದಲೇ ನಡೆಯಬೇಕು ಎಂದು ಅವರು ಭಾವಿಸಿರಬೇಕು.

ಕೊಡಗು ಜಿಲ್ಲೆಯಲ್ಲಿ ಈಗ ಜನಸಾಮಾನ್ಯರ ಯಾವುದೇ ಕೆಲಸ ಕಾರ್ಯಗಳು ನಡೆಯುತ್ತಿಲ್ಲ, ಭ್ರಷ್ಟಾಚಾರ ತಾಂಡವವಾಡುತ್ತಿದೆ. ಜಿಲ್ಲೆಯಲ್ಲಿ ಇರುವಂತಹ ಐ.ಎ.ಎಸ್., ಐ.ಪಿ.ಎಸ್. ಹಾಗೂ ಐ.ಎಫ್.ಎಸ್. ಅಧಿಕಾರಿಗಳು ತಾವು ಶ್ರೇಷ್ಠರು, ತಮ್ಮನ್ನು ಯಾರೂ ಪ್ರಶ್ನಿಸುವಂತಿಲ್ಲ, ಈಗ ಕೊಡಗು ಜಿಲ್ಲೆಯಲ್ಲಿ ಇರುವುದು ಊಳಿಗಮಾನ್ಯ ಪದ್ಧತಿ ಎಂದು ಭಾವಿಸಿದ್ದಾರೆ.

ಕೊಡಗಿನಲ್ಲಿ ಈಗ ಒಂದು ವಿಶೇಷವಾದ ಪರಿಸ್ಥಿತಿ ಇದೆ. ಇಲ್ಲಿಯ ಜಿಲ್ಲಾ ಪಂಚಾಯತಿ, ಶಾಸಕರು ಹಾಗೂ ಸಂಸದರು ಬಿಜೆಪಿಯವರಾಗಿದ್ದಾರೆ. ಜನರ ಸಮಸ್ಯೆಗಳು ಬಗೆಹರಿಯದಿದ್ದರೆ, ಅವರೆಲ್ಲ ರೋಸಿಹೋಗಿ ಸರಕಾರದ ವಿರುದ್ಧ ತಿರುಗಿಬೀಳುತ್ತಾರೆ. ಪರಿಣಾಮವಾಗಿ ಮುಂದಿನ ಚುನಾವಣೆಯಲ್ಲೂ ತಾವೇ ಮತ್ತೊಮ್ಮೆ ತಮ್ಮ ಸ್ಥಾನವನ್ನು ಭದ್ರ ಮಾಡಿಕೊಳ್ಳಬಹುದು ಎಂಬ ಭಾವನೆ ಇಲ್ಲಿಯ ಜನಪ್ರತಿನಿಧಿಗಳಲ್ಲಿ ಇದೆ. ಹಾಗಾಗಿ ಶ್ರೀಸಾಮಾನ್ಯ ಸಂಪೂರ್ಣವಾಗಿ ಕಂಗೆಟ್ಟಿದ್ದಾನೆ.

ಅನುರಾಗ್ ತಿವಾರಿ ಉತ್ತರ ಭಾರತದ ವ್ಯಕ್ತಿ, ತಾನು ಏನು ಮಾಡಿದರೂ ನಡೆಯುತ್ತದೆ ಎನ್ನುವ ಅಹಂಭಾವ ಇವರದ್ದು. ಕೋತಿ ತಾನು ಕೆಡುವುದಲ್ಲದೆ, ವನವನ್ನೆಲ್ಲಾ ಕೆಡಿಸಿತು ಎನ್ನುವಂತೆ ಕೊಡಗು ಜಿಲ್ಲೆಯ ಎಲ್ಲಾ ಅಧಿಕಾರಿಗಳನ್ನು ಜನವಿರೋಧಿಯನ್ನಾಗಿಸಿ ಒಂದು ರೀತಿಯ ವಿಕೃತ ಸಂತೋಷವನ್ನು ಅನುಭವಿಸುತ್ತಿರುವ ವ್ಯಕ್ತಿ ಅನುರಾಗ್ ತಿವಾರಿ. ತನ್ನ ಕಚೇರಿಯಲ್ಲಿ ಸಾರ್ವಜನಿಕರಿಗೆ ಕುಳಿತುಕೊಳ್ಳಲು ಅವಕಾಶ ನೀಡದ ರೀತಿಯಲ್ಲಿ ಕುರ್ಚಿಗಳನ್ನು ಕಡಿಮೆ ಮಾಡಿದ್ದಲ್ಲದೆ, ಸಾರ್ವಜನಿಕರು ಭೇಟಿಗೆ ಬರುವಾಗ, ತಾನು ನಿಂತುಕೊಂಡಿರುತ್ತಾರೆ. ಅಂದರೆ ಜನರೂ ನಿಂತುಕೊಳ್ಳಬೇಕು ಎಂಬುದು ಅವರ ಬಯಕೆ. ರಾಜಕೀಯ ಪಕ್ಷದವರು ಮತ್ತು ಜನಪ್ರತಿನಿಧಿಗಳು ಭೇಟಿಯಾಗಲು ಬರುವಾಗ ತನ್ನ ಕಚೇರಿಯಲ್ಲಿ ಅಳವಡಿಸಿರುವ ಸಿ.ಸಿ. ಕ್ಯಾಮರ ಮೂಲಕ ವೀಕ್ಷಿಸಿ, ಅತ್ಯಂತ ಲಘುವಾಗಿ ಅವರ ಬಗ್ಗೆ ಮಾತನಾಡುವ ಚಾಳಿ ಇವರಲ್ಲಿ ಇದೆ.

ಜನರು ತಮ್ಮ ಕಷ್ಟಕಾರ್ಪಣ್ಯಗಳನ್ನು ಹೇಳಲು ಜಿಲ್ಲಾಧಿಕಾರಿಗಳನ್ನು ಭೇಟಿಯಾಗಲು ಹೋದರೆ, ಅವರನ್ನು ನಿಕೃಷ್ಟವಾಗಿ ಕಾಣುವುದು, ಲೇವಡಿ ಮಾಡುವುದು, ಗಂಟೆಗಟ್ಟಲೆ ಕಾಯಿಸುವುದು ಈ ವ್ಯಕ್ತಿಯ ಪರಿಪಾಠ. ಇವರಿಗೆ ಕೌಟುಂಬಿಕ ಸಮಸ್ಯೆ ಕಾಡುತ್ತಿರುವುದರಿಂದ ಅವರು ಈ ರೀತಿ ವರ್ತಿಸುತ್ತಾರೆ ಎಂದು ಬಲ್ಲ ಮೂಲಗಳು ತಿಳಿಸುತ್ತವೆ. ಅಂತಹ ಸಮಸ್ಯೆ ಏನಾದರೂ ಇದ್ದರೆ ಅದನ್ನು ತನ್ನ ಮನೆಗೆ ಸೀಮಿತಗೊಳಿಸಿಕೊಳ್ಳಬೇಕು. ಅಥವ ಮನಃಸ್ಥಿತಿ ಸ್ತಿಮಿತದಲ್ಲಿ ಇರುವುದಿಲ್ಲ ಎಂದಾದರೆ, ಅವರು ಜನಸಂಪರ್ಕವಿಲ್ಲದ ಇಲಾಖೆಗೆ ಹೋಗುವುದು ಉಚಿತ.

ಯಾವುದೇ ಅಧಿಕಾರಿ ಆಗಿರಲಿ ಅವರು ಜನರ ಸಮಸ್ಯೆಗಳಿಗೆ ಸ್ಪಂದಿಸಬಾರದೆಂದೇ ಜಿಲ್ಲೆಯಲ್ಲಿ ಒಂದು ಕಡೆಯಿಂದ ಐ.ಎ.ಎಸ್. ಲಾಬಿ, ಮತ್ತೊಂದು ಕಡೆಯಿಂದ ಉತ್ತರಭಾರತದ ಅಧಿಕಾರಿಗಳ ಲಾಬಿಯನ್ನು ಬಲಿಷ್ಠವಾಗಿ ಕೊಡಗಿನಲ್ಲಿ ಬೆಳೆಸಿದ್ದಾರೆ. ಇದರ ಫಲವಾಗಿ ಕೆಲವೇ ಸಮಯದ ಹಿಂದೆ ಡಾ। ಕಸ್ತೂರಿರಂಗನ್ ಸಮಿತಿಯ ವರದಿಯ ಅನುಷ್ಠಾನದ ಬಗ್ಗೆ ಜನಾಭಿಪ್ರಾಯ ಸಂಗ್ರಹಿಸಲು ಬಂದ ಅಧಿಕಾರಿಗಳ ಮತ್ತು ಸಾರ್ವಜನಿಕರ ನಡುವಿನ ಸಭೆಯಲ್ಲಿ ಸಂಘರ್ಷ ಉಂಟಾಗಿತ್ತು, ಆಗ ಸಂಘರ್ಷವನ್ನು ಇತ್ಯರ್ಥ ಮಾಡುವ ಬದಲು, ಸಾರ್ವಜನಿಕರ ವಿರುದ್ಧ ಅರಣ್ಯ ಅಧಿಕಾರಿಗಳನ್ನು ಎತ್ತಿಕಟ್ಟಿ ಪೊಲೀಸ್ ಪುಕಾರು ನೀಡುವಂತೆ ಮಾಡಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯಾಗಿರುವ ಮತ್ತೋರ್ವ ಅಹಂಕಾರಿ ವ್ಯಕ್ತಿತ್ವದ ಅಧಿಕಾರಿ



ಮೊದಲಿದ್ದ ಕೊಡಗಿನ ಜಿಲ್ಲಾಧಿಕಾರಿಗಳ ಕಚೇರಿ

ವಾರ್ತಿಕಾ ಕಟಿಯಾರ್ ಮೂಲಕ ಸಾರ್ವಜನಿಕರ ವಿರುದ್ಧ ಮತ್ತು ಸಾರ್ವಜನಿಕ ಪ್ರತಿನಿಧಿಗಳ ವಿರುದ್ಧ ಗೂಂಡಾ ಕಾಯ್ದೆಯಡಿಯಲ್ಲಿ ಮೊಕದ್ದಮೆ ದಾಖಲಿಸುವ ಬೆದರಿಕೆ ಹಾಕಿಸಿದ್ದರು. ಈ ವಿಚಾರವನ್ನು ಶಾಸಕರಾದ ಕೆ.ಜಿ. ಬೋಪಯ್ಯ ವಿಧಾನಸಭೆಯಲ್ಲಿ ಪ್ರಸ್ತಾಪಿಸಿ, ವಾರ್ತಿಕಾ ಕಟಿಯಾರ್ ವಿರುದ್ಧ ಹಕ್ಕುಚ್ಯುತಿ ನಿರ್ಣಯ ಮಂಡಿಸಿದ ನಂತರವಷ್ಟೇ ಆಕೆ ತನ್ನ ಉದ್ಧಟತನದ ಪ್ರದರ್ಶನವನ್ನು ನಿಲ್ಲಿಸಿದ್ದು. ಇದಕ್ಕೂ ಮುನ್ನ ಈ ಮಹಿಳೆ ಸಾಕಷ್ಟು ಸದ್ದು ಮಾಡಿದ್ದರು. ಕೆಲವೇ ದಿನಗಳ ಹಿಂದೆ ಪೊಲೀಸ್ ವರಿಷ್ಠಾಧಿಕಾರಿಗಳ ಅಧಿಕೃತ ನಿವಾಸವನ್ನು ಹಿಂದಿನ ಅಧಿಕಾರಿ ಅನುಚೇತ್‌ರವರು ಸಂಪೂರ್ಣವಾಗಿ ಸುಣ್ಣ ಬಣ್ಣ ಬಳಿದು, ಬೇಕಾದ ಬದಲಾವಣೆಗಳನ್ನು ಮಾಡಿ ಸಿದ್ಧಗೊಳಿಸಿದ್ದರು. ಇದು ವಾರ್ತಿಕಾ ಕಟಿಯಾರ್‌ರವರಿಗೆ ಹಿಡಿಸದೆ ಇದ್ದ ಕಾರಣ, ಮತ್ತೆ ಬದಲಾವಣೆಗಳನ್ನು ಮಾಡಲಾಗಿತ್ತು, ಇದಕ್ಕೆ ಹಣ ಎಲ್ಲಿಂದ ಬಂತು ಎಂಬುದರ ಬಗ್ಗೆ ನಿವೃತ್ತ ಪೊಲೀಸ್ ಅಧಿಕಾರಿಗಳ ಸಂಘ ಬಹಿರಂಗವಾಗಿಯೇ ಪ್ರಶ್ನಿಸಿದೆ. ಮರಳು ಅಭಾವ ಇದ್ದಾಗಲೂ ಮತ್ತು ಮರಳಿಗೆ ಲೈಸನ್ಸ್ ನೀಡದೇ ಇದ್ದಾಗಲೂ ಅವರ ನಿವಾಸದಲ್ಲಿ ಮಾತ್ರ ಮರಳು ಹೇರಳವಾಗಿ ಇತ್ತು, ಇದು ಯಾವ ಅಕ್ರಮವೂ ಅವರ ಲೆಕ್ಕಾಚಾರದಲ್ಲಿ ಅಲ್ಲ.

ಇದರ ನಂತರದ ಸರದಿ ಈಗಷ್ಟೇ ಜಿಲ್ಲೆಗೆ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯಾಗಿ ಬಂದಿರುವ ಕುರ್ಮಾರಾವ್. ಇವರು ಕೂಡ ಐ.ಎ.ಎಸ್. ಅಧಿಕಾರಿ. ಜಿಲ್ಲಾ ಪಂಚಾಯತಿ ಅಧ್ಯಕ್ಷರ ಅಧಿಕೃತ ಕಚೇರಿಗೆ ತೆರಳದೇ ಇರುವಷ್ಟು ಉದ್ಧಟತನ ಇವರದು. ಐ.ಎ.ಎಸ್. ಅಧಿಕಾರಿಯೊಬ್ಬರು ಜಿಲ್ಲಾ ಪಂಚಾಯತ್ ಅಧ್ಯಕ್ಷರ ಕಚೇರಿಗೆ ಹೋಗಲು ಪ್ರೊಟೋಕಾಲ್ ಅಡ್ಡ ಬರುತ್ತದೆ ಎಂದು ಅವರು ತಿಳಿಸಿದ್ದಾರೆ ಎಂದು ಜಿಲ್ಲಾ ಪಂಚಾಯತಿಯ ಅಧ್ಯಕ್ಷರೇ ಜಿಲ್ಲಾ ಪಂಚಾಯತ್ ಸಭೆಯಲ್ಲಿ ತಿಳಿಸಿದ್ದಲ್ಲದೆ, ಜಿಲ್ಲಾ ಪಂಚಾಯತಿಯ ಸದಸ್ಯರೆಲ್ಲರೂ ಅಧಿಕಾರಿಯ ಈ ವರ್ತನೆಯ ವಿರುದ್ಧ ಕೆರಳಿ, ಮುಂದೆ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಅಧ್ಯಕ್ಷರು ಅಧಿಕೃತವಾಗಿ ಜಿಲ್ಲಾ ಪಂಚಾಯತಿಯ ವಿಚಾರಕ್ಕಾಗಿ ಆಹ್ವಾನಿಸಿದಾಗ ಅವರು ನಿರಾಕರಿಸಿದರೆ, ಮುಖ್ಯ ಕಾರ್ಯನಿರ್ವಹಣಾಧಿಕಾರಿಯ ಕಚೇರಿಗೆ ಬೀಗ ಜಡಿಯುವುದಾಗಿ ಘೋಷಿಸಿದ್ದಾರೆ.

ಈ ಘೋಷಣೆಯ ನಂತರ ನಡೆದ ಜಿಲ್ಲಾ ಪಂಚಾಯತಿಯ ಸಭೆಯಲ್ಲಿ ಅಧಿಕಾರಿ ವರ್ಗದವರೆಲ್ಲರೂ ಜಿಲ್ಲಾ ಪಂಚಾಯತ್ ಸಭೆಯನ್ನು ಒಂದು ಕುಂಟು ನೆಪವೊಡ್ಡಿ ಬಹಿಷ್ಕರಿಸುವಂತೆ ಕುರ್ಮಾರಾವ್ ನೋಡಿಕೊಂಡಿದ್ದಾರೆ. ಹಿಂದಿನ ಸಭೆಯ ನಂತರ ಸಭಾಂಗಣದ ಹೊರಗೆ ಸದಸ್ಯರೊಬ್ಬರು ಅಧಿಕಾರಿಯೊಬ್ಬರಿಗೆ ಬೆದರಿಕೆ ಹಾಕಿದರು ಎಂಬ ಕಾರಣವನ್ನು ನೀಡಿ ಈ ಬಹಿಷ್ಕಾರಕ್ಕೆ ಚಾಲನೆಯನ್ನು ನೀಡುವ ಮೂಲಕ, ಚುನಾಯಿತ ಪ್ರತಿನಿಧಿಗಳ ವಿರುದ್ಧ ಸಮರವನ್ನು ಸಾರಲು ಕುರ್ಮಾರಾವ್ ಸಂಚು ಹೂಡಿದ್ದರು. ಅಧಿಕಾರಿಗಳಿಗೆ ರಕ್ಷಣೆ ಇಲ್ಲ, ಹಾಗಾಗಿ ಅವರನ್ನು ರಕ್ಷಿಸುವ ಜವಾಬ್ದಾರಿ ತನ್ನ ಮೇಲೆ ಇದೆ ಎಂದು ಕುರ್ಮಾರಾವ್ ಸಭೆಗೆ ತಿಳಿಸಿದ್ದಾರೆ. ಕೊಡಗು ಜಿಲ್ಲಾ ಪಂಚಾಯತಿಯ ಇತಿಹಾಸದಲ್ಲಿಯೇ ಹಿಂದೆಂದೂ ಇಂತಹ ಘಟನೆ ನಡೆದಿರಲಿಲ್ಲ. ಅಧಿಕಾರಿಗೆ ಜನಪ್ರತಿನಿಧಿ ಬೆದರಿಕೆ ಹಾಕಿದ್ದರೆ ಅಥವ ಹಲ್ಲೆ ಮಾಡಲು ಮುಂದಾಗಿದ್ದರೆ ಅವರು ಪೊಲೀಸ್ ಪುಕಾರು ನೀಡಬೇಕಾಗಿತ್ತು, ಹಾಗೆ ಮಾಡದೆ ಬ್ಲಾಕ್‌ಮೇಲ್ ತಂತ್ರವನ್ನು ಕುರ್ಮಾರಾವ್‌ರವರ ಚಿತಾವಣೆಯಿಂದ ಮಾಡಿದ್ದಾರೆ. ಈ ಬೆದರಿಕೆಗೆ ಜಗ್ಗದ ಚುನಾಯಿತ ಪ್ರತಿನಿಧಿಗಳು ಅಧಿಕಾರಿಗಳು ಸಭೆಗೆ ಬಾರದಿದ್ದಲ್ಲಿ ಅವರ ಅನುಪಸ್ಥಿತಿಯಲ್ಲಿಯೇ ಸಭೆಯನ್ನು ನಡೆಸುವುದಾಗಿ ತಿಳಿಸಿದ್ದರಿಂದ, ಮತ್ತೊಂದು ನಾಟಕವನ್ನು ಆಡಿ ಸಭೆಯಲ್ಲಿ ಅಧಿಕಾರಿಗಳು ಭಾಗವಹಿಸುವಂತೆ ಕುರ್ಮಾರಾವ್ ಮಾಡಿದ್ದಾರೆ. ಈ ಅಧಿಕಾರಿಯು ಜಿಲ್ಲಾಧಿಕಾರಿ ಅನುರಾಗ್ ತಿವಾರಿಯವರ ರೀತಿಯಲ್ಲಿಯೇ ವರ್ತಿಸುತ್ತಿದ್ದಾರೆ. ಇದಕ್ಕೆ ಕಾರಣವೂ ತಿವಾರಿ ಎನ್ನುವುದರಲ್ಲಿ ಸಂಶಯವಿಲ್ಲ.

ಹಿಂದೆ ಬಹಳಷ್ಟು ಜಿಲ್ಲಾಧಿಕಾರಿಗಳು ಕೊಡಗಿನಲ್ಲಿ ಕಾರ್ಯ ನಿರ್ವಹಿಸಿದ್ದಾರೆ. ಹೆಸರು ಗಳಿಸಿ ಹೋಗಿದ್ದಾರೆ. ಆದರೆ ಅಧಿಕಾರದ ಮದ ತಲೆಗೆ ಏರಿಸಿಕೊಂಡ ಜಿಲ್ಲಾಧಿಕಾರಿ ಕೊಡಗಿಗೆ ಪ್ರಥಮ ಬಾರಿಗೆ ಬಂದಿದ್ದಾರೆ. ಈ ಅಧಿಕಾರಿಯಲ್ಲಿ ಎಷ್ಟೊಂದು ಜನದ್ವೇಷಿ ಮನೋಭಾವ ಇದೆ ಎಂದರೆ, ಕೆಲವೇ ಸಮಯದ ಹಿಂದೆ ರಾಜ್ಯದಾದ್ಯಂತ ಅಂಗನವಾಡಿ ಕಾರ್ಯಕರ್ತೆಯರು ರಾಜ್ಯ ಸರಕಾರದ ವಿರುದ್ಧ


ವಾರ್ತಿಕಾ ಕಟಿಯಾರ್

ಪ್ರತಿಭಟನೆಯನ್ನು ನಡೆಸಿದ್ದರು. ಹೀಗೆ ಪ್ರತಿಭಟನೆ ನಡೆಸುವ ವೇಳೆಯಲ್ಲಿ ಕೊಡಗಿನಲ್ಲಿ ಅಹೋರಾತ್ರಿ ಪ್ರತಿಭಟನೆ ನಡೆದಿತ್ತು. ಜಿಲ್ಲಾಧಿಕಾರಿಗಳು ಅಂಗನವಾಡಿ ಕಾರ್ಯಕರ್ತೆಯರ ಅಹವಾಲನ್ನು ಆಲಿಸಲು ಬಂದಿಲ್ಲ ಎನ್ನುವ ಕಾರಣಕ್ಕಾಗಿ ಅವರು ಜಿಲ್ಲಾಧಿಕಾರಿಯ ವಿರುದ್ಧ ಧಿಕ್ಕಾರ ಘೋಷಣೆಯನ್ನು ಕೂಗಿದ್ದರು.


ಮುಂದಿನ ದಿನ ಜಿಲ್ಲಾಧಿಕಾರಿಗಳ ಕಚೇರಿಯಿಂದ ಮಹಿಳಾ ಮತ್ತು ಶಿಶು ಕಲ್ಯಾಣ ಇಲಾಖೆಯ ಅಧಿಕಾರಿಗಳಿಗೆ ನೋಟಿಸು ನೀಡಲಾಗಿತ್ತು, ಅಂಗನವಾಡಿ ಕಾರ್ಯಕರ್ತೆಯರು ಜಿಲ್ಲಾಧಿಕಾರಿಗಳ ವಿರುದ್ಧ ಘೋಷಣೆ ಕೂಗಿದ ಪರಿಣಾಮ, ಕಚೇರಿಯ ಕೆಲಸ ಕಾರ್ಯಗಳಿಗೆ ಅಡಚಣೆಯಾಗಿದೆ. ಶಾಂತಿ ಭಂಗವಾಗಿದೆ. ಹಾಗಾಗಿ ಈ ರೀತಿ ಘೋಷಣೆ ಕೂಗಿದ ಅಂಗನವಾಡಿ ಕಾರ್ಯಕರ್ತೆಯರ ಸಂಘದ ಅಧ್ಯಕ್ಷರು ಮತ್ತು ಪದಾಧಿಕಾರಿಗಳನ್ನು ಸೇವೆಯಿಂದ ವಜಾ ಮಾಡಬೇಕು ಎಂದು ತಿಳಿಸಲಾಗಿತ್ತು, ಅದರಂತೆ ಮಹಿಳಾ ಮತ್ತು ಶಿಶು ಕಲ್ಯಾಣ ಇಲಾಖೆ ಅವರಿಗೆ ನೋಟಿಸು ನೀಡಿತ್ತು, ಜಿಲ್ಲಾಧಿಕಾರಿಗಳು ಗುಬ್ಬಿಯ ಮೇಲೆ ಬ್ರಹ್ಮಾಸ್ತ್ರದ ಪ್ರಯೋಗವನ್ನು ಮಾಡಿದ್ದರು. ಜಿಲ್ಲಾಧಿಕಾರಿಗಳ ವಿರುದ್ಧ ಅಥವ ಸರಕಾರದ ವಿರುದ್ಧ ಧಿಕ್ಕಾರ ಕೂಗುವಂತೆಯೇ ಇಲ್ಲ ಎನ್ನುವಂತಹ ಮನೋಭಾವ ಈ ಜಿಲ್ಲಾಧಿಕಾರಿಯಲ್ಲಿ ಇದೆ ಎಂದರೆ ಆತನ ಮನೋಸ್ಥಿತಿ ಏನು ಎಂಬುದನ್ನು ಅರಿತುಕೊಳ್ಳಬಹುದು. ಆ ಕಾರ್ಯಕರ್ತೆಯರು ತಮ್ಮ ಉದ್ಯೋಗಕ್ಕೆ ಸಂಚಕಾರ ಬರಬಾರದು ಎನ್ನುವ ಕಾರಣಕ್ಕಾಗಿ ತಾವು ಜಿಲ್ಲಾಧಿಕಾರಿಯನ್ನು ನೋಯಿಸುವ ಉದ್ದೇಶದಿಂದ ಧಿಕ್ಕಾರ ಕೂಗಲಿಲ್ಲ ಎಂದು ತಿಳಿಸಿದಾಗ, ಅದನ್ನು ಲಿಖಿತವಾಗಿ ನೀಡಬೇಕು ಮತ್ತು ಅವರು ಜಿಲ್ಲಾಧಿಕಾರಿಗಳಲ್ಲಿ ಕ್ಷಮೆಯನ್ನು ಕೋರಿದ್ದಾರೆ ಎಂದು ಪತ್ರಿಕಾಗೋಷ್ಠಿ ಮಾಡುವ ಮೂಲಕ ತಿಳಿಸಬೇಕು ಎಂದು ಫರ್ಮಾನು ಹೊರಡಿಸಿದ್ದಾರೆ.

ಮಡಿಕೇರಿ ನಗರಸಭೆಯ ತೀರ್ಮಾನದ ವಿರುದ್ಧ ಜಿಲ್ಲಾಧಿಕಾರಿಗಳಿಗೆ ಸಾರ್ವಜನಿಕರೊಬ್ಬರು ಪುಕಾರು ನೀಡಿದ್ದರು. ಆಗ ನಗರಸಭೆಯಲ್ಲಿ ಕುಳಿತಿರುವ ಬಹುತೇಕರು 'ಅಂಡರ್ ಮೆಟ್ರಿಕ್ಯುಲೇಟ್' ಆಗಿರುವಾಗ ಅವರಿಂದ ಇನ್ನು ಯಾವ ರೀತಿಯ ತೀರ್ಮಾನವನ್ನು ನಿರೀಕ್ಷಿಸಬಹುದು ಎಂದು ಬಹಿರಂಗವಾಗಿಯೇ ಜನಪ್ರತಿನಿಧಿಗಳ ವಿರುದ್ಧ ಅವರು ಮಾತನಾಡಿದ್ದರು. ಮಡಿಕೇರಿ ನಗರಸಭೆಯ ಸದಸ್ಯರೊಬ್ಬರು ಜಿಲ್ಲಾ ಕ್ರೀಡಾಂಗಣ ಸಮಿತಿಯ ಸದಸ್ಯರಾಗಿದ್ದರು. ಈ ಸಮಿತಿಗೂ ಜಿಲ್ಲಾಧಿಕಾರಿಗಳೇ ಅಧ್ಯಕ್ಷರು. ಮೈದಾನ ವೊಂದರಲ್ಲಿ ಕಟ್ಟಡವೊಂದನ್ನು ನಿರ್ಮಿಸಲು ಮುಂಧಾದಾಗ ಈ ಸದಸ್ಯರು ಅದನ್ನು ವಿರೋಧಿಸಿದ್ದರು. ಅವರು ವಿರೋಧಿಸಿದರು ಎನ್ನುವ ಕಾರಣಕ್ಕಾಗಿ ಅವರನ್ನು ಸಮಿತಿಯಿಂದ ಯಾವುದೇ ಕಾರಣ ನೀಡದೆ ಜಿಲ್ಲಾಧಿಕಾರಿಗಳು ಕಿತ್ತು ಹಾಕಿದರು.

ತಾನು ಬಹಳ ಚುರುಕಿನ ವ್ಯಕ್ತಿ, ಯಾವುದೇ ಕೆಲಸಗಳನ್ನು ಬಾಕಿ ಇಡುವುದಿಲ್ಲ ಎಂದು ಹೇಳುತ್ತಾ, ಸರಕಾರವನ್ನು, ಜನರನ್ನೂ, ಜನಪ್ರತಿನಿಧಿಗಳನ್ನೂ ಲೇವಡಿ ಮಾಡುವುದರಲ್ಲಿಯೇ ಕಾಲ ಕಳೆಯುವ ತಿವಾರಿ ಬಂದ ನಂತರ, ಕೊಡಗಿನಲ್ಲಿ ಕೃತಕ ಮರಳಿನ ಅಭಾವ ಕಂಡುಬಂದಿದೆ. ಜನರು ಮರಳಿಗಾಗಿ ಹಾಹಾಕಾರ ಹಾಕುತ್ತಿದ್ದಾರೆ. ಪ್ರತಿನಿತ್ಯ ಮರಳು ಅಕ್ರಮವಾಗಿ ಸಾಗಾಟವಾಗುತ್ತಿದೆ. ಹೀಗೆ ಮರಳು ಸಾಗಾಟವಾಗುವಾಗ ವಾಹನವೊಂದು ಅಪಘಾತಕ್ಕೆ ಈಡಾಗಿತ್ತು, ಹಲವಾರು ಬಾರಿ ಈ ರೀತಿ ಅಪಘಾತವಾಗಿದ್ದರಿಂದ ಅದರ ವಿರುದ್ಧ ಪ್ರತಿಭಟನೆಯನ್ನು ನಡೆಸಿದರು, ಪ್ರತಿಭಟನೆ ನಡೆಸಿದ ವ್ಯಕ್ತಿಯನ್ನು ಬಂಧಿಸಿ, ಅವರನ್ನು ಹಿಗ್ಗಾಮುಗ್ಗಾ ಥಳಿಸಲಾಯಿತು.

ಕೆಲವೇ ದಿನಗಳ ಹಿಂದೆ ತನ್ನ ಕಚೇರಿಯಲ್ಲಿ ಖಾಸಗಿಯಾಗಿ ನರ್ಸಿಂಗ್ ಹೋಮ್ ನಡೆಸುತ್ತಿರುವ ಓರ್ವ


ಅಂಗನವಾಡಿ ಕಾರ್ಯಕರ್ತೆಯರ ಧರಣಿ


ಕುರ್ಮಾ ರಾವ್

ಮಹಿಳಾ ವೈದ್ಯೆಯನ್ನು ಬಹಳ ಕೆಟ್ಟದಾಗಿ ನಡೆಸಿಕೊಂಡಿದ್ದರು. ...ಗಳಿಗೊಮ್ಮೆ ಗರ್ಭಿಣಿಯರ ಮತ್ತು ಮಕ್ಕಳ ಸಾವಿನ ...ಗ್ಗೆ ಪರಿಶೀಲನೆ ನಡೆಸಲು ನ್ಯಾಚುರಲ್ ಹೆಲ್ತ್ ಮಿಷಿನ್‌ನ ...ಭೆ ನಡೆಯುವ ವೇಳೆಯಲ್ಲಿ, ಆ ಸಭೆಯಲ್ಲಿ ಮೂರು ...ರ್ಭಿಣಿಯರ ಸಾವಿನ ಕುರಿತ ಮಾಹಿತಿಯನ್ನು ...ಡೆಯಲಾಗಿತ್ತು, ಎರಡು ಸಾವು ಸರಕಾರಿ ಆಸ್ಪತ್ರೆಯಲ್ಲಾಗಿದ್ದರೆ, ...ಂದು ಸಾವು ಖಾಸಗಿ ಆಸ್ಪತ್ರೆಯಲ್ಲಾಗಿತ್ತು, ಖಾಸಗಿ ವೈದ್ಯರನ್ನು ...ಭೆಗೆ ಕರೆಸಲಾಗಿತ್ತು, ಜಿಲ್ಲಾಧಿಕಾರಿಗಳು ಮಾಹಿತಿಯನ್ನು ...ಗ್ರಹಿಸುವಾಗ ಮೃತ ಮಹಿಳೆಯ ಕಡೆಯವರು, ಮಹಿಳೆ ...ಯುವ ವೇಳೆಯಲ್ಲಿ ವೈದ್ಯರು ಇರಲಿಲ್ಲ ಎಂದು ...ಳಿದರು. ತಕ್ಷಣ ಆ ವೈದ್ಯರು ನೀವು ಅಲ್ಲಿ ಇದ್ದಿರೋ ...ಂದು ಪ್ರಶ್ನಿಸಿದರು. ಇದರಿಂದ ಕೆರಳಿದ ಜಿಲ್ಲಾಧಿಕಾರಿ ...ನುರಾಗ್ ತಿವಾರಿ, "ಯೂ ಡೋಂಟ್ ನೋ ಹೌ ಟು ...ಕ್ ಇನ್ ಫ್ರಂಟ್ ಆಫ್ ಅ ಡಿಸಿ" ಎಂದು ಹೇಳಿದ್ದಲ್ಲದೆ, ...ಚ್ಚು ಮಾತನಾಡಿದರೆ ನಿಮ್ಮನ್ನು ಬಂಧಿಸಲು ಆದೇಶ ...ಹೊರಡಿಸುತ್ತೇನೆ" ಎಂಬ ಬೆದರಿಕೆಯನ್ನು ಕೂಡ ಹಾಕಿದ್ದರು ...ತ್ತು ಈ ಸಾವಿನ ಕುರಿತು ವಿಚಾರಣೆ ನಡೆಸಲು ...ದೇಶವನ್ನು ಕೂಡ ನೀಡಿದ್ದಾರೆ. ವೈದ್ಯರನ್ನು ಸಭೆಯಿಂದ ...ಹೊರಗೆ ಕಳುಹಿಸಿದ್ದಾರೆ. ವಿಚಾರಣೆಯಲ್ಲಿ ವೈದ್ಯರ ತಪ್ಪೇನೂ ...ಲ್ಲ ಎಂಬ ಅಂಶ ಗೊತ್ತಾಗಿದೆ. ಆದರೆ ವೈದ್ಯರಿಗೆ ...ಲ್ಲಾಧಿಕಾರಿಯಿಂದ ಆದ ಅಪಮಾನಕ್ಕೆ ಪರಿಹಾರವೇನು ...ಎಂಬುದು ಮಾತ್ರ ತಿಳಿದಿಲ್ಲ.

ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಕಡತಗಳ ರಾಶಿಯೇ ...ದ್ದಿದೆ. ಮನೆಯಲ್ಲಿಯೂ ರಾಶಿ ರಾಶಿ ಕಡತಗಳು ಇವೆ. ...ಮ್ಮ ಕೆಲಸವಾಗಿಲ್ಲ ಎಂದು ಸಾರ್ವಜನಿಕರು ...ಲ್ಲಾಧಿಕಾರಿಗಳನ್ನು ಭೇಟಿ ಮಾಡಿದರೆ, ನನಗೆ ನಿಮ್ಮ ...ಡತವನ್ನು ನೋಡಲು ಸಮಯವಿಲ್ಲ ಎಂದು ಹೇಳುತ್ತಾರೆ. ...ಂದು ವೇಳೆ ಪ್ರಭಾವಿ ವ್ಯಕ್ತಿಗಳು ಹೋದರೆ ಅವರ

ಉತ್ತರವನ್ನು ನೀಡಿಲ್ಲ, ತನಗೆ ಒಂದು ವರ್ಷದಲ್ಲಿ ಕೇವಲ ಒಂದು ಸಾವಿರ ಅರ್ಜಿ ಮಾತ್ರ ಬಂದಿದೆ ಎಂದು ಜಿಲ್ಲಾಧಿಕಾರಿ ಹೇಳುತ್ತಾರೆ. ಇದನ್ನು ನಂಬಬಹುದೇ?


ಕಚೇರಿಯಲ್ಲಿ ಕೆಲವು ಸಿಬ್ಬಂದಿಗಳು ಇವರ ಅವಕೃಪೆಗೆ ಒಳಗಾದರೆ, ಮತ್ತೆ ಕೆಲವರು ಇವರ ಮರ್ಜಿಯಲ್ಲಿ ಇದ್ದಾರೆ. ಹಾಗಾಗಿ ಇವರ ಅಣತಿಯಂತೆ ಕಾರ್ಯ ನಿರ್ವಹಿಸುವವರು ಹದಿನೈದು ವರ್ಷವಾದರೂ ಒಂದೇ ಜಾಗದಲ್ಲಿ ಕುಕ್ಕರಿಸಿದ್ದಾರೆ.

ಇವೆಲ್ಲದರ ನಡುವೆ ಒಡೆದು ಆಳುವ ನೀತಿ ಇವರಿಗೆ ಬಹಳ ಚೆನ್ನಾಗಿ ತಿಳಿದಿದೆ. ತಾನು ಆಡಳಿತ ಪಕ್ಷದ ಅಣತಿಯಂತೆ ಕಾರ್ಯ ನಿರ್ವಹಿಸುತ್ತೇನೆ ಎಂದು ವಿರೋಧ ಪಕ್ಷದ ಜನಪ್ರತಿನಿಧಿಗಳಿಗೆ ಅನ್ನಿಸುವ ರೀತಿಯಲ್ಲಿ ಕಾರ್ಯ ನಿರ್ವಹಿಸುತ್ತಾರೆ. ವಿರೋಧ ಪಕ್ಷದವರ ಜೊತೆಯಲ್ಲಿ ಜಿಲ್ಲಾಧಿಕಾರಿಗಳು ಚೆನ್ನಾಗಿ ಇದ್ದಾರೆ ಎನ್ನುವಂತೆ ಆಡಳಿತ ಪಕ್ಷಕ್ಕೆ ಅನ್ನಿಸುವ ರೀತಿಯಲ್ಲಿ ನಾಟಕವನ್ನು ಆಡುತ್ತಾರೆ. ಇವೆಲ್ಲದರ ನಡುವೆ ಮಾಜಿ ಸಂಸದ ವಿಶ್ವನಾಥ್‌ರವರಿಗೆ ಜಿಹುಜೂರ್ ಎಂದು ಹೇಳುತ್ತಾ, ಹಾಲಿ ಸಂಸದ ಪ್ರತಾಪ್ ಸಿಂಹರವರ ಜೊತೆಯಲ್ಲಿ ಚಕ್ಕಂದ ಆಡುವ ರೀತಿಯಲ್ಲಿ ವರ್ತಿಸುತ್ತಾರೆ.

ಇವೆಲ್ಲವನ್ನೂ ನೋಡಿಕೊಂಡು ಆಡಳಿತ ಪಕ್ಷ ಮತ್ತು ವಿರೋಧ ಪಕ್ಷ ಒಂದು ರೀತಿಯಲ್ಲಿ ಅಸಹಾಯಕರಂತೆ ಇದ್ದಾರೆ. ಈ ಅಧಿಕಾರಿ ತಾನು ಜನಸೇವಕ ಎಂಬುದನ್ನು ಮರೆತು, ಜನರು ಮತ್ತು ಜನಪ್ರತಿನಿಧಿಗಳು ತನ್ನ ಗುಲಾಮರು. ಅವರು ತನಗೆ ಗುಲಾಮಗಿರಿ ಮಾಡಲು ಇರುವವರು ಎಂದು ಅವರ ಅಸಹಾಯಕತೆಯ ಲಾಭವನ್ನು ಪಡೆಯುತ್ತಿದ್ದಾರೆ.

ಕೊಡಗಿನಲ್ಲಿ ಕಾಂಗ್ರೆಸ್ ಪಕ್ಷವನ್ನು ಸೋಲಿಸಲು ಬೇರೆ ಯಾರೂ ಬೇಕಾಗಿಲ್ಲ, ಈ ಜಿಲ್ಲಾಧಿಕಾರಿ ಮತ್ತಷ್ಟು ದಿನಗಳ ಕಾಲ ಜಿಲ್ಲೆಯಲ್ಲಿ ಇದ್ದರೆ, ಕಾಂಗ್ರೆಸ್ ಪಕ್ಷ ಜಿಲ್ಲೆಯ ಮಟ್ಟಿಗೆ ನಿರ್ನಾಮವಾಗುವುದರಲ್ಲಿ ಸಂಶಯವಿಲ್ಲ, ಮುಂಬರುವ ಗ್ರಾಮ ಪಂಚಾಯತಿ ಚುನಾವಣೆಯಲ್ಲಿ ಇದರ ನೇರ ಪರಿಣಾಮವನ್ನು ಕಾಣಬಹುದಾಗಿದೆ. ಜಿಲ್ಲಾ ಉಸ್ತುವಾರಿ ಸಚಿವ ಕೆ.ಜೆ. ಜಾರ್ಜ್‌ರವರು ಮೈಕೊಡವಿ ನಿಂತು ಇಂತಹ ಗುಲಾಮಗಿರಿ ಮನೋಭಾವದ ಸರ್ವಾಧಿಕಾರಿ ಧೋರಣೆಯ ಅಧಿಕಾರಿಯನ್ನು ಅಟ್ಟದಿದ್ದರೆ ಅವರಿಗೂ ಅಪಾಯ ಖಂಡಿತವಾಗಿಯೂ ಇದ್ದೇ ಇರುತ್ತದೆ. ಇಂತಹ ಅಧಿಕಾರಿಯನ್ನು ಜಿಲ್ಲೆಯಲ್ಲಿ ಇಟ್ಟುಕೊಂಡಿರುವವರನ್ನು ಪ್ರಶ್ನಿಸಬೇಕು ಎನ್ನುವುದು ಪ್ರಜ್ಞಾವಂತರ ಅನಿಸಿಕೆಯಾಗಿದೆ.

ಐ.ಎ.ಎಸ್. ಅಧಿಕಾರಿಗಳು ಡಿ. ಕೆ.ರವಿ ಸಾವಿನ


ಕೊಡಗಿನ ಜಿಲ್ಲಾಧಿಕಾರಿಗಳ (ಹೊಸ) ಕಚೇರಿ

...ಲಸ ತೀರಾ ಆಗುವುದೇ ಇಲ್ಲ. ಇನ್ನು ತಮ್ಮ ಕೆಲಸವಾಗಿಲ್ಲ ...ಎಂದು ಜನಪ್ರತಿನಿಧಿಗಳಿಂದ ಅಥವ ಸಚಿವರ ಮೂಲಕ ...ಹೇಳಿಸಿದರೆ ಅಲ್ಲಿಗೆ ಆ ಕಡತದ ಗತಿ ಮುಗಿದಂತೆ. ಆ ...ಕಡತವೇ ಕಾಣೆಯಾಗುತ್ತದೆ ಅಥವ ಮೂಲೆ ಸೇರುತ್ತದೆ. ...ಈ ಜಿಲ್ಲಾ ಉಸ್ತುವಾರಿ ಸಚಿವ ಕೆ.ಜೆ. ಜಾರ್ಜ್ ಹೇಳಿದರೂ, ...ಕೆಲಸಗಳು ಆಗುತ್ತಿಲ್ಲ, ಅಷ್ಟರಮಟ್ಟಿಗೆ ಅನುರಾಗ್ ...ವಾರಿಯವರಿಗೆ ಜನಪ್ರತಿನಿಧಿಗಳ ಬಗ್ಗೆ ಅಸಡ್ಡೆ ಮತ್ತು ...ಅಸಹ್ಯತನವಿದೆ.

ಜಿಲ್ಲಾಧಿಕಾರಿಯಾದವರು ಜಿಲ್ಲೆಯ ಉದ್ದಗಲಕ್ಕೂ ...ಪ್ರವಾಸ ಮಾಡಬೇಕು. ಆದರೆ ಕಚೇರಿಯಲ್ಲಿಯೂ ಕೂರದೆ, ...ಸ್ವ ಅಧಿಕೃತ ನಿವಾಸದಲ್ಲೇ ಹೆಚ್ಚು ಸಮಯ ಕಳೆಯುವ ...ವರು. ಕಳೆದ ಒಂದು ವರ್ಷದಲ್ಲಿ ಕೇವಲ ಒಂದು ...ಬಾರಿ ... ಕಚೇರಿಯನ್ನು ಪರಿಶೀಲಿಸಿರುತ್ತಾರೆ ಎಂದರೆ ...ಇವರ ಕಾರ್ಯವೈಖರಿ ಹೇಗಿದೆ ಎಂದು ...ಅಂದಾಜಿಸಬಹುದು. ನಿವೃತ್ತ ತಹಸೀಲ್ದಾರ್ ಟಿ.ಸಿ. ತಮ್ಮಯ್ಯ ...ಎಂಬುವರು ಕೊಡಗಿನಲ್ಲಿ ಹಿರಿಯ ಅಧಿಕಾರಿಗಳ ಅಸ್ತಿತ್ವದ ...ಅರಿವೇ ಆಗುವುದಿಲ್ಲ ಎಂದು ಹೇಳುತ್ತಾರೆ. ಒಂದು ...ಡಿ.ಸಿ. ಪಡೆಯಲು ಒಂದು ದಿನವನ್ನು ವ್ಯಯಿಸಬೇಕಾದ ...ಸ್ಥಿತಿ ಇದೆ ಎಂದು ಅವರು ಹೇಳುತ್ತಾರೆ. ಜಿಲ್ಲಾಧಿಕಾರಿಗಳ ...ಕಚೇರಿಯಲ್ಲಿ ಎಷ್ಟು ಪ್ರಕರಣಗಳು ಬಾಕಿ ಇದೆ ಎಂದು ... ಹಕ್ಕು ಕಾಯ್ದೆಯಲ್ಲಿ ಬಯಸಿದಾಗ, ಅದನ್ನು ...ಮಾಹಿತಿದಾರರಿಗೆ ಜಿಲ್ಲಾಧಿಕಾರಿಗಳು ರವಾನೆ ಮಾಡಿದ್ದಾರೆ. ...ತ್ತು ತಿಂಗಳು ಕಳೆದರೂ ತಹಸೀಲ್ದಾರು ...

ಸಂದರ್ಭದಲ್ಲಿ ನಡೆದುಕೊಂಡ ರೀತಿ ಐ.ಎ.ಎಸ್. ಅಧಿಕಾರಿಗಳ ಗೌರವವನ್ನು ಮಾತ್ರವಲ್ಲ, ಆಡಳಿತ ನಡೆಸುವಾಗ ರವಿ ತೋರಿದ ದಕ್ಷತೆಗೂ ಮಸಿ ಬಳಿಯುವ ಕೆಲಸವನ್ನು ಅವರು ಮಾಡಿದರು. ಐ.ಎ.ಎಸ್. ಅಧಿಕಾರಿಗಳ ಪರ ಮಾತನಾಡುವ ಭರಾಟೆಯಲ್ಲಿ ಕೆಲ ಮಾಧ್ಯಮಗಳು ನಾವು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಇದ್ದೇವೆ ಎಂಬುದನ್ನು ಮರೆತು ಅಧಿಕಾರಿಶಾಹಿ ವ್ಯವಸ್ಥೆಯ ಪರವಾಗಿ ನಿಂತರು. ಇದರಿಂದ ಆಗಬಹುದಾದ ಅಪಾಯದ ಅರಿವು ಅವರಿಗೆ ಇದ್ದಿದ್ದರೆ ಖಂಡಿತವಾಗಿ ಅವರು ಈ ರೀತಿ ಮಾಡುತ್ತಿರಲಿಲ್ಲ.

ಬ್ರಿಟಿಷರ ಪಳೆಯುಳಿಕೆ ಐ.ಎ.ಎಸ್., ಐ.ಪಿ.ಎಸ್, ಹಾಗೂ ಐ.ಎಫ್.ಎಸ್. ಆಗಿದೆ. ಬ್ರಿಟಿಷರು ಸಾರ್ವಜನಿಕರನ್ನು ತಮ್ಮ ಗುಲಾಮರು ಎಂದು ನಡೆಸಿಕೊಂಡಿದ್ದರು. ಜನರಿಗೆ ಸ್ವಾತಂತ್ರ್ಯವಿರಲಿಲ್ಲ, ಹಾಗಾಗಿ ಜನರಲ್ಲಿ ಒಂದು ಭಯದ ವಾತಾವರಣ ಸೃಷ್ಟಿಸಲು ಈ ಅಧಿಕಾರಿಶಾಹಿ ವ್ಯವಸ್ಥೆಯನ್ನು ಅವರು ಮಾಡಿದ್ದರು. ಆದರೆ ಸ್ವಾತಂತ್ರ್ಯ ಬಂದ ನಂತರವೂ ಇದೇ ಪರಿಸ್ಥಿತಿ ಮುಂದುವರೆಯುತ್ತಿದೆ ಎಂದಾದರೆ, ನಮ್ಮ ದೇಶಕ್ಕೆ ಈ ವ್ಯವಸ್ಥೆಯ ಅಗತ್ಯತೆ ಇದೆಯೇ ಎಂಬುದರ ಬಗ್ಗೆ ಸಾರ್ವಜನಿಕ ಚರ್ಚೆಗಳು ನಡೆಯಬೇಕು ಮತ್ತು ಈ ಅಧಿಕಾರಿಶಾಹಿ ವ್ಯವಸ್ಥೆಯನ್ನು ಹೋಗಲಾಡಿಸಬೇಕು. ಇಲ್ಲದಿದ್ದರೆ ಜನರು ಗುಲಾಮರಾಗಿಯೇ ಉಳಿಯಬೇಕಾಗುತ್ತದೆ.


■ ಬಿ.ಎನ್. ಮನುಶೆಣೈ

"ರಾಘುಗಿಂತ ಮಠದ ಹೋರಿಯೇ ವಾಸಿ"

ಥೂತ್ತೇರಿ

ಯಾಹೂ

"ನನ್ನ ಮಗನನ್ನು ಪ್ರೀತಿಯಿಂದ ಹೆತ್ತು ಮುಕ್ಕಿ ನೀಡಿದ್ದೇನೆ. ಅವನನ್ನು ಬಳಸಿಕೊಂಡು ನೀವೂ ಬೆಳೆಯಿರಿ. ಅವನಿಗೆ ತೊಂದರೆ ಕೊಡಬೇಡಿ" ಹೀಗೆಂದ ಮಹಾಮಾತೆ ರಾಘವೇಶ್ವರನ ತಾಯಿಯಂತಲ್ಲ, ಆ ತಾಯಿಯ ಮಾತು ಕೇಳಿದ ದೀವರು ಅದರಲ್ಲೂ ಸಿಗಂದೂರೇಶ್ವರಿಯ ನಿಜವಾದ ಭಕ್ತರು "ಆಹಾ, ಎಂತಹ ಮಗನನ್ನು ಹೆತ್ತು ಕೊಟ್ಟೆ ತಾಯಿ. ಆತನಿಗಿಂತ ಆತನ ಆಶ್ರಮದ ಹೋರಿಗಳೇ ಪರವಾಗಿಲ್ಲ, ಹಸು ಬೆದೆಗೆ ಬಂದಾಗಲಷ್ಟೇ ಹಾರುತ್ತವೆ. ಅದೂ ಹಸುವಿನ ಮರ್ಮಾಂಗವನ್ನು ಮೂಸಿ, ಮುಗಿಲಿಗೆ ಮುಸುಡಿ ಎತ್ತಿ ಪರೀಕ್ಷಿಸಿ, ಹಾರುತ್ತವೆ. ನಿನ್ನ ಮಗನಿಗೆ



ಅಂತಹ ತಿಳಿವಳಿಕೆಯೂ ಇರಲಿಲ್ಲ. ಕಾವಿ ಬಿಚ್ಚಿದೆ ಹಾರಿದ ಅನ್ನುವಂತೆ ಮಾಡಿ, ಮಠದ ಮಾನವನ್ನು ಹರಾಜು ಹಾಕಿ, ಹವ್ಯಕರ ಘನತೆಯನ್ನು ಕಾಲುಕಸ ಮಾಡಿದ ಆತನ ಸಾಹಸಕ್ಕೆ ಮರುಗಿರುವ ನಿನ್ನ ಮಮತೆಯ ಮಹಾಪೂರವನ್ನು ಕೇಳಿದರೆ, ಮಹಾಭಾರತದ ಗಾಂಧಾರಿಯ ನೆನಪಾಗುತ್ತೆ ತಾಯಿ. ಗಾಂಧಾರಿಯೂ ಅಷ್ಟೆ. ತುಂಬಿದ-ಸಭೆಯಲ್ಲಿ ಬೆತ್ತಲೆಗೊಂಡ ದ್ರೌಪದಿಯ ಬಳಿಗೋಗಿ ಸಂತೈಸಿದಳೋ ಹೇಗೋ ಗೊತ್ತಿಲ್ಲ, ಆದರೂ ಯುದ್ಧರಂಗದಲ್ಲಿ ಭೀಮನಿಂದ ತೊಡೆ ಮುರಿಸಿಕೊಂಡು ಮಲಗಿದ್ದ ಮಗನ ತಲೆಯನ್ನು ತೊಡೆಯ ಮೇಲಿಟ್ಟು, ಸದ್ದು ಮಾಡದೆ ಅಳುತ್ತಾಳೆ. ಆಗ ದುರ್ಯೋಧನ ಇದು ತನ್ನ ಧರ್ಮಪತ್ನಿಯಾದ ಭಾನುಮತಿಯ ದುಃಖದ ಸದ್ದು ಇರಬೇಕೆಂದು ಅನುಮಾನಿಸುತ್ತಾನೆ. ಆದರೆ ಅದು ಸುಳ್ಳಾಗಿ ತಾಯಿ ಗಾಂಧಾರಿಯ ಕಣ್ಣೀರೆಂದು ಗೊತ್ತಾಗಿ "ಈ ಜಗತ್ತಿನಲ್ಲಿ ಎಲ್ಲರಿಂದಲೂ ತಿರಸ್ಕರಿಸಲ್ಪಟ್ಟರೂ ತಾಯಿ ಮಮತೆ ಮಾತ್ರ ನಮ್ಮನ್ನು ಪೊರೆಯುತ್ತದೆ. ಆಹಾ ಮಾತೃಪ್ರೇಮಕ್ಕೆ ಮಿಗಿಲಾದುದಿಲ್ಲ" ಎಂದನಂತೆ. ಅಂತಹ ಆಧುನಿಕ ಗಾಂಧಾರಿಯನ್ನು ತಮ್ಮಲ್ಲಿ ಕಂಡೆವಲ್ಲ" ಎನ್ನಲಿಲ್ಲವಂತಲ್ಲ ಥೂತ್ತೇರಿ!

****

ಶರಾವತಿಯ ಹಿನ್ನೀರಿನಲ್ಲಿ ಮುಳುಗಿಹೋಗಲಿದ್ದ ಸಿಗಂದೂರು ಚೌಡೇಶ್ವರಿಯ ವಿಗ್ರಹವನ್ನು ದೀವರ ರಾಮಪ್ಪ ಹಳ್ಳದಿಂದ ಎತ್ತಿಕೊಂಡು ಬಂದು ದಿಬ್ಬದ ಮೇಲಿಟ್ಟ. ಅದಕ್ಕೆ ಕುರಿ, ಕೋಳಿ, ಮೇಕೆಯನ್ನು ಬಲಿ ಕೊಟ್ಟು ಬಲಿಯ ಪಾಪವನ್ನು ಅಮ್ಮನಿಗೆ ಅರ್ಪಿಸಿ, ಬಾಡನ್ನು ಮಾತ್ರ ಸೇವಿಸುತ್ತ ಬಂದ. ಅಮ್ಮನ ಭಕ್ತರೂ ಹಾಗೇ ಮಾಡುತ್ತ ಬಂದರು. ಅಮ್ಮನ ಪೂಜೆ ಸಾಂಗವಾಗಿ ನಡೆಯಲೆಂದು ಸಾಗರದ ಕಡೆಯ ಭಟ್ಟನನ್ನು ತಂದಿಟ್ಟ. ಅಷ್ಟೆ, ಮುಂದೆ ಏನಾಯಿತೆಂದರೆ "ಆಡು ಆನೆಯ ನುಂಗಿ ಗೋಡೆ ಸುಣ್ಣವನುಂಗಿ" ಎನ್ನುವಂತಾಯಿತು. ಕಡೆಗೆ ಸಿಗಂದೂರಮ್ಮನ ಗರ್ಭಗುಡಿಗೆ ರಾಘವನ ಪಾದಾರ್ಪಣವಾಯ್ತಂತಲ್ಲಾ, ಆಗ "ಹೊಳ್ಳು ಒನಕೆಯ ನುಂಗಿ, ಕಲ್ಲು ಗೂಟವನುಂಗಿ" ಎಂಬಂತಾಗಿ ಇಡೀ ಸಿಗಂದೂರೇಶ್ವರಿಯ ಪ್ರಾಂತ್ಯವೇ ರಾಘವೇಶ್ವರನ ಕಡೆಯವರ ಭೋಜನದ ತಾಣವಾಗಿ ಹೋಯ್ತಂತಲ್ಲಾ, ಆಗ ಸಹಜವಾಗಿ ಕುರಿ, ಕೋಳಿಯ ಬಲಿಯಾಚರಣೆಯ ಜನರನ್ನು ದೇವಸ್ಥಾನದಿಂದ ದೂರ ಕಳಿಸಿ "ಯಾರಿಗೂ ಕಾಣದಂತೆ ಅದೇನೊ ಮಾಡಿಕೊಳ್ಳಿ, ಅಮ್ಮನ ದೇವಸ್ಥಾನದ ಆವರಣ ಅಸಹ್ಯ ಮಾಡಬೇಡಿ" ಎನ್ನಲಾಗಿ, ದೀವರು ಅದನ್ನು ಒಪ್ಪಿಕೊಂಡು ಕೀಳರಿಮೆಯಿಂದಲೇ ಬಾಡು ತಿನ್ನುತ್ತ ಬದುಕುತ್ತಿದ್ದರಂತಲ್ಲಾ, ಆದರೀಗ ಎಚ್ಚೆತ್ತ ತರುಣ ದೀವರು ಸತ್ಯಸಂಗತಿ ಬಹಿರಂಗಗೊಳಿಸಿ, ರಾಘವನಿಗೆ ಸೆಡ್ಡು ಹೊಡೆದರಂತಲ್ಲಾ, ಪರಿಣಾಮವಾಗಿ ರಾಘು ಮೂಲಭಕ್ತ ರಾಮಪ್ಪನನ್ನೆ ಹೈಜಾಕ್ ಮಾಡಿದ್ದಾನಂತಲ್ಲಾ, ಪುರೋಹಿತಶಾಹಿಗಳ ಈ ಕುತಂತ್ರಕ್ಕೆ ಬೆಚ್ಚಿದ ದೀವರ ಹುಡುಗರು ದಿಕ್ಕುಗಾಣದಂತಾಗಿ ಸುಮ್ಮನಾದಾಗ, ರಾಘವನ ಜನನೀಜೀವನ ಕಾರ್ಯಕ್ರಮ ಅಲ್ಲಿ ಸಾಂಗವಾಗಿ ನೆರವೇರಿತಂತಲ್ಲಾ, ಥೂತ್ತೇರಿ!

****

ಚಿಕ್ಕಮಗಳೂರು ಕಡೆಯ ಸುದ್ದಿ ಶಾನೆ ಸ್ವಾರಸ್ಯವಾಗಿದೆಯಂತಲ್ಲ, ಅಲ್ಲಿ ನಡೆದ ಅಂಬೇಡ್ಕರ್ ಜಯಂತಿಯಂದು ಮಾತನಾಡಿದ ಚೀಟಿ ರವಿ ಎಂಬ ಸಾಮಾಜಿಕ ಸಮಸ್ಯೆ "ದಲಿತರನ್ನು ಮನೆಗೆ ಕರೆದು ಊಟ ಹಾಕಿದ್ದೇನೆ" ಎಂಬ ಬೆಚ್ಚಿ ಬೀಳಿಸುವ ಸಂಗತಿಯನ್ನು ಬಹಿರಂಗಗೊಳಿಸಿದನಂತಲ್ಲಾ, ಸಾಮಾನ್ಯವಾಗಿ ಮಲತುಂಬಿದ ತಲೆಗಳು ಹೀಗೆ ಯೋಚಿಸುತ್ತವೆ. ತೋರಿಕೆಗೆ ಇಂತಹ ಕಾರ್ಯಕ್ರಮ ಮಾಡುತ್ತವೆ. ಇದರಿಂದ ಅಸ್ಪೃಶ್ಯತೆ ಹಾಗೇ ಉಳಿಯುತ್ತದೆ. ಏಕೆಂದರೆ ತನ್ನ ದೈನಂದಿನ ಬದುಕಿನಲ್ಲಿ ಜಾತಿಯತೆ, ಅಸ್ಪೃಶ್ಯತೆ ಆಚರಣೆಯನ್ನು ತಲೆಯ ತುಂಬ ತುಂಬಿಕೊಂಡ ಸಿಟಿ ರವಿಯಂತವರಿರುವವರೆಗೂ ಅಸ್ಪೃಶ್ಯತೆ ಹೋಗುವುದಿಲ್ಲ ಎಂದು ಮೋಟಮ್ಮ ಗುಟುರು ಹಾಕಿದರಂತಲ್ಲಾ, ಅದೇ ಹೊತ್ತಿಗೆ ಅವರ ಮನಸ್ಸಿಗೆ ಕಿರಿಕಿರಿಯಾಗುವಂತೆ ಆಂಜನೇಯ ಬೆಂಗಳೂರಿನಿಂದ ಹಾರಿಬಂದು ಹಾಡಿಯಲ್ಲಿ ಮಲಗಿ ಹೋದರಂತಲ್ಲಾ, ಹೇಳಿಕೇಳಿ ಮೂಡಿಗೆರೆ ಮೀಸಲು ಕ್ಷೇತ್ರ, ಇಲ್ಲಿಂದ ಕೆ.ಎಚ್. ರಂಗನಾಥ್, ತಿಪ್ಪಯ್ಯ, ಮೋಟಮ್ಮ, ನಿಂಗಯ್ಯ ಇಂತಹ ಘಟಾನುಘಟಿಗಳು ಆರಿಸಿ ಬಂದು ಮಂತ್ರಿಗಳಾಗಿ ಹೋದ ಕ್ಷೇತ್ರ, ಇಲ್ಲಿಗೆ ಬಂದು ಆಂಜನೇಯ ಮಲಗಬೇಕಾದರೆ ನಮ್ಮನ್ನು ಕೇಳಿ ಮಲಗಬೇಕು. ಹೀಗೆ ನಾವೆಲ್ಲ ಚಿಕ್ಕಮಗಳೂರಲ್ಲಿ ನಮ್ಮ ಜೆಡಿಎಸ್‌ನ ಮಹಾನಾಯಕರಾದ ನಟಿ ಭಯಂಕರ ಶಿವರಾಂ ನೇತೃತ್ವದಲ್ಲಿ ದಲಿತ ಮುಖ್ಯಮಂತ್ರಿ ಬೇಡಿಕೆ ಸಭೆ ನಡೆಸುತ್ತಿರಬೇಕಾದರೆ, ಆಂಜನೇಯನ ಈ ಕ್ರಮ ಪುರಾಣದ ಆಂಜನೇಯನಿಗೆ ಮಾಡುವ ಅವಮಾನ ಎಂದರಂತಲ್ಲ, ಥೂತ್ತೇರಿ!!! ■


ಮತ್ತೆ ಹೆಡೆಯೆತ್ತಿದ ಜಿದ್ದು!



ಇತಿಹಾಸ ಮರುಕಳಿಸುತ್ತದೆಯಂತೆ. ಕಾಲಗರ್ಭದೊಳಗೆ ಎಂದೋ ಹೂತುಹೋಗಿದ್ದ ವಿಷ ಬೀಜಕ್ಕೆ ಇನ್ಯಾವುದೋ ಮಳೆ ಬಿದ್ದಾಕ್ಷಣ ಮೊಳೆತ ಚಿಗುರಿನಂತೆ ಹಳೆಯ ಜಿದ್ದು ಮತ್ತೆ ಹೆಡೆಯೆತ್ತಿದೆ!

ಅದಕ್ಕೀಗ ಹೊಸ ಕಾರಣ ಸಿಕ್ಕಿದೆ.

ವರನಟ ರಾಜ್ ಮತ್ತೆ ಅವತರಿಸಿ ಬಂದಂತೆ ಪುನೀತ್. ವಾರಸುದಾರರಿಲ್ಲದ ವಿಷ್ಣು ಪೋಷಾಕಿನಲ್ಲಿ ಸುದೀಪ್. ಶಿಥಿಲಗೊಂಡ ಅಂಬಿ ಇಮೇಜಿಗೆ ಸುಣ್ಣ ಬಣ್ಣ ಬಳಿದಂತೆ ದರ್ಶನ್. ಟೈಗರ್ ಪ್ರಭಾಕರ್ ನಾನೇ ಎನ್ನುವ ದುನಿಯಾ ವಿಜಿ (?). ಆದರೆ ಅಭಿಮಾನಿಗಳ ಮನಸ್ಥಿತಿ ಮಾತ್ರ ಅವತ್ತಿಗೂ ಇವತ್ತಿಗೂ ಒಂದೇ ರೀತಿ ಅದೇ ನೀತಿ!





ಮೊನ್ನೆ ಅಂದರೆ ಏಪ್ರಿಲ್ 10ರ ಶುಕ್ರವಾರ ಮೆಜೆಸ್ಟಿಕ್‌ನ ಪ್ರತಿಷ್ಠಿತ ಸಂತೋಷ್ ಚಿತ್ರಮಂದಿರದಲ್ಲಿ ಕ್ರುದ್ಧ ಪುನೀತ್ ಅಭಿಮಾನಿಗಳ ಆಕ್ರೋಶಕ್ಕೆ ಒಂದಿಬ್ಬರು ಟಿವಿ ವರದಿಗಾರರ ತಲೆಬುರುಡೆ ತೂತಾಯಿತೇನೋ ನಿಜ. ಕೆಲ ಪ್ರೇಕ್ಷಕರಿಗೂ ಸಣ್ಣ ಪುಟ್ಟ ಪೆಟ್ಟಾಗಿರಬಹುದು. ಒಡೆದ ಕಿಟಕಿ ಗಾಜುಗಳು, ಕೋಲಾ ಬಾಟಲು ಚೂರುಗಳು, ಪ್ರೊಜೆಕ್ಷನ್ ರೂಮಿಗೇ ನುಗ್ಗಿದ ರೊಚ್ಚಿಗೆದ್ದ ಭಕ್ತರು, ತೆರೆ ಮೇಲೆ ಸುದೀಪ್ ಮುಖ ಕಂಡಿದ್ದೇ ತೂರಾಡಿದ ಚಪ್ಪಲಿಗಳು ಮತ್ತು ಧಾವಿಸಿಬಂದ ಡಜನ್ನುಗಟ್ಟಲೇ ಪೊಲೀಸರ ಲಾಠಿಗಳೆಲ್ಲವೂ ಪತ್ರಿಕೆಗಳ ಯಾವುದೋ ಪುಟದ ಯಾವುದೋ ಮೂಲೆಯಲ್ಲಿ ಇಣುಕಿ ಮರೆಯಾಗಿರಬಹುದು.

ಹಾಗಂತ ಬೆಂಕಿಯಿನ್ನೂ ಆರಿಲ್ಲ, ಯಾವ ಗಳಿಗೆಯಲ್ಲಿ ಮತ್ತೆ ಹೊಗೆಯಾಡುತ್ತೋ. ಎಲ್ಲಿಗೆ ನಿಲ್ಲುತ್ತೋ....?

ರಣವಿಕ್ರಮ

ವರನಟ ರಾಜ್ ಆಗಲಿ ಸಾಹಸಸಿಂಹ ವಿಷ್ಣುವಾಗಲಿ ಇಂದು ಬದುಕಿಲ್ಲ, ಆದರೆ Legacyಯಿದೆಯಲ್ಲ, ಅಂದರೆ ಉತ್ತರಾಧಿಕಾರ. ಅದು ಅನುವಂಶಿಕವೆಂಬಂತೆ ಪುನರಾವರ್ತನೆಗೊಳ್ಳುತ್ತದೆ. ಅಭಿಮಾನಿಗಳ ಮನಸ್ಥಿತಿ ಮತ್ತು ಪ್ರವೃತ್ತಿಯೂ ಅಷ್ಟೆ. ಏಪ್ರಿಲ್ 10ರಂದು ಮೆಜೆಸ್ಟಿಕ್‌ನ ಸಂತೋಷ್ ಚಿತ್ರಮಂದಿರದಲ್ಲಾದದ್ದೂ ಅದೇ. ಅಭಿಮಾನಿಗಳಿಗೊಂದು ಕಾರಣ ಅಥವಾ ನೆಪವಷ್ಟೇ ಬೇಕಿತ್ತೇನೊ. ಅದು ರಣವಿಕ್ರಮದ ನೆಪದಲ್ಲಿ ಸ್ಫೋಟಗೊಂಡಿದೆ. ಪುನೀತ್ ಅಭಿನಯದ 'ರಣವಿಕ್ರಮ' ಅವರ ಅಭಿಮಾನಿಗಳ ಪಾಲಿಗೆ ನಿರೀಕ್ಷೆಯ ಚಿತ್ರವೆ. ಜಯಣ್ಣ ಮತ್ತು ಭೋಗೇಂದ್ರ ಎಂಬ ನಿಷ್ಣಾತ ನಿರ್ಮಾಪಕರ ಮಹತ್ವಾಕಾಂಕ್ಷೆಯ ಚಿತ್ರ ರಣವಿಕ್ರಮ ಸದ್ಯ ಬಾಕ್ಸ್ ಆಫೀಸ್ ಕೊಳ್ಳೇ ಹೊಡೆಯುತ್ತಿರುವ ಬಗ್ಗೆ ಎರಡು ಮಾತಿಲ್ಲ.

[illegible] ನಿರೀಕ್ಷೆಯಿಟ್ಟೇ ಏಪ್ರಿಲ್ 10ರಂ[illegible]ಗಡೆ ಮಾಡಿದ [illegible] ಭೋಗ್' ಜೋಡಿ ಬೆಳಗಿನ ಷೋ[illegible]

ಖುದ್ದು ಪುನೀತ್‌ರನ್ನೇ ಸಂತೋಷ್‌ಗೆ ಕರೆತಂದಿತ್ತು. ಮೀಡಿಯಾದವರು, ಅತಿಗಣ್ಯರು, ಮಿಕ್ಕಂತೆ ಪುನೀತ್ ಅಸಂಖ್ಯಾತ ಅಭಿಮಾನಿಗಳೇ ತುಂಬಿದ್ದ ಸಂತೋಷ್ ಚಿತ್ರಮಂದಿರದಲ್ಲಿ ಯಥಾವತ್ ಇಂಟರ್‌ವೆಲ್ ಬಿಟ್ಟಿದೆ. ಇನ್ನೇನು ವಿರಾಮ ಮುಗಿದು ಶೋ ಶುರುವಾಗಬೇಕೆನ್ನುವಷ್ಟರಲ್ಲಿ ಪರದೆ ಮೇಲೆ ಟ್ರೇಲರ್‌ಗಳ ಸರಣಿ ಶುರುವಾಗಿದೆ. ಅದು ಸುದೀಪ್ ಮುಂಬರುವ ಚಿತ್ರ 'ರನ್ನ'ದ ಟ್ರೇಲರ್. ತೆರೆಮೇಲೆ ಸುದೀಪ್ ಮುಖ ಕಂಡಿದ್ದೇ ತಡ ಪುನೀತ್ ಭಕ್ತರ ಸಿಟ್ಟಿನ ಕಟ್ಟೆಯೊಡೆದಿದೆ. ವಾಚಾಮಗೋಚರ ಬೈಗುಳದ ಕೂಗಾಟ. ಕಿರುಚಾಟ ಶುರುವಾಗುತ್ತಿದ್ದಂತೆಯೇ ಪರದೆಗೆ ಚಪ್ಪಲಿಗಳು ತೂರಿಬಂದವು. ಬೆನ್ನಲ್ಲೇ ಕೋಲಾಬಾಟಲಿಗಳು, ಬಿಸಲೇರಿ ಬಾಟಲಿಗಳು ಪರದೆಗೆ ಬಿದ್ದವು.

ಭಕ್ತರ ಆಕ್ರೋಶ ಅಷ್ಟಕ್ಕೇ ನಿಲ್ಲಲಿಲ್ಲ, ಮುಂದೆ ಗಾಂಧಿ ಕ್ಲಾಸಿನಲ್ಲಿ ಕೂತಿದ್ದ ಒಂದು ಗುಂಪು ಸಂತೋಷ್ ಚಿತ್ರಮಂದಿರದ ಕಿಟಕಿ ಗಾಜುಗಳನ್ನು ಪುಡಿಗೈದಿದೆ. ಹಿಂದೆ ಬಾಲ್ಕನಿಯಲ್ಲಿ ಕೂತಿದ್ದ ಮತ್ತೊಂದು ಗುಂಪಿನ ಸುಮಾರು ನೂರರಷ್ಟಿದ್ದ ಭಕ್ತರು ಏಕಾಏಕಿ ಪ್ರೊಜೆಕ್ಷನ್ ರೂಮಿನ ಮೇಲೆ ದಾಳಿ ನಡೆಸಿದ್ದಾರೆ. ಇನ್ನೇನು ಪ್ರೊಜೆಕ್ಟರ್‌ಗೆ ಹಾನಿಯಾಗಬೇಕೆನ್ನುವಷ್ಟರಲ್ಲಿ ಹುಷಾರಾದ ಸಿಬ್ಬಂದಿ ಉಪ್ಪಾರಪೇಟೆ ಪೊಲೀಸರಿಗೆ ಫೋನ್ ಮಾಡಿದ್ದಾರೆ. ಪೊಲೀಸರು ಬರುವಷ್ಟರಲ್ಲಿ ಪ್ರೊಜೆಕ್ಟರ್ ಎದುರಿನ ಗಾಜಿನ ಕಿಂಡಿಯನ್ನು ಭಕ್ತರ ಗ್ಯಾಂಗ್ ಧ್ವಂಸಗೊಳಿಸಿತ್ತು, ಮತ್ತೊಂದೆಡೆ ಗಾಂಧಿ ಕ್ಲಾಸಿನ ಕೋಪಿಷ್ಟರು ಸಿಕ್ಕಸಿಕ್ಕ ಕುರ್ಚಿ, ಪೀಠಗಳನ್ನು ಕಿತ್ತುಕಿತ್ತು ಎಸೆಯುತ್ತಿದ್ದರು. ಸಿನಿಮಾ ನೋಡಲು ಬಂದಿದ್ದವರಿಗೇ ಕುರ್ಚಿಯೇಟು. ತೂರಿದ ಬಾಟಲಿಗಳು ಸಿನಿಮಾ ಪತ್ರಕರ್ತರ ನೆತ್ತಿಯನ್ನೇ ತೂತು ಮಾಡಿದ್ದವು. ಮೊದಲ ಬಾರಿಗೆ ಪುನೀತ್ ಚಿತ್ರಕ್ಕಾಗಿ ರಕ್ತ ಜಿನುಗಿತ್ತು.

ರನ್ನ ವಿರುದ್ಧ?

ಪೊಲೀಸರೇನಾದರೂ ತಡ ಮಾಡಿದ್ದರೆ ಬಹುಶಃ ಸಂತೋಷ್ ಥೇಟರಿಗೇ ಬೆಂಕಿ ಬೀಳುತ್ತಿತ್ತೇನೊ!

ಅದು ಸುದೀಪ್ ವಿರುದ್ಧದ ಪುನೀತ್ ಅಭಿಮಾನಿಗಳ ಆಕ್ರೋಶ. ಏನು ನಡೆಯಬಾರದಿತ್ತೋ ಅದು ಅರೆಕ್ಷಣದಲ್ಲೇ ನಡೆದುಹೋಗಿತ್ತು, ಮರುದಿನದ ಪತ್ರಿಕೆಗಳಲ್ಲಿ ಇದೇ ಸುದ್ದಿ. ಟೀವಿಗಳ ಮೂಲಕ ಇದು ರಾಜ್ಯಾದ್ಯಂತ ಹಬ್ಬಿತ್ತು, ಈ ಬಗ್ಗೆ ನ್ಯೂಸ್ ಚಾನಲ್ಲೊಂದರಲ್ಲಿ ಪುನೀತ್ ಮಾಡಿಕೊಂಡ ಮನವಿ ಕೂಡ ರಾಜ್‌ರ ತಾಳ್ಮೆ, ಸಂಯಮ, ಮನೋವೈಶಾಲ್ಯದ ಮುಂದುವರಿಕೆಯಂತಿತ್ತು, 'ನಾವು ಎಲ್ಲಾ ನಟರೂ ಒಂದೇನೇ. ನಮ್ಮಲ್ಲಿ ಯಾವುದೇ ಪೈಪೋಟಿ, ಜಿದ್ದಾಜಿದ್ದಿ ಇಲ್ಲ, ಇದನ್ನು ಅಭಿಮಾನಿಗಳು ಚೆನ್ನಾಗಿ ಅರ್ಥ ಮಾಡಿಕೊಳ್ಳಬೇಕು. ಏಕೆಂದರೆ ಕನ್ನಡ ಸಿನಿಮಾ ಮಾರುಕಟ್ಟೆ ತುಂಬಾ ಚಿಕ್ಕದು. ನಾವು ನಾವೇ ಈ ರೀತಿ ಕಿತ್ತಾಡಿಕೊಂಡರೆ ನಾಶವಾಗುವುದೂ ನಾವೇನೇ...' ಇದು ಪುನೀತ್ ಔದಾರ್ಯದ ಮಾತಾಗಿತ್ತು.

ನಿಮ್ಮ ಅಭಿಮಾನಿಗಳಿಗೆ ನೀವು ಬುದ್ಧಿ ಹೇಳಬಹುದಲ್ಲ ಎಂದು ಟೀವಿ ರಿಪೋರ್ಟರ್ ಕೇಳಿದ್ದಕ್ಕೆ, ಪುನೀತ್ 'ಅಭಿಮಾನಿಗಳಿಗೆ ಬುದ್ಧಿ ಹೇಳುವಷ್ಟು ದೊಡ್ಡವನಲ್ಲ, ಏನಿದ್ದರೂ ಕೈಮುಗಿದು ಬೇಡಿಕೊಳ್ಳಬಹುದಷ್ಟೇ...!' ತನ್ನ ಅಭಿಮಾನಿಗಳ ಇಂಥ ಅತಿರೇಕದ ವಿರುದ್ಧ ಪುನೀತ್ ತಾನೇ ಇನ್ನೇನು ಹೇಳಲು ಸಾಧ್ಯ?

ಇದು ರಾಜ್ ಫ್ಯಾಮಿಲಿ ವಿರುದ್ಧದ ದರ್ಶನ್-ಸುದೀಪ್



ಮಸಲತ್ತಿನ ಯಾವುದೋ ಒಂದು ಕಿಡಿಯಷ್ಟೇ ಎಂಬುದು ಅದರ ಆಳ ಅಗಲ ಬಲ್ಲವರಿಗಷ್ಟೇ ಗೊತ್ತು, ಸ್ಟಾರ್‌ಗಳ ನಡುವಿನ ಸಣ್ಣಪುಟ್ಟ ಘರ್ಷಣೆಗಳು, ವೈಮನಸ್ಯ ಸಿನಿಮಾ ಬಿಡುಗಡೆ ಸಂಬಂಧಿ ಥೇಟರ್ ಪೈಪೋಟಿ, ಒಂದರ ಮೇಲೊಂದು ಹಿಟ್ಟು, ಯಾವುದೋ ಚಿತ್ರದ ಡೈಲಾಗು, ಬಾಕ್ಸ್ ಆಫೀಸ್ ಕಲೆಕ್ಷನ್ನು ಮತ್ತು ಸೋತ ಚಿತ್ರದ ಹತಾಶೆಗಳೆಲ್ಲವೂ ಸೇರಿಕೊಂಡೇ ವಿಲಕ್ಷಣ ಸ್ಟಾರ್‌ವಾರ್ ತಲೆ ಎತ್ತುತ್ತದೆ. ಗಂಧದ ಗುಡಿ ಚಿತ್ರದ ಶೂಟಿಂಗ್ ವೇಳೆ ನಡೆದ ಅಚಾತುರ್ಯಕ್ಕೆ ಇಂಬುಕೊಟ್ಟಂತೆಯೇ ಅದರಲ್ಲಿ ವಿಷ್ಣುಗೆ ವಿಲನ್ ಪಾತ್ರವಿತ್ತು, ಅದಕ್ಕೆ ತಕ್ಕಂತೆಯೇ ಭಾರತಿ ಮತ್ತು ವಿಷ್ಣು ನಿಜಬದುಕಿನ ಅನುಬಂಧವಿತ್ತು.

ರಾಜ್ ವಿಷ್ಣು ಜಿದ್ದಾಜಿದ್ದಿ

ವಿಪರ್ಯಾಸವೆಂಬಂತೆ ಇದು 80ರ ದಶಕದ ಅಭಿಮಾನಿಗಳ ಬೀದಿಕಾಳಗವಾಗಿ ರೂಪುಗೊಂಡಿತು. ರಾಜ್ ಕನ್ನಡ ಪರವಾಗಿದ್ದಕ್ಕೋ ಗೋಕಾಕ್ ವರದಿ ಹೋರಾಟಕ್ಕೋ ಏನೋ ಬೆಂಗಳೂರಿನ ತಮಿಳು ಅಭಿಮಾನಿಗಳು ವಿಷ್ಣು ಕಟೌಟಿನ ಎದೆಗೆ ತಮಿಳು ಸ್ಟಾರ್‌ಗಳಾದ ಎಂಜಿಆರ್ ಮತ್ತು ಕಮಲ್‌ಹಾಸನ್ ಫೋಟೋಗಳನ್ನು ಅಂಟಿಸತೊಡಗಿದರು. ರಾಜ್ ಕಟೌಟಿನ ಮೇಲೆ ಹಳದಿ-ಕೆಂಪು ಕನ್ನಡ ಬಾವುಟವಿರುತ್ತಿದ್ದರೆ ವಿಷ್ಣು ಕಟೌಟಿಗೆ ಭಾರತದ ಮುಬ್ಬಣ್ಣದ ಬಾವುಟ ಕಟ್ಟುತ್ತಿದ್ದರು. ವಿಷ್ಣು ವಿರುದ್ಧ ರಾಜ್ ಜಸ್ಟ್ ಒಂದೇ ಒಂದು ಕಟು ವಾಕ್ಯ ಪ್ರಯೋಗಿಸಲಿಲ್ಲ. ಹಾಗೆಯೇ ರಾಜ್ ವಿರುದ್ಧ ವಿಷ್ಣು ಯಾವತ್ತಿಗೂ ಗೌರವ ಬಿಟ್ಟು ಮಾತಾಡಲಿಲ್ಲ.

ಹಾಗಂತ ಭಕ್ತ ಗಣ ಸುಮ್ಮನಿರಬೇಕಲ್ಲ, ವಿಷ್ಣು ಚಿತ್ರದ ಯಾವುದೋ ಆವೇಶದ ಡೈಲಾಗನ್ನೇ ತಮ್ಮ ಆರಾಧ್ಯ ದೈವದ ವಿರುದ್ಧದ ಕುಚೋದ್ಯವೆಂಬಂತೆ ರಾಜ್ ಅಭಿಮಾನಿಗಳು ಭಾವಿಸುವುದು, ರಾಜ್ ಅಭಿಮಾನಿಗಳ ವರ್ತನೆಗೆಲ್ಲ ಅದರ ಕಾರಣ ಪುರುಷ ರಾಜ್‌ರೇ ಕುಮ್ಮಕ್ಕೆಂದು ವಿಷ್ಣು ಭಕ್ತಾದಿಗಳು ಬಗೆದದ್ದು ಬರೋಬ್ಬರಿ ಎರಡು ದಶಕಗಳ ಕಾಲ ಸಾಂಸ್ಕೃತಿಕ ತಲೆನೋವೊಂದಕ್ಕೆ ಕಾರಣವಾಯಿತು. ಅನುರಾಗ ಅರಳಿತು ಚಿತ್ರದ ಮುಗಿಲೆತ್ತರದ ಕಟೌಟು ಗಾಳಿಗೆ ಬಿದ್ದರೆ ಅದು ವಿಷ್ಣು ಭಕ್ತರ ದುಷ್ಕೃತ್ಯವೆಂಬಂತೆ ಪುಕಾರೆದ್ದಿತು. ಅದಕ್ಕೆ ಪ್ರತೀಕಾರವಾಗಿ ಅಭಿನಯ ಚಿತ್ರಮಂದಿರದ ವಿಷ್ಣು ಕಟೌಟಿಗೆ ಬೆಂಕಿಬಿತ್ತು. ಊಟಿಯಲ್ಲಿ ರಾಜ್ ಶೂಟಿಂಗ್ ಮೇಲೆ ತಮಿಳು ಪುಂಡರು ದಾಂಧಲೆ ನಡೆಸಿದ್ದಕ್ಕೆ ಜಯನಗರದ ವಿಷ್ಣು ಬಂಗಲೆ ಮೇಲೆ ಕಲ್ಲು ತೂರಾಟವಾಯಿತು. ಬಂಧನ ಚಿತ್ರದ ವಿಷ್ಣು ಕಟೌಟಿಗೂ ಬೆಂಕಿ ಹಚ್ಚುವ ಪ್ರಯತ್ನ ನಡೆಯಿತು. ಕೆರಳಿದ ಸಿಂಹದ ವಿರುದ್ಧ ಸಾಹಸ ಸಿಂಹ, ಕನ್ನಡ ಬಾವುಟದ ವಿರುದ್ಧ ರಾಷ್ಟ್ರಧ್ವಜ, ರಾಜ್ ಅಭಿಮಾನಿಗಳ ಸಂಘಕ್ಕೆ ಇದಿರಾಗಿ ತಮಿಳು ರೌಡಿಗಳ ವಿಷ್ಣು ಸೇನಾ ಸಮಿತಿ- ಹೀಗೆ 80 ಮತ್ತು 90ರ ದಶಕ ಪೂರ್ತಿ ವಿಷ್ಣು ಮತ್ತು ರಾಜ್ ಅಭಿಮಾನಿಗಳ ಬೀದಿಕಾಳಗದಲ್ಲೇ ಮುಗಿದುಹೋಯಿತು.

ಮಾಧ್ಯಮಗಳು, ಜನಸಾಮಾನ್ಯರ ಕಣ್ಣಿಗೆ ಅತಿರೇಕದಂತೆ, ಪುಂಡಾಟದಂತೆ, ಅಂಧ ಭಕ್ತರ ಹುಡುಗಾಟಿಕೆಯಂತೆ ಕಾಣುವ ಸ್ಟಾರ್ ಆರಾಧಕರ ಬೀದಿ ಕಾಳಗಕ್ಕೆ ಅದರದ್ದೇ ಆದ ಸಾಂಸ್ಕೃತಿಕ ಮತ್ತು ಆರ್ಥಿಕ ಆಯಾಮವಿರುತ್ತದೆ ಎಂಬುದನ್ನು ಬೌದ್ಧಿಕ ವಲಯ ಪರಿಗಣಿಸುವುದಿಲ್ಲ, ಅದು ಬಾಕ್ಸ್ ಆಫೀಸ್ ತಂತ್ರ ಕೂಡ. ಅಭಿಮಾನದ ಕಾರಣಕ್ಕೆ ಒಂದು ವರ್ಗ ಚಿತ್ರಮಂದಿರಕ್ಕೆ ಬಂದರೆ ಅಸಹನೆಯಿಂದ ಮತ್ತೊಂದು ಸಮೂಹ ಟಿಕೆಟ್ ಖರೀದಿಸುತ್ತದೆ. ರಾಜ್ ಕಣ್ಮರೆಯ ನಂತರ ಆ ಸ್ಥಾನವನ್ನಲಂಕರಿಸಿದ್ದು ಕೊನೇ ಮಗ ಪುನೀತ್.

ಯಶ್ ಹತ್ಯೆಗೆ ದರ್ಶನ್ ಭಕ್ತರ ಹಂತಕ ಪಡೆ?


ಸದ್ಯ ಗಾಂಧಿನಗರದ ಮಟ್ಟಿಗೆ ಸುದೀಪ್, ದರ್ಶನ್, ಕಾಮಿಡಿ ಗಣೇಶ್ ತ್ರಿವಳಿಗಳದ್ದು ಒಂದು ಕೂಟವಾದರೆ ಶಿವಣ್ಣ, ಪುನೀತ್, ಯಶ್, ಪ್ರೇಮ್, ಧ್ರುವ ಸರ್ಜಾ, ಚಿರಂಜೀವಿ ಸರ್ಜಾ ಇತ್ಯಾದಿಗಳೆಲ್ಲ ರಾಜ್ ಅಭಿಮಾನಿಗಳಿಗೆ ನಿಷ್ಠೆಯಿಂದಿದ್ದಾರೆ. ಈ ಪೈಕಿ ದುನಿಯಾ ವಿಜಿಯದ್ದು ಎರಡೂ ಕಡೆಯ ಸಮತೋಲನ ಸರ್ಕಸ್ಸು. ವಿಷ್ಣು ಭಕ್ತರೆಲ್ಲ ಸಹಜವಾಗೇ ಸುದೀಪ್ ಪರವಾದರೆ ಅಂಬಿ ಭಕ್ತರದ್ದು ನಿಜಕ್ಕೂ ಉಭಯ ಸಂಕಟ.



ನಿನ್ನೆಮೊನ್ನೆಯ ತನಕ ಅಂಬಿ ಪಾಳಯವನ್ನು ಸಂಭಾಳಿಸುತ್ತಿದ್ದದ್ದು ದರ್ಶನ್. ಮಂಡ್ಯ, ಮೈಸೂರಿನ ತನಕ ದರ್ಶನ್ ಕಟೌಟುಗಳದ್ದೇ ಪಾರುಪತ್ತೆಯಿತ್ತು, ಬೃಂದಾವನ, ಅಂಬರೀಶ ಇತ್ಯಾದಿ ಒಂದರ ಮೇಲೊಂದಾಗಿ ದರ್ಶನ್ ಚಿತ್ರಗಳೆಲ್ಲ ತೋಪಾದಂತೆಯೇ ಯಶ್‌ನ ಹವಾ ಶುರುವಾಯಿತು. ರಾಜಾಹುಲಿ, ಗಜಕೇಸರಿ, ರಾಮಾಚಾರಿ- ಹೀಗೆ ಸಾಲುಸಾಲು ಯಶ್ ಚಿತ್ರಗಳು ಬಾಕ್ಸ್ ಆಫೀಸ್ ದೋಚತೊಡಗಿದವು. ಅದಕ್ಕೆ ತಕ್ಕಂತೆ ಯಶ್ ಪಕ್ಕಾ ಮಂಡ್ಯದ ಗಂಡಿನ ಇಮೇಜ್ ಕಟ್ಟಿಕೊಂಡ. ಬೆಂಗಳೂರಿನ ಪಡ್ಡೆಗಳು ಏನ್ ಮಚ್ಚಾ, ಏನ್ ಮಗಾ ಎಂದು ತಮಿಳ್ಗನ್ನಡದಲ್ಲಿ ಹೊಡೆಯುತ್ತಿದ್ದ ಮಾತಿನ ವರಸೆ ರಾತ್ರೋರಾತ್ರಿ ಪಕ್ಕಾ ಮಂಡ್ಯದ ಗತ್ತಿನ ಏನ್ ಅಣ್‌ತಮ್ಮಾ ಎನ್ನುವ ಮಟ್ಟಿಗೆ ಯಶ್ ಹವಾ ಬೀಸಲಾರಂಭಿಸಿತು. ಗಾಂಧಿನಗರದ ಮಟ್ಟಿಗೆ ದರ್ಶನ್ ವರ್ಸಸ್ ಯಶ್ ಹಣಾಹಣಿ ಯಾವ ಮಟ್ಟಕ್ಕೇರಿತೆಂದರೆ 'ನಾನು ಬರೋಕೂ ಮೊದಲು ನಿಮ್ ಹವಾ, ನಾನು [illegible] ಮೇ[illegible] ಹವಾ....' ಎಂಬ ಯಶ್‌ನ ರಾಮಾಚಾರಿ ಡೈಲಾಗು ನೇರವಾಗಿ ದರ್ಶನ್ ಅಭಿಮಾನಿಗಳನ್ನೇ ಕೆಣಕಿದಂತಿತ್ತು, ಇದಕ್ಕೂ ಮುನ್ನ ಗಜಕೇಸರಿಯಲ್ಲಿ ಯಶ್ ನಾನು ಎಲ್ಲೆಲ್ಲಿಂದಲೋ ಊರು ಬಿಟ್ಟು ಬಂದವನಲ್ಲ, ಇಲ್ಲೇ ಹುಟ್ಟಿ ಬೆಳೆದವನು ಎಂದದ್ದು ಪರೋಕ್ಷವಾಗಿ ದರ್ಶನ್‌ನ ತೆಲುಗು ಮೂಲವನ್ನು ಹೀಯಾಳಿಸಿದಂತಿತ್ತು, ಸಾಮಾನ್ಯ ಸಿನಿಮಾ ಪ್ರೇಕ್ಷಕರಿಗಿದು ಏನೂ ಅನ್ನಿಸದೇ ಹೋದರೂ ದರ್ಶನ್ ಅಭಿಮಾನಿಗಳಿಗೆ ಹೊಟ್ಟೆಯಲ್ಲಿ ಖಾರ ಕಲಿಸಿದಂತಾಯಿತೇ ಗೊತ್ತಿಲ್ಲ.

ಅಂತೂ ದರ್ಶನ್ ಅಭಿಮಾನಿಗಳ ಆಕ್ರೋಶಕ್ಕೆ, ಈಗ ಯಶ್ ತಲೆ ಕೊಡಬೇಕಾಗಿದೆ. ಬೆಂಗಳೂರಿನ ಕೆಲ ದರ್ಶನ್ ಅಭಿಮಾನಿ ರೌಡಿಗಳಿಂದ ಯಶ್‌ಗೆ ಬೆದರಿಕೆ ಕರೆ ಬರುತ್ತಿದೆಯೆಂಬುದು ಒಂದು ಸುದ್ದಿ. ಯಾರೋ ರೌಡಿಯೊಬ್ಬ ದರ್ಶನ್ ಅಭಿಮಾನಕ್ಕೆ ಬಿದ್ದು ಯಶ್ ಹತ್ಯೆಗೆ ಸುಪಾರಿ ಕೊಟ್ಟಿದ್ದಾನೆಂಬುದು ಮತ್ತೊಂದು ಸುದ್ದಿ. ಹಾಗೇ ಯಶ್ ಹತ್ಯೆಗೆ ಸ್ಕೆಚ್ ಹಾಕಿ ಹೊಂಚು ಹಾಕಿದ್ದ ಅರ್ಧ ಡಜನ್ ರೌಡಿಗಳನ್ನು ಸಿಸಿಬಿ ಪೊಲೀಸರು ಬಂಧಿಸಿ ಜೈಲಿಗಟ್ಟಿದ್ದಾರೆಂಬುದು ಮಗದೊಂದು ಸುದ್ದಿ. ಪ್ರಾಣಭೀತಿಗೆ ಬಿದ್ದ ಯಶ್ ತನಗೆ ಪೊಲೀಸ್ ರಕ್ಷಣೆ ನೀಡುವಂತೆ ಕಮೀಷನರ್ ಎಂ.ಎಸ್. ರೆಡ್ಡಿಯವರಿಗೆ ಅರ್ಜಿ ಕೊಟ್ಟಿದ್ದಾನೆಂಬುದು ಇನ್ನೊಂದು ಸುದ್ದಿ. ಖುದ್ದು ದರ್ಶನ್‌ನೇ ಫೋನ್ ಮಾಡಿ ಯಶ್‌ಗೆ ಧಮಕಿ ಹಾಕಿದ್ದಾನೆಂಬುದೂ ಕಪಾಲಿಗಲ್ಲಿಯ ಸಂದಿಗೊಂದಿಯ ಸುದ್ದಿ. ಇದರಲ್ಲಿ ಯಾವುದು ಸತ್ಯ ಯಾವುದು ಮಿಥ್ಯವೋ ಗೊತ್ತಿಲ್ಲ, ಕೇಳೋಣವೆಂದರೆ ಯಶ್ ಈ ಬಗ್ಗೆ ತುಟಿಪಿಟಕ್ಕೆನ್ನುತ್ತಿಲ್ಲ. ಇನ್ನು ದರ್ಶನ್‌ಗೆ ಕೇಳಹೋದರೆ ಕೇಳಿದವರ ಗತಿ ನೆಟ್ಟಗಾಗುವ ಯಾವ ಗ್ಯಾರಂಟಿಯೂ ಇದ್ದಂತಿಲ್ಲ.

ಖೈದಿ ವಿರುದ್ಧ ಕಸ್ತೂರಿ ನಿವಾಸ ಮತ್ತು ಸುದೀಪ್ ಕೊಟ್ಟ 2 ಲಕ್ಷ!




ರಾಜ್-ವಿಷ್ಣು ಅಭಿಮಾನಿಗಳ ಆ ಕಾಲದ ಬೀದಿಕಾಳಗಕ್ಕೂ, ಈಗ [illegible]ಡೆಯುತ್ತಿದ್ದ ಪುನೀತ್-ಸುದೀಪ್ ಭಕ್ತರ ಜಿದ್ದಾಜಿದ್ದಿಗೂ ಏನೆಲ್ಲ ಒಳಸಂಬಂಧವಿದೆ [illegible]ಂಬುದಕ್ಕೆ ಇತ್ತೀಚೆಗೆ ನಡೆದ ಖೈದಿ ಮತ್ತು ಕಸ್ತೂರಿ ನಿವಾಸ ಚಿತ್ರಗಳ [illegible]ಡುವಿನ ಹಣಾಹಣಿಯೇ ಸಾಕು.

ಇಲ್ಲಿಗೆ ಎಂಟು ತಿಂಗಳ ಹಿಂದೆ ಮೆಜೆಸ್ಟಿಕ್‌ನ ಅಪರ್ಣ ಚಿತ್ರಮಂದಿರದಲ್ಲಿ [illegible]ಷ್ಣು ಸೂಪರ್ ಹಿಟ್ 'ಖೈದಿ' ಚಿತ್ರವನ್ನು ರೀರಿಲೀಸ್ ಮಾಡಿಸಿದ್ದು [illegible]ದ್ದು ಸುದೀಪ್ ಎಂಬುದು ರಹಸ್ಯವೇನಲ್ಲ. ವಿಷ್ಣು ಭಕ್ತರನ್ನು ಕವರ್ [illegible]ಮಾಡಲೆಂದೇ ವಿಷ್ಣು ಸೇನಾ ಸಮಿತಿಯ ನಾಯಕ ಜಾನಕಿರಾಮ್ ಎಂಬ ತಮಿಳು ರೌಡಿಯನ್ನು ಮುಂದಿಟ್ಟುಕೊಂಡು ಸುದೀಪ್ ಅದಕ್ಕೆಂದೇ ದೈತ್ಯ ಕಟೌಟ್ ಮಾಡಿಸಿದ್ದೂ ಗುಟ್ಟಾಗಿರಲಿಲ್ಲ, ಅಂಥ ದೈತ್ಯ ಕಟೌಟಿಗೆಂದು ಭರ್ಜರಿ ಹಾರವೊಂದನ್ನು ಮಾಡಿಸಲು ವಿಷ್ಣು ಭಕ್ತ ಜಾನಕಿರಾಮ್ ಕೈಗೆ ಸುದೀಪ್ ಬರೋಬ್ಬರಿ 2 ಲಕ್ಷ ರೂಪಾಯಿ ಕೊಟ್ಟರಂತೆ. 'ಖೈದಿ' ಬಿಡುಗಡೆಯ ದಿನವೇ ತ್ರಿವೇಣಿ ಚಿತ್ರಮಂದಿರಕ್ಕೆ ಖುದ್ದು ಹಾಜರಾದ ಸುದೀಪ್ ಭರ್ಜರಿ ಹಾರಕ್ಕೆಂದು ತಾನು ಎರಡು ಲಕ್ಷ ಕೊಟ್ಟಿದ್ದನ್ನು ನೆರೆದ ಅಭಿಮಾನಿಗಳೆದುರು ಘೋಷಣೆ ಮಾಡಿಯೇ ಬಿಟ್ಟರು.

ಆಗ ಪಕ್ಕದಲ್ಲೇ ಇದ್ದ ವಿಷ್ಣು ಭಕ್ತ ಜಾನಕಿರಾಮ್ 'ಬೇರೆ ಯಾರಿಗಾದ್ರೂ ತಾಕತ್ತಿದ್ರೆ ಇಂಥಾದ್ದೊಂದು ಹಾರ ಹಾಕಲಿ, ನಾನೂ ನೋಡೇ ಬಿಡ್ತೀನಿ' ಎಂದು ಹೂಂಕರಿಸಿದ್ದನ್ನು ಕೆಲ ರಾಜ್ ಅಭಿಮಾನಿಗಳು ಗಮನಿಸಿದ್ದಾರೆ. ಮೆಜೆಸ್ಟಿಕ್‌ನ ಹಳೇ ಹಿಮಾಲಯ ಟಾಕೀಸ್ ಹಿಂಭಾಗದ ಹಿಮಾಲಯ ಜೋಪಡಿಯ ಪಳಗಿದ ರೌಡಿ ಜಾನಕಿರಾಮ್ ಆ ಕಾಲದಿಂದಲೂ ರಾಜ್ ಅಭಿಮಾನಿಗಳ ವಿರುದ್ಧ ಗಲಾಟೆ ಮಾಡಿಕೊಂಡೇ ಬಂದಾತ. ಇದನ್ನು ಸವಾಲಾಗಿ ಸ್ವೀಕರಿಸಿದ್ದು ಡಾ. ರಾಜ್‌ಕುಮಾರ್ ಕನ್ನಡ ಸೇನೆಯ ರಾಜ್ಯಾಧ್ಯಕ್ಷ ವಿ. ತ್ಯಾಗರಾಜ್. ಶ್ರೀರಾಂಪುರ-ಪ್ರಕಾಶನಗರ ವ್ಯಾಪ್ತಿಯಲ್ಲಿ ಆ ಕಾಲದಿಂದಲೂ ರಾಜ್ ಅಭಿಮಾನಕ್ಕೆ ಹೆಸರಾದ ತ್ಯಾಗರಾಜ್ ಜೊತೆ ಶಿವರಾಜ್‌ಕುಮಾರ್ ಸೇನಾ ಸಮಿತಿಯ ಅಧ್ಯಕ್ಷ ನಾರಾಯಣ್, ಮಲ್ಲೇಶ್ವರದ ಕ್ರಾಂತಿವೀರ ಡಾ. ರಾಜ್‌ಕುಮಾರ್ ಅಭಿಮಾನಿಗಳ ಸಂಘದ ಅಧ್ಯಕ್ಷ ಗಿರೀಶ್, ಕೆಂಪಾಪುರ ಅಗ್ರಹಾರದ ಭಾಗ್ಯವಂತ ಪುನೀತ್ ರಾಜ್‌ಕುಮಾರ್ ಸಂಘದ ರಮೇಶ್ ಮತ್ತು ಪೈಪ್‌ಲೈನ್ ರಸ್ತೆಯ ಕೆರಳಿದ ಸಿಂಹ ಡಾ. ರಾಜ್ ಅಭಿಮಾನಿ ಸಂಘದ ಅಧ್ಯಕ್ಷ ಮುರಳಿ ಸೇರಿಕೊಂಡು 4 ಲಕ್ಷ ರೂಪಾಯಿಗಳನ್ನು ಕಲೆ ಹಾಕಿದ್ದಾರೆ.

ಇದು ಹಳೇ ಸ್ಟೇಟ್ ಅರ್ಥಾತ್ ಕೆಂಪೇಗೌಡ ರಸ್ತೆಯ ಭೂಮಿಕಾ ಟಾಕೀಸಿನಲ್ಲಿ ಕಳೆದ ನವೆಂಬರ್ 5 ರಂದು ತೆರೆಕಂಡ 'ಕಸ್ತೂರಿ ನಿವಾಸ'ದ ಕಲರ್ ಅವತರಣಿಕೆಗೆಂದು ಈ ಅಭಿಮಾನಿ ಮುಖಂಡರು ಕೂಡಿಟ್ಟ ದುಡ್ಡು. 'ಖೈದಿ' ರೀರಿಲೀಸ್ ಆದ 3 ತಿಂಗಳಿಗೆ ಬಿಡುಗಡೆಗೊಂಡ 'ಕಸ್ತೂರಿ ನಿವಾಸ' ಕಲರ್ ಅವತರಣಿಕೆಗೆಂದು ರಾಜ್‌ರ ದೈತ್ಯ ಕಟೌಟ್ ನಿಲ್ಲಿಸಲಾಯಿತು. ವಿಷ್ಣು ಭಕ್ತ [illegible] ಉತ್ತರವೋ ಎಂಬಂತೆ ರಾಜ್ ಕಟೌಟಿಗೆ ನಾಲ್ಕು ಲಕ್ಷ ರೂ. ವೆಚ್ಚದ ಭರ್ಜರಿ ಹಾರ ಹಾಕಲಾಯಿತು. ರೀರಿಲೀಸ್ 'ಖೈದಿ' ತ್ರಿವೇಣಿಯಲ್ಲಿ [illegible] ಓಡಿದರೆ 'ಕಸ್ತೂರಿ ನಿವಾಸ' 2ನೇ ಬಾರಿಗೆ ಐವತ್ತನೇ ದಿನಕ್ಕೆ ಕಾಲಿಟ್ಟಿತ್ತು, ಹಾರದ ವಿಷಯದಲ್ಲೂ ರಾಜ್ ಭಕ್ತರೇ ಗೆದ್ದಾಗಿತ್ತು, ಆದರೆ ಹೂವಿನ ಹಾರಕ್ಕೆಂದು 2 ಲಕ್ಷ ಕೊಟ್ಟು ನಿರಾಶ್ರಿತರಾಗಿದ್ದ ವಿಷ್ಣು ಭಕ್ತರನ್ನು ಮತ್ತೆ ಎದ್ದು ನಿಲ್ಲುವಂತೆ ಮಾಡಿದ ಸುದೀಪ್ ವಿರುದ್ಧ ಕೆಲ ರಾಜ್ ಭಕ್ತರ ಕಣ್ಣಂತೂ ಕೆಂಪಗಾಗಿಸಿತ್ತು.



ಖೈದಿಗೆ 2 ಲಕ್ಷದ ಸುದೀಪ್ ಹಾಕಿಸಿದ ಹಾರ

ಇದು ಕೇವಲ 'ಖೈದಿ' ರೀರಿಲೀಸ್ ಮಾತ್ರಕ್ಕೇ ಹುಟ್ಟಿಕೊಂಡ ಜಿದ್ದಾಗಿರಲಿಲ್ಲ, ಅದಕ್ಕೂ ಮುನ್ನ ಸುದೀಪ್ ಅಭಿಮಾನಿಗಳ ಸಂಘದ ರಾಜ್ಯಾಧ್ಯಕ್ಷ ರವೀಂದ್ರ ಸಿಂಗ್‌ಗೂ ವಿದ್ಯಾಪೀಠ ಸರ್ಕಲ್, ಕತ್ರಿಗುಪ್ಪೆ ಭಾಗದ ರಾಜ್ ಅಭಿಮಾನಿಗಳಿಗೂ ಯುದ್ಧವೇ ನಡೆದುಹೋಯಿತು. ವಿದ್ಯಾಪೀಠ ಸರ್ಕಲ್, ಕತ್ರಿಗುಪ್ಪೆ, ಹನುಮಂತನಗರ, ಶ್ರೀನಿವಾಸ ನಗರ, ಬ್ಯಾಂಕ್ ಕಾಲೋನಿ ಭಾಗದ ಹಳೇ ರಾಜ್‌ಕುಮಾರ್ ಅಭಿಮಾನಿಗಳೆಲ್ಲ ಸೇರಿ ವಿದ್ಯಾಪೀಠ ಸರ್ಕಲ್‌ನಲ್ಲಿ ಕವಿರತ್ನ ಕಾಳಿದಾಸ ಪಾತ್ರದ ರಾಜ್ ಪ್ರತಿಮೆ ನಿಲ್ಲಿಸಲು ಮುಂದಾದರೆ ಅದಕ್ಕೆ ರವಿ ಅಡ್ಡಗಾಲಿಟ್ಟ.

ಏಕೆಂದರೆ ಆ ಹೊತ್ತಿಗಾಗಲೇ ಸುದೀಪ್ ತಾನು ವಿಷ್ಣು ಉತ್ತರಾಧಿಕಾರಿಯೆಂದು ಸ್ವಯಂ ಘೋಷಿಸಿಕೊಂಡಿದ್ದ. ತನ್ನ ಗುರುವೇ ವಿಷ್ಣು ಅವತಾರ ತಾಳಿದ ಮೇಲೆ ರಾಜ್ ಭಕ್ತರ ವಿರುದ್ಧ ರವಿಸಿಂಗ್ ಬಡಿದಾಡಲೇಬೇಕಲ್ಲ, ಇದು ಗ್ಯಾಂಗ್‌ವಾರ್ ರೂಪ ತಾಳಿತು. ಹಾಗಂತ ರಾಜ್ ಭಕ್ತರು ಜಗ್ಗಲಿಲ್ಲ, ವೈನಾದ ಕವಿರತ್ನ ಕಾಳಿದಾಸ ಪ್ರತಿಮೆ ಮಾಡಿಸಿದ್ದೇ ವಿದ್ಯಾಪೀಠ ಸರ್ಕಲ್ಲಿನಲ್ಲಿ ನಿಲ್ಲಿಸಿಬಿಟ್ಟರು. ಉದ್ಘಾಟನೆಗೆಂದು ಬಸವನಗುಡಿ ಶಾಸಕ ರವಿ ಸುಬ್ರಹ್ಮಣ್ಯರ ಜೊತೆ ರಾಜ್ ಮೊಮ್ಮಗ ವಿನಯ್ ರಾಜ್‌ಕುಮಾರ್‌ರನ್ನು ಕರೆಸಿದರು. ಅಲ್ಲಿಗೆ ರವಿಯೂ ತಣ್ಣಗಾದ.

ಸುದೀಪ್ ತಾಳಿದ ವಿಷ್ಣು ಅವತಾರಕ್ಕೂ, ಸುದೀಪ್ ಬಂಟ ರವಿ ಮತ್ತು ರಾಜ್ ಅಭಿಮಾನಿಗಳ ನಡುವಿನ ಹಣಾಹಣಿಗೂ, ಖೈದಿ ವಿರುದ್ಧದ ಕಸ್ತೂರಿ ನಿವಾಸದ ಕಟೌಟ್, ಹೂಹಾರಗಳ ಪೈಪೋಟಿಗೂ ಏನೆಲ್ಲಾ ಒಳಸಂಬಂಧ, ತಂತ್ರ ಪ್ರತಿತಂತ್ರಗಳಲ್ಲವೆ? ಇದನ್ನು ತಾನೇ ಸ್ಟಾರ್‌ವಾರ್ ಅನ್ನುವುದು!




ನಾರಾಯಣ



ವಿ. ತ್ಯಾಗರಾಜ್



ಮುರಳಿ



ಗಿರೀಶ್

ದ್ವಾರಕೀಶ್ ತಂತ್ರ


ಆದರೆ ವಿಷ್ಣು ವಿಷಯದಲ್ಲಿ ಹಾಗಾಗಲಿಲ್ಲ. ಏಕೆಂದರೆ [illegible]ಷ್ಣು ಪಾಲಿಗೆ ಆನುವಂಶಿಕ ವಾರಸುದಾರರಿರಲಿಲ್ಲ. ಇದನ್ನು [illegible]ಷಾರಾಗೇ ಲೆಕ್ಕ ಹಾಕಿದ ದ್ವಾರಕೀಶ್ ವಿಷ್ಣು ಉತ್ತರಾಧಿಕಾರಿ [illegible]ಟ್ಟಕ್ಕೆ ಪಂಪು ಹೊಡೆದದ್ದು ಸುದೀಪ್‌ಗೆ. ಏಕೆಂದರೆ ಆ [illegible]ಹೊತ್ತಿಗಾಗಲೇ ಅಂಬಿ ವಾರಸುದಾರನಾಗಿ ದರ್ಶನ್ [illegible]ಕಮಿಸಿಕೊಂಡಿದ್ದ. ಮಂಡ್ಯ, ಮೈಸೂರು ಮಾತ್ರವಲ್ಲದೆ [illegible]ಳೇ ಮೈಸೂರು ಭಾಗದ ಒಕ್ಕಲಿಗ ಪಡ್ಡೆಗಳಿಗೆ 'ತಮ್ಮೋನು' [illegible]ತಿದ್ದ ಅಂಬಿಗೆ ವೃದ್ಧಾಪ್ಯ ವಕ್ಕರಿಸಿದ್ದು ಕೊರತೆ ಕಾಡುತ್ತಲೇ [illegible]ತ್ತು, ಆ ಕೊರತೆ ತುಂಬಲು ಬೇಕಾದ ಎಲ್ಲಾ ಸರಕೂ [illegible]ರ್ಶನ್‌ನಲ್ಲಿತ್ತು, ಅದಕ್ಕೆ ಬೇಕಾದ ಸರ್ಕಸ್ಸನ್ನೆಲ್ಲ ದರ್ಶನ್ [illegible]ಯೋಗಿಸಿದ್ದ. ಈಗ ಆ ಸ್ಥಾನಕ್ಕೆ ಯಶ್ [illegible]ಗ್ಗೆಯಿಟ್ಟಿದ್ದಾನಾದರೂ ಯಶ್ ಎಂಟ್ರಿ ಕೊಡುವ ತನಕ [illegible]ಬಿ ಸಾಮ್ರಾಜ್ಯವನ್ನು ದರ್ಶನ್ ಆವರಿಸಿದ್ದ.

ವಿಕಟವೆಂದರೆ ಅಂಬಿಯನ್ನು ಮಿಕ್ಕೆಲ್ಲಾ ವಿಷಯದಲ್ಲೂ [illegible]ನುಕರಿಸಹೋಗಿ ದರ್ಶನ್ ಕೈಹಿಡಿದ [illegible]ಡದಿಯಿಂದಾಗಿಯೇ ಜೈಲು ಪಾಲಾಗಿದ್ದು. ಗಂಡನ [illegible]ಯಿಂದ ಹೊಡೆತ ತಿಂದು ಮೈತುಂಬಾ ಬಾಸುಂಡೆ [illegible]ತ ದರ್ಶನ್ ಪತ್ನಿ ಬಚಾವಾಗಲು ನಡುರಾತ್ರಿ ಶಿವಣ್ಣನ









ಮನೆ ಬಾಗಿಲು ಬಡಿದದ್ದೇ ಯಡವಟ್ಟಾಯಿತು. ಶಿವಣ್ಣನ ವಿರುದ್ಧ ಸಿಟ್ಟಿಗೆ ಬಿದ್ದ ದರ್ಶನ್ ರಾಜ್ ಕುಟುಂಬದ ವಿರುದ್ಧ ಮೊದಲೇ ಕತ್ತಿ ಮಸೆಯುತ್ತಿದ್ದ ಸುದೀಪ್ ಜೊತೆ ಕೈ ಜೋಡಿಸಿದ. ಇದಕ್ಕೆ ತಕ್ಕಂತೆ ಒಗ್ಗರಣೆ ಹಾಕಿದ್ದು ಕುಟಿಲ ನಿಪುಣ ದ್ವಾರಕೀಶ್!

ವಿಷ್ಣು ಕಣ್ಣುಮುಚ್ಚಿದ ವರ್ಷಕ್ಕೆ ಸರಿಯಾಗಿ ದ್ವಾರಕೀಶ್ ನಿರ್ಮಿಸಿದ್ದ ವಿಷ್ಣುವರ್ಧನ ತೆರೆಕಂಡಿತು. ಅಲ್ಲಿಯತನಕ ಸುದೀಪ್‌ಗೆ ಗಣನೀಯ ಅಭಿಮಾನಿಗಳಾಗಲಿ ಇಮೇಜಾಗಲಿ ಇರಲಿಲ್ಲ, ರಾಜ್ ಮತ್ತು ಅಂಬಿಯ ಹೊರತಾದ ಮೂರನೇ ಮಾರುಕಟ್ಟೆಯನ್ನು ಆಕ್ರಮಿಸುವ ಲೆಕ್ಕ ಹಾಕಿಯೇ ರಾಜ್ ವರ್ಚಸ್ಸಿನ ಸಾಂಪ್ರದಾಯಿಕ ಎದುರಾಳಿ ವಿಷ್ಣು ವಾರಸುವಿಕೆಯನ್ನು ಸುದೀಪ್ ಆರೋಪಿಸಿಕೊಂಡಿದ್ದ. ಅದು ಸ್ಫೋಟಗೊಂಡಿದ್ದು ರಾಜ್ ಕಪ್ ಕ್ರಿಕೆಟ್ ಮ್ಯಾಚಿನಲ್ಲಿ. ಹುಬ್ಬಳ್ಳಿಯಲ್ಲಿ ನಡೆದ ರಾಜ್ ಕಪ್ ಪಂದ್ಯಾವಳಿ ವೇಳೆ ಯಾರೋ ಶಿವಣ್ಣನ ಅಭಿಮಾನಿಯೊಬ್ಬ ಕೆಣಕಿದನೆಂದು ಸುದೀಪ್ ನೇರವಾಗಿ ರಾಜ್ ಪುತ್ರ ರಾಘುವನ್ನು ಅಟಕಾಯಿಸಿಕೊಂಡ.

ಇದು ಡಬ್ಬಿಂಗ್ ವಿರೋಧಿ ಹೋರಾಟದಲ್ಲಿ ಮತ್ತಷ್ಟು ಉಲ್ಬಣಿಸಿತು. ಶಿವಣ್ಣ, ರಾಘು, ಪುನೀತ್ ಮುಂದಾಳತ್ವದಲ್ಲಿ ನಡೆದ ಡಬ್ಬಿಂಗ್ ವಿರೋಧಿ ಪ್ರತಿಭಟನೆಗೆ ಮಿಕ್ಕೆಲ್ಲಾ ನಟರುಗಳು ಮಂಚೂಣಿಯಲ್ಲಿದ್ದರು. ಸುದೀಪ್ ಮತ್ತು ದರ್ಶನ್ ಮಾತ್ರ ಕಾಟಾಚಾರಕ್ಕೆಂಬಂತೆ ಕೊನೇ ಗಳಿಗೆಯಲ್ಲಿ ಬಂದರು. ಹಾಗೇ ಬಂದವರಿಬ್ಬರನ್ನೂ ನೆರೆದ ಅಭಿಮಾನಿಗಳು ಛಿಚಾಯಿಸಿದರು. ಇದೇ ಹೊತ್ತಿಗೆ ದರ್ಶನ್‌ನ ಸಾರಥಿ ತೆರೆ ಕಂಡಿತು. ಪತ್ನಿ ವಿರುದ್ಧ ದೈಹಿಕ ಹಿಂಸೆಯ ಆರೋಪ ಹೊತ್ತು ಜೈಲುಪಾಲಾದ ದರ್ಶನ್ ಪಾಲಿಗೆ ಲಕ್ಕು ಕೈಹಿಡಿದಿತ್ತು, ಮೆಜೆಸ್ಟಿಕ್‌ನ ನರ್ತಕಿಯಲ್ಲಿ ಇನ್ನೇನು ಸಾರಥಿ ನೂರು ದಿನ ಮುಗಿಸಬೇಕೆನ್ನುವಷ್ಟರಲ್ಲಿ ಸದ್ದಿಲ್ಲದೇ ಅವಘಡವೊಂದು ಸಂಭವಿಸಿತ್ತು.

ಸಾರಥಿ ಇಂಟರ್‌ವೆಲ್‌ನಲ್ಲಿ ಪುನೀತನ ಪರಮಾತ್ಮ ಚಿತ್ರದ ಟ್ರೇಲರ್ ತೋರಿಸಿದ್ದೇ ತಡ ದರ್ಶನ್ ಭಕ್ತರು ರೊಚ್ಚಿಗೆದ್ದರು. ನರ್ತಕಿಯ ಪೋಕೇ[illegible] ಚಿತ್ರದ ಶೀಲ್ಡುಗಳು, ಶಿವಣ್ಣನ ಚಿತ್ರದ [illegible] ಕಿತ್ತೆಸೆದರು. ಪೋಕೇಸಿನ ಗಾಜು ಪುಡಿಯಾಯಿತು. ಥೇಟರ್‌ನ ಹೊರಗೆ ಹಾಕಿದ್ದ ಪರಮಾತ್ಮ ಚಿತ್ರದ ಬ್ಯಾನರ್ ಕೂಡ ದರ್ಶನ್ ಭಕ್ತರ ಆಕ್ರೋಶಕ್ಕೆ ಬಲಿಯಾಯಿತು.

ಗಾಯಗೊಂಡಿದ್ದ ದರ್ಶನ್ ಪತ್ನಿಯನ್ನು ತನ್ನ ಮನೆಯಲ್ಲಿಟ್ಟುಕೊಂಡು ಆಗ ಉಪಮುಖ್ಯಮಂತ್ರಿಯಾಗಿದ್ದ ಅಶೋಕ್ ಮೂಲಕ ದರ್ಶನ್ ವಿರುದ್ಧ ದೂರು ದಾಖಲಾಗುವಂತೆ ಮಾಡಿ ಜೈಲಿಗೆ ಹಾಕಿಸಿದ್ದೇ ಶಿವಣ್ಣ ಎಂಬ ಲೆಕ್ಕಾಚಾರ ದರ್ಶನ್ ಅಭಿಮಾನಿಗಳದ್ದಾಗಿತ್ತು. ಗಂಡನ ಕ್ರೌರ್ಯದ ವಿರುದ್ಧ ರೊಚ್ಚಿಗೆದ್ದ ಪತ್ನಿಯೇ ದೂರು ಕೊಟ್ಟ ವಾಸ್ತವವನ್ನು ಅರಗಿಸಿಕೊಳ್ಳಲಾಗದ ದರ್ಶನ್ ಭಕ್ತರಿಗೆ ನೆಪವಾಗಿ ಸಿಕ್ಕಿದ್ದು ರಾಜ್ ಕುಟುಂಬ!

ಇಂಥ ಕ್ಷುಲ್ಲಕ ಜಿದ್ದಾಜಿದ್ದಿ ಈಗ ರಣವಿಕ್ರಮದ ಮೂಲಕ ಸ್ಫೋಟಗೊಂಡಿದೆ. ಇನ್ನು ಸುದೀಪ್‌ನ ರನ್ನ ಬಿಡುಗಡೆಯಾಯಿತೆಂದರೆ ಈ ಪ್ರತೀಕಾರ ಯಾವ ರೂಪ ಪಡೆಯುತ್ತೋ ಗೊತ್ತಿಲ್ಲ, ರಾಜ್ ಮತ್ತು ವಿಷ್ಣು ಬದುಕಿದ್ದ ಇಳಿಗಾಲದಿಂದ ಹಿಡಿದು ನಿನ್ನೆ ಮೊನ್ನೆಯ ತನಕ ಜಿದ್ದಾಜಿದ್ದಿಗೆ ಇಂಥ ತೀವ್ರತೆಯಿರಲಿಲ್ಲ, ಈ ಮಟ್ಟದ ಅತಿರೇಕಕ್ಕೂ ಹೋಗಿರಲಿಲ್ಲ, ಇತ್ತ ಪುನೀತ್ ಮತ್ತು ಸುದೀಪ್ ಅಭಿಮಾನಿಗಳ ಜಿದ್ದಾಜಿದ್ದಿಯ ಮತ್ತೊಂದು ಮುಖವೆಂಬಂತೆ ದರ್ಶನ್ ಮತ್ತು ಯಶ್ ಹಣಾಹಣಿಯೂ ಹಿಂಸಾತ್ಮಕ ರೂಪ ಪಡೆಯುತ್ತಿದೆ. ಮೇಲುನೋಟಕ್ಕೆ ಚಿತ್ರರಂಗ ಒಂದಾದಂತೆ ಕಾಣಬಹುದು ಆದರೆ ಇಟ್ಟಾಗದ [illegible]

ಇದು ಎಲ್ಲಿಗೆ ಬಂದು ನಿಲ್ಲುತ್ತೋ ಗೊತ್ತಿಲ್ಲ, ನಾಳೆ [illegible]

ರಾ. ಸೋಮನಾಥ್



ಅಂಬೇಡ್ಕರ್ ಬಗ್ಗೆ ತಿಳಿಯಬೇಕಾದ ಐತಿಹಾಸಿಕ ಸತ್ಯಗಳು

ಮೇಲುಜಾತಿಯ ಬಲಪಂಥೀಯರು ಈ ರೀತಿಯ ಕುಹಕದ ಮಾತುಗಳನ್ನು ಆಡುವುದನ್ನು ಕೇಳಿದ್ದೇವೆ: "ಅಂಬೇಡ್ಕರ್ ವಾಸ್ತವವಾಗಿ ಬುದ್ಧಿವಂತರೂ, ಪ್ರತಿಭಾವಂತರೂ ಆಗಿರಲಿಲ್ಲ... ಅವರು ದಲಿತ ಜನಾಂಗಕ್ಕೆ ಸೇರಿದ್ದರು ಎನ್ನುವ ಕಾರಣಕ್ಕೆ ಪ್ರಗತಿಪರರು ಅವರನ್ನು ಸುಳ್ಳು ಸುಳ್ಳೇ ಎತ್ತಿ ಹಿಡಿದು ಪ್ರಚಾರ ಕೊಟ್ಟರು..."

ಆದರೆ ಸತ್ಯಾಂಶ ಇತಿಹಾಸದ ಪುಟಗಳಲ್ಲಿ ಈ ರೀತಿ ದಾಖಲಾಗಿದೆ:

ಸತಾರ್‌ನಲ್ಲಿ ಬಾಲಕ ಭೀಮರಾವ್ ಪ್ರಾಥಮಿಕ ಶಿಕ್ಷಣವನ್ನು ಮುಗಿಸಿದರು. ಹಿಂದೂ ಚಾತುರ್ವರ್ಣೀಯ ವ್ಯವಸ್ಥೆ ಶೂದ್ರರು ಮತ್ತು ಅತಿಶೂದ್ರರಾದ ಅಸ್ಪೃಶ್ಯರಿಗೆ ವಿದ್ಯೆ ಕಲಿಯುವ ಅವಕಾಶವನ್ನು ನಿರಾಕರಿಸಿತ್ತಾದರೂ ಬ್ರಿಟಿಷ್ ಸರ್ಕಾರ ಜಾತಿ ಧರ್ಮಗಳ ಭೇದಭಾವವಿಲ್ಲದೆ ಶಾಲಾಕಾಲೇಜುಗಳಲ್ಲಿ ಸರ್ವರಿಗೂ ಪ್ರವೇಶಾವಕಾಶ ನೀಡಬೇಕೆಂಬ ನಿಯಮವನ್ನು ಜಾರಿಗೆ ತಂದಿದ್ದರಿಂದ ಶೂದ್ರರು ಹಾಗೂ ಅಲ್ಲಲ್ಲಿ ಕೆಲವು ಅಸ್ಪೃಶ್ಯರ ಮಕ್ಕಳು ವಿದ್ಯೆ ಕಲಿಯಲು ಪ್ರಾರಂಭಿಸಿದ್ದರು. ಆದರೂ ಅಸ್ಪೃಶ್ಯ ಬಾಲಕ ಎಂಬ ಕಾರಣದಿಂದ ಶಾಲೆಯಲ್ಲಿ ಭೀಮರಾವ್‌ಅನ್ನು ಬೇರೆ ಮಕ್ಕಳಿಂದ ದೂರದಲ್ಲಿ ಪ್ರತ್ಯೇಕವಾಗಿ ಕೂರಿಸಲಾಗುತ್ತಿತ್ತು, ಮೇಲ್ವರ್ಗದವರು ಮೇಲಿನಿಂದ ಸುರಿದ ನೀರನ್ನು ಬೊಗಸೆಯೊಡ್ಡಿಕೊಂಡು ಕುಡಿಯಬೇಕಾಗಿತ್ತು. ಈ ಶಾಲೆಯಲ್ಲಿ ಓದುತ್ತಿದ್ದಾಗ ಈ ಬಾಲಕನ ಚುರುಕುಬುದ್ಧಿಯನ್ನು ಮೆಚ್ಚಿಕೊಂಡಿದ್ದ ಕೃಷ್ಣಾಜಿ ಕೇಶವ್ ಅಂಬೇಡ್ಕರ್ ಎಂಬ ಬ್ರಾಹ್ಮಣ ಉಪಾಧ್ಯಾಯರು ಭೀಮಾರಾವ್ ರಾಮ್‌ಜಿ ಅಂಬವಾಡೇಕರ್ ಎಂದು ಇದ್ದ ಅಂಬೇಡ್ಕರ್‌ರವರ ಹೆಸರನ್ನು ಭೀಮರಾವ್ ರಾಮ್‌ಜಿ ಅಂಬೇಡ್ಕರ್ ಎಂದು ಬದಲಾಯಿಸಿ ಶಾಲಾ ದಾಖಲೆಯಲ್ಲಿ ಸೇರಿಸಿದರು.

ಭೀಮರಾವ್ ಪ್ರಾಥಮಿಕ ಶಿಕ್ಷಣ ಮುಗಿಸುವ ವೇಳೆಗೆ ಮಿಲಿಟರಿ ಸೇವೆಯಿಂದ ನಿವೃತ್ತರಾಗಿದ್ದ ಅವರ ತಂದೆ ರಾಮ್‌ಜಿ ಸಕ್ಪಾಲ್ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸುವುದಕ್ಕೋಸ್ಕರ ಮುಂಬೈಗೆ ಬಂದು ನೆಲೆಸಿ ಮಗನನ್ನು ಎಲಿಫಿನ್‌ಸ್ಟನ್ ಹೈಸ್ಕೂಲಿಗೆ ಸೇರಿಸಿದರು. ಅಲ್ಲಿ ಅಂಬೇಡ್ಕರ್‌ರವರು ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ತೇರ್ಗಡೆಯಾದರು. ಆ ಕಾಲಕ್ಕೆ ಈ ಪರೀಕ್ಷೆ ಪಾಸು ಮಾಡಿದ ಯುವಕರು ಅಸ್ಪೃಶ್ಯರಲ್ಲಿ ತೀರಾ ವಿರಳ.

'ಚಿಕ್ಕ ವಯಸ್ಸಿನಲ್ಲೇ ಮದುವೆ ಮಾಡುವುದು ಆ ಕಾಲದಲ್ಲಿ ಸಾಧಾರಣ ವಿಷಯವಾಗಿತ್ತು, ಆಗತಾನೇ ಮೆಟ್ರಿಕ್ಯುಲೇಷನ್ ಪಾಸ್ ಮಾಡಿದ್ದ ಭೀಮರಾವ್‌ಗೆ 9 ವರ್ಷ ವಯಸ್ಸಿನ ಬಾಲೆ ರಮಾಬಾಯಿ ಅವರೊಡನೆ ವಿವಾಹವಾಯಿತು. ನಂತರ ಅಂಬೇಡ್ಕರ್‌ರವರು ಶ್ರದ್ಧೆಯಿಂದ ಓದಿ 1912ರಲ್ಲಿ ಬಿ.ಎ. ಪದವಿ ಗಳಿಸಿದರು.

ವಿದೇಶದಲ್ಲಿ ಉನ್ನತ ವ್ಯಾಸಂಗ ಮಾಡಲು ಬಯಸುವ ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ ನೀಡುವುದಾಗಿ ಬರೋಡಾ ಮಹಾರಾಜರ ಆಜ್ಞೆಯೊಂದು ಪ್ರಕಟವಾಯಿತು. ಅಂಬೇಡ್ಕರ್‌ರವರು ಕೂಡ ಮಹಾರಾಜರನ್ನು ಭೇಟಿ ಮಾಡಿ ವಿದೇಶದಲ್ಲಿ ವ್ಯಾಸಂಗ ಮಾಡಲು ವಿದ್ಯಾರ್ಥಿವೇತನ ನೀಡುವಂತೆ ಮನವಿ ಸಲ್ಲಿಸಿದರು. ಮಹಾರಾಜರ ದೊಡ್ಡತನದಿಂದ ಅಸ್ಪೃಶ್ಯ ಯುವಕ ಅಂಬೇಡ್ಕರ್‌ರವರಿಗೂ ವಿದೇಶದಲ್ಲಿ ಉನ್ನತ ವ್ಯಾಸಂಗ ಮಾಡಲು ವಿದ್ಯಾರ್ಥಿ ವೇತನ ಮಂಜೂರಾಯಿತು. ಹೀಗೆ ಬರೋಡಾ ಮಹಾರಾಜರ ಆರ್ಥಿಕ ಸಹಾಯದಿಂದ ಅಮೆರಿಕದ ಕೊಲೊಂಬಿಯಾ ವಿಶ್ವವಿದ್ಯಾನಿಲಯದಲ್ಲಿ ಉನ್ನತ ಶಿಕ್ಷಣ ಮುಂದುವರಿಸಿ 1915ರಲ್ಲಿ 'ಪ್ರಾಚೀನ ಭಾರತೀಯ ವಾಣಿಜ್ಯ' ಎಂಬ ವಿಷಯ ಕುರಿತು ಪ್ರೌಢ ಪ್ರಬಂಧ ಮಂಡಿಸಿ ಅರ್ಥಶಾಸ್ತ್ರದಲ್ಲಿ ಎಂ.ಎ. ಪದವಿಯನ್ನು ಪಡೆದರು. 'ಬ್ರಿಟಿಷ್ ಇಂಡಿಯಾದ ಪ್ರಾಂತೀಯ ಆರ್ಥಿಕ ವಿಕಾಸ' ಎಂಬ ವಿಷಯ ಕುರಿತು ಮಹಾ ಪ್ರಬಂಧವನ್ನು ಮಂಡಿಸಿ 1916ರಲ್ಲಿ ಡಾಕ್ಟರ್ ಆಫ್ ಫಿಲಾಸಫಿ (ಪಿಎಚ್.ಡಿ) ಪದವಿಯನ್ನೂ ಗಳಿಸಿದರು. 1917ರಲ್ಲಿ ಭಾರತಕ್ಕೆ ವಾಪಸ್ಸಾದ ಡಾ। ಅಂಬೇಡ್ಕರ್, ವಿದೇಶದಿಂದ ಉನ್ನತ ಶಿಕ್ಷಣ ಮುಗಿಸಿ ಹಿಂದಿರುಗಿದ ನಂತರ ಬರೋಡಾ ಸರ್ಕಾರದಲ್ಲಿ 10 ವರ್ಷ ಸೇವೆ ಸಲ್ಲಿಸುವುದಾಗಿ ಬರೆದುಕೊಟ್ಟಿದ್ದ ಮುಚ್ಚಳಿಕೆಯ ಪ್ರಕಾರ ಬರೋಡಾ ಮಹಾರಾಜರ ಮಿಲಿಟರಿ ಕಾರ್ಯದರ್ಶಿಯಾಗಿ ಸೇವೆಗೆ ಸೇರಿದರು.

ಅಸ್ಪೃಶ್ಯರು ಎಂಬ ಕಾರಣದಿಂದ ಜವಾನರು, ಗುಮಾಸ್ತರು, ಕೆಳವಿನ ಅಧಿಕಾರಿಗಳು ಅಂಬೇಡ್ಕರ್‌ರವರಿಗೆ ಫೈಲುಗಳನ್ನು ದೂರದಿಂದ ಎಸೆಯುತ್ತಿದ್ದರು. ಕಚೇರಿಯಲ್ಲಿ ಅವರಿಗೆ ಕುಡಿಯುವ ನೀರೂ ಸಿಗಲಿಲ್ಲ, ವಾಸಕ್ಕೆ ಬಾಡಿಗೆ ಮನೆಯೂ ಸಿಗಲಿಲ್ಲ, ಹೋಟೆಲ್‌ಗಳಲ್ಲಿ ಕೊಠಡಿಗಳು ಕೂಡ ದೊರೆಯಲಿಲ್ಲ, ಕೊನೆಗೆ ವಿಧಿಯಿಲ್ಲದೆ ಪಾರ್ಸಿ ಹೋಟೆಲ್‌ವೊಂದರಲ್ಲಿ ಗುರುತು ಮರೆಮಾಚಿಕೊಂಡು ಕೊಠಡಿ ಪಡೆದರು. ಆದರೆ ಹೋಟೆಲ್ ಮಾಲೀಕನಿಗೆ ಇವರು ಅಸ್ಪೃಶ್ಯರು ಎಂಬ ಸಂಗತಿ ತಿಳಿಯುವುದು ತಡವಾಗಲಿಲ್ಲ, ದೊಣ್ಣೆಗಳೊಡನೆ ಅವರು ಅಂಬೇಡ್ಕರ್ ಅವರನ್ನು ಸುತ್ತುವರೆದರು. ಮಹಾನ್ ವಿದ್ವಾಂಸರೂ, ಸುಸಂಸ್ಕೃತರೂ ಆದ ಡಾ. ಅಂಬೇಡ್ಕರ್‌ರವರು ಅವಮಾನದಿಂದ ತಲೆತಗ್ಗಿಸಬೇಕಾಯಿತು. ಮಹಾರಾಜರ ಗಮನಕ್ಕೆ ಈ ವಿಷಯವನ್ನು ತಂದರಾದರೂ ಪ್ರಯೋಜನವಾಗಲಿಲ್ಲ, ಬೇರೆ ದಾರಿ ಕಾಣದೆ ನೌಕರಿ ತ್ಯಜಿಸಿ ಮುಂಬೈಗೆ ವಾಪಾಸ್ ಬಂದರು.

ನಂತರ, ಮುಂಬೈ ಸರ್ಕಾರ ಡಾ. ಅಂಬೇಡ್ಕರ್‌ರವರನ್ನು 1918ರ ನವೆಂಬರ್‌ನಲ್ಲಿ ಮುಂಬೈನ ಸಿಡ್ನ್ಯಾನ್ ಹ್ಯಾಮ್ ಕಾಲೇಜಿನಲ್ಲಿ ಅರ್ಥಶಾಸ್ತ್ರದ ಪ್ರೊಫೆಸರ್ ಹುದ್ದೆಗೆ ನೇಮಿಸಿತು. ಅಸ್ಪೃಶ್ಯ ಪ್ರಾಧ್ಯಾಪಕ ಎಂಬ ಉದಾಸೀನ ಮನೋಭಾವವನ್ನು ಆರಂಭದಲ್ಲಿ ಹೊಂದಿದ್ದ ವಿದ್ಯಾರ್ಥಿಗಳು, ಡಾ. ಅಂಬೇಡ್ಕರ್‌ರವರ ಆಧುನಿಕ ರೀತಿನೀತಿ, ಸುಸಂಸ್ಕೃತ ನಡತೆ ಹಾಗೂ ವಿದ್ವತ್ ಪಾಂಡಿತ್ಯಗಳಿಗೆ ಮಾರುಹೋಗಿ ಸ್ವಲ್ಪ ಸಮಯದಲ್ಲೇ ಅವರನ್ನು ಶ್ರೇಷ್ಠ ಪ್ರಾಧ್ಯಾಪಕರು ಎಂದು ಮೆಚ್ಚಿಕೊಂಡರು.

ಮಹಾನ್ ವಿದ್ವಾಂಸರೂ, ಚಿಂತಕರೂ ಹಾಗೂ ಮೇಧಾವಿಗಳೂ ಆಗಿದ್ದ ಡಾ. ಅಂಬೇಡ್ಕರರವರು ಇಂಗ್ಲಿಷ್‌ನಲ್ಲಿ ಬರೆಯುತ್ತಿದ್ದ ಹೆಸರಾಂತ ಭಾರತೀಯ ಲೇಖಕರಾಗಿದ್ದರು. ಅವರು ಭಾಷೆ, ಪ್ರಾಂತ, ಆರ್ಥಿಕ ವ್ಯವಸ್ಥೆ ಬ್ಯಾಂಕ್ ವಲಯ, ಜಾತಿಪದ್ಧತಿ, ಮಹಿಳೆಯರ ಸ್ಥಿತಿಗತಿ, ಅಸ್ಪೃಶ್ಯತೆ, ಶೂದ್ರರು ಮತ್ತು ಅಲ್ಪಸಂಖ್ಯಾತರು, ಗಾಂಧಿ ಮತ್ತು ಗಾಂಧಿ ತತ್ವ, ದೇಶದ ವಿಭಜನೆ, ಬುದ್ಧ ಮತ್ತು ಆತನ ದಮ್ಮ ಸೇರಿದಂತೆ ಹಲವಾರು ಕೃತಿಗಳನ್ನು ರಚಿಸಿದರು.

ಡಾ. ಅಂಬೇಡ್ಕರರ ಬೌದ್ಧಿಕ ಶ್ರೇಷ್ಠತೆಯ ಬಗ್ಗೆ ಇಷ್ಟು ಐತಿಹಾಸಿಕ ಸತ್ಯಾಂಶ ಓದಿದ ಮೇಲೆ ಹೇಳಿ–ಅಂಬೇಡ್ಕರರು ದಲಿತರು ಎನ್ನುವ ಕಾರಣಕ್ಕೆ ಅವರಿಗೆ ರಿಯಾಯಿತಿ ನೀಡಿ, ಬುದ್ಧಿವಂತ ಎಂದು ಪ್ರಚಾರ ಮಾಡಲಾಯಿತೇ? ಅಥವಾ ಅವರು ತಮ್ಮ ಸ್ವಂತ ಪ್ರತಿಭೆಯಿಂದ ಅಷ್ಟೆಲ್ಲಾ ಬೌದ್ಧಿಕ ಎತ್ತರಕ್ಕೆ ಬೆಳೆದರೇ?

ಐತಿಹಾಸಿಕ ವ್ಯಂಗ್ಯವೇನೆಂದರೆ–ಹಿಂದುಳಿದವರಿಗೆ ಮತ್ತು ದಲಿತರಿಗೆ ಸಾಮಾಜಿಕ ನ್ಯಾಯದ ಆಧಾರದಲ್ಲಿ ಮೀಸಲಾತಿ ನೀಡಬೇಕೆಂದು ತಾತ್ವಿಕ ಹೋರಾಟ ನಡೆಸಿದ ಡಾ.ಅಂಬೇಡ್ಕರ್ ಅವರು ಸ್ವತಃ ಯಾವುದೇ 'ಮೀಸಲಾತಿ'ಯ ಲಾಭ ಪಡೆದಿರಲಿಲ್ಲ! ಸತ್ಯ ಏನು ಅಂದರೆ–ಮೇಲುಜಾತಿಯ ಅವರ ರಾಜಕೀಯ ಸಹೋದ್ಯೋಗಿಗಳೇ ಅವರು ಅಸ್ಪೃಶ್ಯ ಜಾತಿಯವರೆಂಬ ಕಾರಣಕ್ಕೆ ಅವರ ಕಾಲನ್ನು ಸದಾ ಎಳೆಯುತ್ತಿದ್ದರು. ವಲ್ಲಭಬಾಯಿ ಪಟೇಲ್, ರಾಜಗೋಪಾಲಾಚಾರಿ, ರಾಜೇಂದ್ರ ಪ್ರಸಾದರಂತಹ ಬ್ರಾಹ್ಮಣರಿಗೆ ದಲಿತರಾಗಿದ್ದ ಅಂಬೇಡ್ಕರ್‌ರ ಪ್ರಗತಿಪರ ವಿಚಾರಗಳನ್ನು ಒಪ್ಪಿಕೊಳ್ಳಲು ತುಂಬಾ ಕಷ್ಟವಾಗುತ್ತಿತ್ತು.


ಹೋರಾಟಕ್ಕೆ ಪ್ರೇರಣೆ ನೀಡಿದ ಸಾಮಾಜಿಕ ಪರಿಸ್ಥಿತಿ

ಜಾತಿಭೇದ, ಲಿಂಗತಾರತಮ್ಯ, ಅಸ್ಪೃಶ್ಯತೆ ಮುಂತಾದ ಅವೈಜ್ಞಾನಿಕ ವಿಚಾರಗಳ ತಳಹದಿಯ ಮೇಲೆ ನಿಂತಿದ್ದ ಅಂದಿನ ಭಾರತೀಯ ಸಮಾಜ ಶೂದ್ರರಿಗೂ ವಿದ್ಯಾಭ್ಯಾಸ ಮಾಡುವ ಅವಕಾಶವನ್ನು ನಿರಾಕರಿಸಿತ್ತು, ಅತಿಶೂದ್ರರಾದ ಅಸ್ಪೃಶ್ಯರ ಬದುಕನ್ನಂತೂ ನರಕಯಾತನೆಗೆ ಗುರಿ ಮಾಡಿತ್ತು. ಅಂದಿನ ಸಂಪ್ರದಾಯಗಳು, ಕುರುಡು ಆಚರಣೆಗಳು ಹಾಗೂ ಜೀವನಸಿದ್ಧಾಂತಗಳು ಪ್ರಜಾಪ್ರಭುತ್ವದ ತತ್ವಗಳಾದ ಸ್ವಾತಂತ್ರ್ಯ ಸಮಾನತೆ ಹಾಗೂ ಸೋದರತ್ವಗಳಿಗೆ ಸಂಪೂರ್ಣ ವಿರೋಧವಾಗಿದ್ದವು. ಅಸ್ಪೃಶ್ಯರು ಹಿಂದೂಗಳೇ ಆಗಿದ್ದರೂ ಅವರನ್ನು ಕ್ರೂರ ದಬ್ಬಾಳಿಕೆಗೆ ಒಳಪಡಿಸಿ ಅಮಾನುಷವಾಗಿ ಶೋಷಣೆ ಮಾಡಲಾಗುತ್ತಿತ್ತು, ಪ್ರಾಣಿಗಳಿಗಿಂತ ಕೀಳಾದ ಜೀವನವನ್ನು ಅವರು ನಡೆಸುತ್ತಿದ್ದರು. ವಿದ್ಯೆ ಕಲಿಯುವಂತಿರಲಿಲ್ಲ, ಆಸ್ತಿಪಾಸ್ತಿ ಹೊಂದುವಂತಿರಲಿಲ್ಲ, ಸಾರ್ವಜನಿಕ ಕೆರೆಬಾವಿಗಳ ನೀರು ಬಳಸುವಂತಿರಲಿಲ್ಲ, ದೇವಾಲಯ ಪ್ರವೇಶಿಸುವಂತಿರಲಿಲ್ಲ, ಉತ್ತಮವಾದ ಬಟ್ಟೆ ತೊಡುವಂತಿರಲಿಲ್ಲ, ಊರ ಹೊರಗೆ ಗುಡಿಸಲು ಕಟ್ಟಿಕೊಂಡು ವಾಸಮಾಡಬೇಕಾಗಿತ್ತು, ಬೆಳಗಿನ ಜಾವಕ್ಕೇ ಎದ್ದು ಮೇಲ್ಜಾತಿಯವರ ಸೇವೆಗೆ ಹಾಜರಾಗಿ ತಡರಾತ್ರಿಯವರೆಗೂ ಅವರ ಮನೆಯ ಚಾಕರಿ ಮಾಡಿಕೊಂಡಿರಬೇಕಾಗಿತ್ತು, ಈ ಜನಗಳು ಮಾಡುತ್ತಿದ್ದ ಇಷ್ಟೊಂದು ಅಪಾರ ಶ್ರಮಕ್ಕೆ ಸಿಗುತ್ತಿದ್ದ ಪ್ರತಿಫಲ ಅತ್ಯಲ್ಪ, ಕೊಟ್ಟಷ್ಟನ್ನು ಪಡೆದು ಮರುಮಾತಾಡದೆ ಬಾಯಿ ಮುಚ್ಚಿಕೊಂಡಿರಬೇಕಾಗಿತ್ತು, ಪ್ರತಿಭಟಿಸಿದರೆ ಘೋರ ಶಿಕ್ಷೆ ಕಾದಿರುತ್ತಿತ್ತು, ಈ ರೀತಿಯ ದಯನೀಯ ಬರ್ಬರ ಬದುಕು ಸಾಗಿಸುತ್ತಿದ್ದ ಅಸ್ಪೃಶ್ಯರು ದೇಶದ ಉದ್ದಗಲಕ್ಕೂ ಕೋಟಿ ಕೋಟಿ ಸಂಖ್ಯೆಯಲ್ಲಿದ್ದರು.

ಅಮೆರಿಕದ ಕೊಲಂಬಿಯಾ ವಿಶ್ವದ್ಯಾನಿಲಯದಲ್ಲಿ ಉನ್ನತ ವ್ಯಾಸಂಗ ಮಾಡಿದ್ದ ಡಾ. ಅಂಬೇಡ್ಕರ್ ಅಲ್ಲಿ ಕಂಡದ್ದು, ಅನುಭವಿಸಿದ್ದು ಜಾತಿಮತಗಳ ಕಟ್ಟುಪಾಡಿಲ್ಲದ ಸಮಾಜವನ್ನು; ಭಾರತದಲ್ಲಿ ಜಾತಿಯ ಹೆಸರಿನಲ್ಲಿ ನಡೆಯುವ ಕ್ರೌರ್ಯ, ದ್ವೇಷ, ದೌರ್ಜನ್ಯ ದಬ್ಬಾಳಿಕೆಗಳಿಲ್ಲದ ಮುಕ್ತ ವಾತಾವರಣವನ್ನು ಅಮೆರಿಕಾ, ಬ್ರಿಟನ್‌ಗಳಲ್ಲಿ ಡಾ. ಅಂಬೇಡ್ಕರ್ ಕಂಡರು. ಸಹಜವಾಗಿಯೇ ಅವರು ತನ್ನ ಜನಗಳು ಅಸ್ಪೃಶ್ಯತೆಯ ಹೆಸರಿನಲ್ಲಿ ಅನುಭವಿಸುತ್ತಿದ್ದ ನರಕಯಾತನೆಯನ್ನು ಕಂಡು ಸಿಡಿದೆದ್ದರು. ಹಳ್ಳಿಹಳ್ಳಿಗಳನ್ನು ಸಂಚರಿಸಿ ತನ್ನ ಜನರಲ್ಲಿ ಜಾಗೃತಿ ಮೂಡಿಸಿದರು. ಈ ದೇಶದ ಪ್ರಜೆಗಳೇ ಆದ ನಮಗೆ ಇತರರು ಅನುಭವಿಸುತ್ತಿರುವ ಎಲ್ಲಾ ನಾಗರಿಕ ಸವಲತ್ತುಗಳನ್ನು ಪಡೆಯುವ ಹಕ್ಕು ಇರುವುದಾಗಿಯೂ, ಈ ದೇಶದ ರಾಜಕೀಯ ಅಧಿಕಾರ ಮತ್ತು ಸರ್ಕಾರಿ ನೌಕರಿಗಳು ಮುಂತಾದವುಗಳಲ್ಲಿ ಪಾಲು ಪಡೆಯುವ ಹಕ್ಕು ನಮ್ಮವರಿಗೂ ಇದೆ ಎಂದೂ, ಬೇರೆಯವರು ಈ ಸವಲತ್ತುಗಳನ್ನು ನಮಗೆ ದಯಪಾಲಿಸುವುದಿಲ್ಲವೆಂದೂ, ಸೌಲಭ್ಯಗಳಿಂದ ವಂಚಿತರಾದ ಜನಗಳೇ ಅವುಗಳನ್ನು ಹೋರಾಟದ ಮೂಲಕ ಪಡೆದುಕೊಳ್ಳುವುದು ಅನಿವಾರ್ಯವೆಂದೂ ಅರಿವು ಮೂಡಿಸಿದರು. ಹೀಗೆ ಅಸ್ಪೃಶ್ಯರನ್ನು ಸಂಘಟನೆ ಮಾಡಿದ ಡಾ. ಅಂಬೇಡ್ಕರ್‌ರವರು ಸಾರ್ವಜನಿಕ ಕೆರೆಬಾವಿಗಳಲ್ಲಿ ನೀರು ಬಳಸುವ ಹಕ್ಕಿಗಾಗಿ, ದೇವಾಲಯ ಪ್ರವೇಶಕ್ಕಾಗಿ, ಶಾಸನ ಸಭೆಗಳಲ್ಲಿ ಹಾಗೂ ಸರ್ಕಾರಿ ನೌಕರರುಗಳಲ್ಲಿ ತಮ್ಮ ಜನಸಂಖ್ಯೆಗೆ ಅನುಗುಣವಾಗಿ ಸ್ಥಾನಗಳನ್ನು ಮೀಸಲಿಡಬೇಕೆಂದು ಆಗ್ರಹಿಸಿ ಹೋರಾಟಕ್ಕೆ ಮುಂದಾದರು.



ಅಂಬೇಡ್ಕರ್ ನೇತೃತ್ವದಲ್ಲಿ ಕುಡಿಯುವ ನೀರಿಗೆ ನಡೆದ ಮಹರ್ ಸತ್ಯಾಗ್ರಹವನ್ನು ಬಿಂಬಿಸುವ ಚಿತ್ರ



ಬಾಡಿಗೆ ಮನೆ, ಹೋಟೆಲ್ ಕೊಠಡಿ ಯಾವುದೂ ಸಿಗದೆ ಪಾರ್ಕ್‌ನಲ್ಲಿ ರಾತ್ರಿ ಕಳೆದ ಅಂಬೇಡ್ಕರ್‌ರ ಬಿಕ್ಕಟ್ಟನ್ನು ಬಿಂಬಿಸುವ ಕಲಾಕೃತಿ

ಹಿಂದೂ ಕೋಡ್ ಬಿಲ್ ವಿರೋಧಿಸಿದ್ದ ಮೇಲುಜಾತಿಯ ಕಾಂಗ್ರೆಸಿಗರು

ಹಿಂದೂ ಕೋಡ್ ಬಿಲ್‌ನ ಮುಖ್ಯ ಅಂಶಗಳೆಂದರೆ ಹಿಂದೂ ಧರ್ಮೀಯರ ಆಸ್ತಿಯ ಹಕ್ಕು, ಮಹಿಳೆಯರಿಗೆ ತಂದೆ ಆಸ್ತಿಯಲ್ಲಿ ಪಾಲು, ಮದುವೆ, ದತ್ತು ಸ್ವೀಕಾರ ಮತ್ತು ವಿಚ್ಛೇದನ ಇವುಗಳು ಪ್ರಮುಖವಾದವು. ಮದುವೆ ಮತ್ತು ದತ್ತು ಸ್ವೀಕಾರಗಳಿಗೆ ಜಾತಿ–ಉಪಜಾತಿಗಳ ನಿರ್ಬಂಧವಿಲ್ಲದೆ ಮಾನ್ಯತೆ ನೀಡುವುದು, ಏಕಪತ್ನಿತ್ವ, ಮಹಿಳೆಯು ತಂದೆ ಮನೆಯ ಆಸ್ತಿಯಲ್ಲಿ ಪಾಲು ಪಡೆಯುವ ಹಕ್ಕು, ಗಂಡನೊಡನೆ ವೈವಾಹಿಕ ಜೀವನ ನಡೆಸಲು ಅಸಾಧ್ಯವಾದಾಗ ವಿಚ್ಛೇದನ ಪಡೆಯಲು ಮಹಿಳೆಗೆ ಹಕ್ಕು, ಪತಿಯು ದತ್ತು ಸ್ವೀಕರಿಸುವಾಗ ಹೆಂಡತಿಯ ಪೂರ್ವ ಒಪ್ಪಿಗೆ ಪಡೆಯಬೇಕೆಂಬ ಅಂಶಗಳು ಹಿಂದೂ ಕೋಡ್ ಬಿಲ್‌ನಲ್ಲಿ ಪ್ರಧಾನವಾಗಿ ಸೇರಿದ್ದವು.

ಈ ಮಸೂದೆಯನ್ನು ಡಾ. ಅಂಬೇಡ್ಕರ್‌ರವರು ದಿನಾಂಕ 05.02.1951ರಂದು ಲೋಕಸಭೆಯಲ್ಲಿ ಮಂಡಿಸಿದರು. ಮೂರು ದಿನಗಳ ಕಾಲ ಈ ಮಸೂದೆಯ ಪರ–ವಿರುದ್ಧ ಬಿಸಿಬಿಸಿ ಚರ್ಚೆ ನಡೆಯಿತು. ಪ್ರಧಾನಿ ನೆಹರೂ ಸೇರಿದಂತೆ ಅನೇಕ ಪ್ರಗತಿಪರರು ಈ ಮಸೂದೆಯನ್ನು ಬೆಂಬಲಿಸಿದರು. ಸಂಪ್ರದಾಯವಾದಿಗಳು ಬಲವಾಗಿ ವಿರೋಧಿಸಿದರು. ಇದರ ಫಲವಾಗಿ ಒಮ್ಮತ ಮೂಡದ ಕಾರಣ, ಮುಂದಿನ ಅಧಿವೇಶನಕ್ಕೆ ಚರ್ಚೆಯನ್ನು ಮುಂದೂಡಲಾಯಿತು.

ದೇಶದ ಮೂಲೆಮೂಲೆಗಳಲ್ಲಿ ಸಂಪ್ರದಾಯವಾದಿಗಳು ಮಸೂದೆಗೆ ಭಾರಿ ವಿರೋಧ ವ್ಯಕ್ತಪಡಿಸಿದರು. ಸರ್ದಾರ್ ವಲ್ಲಬಾಯ್ ಪಟೇಲ್ ಮತ್ತು ಡಾ. ರಾಜೇಂದ್ರಪ್ರಸಾದ್ ತರಹದ ಘಟಾನುಘಟಿಗಳೂ ಮಸೂದೆಯನ್ನು ವಿರೋಧಿಸಿದರು. ಮಹಿಳೆಯರ ಪ್ರಗತಿಗೆ ಪೂರಕವಾಗಿದ್ದ ಈ ಪ್ರಗತಿಪರ ಮಸೂದೆಗೆ ಮೊದಲು ಬೆಂಬಲ ಸೂಚಿಸಿದ್ದ ಪ್ರಧಾನಿ ನೆಹರೂರವರು ಲೋಕಸಭೆಯ ಒಳಗೂ ಹೊರಗೂ ವ್ಯಕ್ತವಾದ ವಿರೋಧಕ್ಕೆ ಬೆದರಿ ಹಿಂದೆ ಸರಿದರು. ಮಸೂದೆಯನ್ನು ಕೈಬಿಡುವಂತೆ ಪ್ರಧಾನಿ ನೆಹರೂರವರು ಡಾ. ಅಂಬೇಡ್ಕರ್‌ರವರಿಗೆ ಮನವಿ ಮಾಡಿದರು. ಡಾ. ಅಂಬೇಡ್ಕರ್ ಒಪ್ಪಲಿಲ್ಲ.

ದಿ. 17.09.1951ರಂದು ಲೋಕಸಭೆಯಲ್ಲಿ ಮಸೂದೆ ಕುರಿತು ಮತ್ತೆ ಚರ್ಚೆ ಪ್ರಾರಂಭವಾಯಿತು. ಲೋಕಸಭೆಯಲ್ಲಿ ಕಾವೇರಿದ ಚರ್ಚೆ ನಡೆಯುತ್ತಿದ್ದಾಗ ಸಾವಿರಾರು ಮಹಿಳೆಯರು ಪಾರ್ಲಿಮೆಂಟ್ ಭವನದ ಮುಂದೆ ಮಸೂದೆ ಪರವಾಗಿ ಭಾರೀ ಪ್ರದರ್ಶನ ನಡೆಸಿದರು. ಕೊನೆಗೆ ದಿ. 26.09.1951ರಂದು ಲೋಕಸಭೆಯಲ್ಲಿ ಮಸೂದೆಗೆ ಸೋಲಾಯಿತು.


ಶತಶತಮಾನಗಳಿಂದ ಪುರುಷರ ದಬ್ಬಾಳಿಕೆ ಶೋಷಣೆಗಳಿಗೆ ಬಲಿಯಾಗಿದ್ದ ಭಾರತದ ಕೋಟಿ ಕೋಟಿ ಮಹಿಳೆಯರ ಅಭಿವೃದ್ಧಿಯನ್ನೇ ಮುಖ್ಯ ಗುರಿಯಾಗಿಸಿಕೊಂಡು ಹಿಂದೂ ಕೋಡ್ ಬಿಲ್ ಮಂಡಿಸಿದ್ದ ಡಾ. ಅಂಬೇಡ್ಕರ್ ಮಸೂದೆಗೆ ಉಂಟಾದ ಸೋಲಿನಿಂದ ಮನನೊಂದು ಪ್ರತಿಭಟನಾರ್ಥವಾಗಿ ತಮ್ಮ ಕಾನೂನು ಮಂತ್ರಿ ಪದವಿಗೆ ದಿ. 27.09.1951ರಂದು ರಾಜೀನಾಮೆ ನೀಡಿ ನೆಹರೂ ಮಂತ್ರಿಮಂಡಲದಿಂದ ಹೊರಬಂದರು.

ಹಿಂದೂ ಕೋಡ್ ಬಿಲ್‌ನ ಎಲ್ಲಾ ಅಂಶಗಳು ಕಾಲಕಳೆದಂತೆ ಸಣ್ಣಪುಟ್ಟ ಬದಲಾವಣೆಗಳೊಂದಿಗೆ ಕಾನೂನುಗಳಾಗಿ ಮಾರ್ಪಟ್ಟಿರುವುದರಲ್ಲಿ ಅಂದು ಮಹಿಳೆಯರ ಪರ ಪಾರ್ಲಿಮೆಂಟಿನಲ್ಲಿ ಡಾ. ಅಂಬೇಡ್ಕರ್ ನಡೆಸಿದ ಹೋರಾಟ ಪ್ರಮುಖ ಕಾರಣ ಎಂಬುದು ಚಾರಿತ್ರಿಕ ಸತ್ಯ.

ಇತ್ತೀಚೆಗೆ ಬಲಪಂಥೀಯ ಹಿಂದೂಗಳ ಗುರುವಾದ ಎಸ್.ಎಲ್. ಭೈರಪ್ಪ ಅವರು ಭಾರತದ ಸಂವಿಧಾನದ ಬಗ್ಗೆ ಮಾತನಾಡುತ್ತಾ, ಜಾಣಮರೆವಿನಿಂದಾಗಿ, ಸಂವಿಧಾನ ರಚನಾ ಸಮಿತಿಯ ಅಧ್ಯಕ್ಷರಾಗಿದ್ದ ಅಂಬೇಡ್ಕರ್ ಅವರ ಹೆಸರನ್ನು ಹೇಳಲಿಕ್ಕೇ ಮರೆತುಬಿಟ್ಟರು–ಎನ್ನುವ ಸುದ್ದಿ ಬಂತು. ಈ ಜಾಣಮರೆವಿನ ಹಿಂದೆ ಮೇಲುಜಾತಿಯವರ ವ್ಯವಸ್ಥಿತ ಪಿತೂರಿ ಇದೆ. ಒಮ್ಮೆ ಮೈಸೂರಿನ ಬರಹಗಾರರೊಬ್ಬರು "ಸಂವಿಧಾನ ರಚನೆಗಾಗಿ ಹಲವು ಜನ ದುಡಿದಿದ್ದಾರೆ. ಆದರೆ ಉದ್ದೇಶಪೂರ್ವಕವಾಗಿ ಅಂಬೇಡ್ಕರ್ ಅವರನ್ನು ಮಾತ್ರ 'ಸಂವಿಧಾನ ಶಿಲ್ಪಿ' ಎಂದು ಕರೆಯಲಾಗುತ್ತಿದೆ..." ಎಂದದ್ದನ್ನು ಕೇಳಿದ್ದೇನೆ. ಈ ಟೀಕೆ ಹೊಟ್ಟೆಕಿಚ್ಚಿನದ್ದು ಎನ್ನುವುದನ್ನು ಈ ಕೆಳಗಿನ ಐತಿಹಾಸಿಕ ಮಾಹಿತಿ ಸ್ಪಷ್ಟಪಡಿಸುತ್ತದೆ.

ಸಂವಿಧಾನ ಕರಡು ರಚನಾ ಸಮಿತಿ

ರಾಜ್ಯಾಂಗ ಸಭೆಯು ದಿನಾಂಕ 29.08.1947ರಂದು ಅಧಿವೇಶನಗೊಂಡು ಸಂವಿಧಾನದ ಕರಡನ್ನು ರಚಿಸಲು ಎಂಟು ಜನ ಸದಸ್ಯರುಗಳನ್ನುಳ್ಳ ಸಮಿತಿಯನ್ನು ರಚಿಸಿತು. ಆ ಸಮಿತಿಯಲಿ ... ➔ ಪುಟ್ಟ



...ದುಲ್ಲಾ 3) ಡಾ. ಬಿ.ಆರ್. ಅಂಬೇಡ್ಕರ್ 4) ಅಲ್ಲಾಡಿ ಕೃಷ್ಣಸ್ವಾಮಿ ಐಯರ್ 5) ಬಿ.ಎನ್. ಕೃಷ್ಣರಾವ್ 6) ಎಸ್.ಎನ್. ಮುಖರ್ಜಿ 7) ಜುಗಲ್ ಕಿಶೋರ್ ಖನ್ನಾ 8) ಕೇವಲ್ ಕೃಷ್ಣನ್ ಸದಸ್ಯರಾಗಿದ್ದರು.

ಈ ಸದಸ್ಯರುಗಳು ದಿ. 30.08.1947ರಂದು ಸಭೆ ಸೇರಿ ಡಾ. ಬಿ.ಆರ್.ಅಂಬೇಡ್ಕರ್‌ರವರನ್ನು ಸರ್ವಾನುಮತದಿಂದ ಅಧ್ಯಕ್ಷರನ್ನಾಗಿ ಮಾಡಿದರು.

ಈ ಏಳು ಜನ ಸದಸ್ಯರ ಪೈಕಿ ಒಬ್ಬರು ರಾಜೀನಾಮೆ ನೀಡಿದರು. ಒಬ್ಬರು ನಿಧನರಾದರು. ಒಬ್ಬರು ವಿದೇಶಕ್ಕೆ ತೆರಳಿದರು, ಇಬ್ಬರು ಅನಾರೋಗ್ಯದ ಕಾರಣದಿಂದ ದೂರ ಉಳಿದರು. ಇನ್ನೊಬ್ಬರು ಸಂಸ್ಥಾನ ರಾಜ್ಯಗಳ (Princely States) ವಿಚಾರದಲ್ಲಿ ಮಗ್ನರಾದರು. ಹೀಗಾಗಿ ಡಾ. ಅಂಬೇಡ್ಕರ್‌ರವರು ಏಕಾಂಗಿಯಾಗಿ ಸಂವಿಧಾನ ರಚನಾ ಕಾರ್ಯದ ಜವಾಬ್ದಾರಿಯನ್ನು ನಿರ್ವಹಿಸಬೇಕಾಯಿತು.

ಈ ಐತಿಹಾಸಿಕ ಮಾಹಿತಿಯನ್ನು ಓದಿದ ನಂತರವೂ ಡಾ. ಬಿ.ಆರ್. ಅಂಬೇಡ್ಕರ್ ಭಾರತದ 'ಸಂವಿಧಾನ ಶಿಲ್ಪಿ' ಎನ್ನುವ ಹೊಗಳಿಕೆ ಉತ್ಪ್ರೇಕ್ಷಿತ ಸುಳ್ಳು ಎಂದು ಟೀಕಿಸಬಹುದೇ?

ಅಷ್ಟು ಮಾತ್ರವಲ್ಲ, ಅಂಬೇಡ್ಕರ್ ಸಂವಿಧಾನ ರಚನಾ ಕಾರ್ಯದ ಮುಖಂಡತ್ವ ವಹಿಸಿದ್ದು ಒಳ್ಳೆಯದೇ ಆಯಿತು. ಒಂದು ವೇಳೆ ಮೇಲುಜಾತಿಯವರೇ ಒಟ್ಟಾಗಿ ಸಂವಿಧಾನ ರಚಿಸಿದ್ದರೆ, ಅದರಲ್ಲಿ ಸಮಾನತೆ, ಸ್ವಾತಂತ್ರ್ಯ, ಸಹಭ್ರಾತೃತ್ವ, ಸಾಮಾಜಿಕ ನ್ಯಾಯ, ಧರ್ಮನಿರಪೇಕ್ಷತೆಯಂತಹ ಮಾನವೀಯ-ಮೌಲ್ಯಗಳೇ ಮಾಯವಾಗಿರುತ್ತಿದ್ದವು! ಅದು ಮನುಸ್ಮೃತಿ'ಯ ಆಧುನಿಕ ರೂಪವಾಗಿ ಇರುತ್ತಿತ್ತು ಎನ್ನುವುದರಲ್ಲಿ ಸಂಶಯವೇ ಇಲ್ಲ. ಆಗಿನ ಸಾಮಾಜಿಕ, ರಾಜಕೀಯ ವಾತಾವರಣವೇ ಹಾಗಿತ್ತು.

ಮತಾಂತರದ ಹಿನ್ನೆಲೆ

ಹಿಂದೂ ಸಮಾಜದಲ್ಲಿನ ಜಾತಿ ಪದ್ಧತಿ, ಅಸ್ಪೃಶ್ಯತೆ, ಮಹಿಳೆಯರ ಬಗೆಗಿನ ತಾರತಮ್ಯ ಮುಂತಾದ ದೋಷಗಳ ಬಗ್ಗೆ ಡಾ. ಅಂಬೇಡ್ಕರ್ ತೀವ್ರ ಟೀಕೆ ಮಾಡುತ್ತಿದ್ದರು. ಕ್ರಿಶ್ಚಿಯನ್ನರು, ಮುಸ್ಲಿಮರು ಹಾಗೂ ಸಿಖ್ಖರುಗಳಲ್ಲಿ ಕಂಡು ಬರುವ ಭ್ರಾತೃತ್ವ ಭಾವನೆ, ನಮ್ಮ ಧರ್ಮದವರೆಲ್ಲ ಒಂದು ಎಂಬ ಐಕ್ಯತಾ ಭಾವನೆ ಹಿಂದೂಗಳಲ್ಲಿ ಮಾತ್ರ ನಾಪತ್ತೆಯಾಗಿದೆ. ಇವರಲ್ಲಿ ದೇಶಾಭಿಮಾನಕ್ಕಿಂತ ಜಾತಿ ಅಭಿಮಾನವೇ ಹೆಚ್ಚು ಕಂಡುಬರುತ್ತಿದೆ. ಪ್ರತಿಯೊಂದು ಜಾತಿಯವರು ತಮ್ಮ ಜಾತಿಯೇ ಶ್ರೇಷ್ಠ ಎಂದು ಬೀಗುತ್ತಾರೆ. ಇನ್ನೊಂದು ಜಾತಿಯನ್ನು ಒಳಗೊಳಗೇ ಟೀಕಿಸುತ್ತಾರೆ. ಪ್ರಾಮಾಣಿಕತೆ, ಗುಣ ನಡತೆ, ವಿದ್ಯೆ ಪಾಂಡಿತ್ಯ ಹಾಗೂ ಸಾಮರ್ಥ್ಯ ಇವುಗಳಿಗಿಂತ ಜಾತಿಯಿಂದಲೇ ಮನುಷ್ಯನ ಯೋಗ್ಯತೆಯನ್ನು ಅಳೆಯಲಾಗುತ್ತದೆ ಎಂದು ಡಾ. ಅಂಬೇಡ್ಕರ್ ಟೀಕಿಸುತ್ತಿದ್ದರು:

ಹಿಂದೂ ಧರ್ಮದ ಚಾತುರ್ವರ್ಣ ವ್ಯವಸ್ಥೆ ಪ್ರಕಾರ ಶೂದ್ರರು ಕೂಡ ವಿದ್ವಾಂಸರಾಗಬಾರದು. ಮೇಲ್ಜಾತಿಯವರ ಸೇವೆ ಮಾಡುವುದೇ ಅತಿಶೂದ್ರರಾದ ಅಸ್ಪೃಶ್ಯರ ಹಣೆಬರಹ. ಜ್ಞಾನಿಯಾದರೂ ಶೂದ್ರನ ಮಗ ಶೂದ್ರನೇ. ದುಷ್ಟನಾದರೂ ಬ್ರಾಹ್ಮಣನ ಮಗ ಬ್ರಾಹ್ಮಣನೇ. ಹಿಂದೂ ಧರ್ಮದ ಅವನತಿಗೆ ಹಾಗೂ ಭಾರತದ ದುರ್ಗತಿಗೆ ಈ ಜಾತಿ ವ್ಯವಸ್ಥೆಯೇ ಮೂಲ ಕಾರಣ ಎಂದು ಡಾ. ಅಂಬೇಡ್ಕರ್ ಪ್ರತಿಪಾದಿಸುತ್ತಿದ್ದರು. ಆದ್ದರಿಂದ ಜಾತಿ ವ್ಯವಸ್ಥೆಯನ್ನು ನಾಶ ಮಾಡಿ ಹಿಂದೂ ಧರ್ಮವನ್ನು ನವೀಕರಣಗೊಳಿಸಬೇಕೆಂದು, ವೇದಶಾಸ್ತ್ರಗಳ ಬಗೆಗಿನ ಮೂಢನಂಬಿಕೆಯನ್ನು ತೊಲಗಿಸಬೇಕೆಂದು, ಪರಂಪರಾಗತವಾಗಿ ಬರುವ ಪುರೋಹಿತ್ಯವನ್ನು ತಪ್ಪಿಸಿ ನಿರ್ದಿಷ್ಟ ಅರ್ಹತೆಯನ್ನು ನಿಗದಿಪಡಿಸಿ ಅವು ಯಾರಲ್ಲಿವೆಯೋ ಅವರೆಲ್ಲಾ ಪುರೋಹಿತರಾಗಲು ಅವಕಾಶ ನೀಡಬೇಕೆಂದು ಡಾ. ಅಂಬೇಡ್ಕರ್ ಸಲಹೆ ಮಾಡುತ್ತಿದ್ದರು.

ಹಿಂದೂ ಧರ್ಮದ ದೋಷಗಳ ಬಗ್ಗೆ ಈ ರೀತಿ ಟೀಕಾಪ್ರಹಾರ ಮಾಡಿ ಸುಧಾರಣೆಗಾಗಿ ಸಲಹೆಗಳನ್ನು ಮುಂದಿಟ್ಟ ಡಾ. ಅಂಬೇಡ್ಕರ್ ಕೆಲವು ಸಮಯ ಕಾಯ್ದರು. ಹಿಂದೂಗಳಲ್ಲಿ ಯಾವುದೇ ಬದಲಾವಣೆಗಳು ಆಗದಿರುವುದನ್ನು ಗಮನಿಸಿ, ಹಿಂದೂಗಳು ತಮ್ಮ ನಿಲುವು ಬದಲಾಯಿಸಿಕೊಳ್ಳದಿದ್ದರೆ ಅಸ್ಪೃಶ್ಯರು ಹಿಂದೂ ಧರ್ಮ ತ್ಯಜಿಸುವುದು ಅನಿವಾರ್ಯವಾಗುತ್ತದೆ ಎಂದು ಎಚ್ಚರಿಕೆ ನೀಡಿದರು. ಅಂತಿಮವಾಗಿ ಮೇಲ್ಜಾತಿಯ ಜನರ ಮನಸ್ಸು ಬದಲಾಗುವುದಿಲ್ಲ ಎಂಬ ಭಾವನೆ ದೃಢವಾಗುತ್ತಿದ್ದಂತೆ ತಮ್ಮ ಜನರ ಸಮ್ಮೇಳನ ನಡೆಸಿದ ಡಾ. ಅಂಬೇಡ್ಕರ್ "ಅಸ್ಪೃಶ್ಯತೆಯನ್ನು ಪೋಷಿಸುತ್ತಿರುವ ಧರ್ಮ ಧರ್ಮವಲ್ಲ, ಮನುಷ್ಯನಿಗಾಗಿ ಧರ್ಮವೇ ಹೊರತು ಧರ್ಮಕ್ಕಾಗಿ ಮನುಷ್ಯನಿರಬೇಕಾಗಿಲ್ಲ. ನಾವೂ ಮನುಷ್ಯರೆಂದು ಪರಿಗಣಿಸದ ಧರ್ಮದಿಂದ ನಮಗಾಗಬೇಕಾದ್ದೇನು? ಮಾನವೀಯತೆಯನ್ನು ಗೌರವಿಸದ ಧರ್ಮವನ್ನು ಜನ ತಮ್ಮ ಆತ್ಮಗೌರವವನ್ನು ಕಾಪಾಡಿಕೊಳ್ಳುವುದಕ್ಕಾಗಿ ಹಿಂದೂ ಧರ್ಮವನ್ನು ತ್ಯಜಿಸಲು ಸಿದ್ಧರಾಗಬೇಕು" ಎಂದು ಸಮ್ಮೇಳನದಲ್ಲಿ ನಿರ್ಣಯ ಕೈಗೊಳ್ಳಲಾಯಿತು.

ಹಿಂದೂ ಧರ್ಮವನ್ನು ತೊರೆಯುವ ನಿರ್ಧಾರವನ್ನು ಡಾ. ಅಂಬೇಡ್ಕರ್ ಪ್ರಕಟಿಸುತ್ತಿದ್ದಂತೆ ಕ್ರಿಶ್ಚಿಯನ್, ಮುಸ್ಲಿಂ ಹಾಗೂ ಸಿಖ್ ಧರ್ಮಗುರುಗಳು ಅವರ ಬೆನ್ನ ಹಿಂದೆ ಬಿದ್ದು ತಮ್ಮ ಧರ್ಮ ಸೇರುವಂತೆ ಮನವೊಲಿಸತೊಡಗಿದರು; ಆಸೆ ಆಮಿಷಗಳನ್ನೊಡ್ಡಿದರು. ಆದರೆ ಅಂಬೇಡ್ಕರ್ ಇದ್ಯಾವುದಕ್ಕೂ ಮನ್ನಣೆ ನೀಡದೆ ಅನೇಕ ವರ್ಷಗಳ ಕಾಲ ಬೇರೆ ಬೇರೆ ಧರ್ಮಗಳ ಬಗ್ಗೆ ಹಾಗೂ ತಮ್ಮ ಮತ್ತು ತಮ್ಮ ಅನುಯಾಯಿಗಳಾದ ಅಸ್ಪೃಶ್ಯರ ಮತಾಂತರದಿಂದ ಭವಿಷ್ಯದಲ್ಲಿ ಭಾರತದ ಮೇಲಾಗುವ ಪರಿಣಾಮಗಳ ಬಗ್ಗೆ ಸುದೀರ್ಘ ಮಂಥನ ನಡೆಸಿ ದೇಶದ ಹಿತಕ್ಕಾಗಲಿ, ಇತಿಹಾಸಕ್ಕಾಗಲಿ, ಸಂಸ್ಕೃತಿ, ಪರಂಪರೆಗಾಗಲಿ ಧಕ್ಕೆ ಬರದಂತೆ ಭಾರತದ ಮಣ್ಣಿನಲ್ಲೇ ಹುಟ್ಟಿ ಭಾರತೀಯ ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿದ್ದ ಬೌದ್ಧಧರ್ಮವನ್ನು ಸ್ವೀಕರಿಸಲು ಅಂತಿಮವಾಗಿ ನಿರ್ಧಾರ ಕೈಗೊಂಡರು.

ಮನುಸ್ಮೃತಿಯನ್ನು ಸುಟ್ಟದ್ದು

ಆಗಿನ ಚಾರಿತ್ರಿಕ ಸಂದರ್ಭದಲ್ಲಿ ತನ್ನ ತಾತ್ವಿಕ ನಿಲುವಿನ ಸ್ಪಷ್ಟತೆಗಾಗಿ ಅಂಬೇಡ್ಕರ್ ಮನುಸ್ಮೃತಿಯನ್ನು ಸುಡುವುದು ಅನಿವಾರ್ಯವಾಗಿತ್ತು.

ಹಿಂದೂ ಧರ್ಮದಲ್ಲಿ ಅಸ್ಪೃಶ್ಯತೆಯನ್ನು ಪೋಷಿಸಿದ, ಜಾತಿಪದ್ಧತಿಯನ್ನು ಸೃಷ್ಟಿಸಿ ಜನರನ್ನು ಸಣ್ಣ ಸಣ್ಣ ಗುಂಪುಗಳಾಗಿ ಒಡೆದಿರುವ, ಶೂದ್ರಾತಿಶೂದ್ರರ ಪ್ರಗತಿಯನ್ನು ನಾಶ ಮಾಡಿ ಅವರನ್ನು ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ದಾಸ್ಯಕ್ಕೆ ಈಡು ಮಾಡಿದ ಮನುಸ್ಮೃತಿಗೆ ಮಹಡ್‌ನಲ್ಲಿ ದಿನಾಂಕ 25.12.1927ರಂದು ಡಾ. ಅಂಬೇಡ್ಕರ್‌ರವರ ನಾಯಕತ್ವದಲ್ಲಿ ಪ್ರತಿಭಟನಾರ್ಥವಾಗಿ ಅಗ್ನಿಸ್ಪರ್ಶ ಮಾಡಲಾಯಿತು.

ನಿಮ್ನವರ್ಗದ ಜನರಿಗೆ ಸಂದೇಶ

1956ರ ಮಧ್ಯ ಭಾಗದಲ್ಲಿ ಅಂಬೇಡ್ಕರ್‌ರವರ ಆರೋಗ್ಯ ಕುಸಿಯಲು ಪ್ರಾರಂಭವಾಗಿತ್ತು. ಚಿಕಿತ್ಸೆಗೆ ದೇಹ ಸ್ಪಂದಿಸುತ್ತಿರಲಿಲ್ಲ. ತಮ್ಮ ಕಾಲ ಮುಗಿಯಿತೆಂದು ಅವರಿಗೆ ಅನ್ನಿಸಿತ್ತು. ಮಾಡಬೇಕಾಗಿದ್ದ ಕಾರ್ಯಗಳು ಹಾಗೂ ತಲುಪಬೇಕಾಗಿದ್ದ ಗುರಿಯನ್ನು ಪೂರ್ಣವಾಗಿ ಈಡೇರಿಸಲಾಗಲಿಲ್ಲವೆಂಬ ಕೊರಗು ಅಂಬೇಡ್ಕರ್‌ರವರನ್ನು ಆವರಿಸಿತ್ತು. ತಮ್ಮ ನಂತರ ತಾವು ನೆರವೇರಿಸಬೇಕೆಂದಿದ್ದ ಮಹತ್ಕಾರ್ಯಗಳನ್ನು ಈಡೇರಿಸಬಲ್ಲ ಸಮರ್ಥ ಉತ್ತರಾಧಿಕಾರಿ ಯಾರೂ ಕಾಣುತ್ತಿರಲಿಲ್ಲ. ಇಂತಹ ಸ್ಥಿತಿಯಲ್ಲಿ ಒಮ್ಮೆ ತಮ್ಮ ಕಾರ್ಯದರ್ಶಿ ನಾನಕ್‌ಚಂದ್ ರತ್ತುವಿಗೆ ಡಾ.ಅಂಬೇಡ್ಕರ್‌ರವರು ಹೇಳಿದ್ದರು "ಈಗ ನಾನು ಮಾಡಿರುವ ಸಾಧನೆಯನ್ನು ಏಕಾಂಗಿಯಾಗಿ ಹೋರಾಡಿ, ಅನೇಕ ಕಷ್ಟ-ನಷ್ಟಗಳನ್ನು ಅನುಭವಿಸಿ, ಅನೇಕರ ವಿರೋಧ ಕಟ್ಟಿಕೊಂಡು ಸಾಧಿಸಿದ್ದೇನೆ. ನಾನು ಇಲ್ಲಿಯವರೆಗೆ ಎಳೆದು ತಂದಿರುವ ಈ ಹೋರಾಟದ ರಥವನ್ನು ನನ್ನ ಅನುಯಾಯಿಗಳು ಮುಂದಕ್ಕೆ ಎಳೆಯಲಿ. ಅವರಿಂದ ಮುಂದಕ್ಕೆ ಎಳೆಯಲು ಸಾಧ್ಯವಾಗದಿದ್ದರೆ, ಆ ರಥ ಇಂದು ಎಲ್ಲಿ ನಿಂತಿದೆಯೋ ಅಲ್ಲೇ ನಿಂತಿರಲಿ. ಯಾವ ಕಾರಣಕ್ಕೂ ಆ ರಥವನ್ನು ಯಾರೂ ಹಿಂದಕ್ಕೆ ತಳ್ಳದಂತೆ ನೋಡಿಕೊಳ್ಳಲಿ. ನನ್ನ ಜನರಿಗೆ ಇದು ನನ್ನ ಸಂದೇಶ."

ಈಗ ಅಂಬೇಡ್ಕರ್ ನೆನೆಯುತ್ತಾ...

06.12.1956ರಂದು ತನ್ನ ದೆಹಲಿ ನಿವಾಸದಲ್ಲಿ ಡಾ. ಅಂಬೇಡ್ಕರ್ ಅವರು ನಿಧನರಾದರು. ಈಗ 2015 ರಾಜಕೀಯವಾಗಿ, ಸಾಮಾಜಿಕವಾಗಿ ಭಾರತದಲ್ಲಿ ಹಲವು ಸ್ಥಿತ್ಯಂತರಗಳು ನಡೆದುಹೋಗಿವೆ. ಮೇಲುಜಾತಿಯ ಕಾಂಗ್ರೆಸಿಗರ 'ಮೃದು ಹಿಂದೂತ್ವ' ಅಂಚಿಗೆ ತಳ್ಳಲ್ಪಟ್ಟು, ನರೇಂದ್ರ ಮೋದಿ ನೇತೃತ್ವದ 'ಉಗ್ರ ಹಿಂದೂತ್ವ' ಅಧಿಕಾರದ ಚುಕ್ಕಾಣಿ ಹಿಡಿದಿದೆ. ಅಂಬೇಡ್ಕರ್ ಮುಂದಕ್ಕೆ ಎಳೆದಿದ್ದ 'ರಥ'ವನ್ನು ಮನುವಾದಿಗಳು ಹಿಂದಕ್ಕೆಳೆಯುತ್ತಿದ್ದಾರೆ. ಎಲ್ಲೆಲ್ಲೂ ಜಾತೀಯತೆ, ಮತೀಯತೆ, ಜನಾಂಗವಾದಗಳು ಅಟ್ಟಹಾಸಗೈಯುತ್ತಿವೆ.

"ಹೆಳವನ ಹೆಗಲ ಮೇಲೆ ಕುರುಡ ಕೂತಿದ್ದಾನೆ
ದಾರಿ ಸಾಗುವುದೆಂತೋ ನೋಡಬೇಕು..?"
([illegible] : ಅಬಗ)

ಗ್ರಂಥಋಣ: ಬಾಬಾ ಸಾಹೇಬ್ ಡಾ। ಅಂಬೇಡ್ಕರ್ ಚಿತ್ರ ಸಂಪುಟ

■ ಡಾ. ಹಯವದನ ಉಪಾಧ್ಯ
ಕುಂದಾಪುರ

ಸಾಮಾಜಿಕ ಹೊಣೆಗಾರಿಕೆ ಕನವರಿಕೆ

ನಾನು ಸುಮಾರು ವರ್ಷಗಳಿಂದ ವಾರ್ತಾ ಪತ್ರಿಕೆಗಳನ್ನು ಗಮನಿಸುತ್ತಿದ್ದೇನೆ. ಪತ್ರಿಕಾ ವರದಿಗಾರರೂ, ಮಾಲೀಕರೂ ಆದ ಕೆಲವರ ಪರಿಚಯವೂ ಇದೆ. ಹಿಂದೆ ಪತ್ರಿಕೆಗಳು ಸೇವಾವಲಯದಲ್ಲಿದ್ದವು. ಜನರೊಡನೆ ನಿರಂತರವಾಗಿ ಅನುಸಂಧಾನ ಮಾಡುತ್ತಿದ್ದುದರಿಂದ ಸಮಾಜದ ಸ್ಪಂದನೆ ಅದಕ್ಕೆ ಸೃಷ್ಟಿಯಾಗುತ್ತಿತ್ತು. ಸಮುದಾಯದ ನಾಡಿಮಿಡಿತ ಅರಿತು ಅದನ್ನು ಸರಿದಾರಿಯಲ್ಲಿ ತೆಗೆದುಕೊಂಡು ಹೋಗುವ ಪ್ರಯತ್ನ ಮಾಡುತ್ತಿತ್ತು. ಪತ್ರಿಕೆ ನಡೆಸುವುದು ಹಣ ತರುವ ಕಸುಬು ಆಗಿರಲಿಲ್ಲ. ಪತ್ರಕರ್ತರಿಗೆ ಇದರ ಸ್ಪಷ್ಟ ಅರಿವು ಇರುತ್ತಿತ್ತು. ಹಣದ ಶ್ರೀಮಂತಿಕೆ ಇಲ್ಲದಿದ್ದರೂ ಗುಣದ ಶ್ರೀಮಂತಿಕೆ ಇದ್ದವರು ಈ ಕ್ಷೇತ್ರವನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದರು. ಬಡತನವನ್ನು, ಸರಳ ಬದುಕನ್ನು ಸ್ವಇಚ್ಛೆಯಿಂದಲೇ ಆಹ್ವಾನಿಸುತ್ತಿದ್ದರು. ಅದರಲ್ಲಿ ಸಂತೋಷ, ನೆಮ್ಮದಿ ಕಾಣುತ್ತಿದ್ದರು.



ಕಾಲಕ್ರಮೇಣ ಪತ್ರಿಕಾವಲಯ ಉದ್ದಿಮೆ ಆಯಿತು. ಜನಹಿತ ಹಿಂಸರಿದು ಹಣಹಿತ ಮೇಲುಗೈ ಪಡೆಯಿತು. ಸಣ್ಣ, ಮಧ್ಯಮ, ದೊಡ್ಡ ಪತ್ರಿಕೆಗಳು ಯಾವುದೇ ಇರಲಿ, ಮಾಲೀಕರ ಪ್ರಮುಖ ಕಸುಬಿಗೂ ಪತ್ರಿಕೆಗೂ ನೇರವಾದ ಯಾವ ಸಂಬಂಧವೂ ಇರುವುದಿಲ್ಲ. ಅವರ ಪ್ರಮುಖ ಕಸುಬು ಬೇರೆ ಯಾವುದೋ ಇರುತ್ತದೆ. ತಮ್ಮ ಉದ್ದಿಮೆ ಯಾವುದೇ ಅಡೆತಡೆ ಇಲ್ಲದೆ ನಿರ್ವಿಘ್ನವಾಗಿ ನಡೆಯುವಂತೆ ಮಾಡಲು ತಮ್ಮ ಒಡೆತನದ ಪತ್ರಿಕೆಯನ್ನು ಗುರಾಣಿಯಾಗಿ ಬಳಸುತ್ತಾರೆ.

ಈ ಬದಲಾವಣೆ ದಿಢೀರನೆ ಆದುದಲ್ಲ. ನನಗೆ ಪರಿಚಯ ಇರುವ ಪತ್ರಿಕಾ ವರದಿಗಾರರು ಒಬ್ಬರು ಇದ್ದರು. ಅವರು ವರದಿ ಮಾಡುತ್ತಿದ್ದ ಪತ್ರಿಕೆ ರಾಜ್ಯ ಮಟ್ಟದ್ದು, ಬಹುದೊಡ್ಡ ಪತ್ರಿಕೆ ಎಂದು ಹೆಸರು ಮಾಡಿತ್ತು. ಅದಕ್ಕೆ ವರದಿಗಾರರಾಗಿದ್ದ ಇವರಿಗೆ ನಿಗದಿತ ಸಂಬಳ ಇರಲಿಲ್ಲ. ಜೀವನ ನಿರ್ವಹಣೆಗಾಗಿ ಲಾರಿಯನ್ನು ಇಟ್ಟಿದ್ದರು. ಬಹಳ ಪ್ರಾಮಾಣಿಕ ವ್ಯಕ್ತಿ, ನ್ಯಾಯಬದ್ಧವಾಗಿ ವ್ಯವಹರಿಸುತ್ತಿದ್ದರು. ಸರ್ಕಾರಿ ಅಧಿಕಾರಿಗಳಿಂದ ಇವರಿಗೆ ನಿರಂತರ ಕಿರುಕುಳ ಆಗುತ್ತಿತ್ತು. ಈ ಅನಗತ್ಯ ಹಿಂಸೆಯಿಂದ ಪಾರಾಗಲು ತಮ್ಮ ಲಾರಿಗೆ ಅವರು ತಾವು ವರದಿ ಮಾಡುತ್ತಿದ್ದ ರಾಜ್ಯಮಟ್ಟದ ಪತ್ರಿಕೆಯ ಹೆಸರನ್ನೇ ಇಟ್ಟರು! ಆಶ್ಚರ್ಯ ಎಂಬಂತೆ ಸರ್ಕಾರಿ ಅಧಿಕಾರಿಗಳ ಕಾಟ ತಪ್ಪಿತು!

ಪತ್ರಿಕೆ ಹೆಸರಿನ ಪ್ರಭಾವವನ್ನು ಅರಿತ ಇತರರೂ ಅದನ್ನು ನ್ಯಾಯಯುತ ವ್ಯವಹಾರಗಳಿಗೆ ಸೀಮಿತವಾಗಿ ಬಳಸಿರಬಹುದು. ಕ್ರಮೇಣ ಮುಂದುವರೆದು ಸಮಾಜ ಘಾತುಕ ಕೃತ್ಯಗಳಿಗೂ ಅದನ್ನು ಬಳಸಲು ಪ್ರಾರಂಭಿಸಿರಬೇಕು ಅನ್ನಿಸುತ್ತೆ. ಹೇಗಾದರೂ ಇರಲಿ, ಹೀಗೆ ಬಳಕೆಯಾಗುತ್ತಿರುವುದು ಮಾತ್ರ ಸತ್ಯ. ಇದೇ ಸಮಯದಲ್ಲಿ ದೃಶ್ಯ ಮಾಧ್ಯಮ ತಲೆ ಎತ್ತಿತ್ತು. ಒಟ್ಟಿನಲ್ಲಿ ಸುದ್ದಿ ಮಾಧ್ಯಮ ಎಂಬುದು ಆಸಕ್ತಿ ಇರುವವರ ಕಸುಬು ಆಗದೆ ಇತರೆ ಉದ್ದಿಮೆ ದಾರರ ಉಪಕಸುಬಾಗಿದೆ. ಇದೆಲ್ಲದರ ಪರಿಣಾಮವಾಗಿ ಅವುಗಳ ಸಾಮಾಜಿಕ ಜವಾಬ್ದಾರಿ ಕ್ಷೀಣಿಸುತ್ತಿದೆ.

ಇತ್ತೀಚೆಗೆ ಶಿವಮೊಗ್ಗ ನಗರದಲ್ಲಿ ಒಂದು ಘಟನೆ ನಡೆಯಿತು. ಪಿಎಫ್‌ಐ ಕಾರ್ಯಕರ್ತರು ಪಥಸಂಚಲನ ನಡೆಸಿದರು. ಆಗ ಪಾಕಿಸ್ತಾನದ ಪರ ಘೋಷಣೆ ಹಾಕಿದರು ಎಂದು ಆರೋಪಿಸಿ ಮೆರವಣಿಗೆಯ ಮೇಲೆ ಕಲ್ಲು ತೂರಾಟ ನಡೆಯಿತು, ಗಲಭೆ ಆಯಿತು. ಮಂಗಳೂರಿನಿಂದ ಬಂದಿದ್ದ ಕಾರ್ಯಕರ್ತರು ಹಿಂತಿರುಗುವಾಗ ಓರ್ವ ಅಮಾಯಕನನ್ನು ನಿಷ್ಕಾರಣವಾಗಿ ಅಮಾನುಷವಾಗಿ ಕೊಲೆ ಮಾಡಿದರು ಎಂಬ ಸುದ್ದಿ ಹರಡಿತು. ಗಲಭೆ ಭುಗಿಲೆದ್ದಿತು. ಪೊಲೀಸರು ಕರ್ಫ್ಯೂ ವಿಧಿಸಿದರು. ರಾಜಕೀಯ ನಾಯಕರು ಮಾಧ್ಯಮಗಳಲ್ಲಿ ವಿಜೃಂಭಿಸಿದರು. ಕಿಡಿಗೇಡಿಗಳ ಈ ಕೃತ್ಯವನ್ನು ಖಂಡತುಂಡವಾಗಿ ಖಂಡಿಸಿದರು. ಅಪರಾಧಿಗಳನ್ನು ಬಂಧಿಸಬೇಕು, ಅವರಿಗೆ ಶಿಕ್ಷೆಯಾಗಬೇಕು ಎಂದು ಹೇಳಿಕೆ ನೀಡಿದರು. ಕಿಡಿಗೇಡಿಗಳು ಪೆಟ್ಟಿಗೆ ಅಂಗಡಿಗಳಿಗೆ, ತಳ್ಳುಗಾಡಿಗಳಿಗೆ, ವಾಹನಗಳಿಗೆ ಬೆಂಕಿ ಹಚ್ಚಿದರು. ಇವೆಲ್ಲ ದೃಶ್ಯಮಾಧ್ಯಮಗಳಲ್ಲಿ ವಿಜೃಂಭಿಸಿತು. ಪತ್ರಿಕೆಗಳು ರೋಚಕ ವರದಿ ಮಾಡಿದವು. ಕೆಲವು ವಾಹಿನಿಗಳಲ್ಲಿ ನಿರಂತರವಾಗಿ [illegible] ನಡೆಯಿತು. [illegible] ಎಲ್ಲ ಮಾಧ್ಯಮಗಳೂ 'ಹಿಂದೂ' ಕೊಲೆ ಆ[illegible] ಎಂದು ಸಾರಿದವು. ಕೊಲೆಗಾರರ ಬಂಧನಕ್ಕೆ ಶಿಕ್ಷೆಗೆ ಒತ್ತಾಯಿಸಿದವು.

ಪೊಲೀಸರು ತನಿಖೆ ತೀವ್ರಗೊಳಿಸಿದರು. ಕಳೆದ ವಾರ ಮಂಜುನಾಥನ ಕೊಲೆಗಾರರನ್ನು ಪೊಲೀಸರು ಪತ್ತೆಹಚ್ಚಿದರು. ಇದು 'ನಾನು ನೋಡುವ' ಯಾವ ಟಿವಿ ವಾಹಿನಿಯಲ್ಲೂ ಸುದ್ದಿ ಆಗಲಿಲ್ಲ. 'ನಾನು ಓದುವ' ಯಾವ ಪತ್ರಿಕೆಗಳಲ್ಲೂ ಜಾಗ ಕಾಣಲಿಲ್ಲ (ದಿ ಹಿಂದೂ ಪತ್ರಿಕೆ ಇದಕ್ಕೆ ಅಪವಾದ. ಆ ಪತ್ರಿಕೆ ಇದನ್ನು ಮುಖಪುಟದ ಸುದ್ದಿ ಮಾಡಿತು). ಒಬ್ಬರನ್ನು ಕೊಲೆ ಮಾಡಿದಾಗ ಮಾಧ್ಯಮಗಳಿಗೆ ಇದ್ದಂತಹ ಸಾಮಾಜಿಕ ಕಳಕಳಿ, ನ್ಯಾಯನಿಷ್ಠುರತೆ ಅಪರಾಧಿ ಪತ್ತೆ ಆದಾಗ ಮಾಯ ಆಗಿತ್ತು! ಒಂದು ಅಂಶ ಸ್ಪಷ್ಟ, ಕೊಲೆ ಮಾಡಿದವರು ಅವರು ಊಹಿಸಿದವರಾಗಿರದೆ ಹಿಂದೂಗಳಾಗಿದ್ದರು. ಮಾತ್ರವಲ್ಲ ಕೊಲೆಯಾದವನ ಒಡಹುಟ್ಟಿದ ಅಕ್ಕನೇ ಇತರರೊಡನೆ ಸೇರಿ ಈ ದುಷ್ಕೃತ್ಯ ಎಸಗಿದ್ದಳು!

ಯಾವುದೇ ಗಲಭೆ ಸಮುದಾಯಕ್ಕೆ ಒಳಿತನ್ನು ಮಾಡುವುದಿಲ್ಲ. ಕೆಲವು ನಿರ್ದಿಷ್ಟ ಶಕ್ತಿಗಳಿಗೆ ಮಾತ್ರ ಅದು ಪ್ರಯೋಜನಕಾರಿ. ಸುದ್ದಿ ಮಾಧ್ಯಮಗಳ ಇಂತಹ ಇಬ್ಬಂದಿ ನೀತಿಯಿಂದ ಸಮಾಜಘಾತುಕಗಳ ಶಕ್ತಿಗಳಿಗೆ ಪರೋಕ್ಷವಾಗಿಯೋ, ಪ್ರತ್ಯಕ್ಷವಾಗಿಯೋ ಪ್ರಚೋದನೆ ನೀಡಿದಂತಾಗುತ್ತದೆ. ಅವು ಹೆಚ್ಚು ಲಾಭ ಪಡೆಯಲು ಸಾಧ್ಯವಾಗುತ್ತದೆ.

ಇತ್ತೀಚೆಗೆ ಅತ್ಯಾಚಾರ, ಕೊಲೆ ಅಧಿಕವಾಗುತ್ತಿವೆ. ಇನ್ನೂ ನಿಖರವಾಗಿ ಹೇಳಬೇಕೆಂದರೆ ಹೆಚ್ಚು ಬಯಲಾಗುತ್ತಿವೆ. ಭ್ರಷ್ಟಾಚಾರಿಗಳ ಚರಿತ್ರೆ ಧಾರಾವಾಹಿಯಾಗುತ್ತಿದೆ. ಮಾಧ್ಯಮಗಳಲ್ಲಿ ಇವು ಬಹು ರೋಚಕವಾಗಿ ವರದಿಯಾಗುತ್ತವೆ. ಅಧಿಕಾರಸ್ಥರು ಅಪರಾಧಿಗಳಾಗಿರುವ ಗುಮಾನಿ ಇದ್ದರಂತೂ ವಿವರಣೆ ರಸವತ್ತಾಗಿರುತ್ತದೆ.

ಅಧಿಕಾರಿ, ಮಂತ್ರಿ, ಮುಖ್ಯಮಂತ್ರಿ ಅಥವಾ ಯಾರೋ ಒಬ್ಬ ಸಮಾಜದಲ್ಲಿ ಪ್ರತಿಷ್ಠಿತ ವ್ಯಕ್ತಿ ಅಪರಾಧ ಮಾಡಿ ಜೈಲು ಸೇರಿದರು ಅನ್ನಿ, ಅವರು ಜೈಲಿಗೆ ಹೋಗುವುದನ್ನ, ಜೈಲು ಸೇರದೆ ನೇರವಾಗಿ ಆಸ್ಪತ್ರೆ ಸೇರಿದ್ದನ್ನು, ಆ ದೃಶ್ಯ ನೋಡಲು ಬಂದ ದುಃಖತಪ್ತ ಅಭಿಮಾನಿಗಳನ್ನು, ಅವರಿಗೆ ಸಾಂತ್ವನ ಹೇಳಲು ಬಂದ ಪ್ರತಿಷ್ಠಿತ ಮಠಗಳ ಮಠಾಧೀಶರನ್ನು, ಬೇಲು ಸಿಕ್ಕಿ ಹೊರಬರಬೇಕಾದ ದಿವಸ ಜೈಲಿನ ಮುಂಭಾಗ ಕಿಕ್ಕಿರಿದು ನೆರೆದಿರುವ ಸಂತೋಷಭರಿತ ಅಭಿಮಾನಿಗಳನ್ನು ಇಂತಹವೆಲ್ಲವನ್ನೂ ಅತಿ ಉತ್ಸಾಹದಿಂದ ತೋರಿಸುತ್ತವೆ ಟಿವಿಗಳು, ವಿವರಣಾತ್ಮಕ ವರದಿ ನೀಡುತ್ತವೆ ಪತ್ರಿಕೆಗಳು. ಇದೆಲ್ಲವೂ ಸರಿ ಎಂದೇ ಭಾವಿಸೋಣ. ಇಲ್ಲಿಗೇ ಮಾಧ್ಯಮಗಳ ಜವಾಬ್ದಾರಿ ಮುಗಿಯಿತೆ? ಮುಂದೆ ಅವರಿಗೇನಾಯಿತು? ಎಂಬುದನ್ನು ತಿಳಿಯುವ ಕುತೂಹಲ ತಣಿಸಬಾರದೆ? ಇದು ಓದುಗನ, ನೋಡುಗನ, ಒಟ್ಟಾರೆ ಸಮಾಜದ ಹಿತದಿಂದ ಮಾತ್ರ ಅಲ್ಲ, ಆರೋಪಿಯ ದೃಷ್ಟಿಯಿಂದಲೂ ಇದು ಮುಖ್ಯವಾಗುತ್ತದೆ. ಯಾಕೆಂದರೆ ಕಾನೂನುರೀತಿ ಆತ ಆರೋಪದಿಂದ ವಿಮುಕ್ತನಾದರೂ ಸಾರ್ವಜನಿಕರಿಗೆ ಅದು ತಿಳಿಯದೆ ಹೋಗುವುದರಿಂದ ಆತ ಕಳಂಕಿತನಾಗಿಯೇ ಉಳಿಯುತ್ತಾನೆ.

ಅಪರಾಧ ಮಾಡಿ ಜೈಲು ಸೇರುತ್ತಾರೆ. ಬೇಲಿನ ಮೇಲೆ ಬಿಡುಗಡೆಯಾಗುತ್ತಾರೆ. ತಾವು ಯಾವ ಅಪರಾಧವನ್ನೂ ಮಾಡಿಲ್ಲ ಎಂದು ಮೊದಲಿನಂತೆಯೇ ಇರುತ್ತಾರೆ ಅಥವಾ ಹಾಗೆ ಇರುವಂತೆ ತೋರ್ಪಡಿಸಿಕೊಳ್ಳುತ್ತಾರೆ. ಅವರ ಮೇಲಿನ ಅಪರಾಧ ಮೊಕದ್ದಮೆ ಯಾವ ಹಂತದಲ್ಲಿದೆ? ವಿಚಾರಣೆ ನಡೆಯುತ್ತಿದ್ದರೆ ಪರ ವಿರೋಧಿಗಳ ನಡುವೆ ಏನು ವಾಗ್ವಾದ ನಡೆಯಿತು? ವಿಚಾರಣೆ ಪ್ರಾರಂಭ ಆಗದೇ ಇದ್ದರೆ ತಡವಾಗಲು ಕಾರಣ ಏನು? ಯಾರಾದರೂ ಪ್ರಭಾವ ಬೀರುತ್ತಿದ್ದಾರಾ? ಅಥವಾ ಸ್ವಾಭಾವಿಕವಾಗಿಯೇ ಹಾಗೆ ಆಗಿದೆಯೇ? ಎರಡನೆಯದೇ ಸತ್ಯ ಆದರೆ ಅದನ್ನು ತೀವ್ರಗೊಳಿಸಲು ಯಾವ ಕ್ರಮ ಜರುಗಿಸಬೇಕು? ಇಂತಹ ವಿಷಯಗಳು ಮಾಧ್ಯಮಗಳಲ್ಲಿ ಚರ್ಚೆಯಾಗುವುದೇ ಇಲ್ಲ. ಇದಕ್ಕೆ ಅವು ಜಾಣಕುರುಡು ಆಗುತ್ತವೆ.

ಅರೆಬರೆ ಸುದ್ದಿ ಪ್ರಕಟಿಸುವುದರಿಂದ ಸಮಾಜದ ಮೇಲೆ ಆಗಲಿರುವ ದುಷ್ಪರಿಣಾಮಗಳ ಕುರಿತು ಮಾಧ್ಯಮಗಳು ಚಿಂತನೆ ನಡೆಸಬೇಕಾಗಿದೆ. ಮನುಷ್ಯಜೀವಿ ಒಳಿತುಕೆಡಕುಗಳ ಮಿಶ್ರಣ. ಆತನೊಳಗೆ ಒಳ್ಳೆಯತನ ಇರುವಂತೆಯೇ ದುಷ್ಟತನವೂ ಇರುತ್ತದೆ. ಈ ದುಷ್ಟಭಾವನೆಗಳನ್ನು ಅದುಮಿಟ್ಟು ಒಳ್ಳೆಯ ಭಾವನೆಗಳನ್ನು ಬಯಲು ಮಾಡುತ್ತಾನೆ. ಆದರೂ ಈ ದುಷ್ಟತನ ಒಳ್ಳೆಯತನವನ್ನು ಮೆಟ್ಟಿ ಹೊರಬರಲು ಹೊಂಚು ಹಾಕುತ್ತಲೇ ಇರುತ್ತದೆ. ಭ್ರಷ್ಟಾಚಾರಿಗಳ ವೈಭವೋಪೇತ ಜೀವನವನ್ನು ತೋರಿಸಿದಾಗ ನಾವೂ ಅವರಂತೆ ಬಾಳಬೇಕು ಬದುಕಬೇಕು ಎಂದು ಬಯಸುವುದು ಸಹಜ. [illegible] ಮರೆಯುತ್ತಿರುವ ವ್ಯಕ್ತಿಗೆ ಆಗಬಹುದಾದ ಶಿಕ್ಷೆ [illegible] ಆಗುವ ಮಾನಸಿಕ ಆಘಾತ, ಅಂತರಾಳದ ನೋವು, ಒಂಟಿತನದಿಂದ ಉಂಟಾಗುವ ವಿಷಣ್ಣತೆ, ಸಮಾಜದಲ್ಲಿ [illegible]


■ [illegible]

ಮಾತೃಭಾಷಾ ಶಿಕ್ಷಣ

ಸ್ವಾತಂತ್ರ್ಯ ಬಂದು ಇಷ್ಟೆಲ್ಲ ವರುಷಗಳಾದರೂ, ಭಾಷಾವಾರು ಪ್ರಾಂತ್ಯ ರಚನೆಯಾಗಿ ಆರು ದಶಕ ಕಳೆದರೂ, 22 ಭಾಷೆಗಳನ್ನು ರಾಜ್ಯಭಾಷೆಗಳನ್ನಾಗಿ ಸಂವಿಧಾನದ ಷೆಡ್ಯೂಲಿನಲ್ಲಿ ಒಪ್ಪಿಕೊಂಡರೂ ಸರ್ಕಾರಗಳಿಗೆ ಮಾತೃಭಾಷೆಯಲ್ಲಿ ಮಕ್ಕಳಿಗೆ ಶಿಕ್ಷಣ ಕೊಡುವುದು ಯಾಕೆ ಮುಖ್ಯ ಎನ್ನುವ ಅರಿವಾಗಿಲ್ಲ. ವರ್ಷದಿಂದ ವರ್ಷಕ್ಕೆ ಮಾತೃಭಾಷೆಯಲ್ಲಿ ಶಿಕ್ಷಣ ಕೊಡುವ ತನ್ನ ಶಾಲೆಗಳನ್ನು ಮುಚ್ಚುತ್ತಿರುವ ಸರ್ಕಾರ ಶಿಕ್ಷಣ ಕ್ಷೇತ್ರದಲ್ಲಿ ಪ್ರಾಥಮಿಕ ಮಟ್ಟದಿಂದ ಹಿಡಿದು ವಿಶ್ವವಿದ್ಯಾಲಯಗಳವರೆಗೆ ಖಾಸಗೀಕರಣವನ್ನು ಉತ್ತೇಜಿಸುತ್ತಿದೆ. ಒಂದು ಕಡೆ ಮಾರುಕಟ್ಟೆ ಆರ್ಥಿಕತೆಯು ಸೃಷ್ಟಿಸಿದಂತೆ ತೋರುವ ಅಪರಿಮಿತ ಉದ್ಯೋಗಾವಕಾಶ ಇಂಗ್ಲಿಷ್ ಭಾಷಾಜ್ಞಾನವೇ ನಿಜವಾದ ಅರ್ಹತೆ ಎನ್ನುವ ಮಿಥ್ ಸೃಷ್ಟಿಸುತ್ತಿದ್ದರೆ, ಅದಕ್ಕೆ ಪೂರಕವಾಗಿ ಲಾಭಕೋರ ಖಾಸಗಿ ಶಾಲೆಗಳು ಇಂಗ್ಲಿಷ್ ಕಲಿತರಷ್ಟೆ ಬದುಕುವ ಅವಕಾಶ ಎಂಬ ಧಾವಂತಕ್ಕೆ ಪಾಲಕರು ಬೀಳುವಂತೆ ಮಾಡುತ್ತಿವೆ. ಅರೆಬರೆ ಇಂಗ್ಲಿಷ್ ಕಲಿತ ನೌಕರ ವರ್ಗ ಸೃಷ್ಟಿಸಿಕೊಳ್ಳಲು ಬಂಡವಾಳಶಾಹಿಗಳು ಹೂಡುವ ವಾದವನ್ನೆಲ್ಲ ಸರ್ಕಾರಗಳೂ ಒಪ್ಪಿಕೊಂಡು ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಸಹೊರಟಿವೆ. ಕಡ್ಡಾಯ ಮಾತೃಭಾಷಾ ಶಿಕ್ಷಣ ಜಾರಿಗೊಳಿಸಲು ಕೋರ್ಟುಕಟ್ಟೆ ಹತ್ತಿ ಖಾಸಗಿ ಶಾಲೆಗಳೊಂದಿಗೆ ಸೆಣಸುವಂತಾಗಿದೆ.

ಇತ್ತೀಚೆಗೆ ಮಾತೃಭಾಷಾ ಶಿಕ್ಷಣ ಕುರಿತ ವಿಷಯಗಳು ಚರ್ಚೆಗೆ ಬರುತ್ತಿವೆ. ಅದರಲ್ಲೂ ಶಿಕ್ಷಣ ಹಕ್ಕು ಕಾಯ್ದೆ ಜಾರಿಗೆ ಬಂದು ಐದು ವರ್ಷ ತುಂಬುತ್ತಿರುವ ಹೊತ್ತಿನಲ್ಲಿ ಅದರ ಸಾಧಕಬಾಧಕ, ಲೋಪದೋಷಗಳ ಕುರಿತು ಚರ್ಚೆ ನಡೆಯುತ್ತಿದೆ. ಕರ್ನಾಟಕವೂ ಸೇರಿದಂತೆ ದೇಶದ ಹಲವೆಡೆ ಸಮಾನ ಶಿಕ್ಷಣ ಹಾಗೂ ಮಾತೃಭಾಷಾ ಶಿಕ್ಷಣಕ್ಕಾಗಿ 'ಅಖಿಲ ಭಾರತ ಸಮಾನ ಶಿಕ್ಷಣ ಹಕ್ಕು ವೇದಿಕೆ' ರೂಪುಗೊಂಡಿದೆ. ಕರ್ನಾಟಕ ಜನಶಕ್ತಿ ಸಂಘಟನೆ ಸಮಾನ ಶಿಕ್ಷಣ ಜನಾಂದೋಲನವನ್ನು ಮೂರು ವರ್ಷಗಳಿಂದ ರಾಜ್ಯಾದ್ಯಂತ ಹಮ್ಮಿಕೊಂಡು, ವ್ಯವಸ್ಥಿತವಾಗಿ ಹಲವು ಸ್ತರಗಳ ಚರ್ಚೆ, ಕಾರ್ಯಕ್ರಮವನ್ನು ನಡೆಸುತ್ತಿದೆ.

ಇದರ ಬೆನ್ನಲ್ಲೇ ಶ್ರವಣಬೆಳಗೊಳದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯನ್ನು ದೇವನೂರ ಮಹಾದೇವ ನಿರಾಕರಿಸಿದರು. ಮಾತೃಭಾಷಾ ಶಿಕ್ಷಣ ಮಾಧ್ಯಮ ನೀತಿ ಜಾರಿಯಾಗುವವರೆಗು ತಾವು ಯಾವುದೇ ಸಮ್ಮಾನ, ಸ್ಥಾನಮಾನ ಸ್ವೀಕರಿಸುವುದಿಲ್ಲವೆಂದು ಘೋಷಿಸುವುದರೊಂದಿಗೆ ಆ ಬೇಡಿಕೆಗೊಂದು ಸ್ಟಾರ್ ಮಾನ್ಯತೆ ಬಂದಿತು. ಶ್ರವಣಬೆಳಗೊಳ ಸಾಹಿತ್ಯ ಸಮ್ಮೇಳನದಲ್ಲಿ ದೇವನೂರು ಸಾಹಿತ್ಯ ಪರಿಷತ್ತಿಗೆ ಬರೆದ ಪತ್ರದ ಸಾವಿರಾರು ಪ್ರತಿಗಳನ್ನು ಹಂಚಲಾಯಿತು.



ಹೋಲುತ್ತಿದ್ದ ವೃದ್ಧರೊಬ್ಬರು ತಮ್ಮ ಚುರುಕಾದ ಮಾತು, ಚರ್ಚೆ, ಕರಾರುವಾಕ್ ಜ್ಞಾನದಿಂದ ಬಹುಜನರ ಗಮನ ಸೆಳೆದರು. ಇಡೀ ದಿನ ಚರ್ಚೆ, ಸಂವಾದ, ಧಾರವಾಡ ಘೋಷಣೆಯ ಕರಡು ತಯಾರಿ ಕೆಲಸದಲ್ಲಿ ತಮ್ಮನ್ನು ತೊಡಗಿಸಿಕೊಂಡು ಭಾಷಣ ಕೇಳಲು, ಪ್ರಶ್ನೆ ಎತ್ತಲು ಹಿಂಜರಿಯುವ ಹಿರಿಕಿರಿಯರು ನಾಚುವಂತೆ ಓಡಾಡಿದರು. ಈ ವಿಷಯ ಕುರಿತು ಯಾರದೇ ಸಣ್ಣ ಅನುಮಾನಕ್ಕೂ ಅವರ ಬಳಿ ಸವಿಸ್ತಾರವಾದ ವಿವರಣೆ ಸಿದ್ಧವಿತ್ತು. ಜ್ಞಾನ ವೃದ್ಧರೂ, ವಯೋವೃದ್ಧರೂ ಆಗಿರುವ ಅವರನ್ನು ತಾತ ಎನ್ನುವುದಕ್ಕಿಂತ ಆಪ್ತವಾಗಿ ಸಂಬೋಧಿಸುವುದು ಸಾಧ್ಯವಿಲ್ಲ.

ಅವರು ಮಾತೃಭಾಷಾ ಶಿಕ್ಷಣದ ಅವಶ್ಯಕತೆಯನ್ನು ಪ್ರತಿಪಾದಿಸುತ್ತ ದಶಕಗಳಿಂದ ದೇಶಾದ್ಯಂತ ಓಡಾಡುತ್ತಿರುವ ಅನಿಲ್ ಸದ್ಗೋಪಾಲ್.

ಅಮೆರಿಕದ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದಿಂದ ಬಯೋಕೆಮಿಸ್ಟ್ರಿ ಮತ್ತು ಮಾಲಿಕ್ಯುಲಾರ್ ಬಯಾಲಜಿಯಲ್ಲಿ ಪಿಎಚ್‌ಡಿ ಪದವಿ ಪಡೆದಿರುವ ಸದ್ಗೋಪಾಲ ತಾತ, ನಾನಾ ಹಂತದ ಬೋಧನೆಯಲ್ಲಿ ತೊಡಗಿಕೊಂಡವರು. ಶಿಕ್ಷಣ ಹಕ್ಕು ಪ್ರತಿಪಾದಿಸುವ ಸಂಘಟನೆಗಳೊಂದಿಗೆ ದಶಕಗಳಿಂದ ಕೆಲಸ ಮಾಡುತ್ತಿದ್ದಾರೆ. ಮಧ್ಯಪ್ರದೇಶದ ಗ್ರಾಮೀಣ ಭಾಗದ 1000 ಶಾಲೆಗಳ ಒಂದು ಲಕ್ಷ ಮಕ್ಕಳಿಗೆ ಪ್ರಾಯೋಗಿಕವಾಗಿ, ಯಶಸ್ವಿಯಾಗಿ, ಪ್ರಯೋಗಾಧಾರಿತ ವಿಜ್ಞಾನ ಶಿಕ್ಷಣ ನೀಡುತ್ತಿದ್ದಾರೆ. 80ರ ದಶಕದಲ್ಲಿ ಪ್ರಜಾ ವಿಜ್ಞಾನ ಚಳವಳಿ, ಹೊರಗೆ ವೈಯಕ್ತಿಕವಾಗಿ ಹಾಗೂ ಗುಂಪುಗಳಲ್ಲಿ ಅವರು ದಣಿವಿರದೆ ಸಂವಾದಿಸುತ್ತಿದ್ದುದು ಕಂಡುಬಂತು.

ಅವರ ಪ್ರಕಾರ ಕೇವಲ ಪ್ರಾಥಮಿಕ/ಪ್ರೌಢ ಶಿಕ್ಷಣವಷ್ಟೆ ಅಲ್ಲ, ತಾಂತ್ರಿಕ ಹಾಗೂ ವೃತ್ತಿಪರ ಶಿಕ್ಷಣವೂ ಮಾತೃಭಾಷೆಯಲ್ಲೇ ಆಗಬೇಕು! ಕನ್ನಡ ಮೆಡಿಕಲ್ ಕಾಲೇಜು, ಕನ್ನಡ ಇಂಜಿನಿಯರಿಂಗ್ ಕಾಲೇಜು, ಕನ್ನಡ ಮ್ಯಾನೇಜ್‌ಮೆಂಟ್ ಮತ್ತಿತರೆ ಕಾಲೇಜುಗಳು ತಲೆಯೆತ್ತಬೇಕು!! ಉನ್ನತ ಶಿಕ್ಷಣವನ್ನೂ ಮಾತೃಭಾಷೆಯಲ್ಲಿ ಪಡೆಯಲು ಸಾಧ್ಯವಾಗದಿದ್ದರೆ ಮಾತೃಭಾಷಾ ಶಿಕ್ಷಣ ಎಂಬ ಬೇಡಿಕೆಗೆ ಮಾನ್ಯತೆಯೇ ಇಲ್ಲ...

ಆದರೆ ತಾಂತ್ರಿಕ ಹಾಗೂ ವೃತ್ತಿಪರ ಶಿಕ್ಷಣವೂ ಮಾತೃಭಾಷೆಯಲ್ಲೇ ಎನ್ನುವುದನ್ನು ಅರ್ಥಮಾಡಿಕೊಳ್ಳಲು ನನಗೆ ಕಷ್ಟವಾಯಿತು. ಈಗಲೂ ಸ್ವಲ್ಪ ಕಷ್ಟವೇ. ಪ್ರೌಢಶಾಲೆಯವರೆಗೆ ವಿಜ್ಞಾನ, ವಾಣಿಜ್ಯ, ಸಮಾಜ ಎಲ್ಲವನ್ನೂ ಮಾತೃಭಾಷೆಯಲ್ಲಿ ಕಲಿಯುವುದು ಸರಿ. ಆದರೆ ವೃತ್ತಿಪರ/ತಾಂತ್ರಿಕ ಕೋರ್ಸುಗಳೂ ಮಾತೃಭಾಷೆಯಲ್ಲೇ ಎನ್ನುವುದು ಕೊಂಚ ಅತಿಯಲ್ಲವೆ? ಭಾಷೆಯ ಕಾರಣದಿಂದ ನಮ್ಮನ್ನು ನಾವು ಕೆಲಸ, ಶಿಕ್ಷಣ ಎಲ್ಲಕ್ಕೂ ನಮ್ಮ ರಾಜ್ಯಕ್ಕೇ ಕಟ್ಟಿಹಾಕಿಕೊಂಡಂತಲ್ಲವೆ? ಹಿರಿಯರಿಬ್ಬರು ಈ ಕುರಿತು ವಿಸ್ತೃತ ವಿವರಣೆ ನೀಡಿದರಾದರೂ ಅದೇಕೋ ಅವೆಲ್ಲ ತೀರಾ ದೂರದ ಕನಸೆಂದೇ ತೋರಿತು. ಅದರಲ್ಲೂ ನನ್ನದೇ ಜ್ಞಾನಕ್ಷೇತ್ರವನ್ನು ಕನ್ನಡದಲ್ಲಿ ಕಲ್ಪಿಸಿಕೊಂಡ ಮೇಲೆ ಮತ್ತಷ್ಟು

ಹೀಗಿರುವಾಗ ಕನ್ನಡದಲ್ಲಿಯೇ ಪದವಿ, ಸ್ನಾತಕೋ... ಎಲ್ಲವನ್ನು ಕಲಿತು ವಿಶ್ವದ ಜ್ಞಾನದ ಜೊತೆ ಸಸ್ವ... ಸಂವಹನ ಮಾಡಿಕೊಳ್ಳಲು ಕಷ್ಟ ಮಾಡಿಕೊಳ್ಳುವುದೇ... ಇವತ್ತಿಗೂ ಭಾರತದ ಬಹುಪಾಲು ವೈದ್ಯರಿಗೆ ಉತ್ತ... ಇಂಗ್ಲಿಷ್ ಇಲ್ಲದಿರುವ ಕಾರಣ ಸೆಮಿನಾರುಗಳ... ಕಾನ್ಫರೆನ್ಸುಗಳಲ್ಲಿ ತಮ್ಮ ಅನುಭವ, ಜ್ಞಾನವನ್ನು ವಿಶ್ವದೆದು... ತೆರೆದಿಡಲು ಸಾಧ್ಯವಿಲ್ಲದೇ ಕೀಳರಿಮೆ ಅನುಭವಿಸುತ್ತ... ಹಾಗಿರುವಾಗ ಬರೀ ಕನ್ನಡದಲ್ಲಿಯೇ ಎಲ್ಲವನ್ನೂ ಕಲಿ... ಸಂಪರ್ಕ ಸಾಧಿಸುವುದು ಇನ್ನೂ ಕಷ್ಟವಲ್ಲವೇ? ಆಗ ಶಿಕ್ಷಣ... ಗುಣಮಟ್ಟ ಏನಾದೀತು?

ಆದರೆ ನಾನು ಯಾವ ಕಾರಣಗಳಿಗಾಗಿ ಕ... ಕಷ್ಟವೆಂದು ಹೇಳಿದೆನೋ ಆ ಹಿರಿಯರು ಅದೇ ಕಾ... ಗಳಿಗೆ ಮಾತೃಭಾಷಾ ಶಿಕ್ಷಣ ಬರಬೇಕೆಂದರು. ಮಾತೃಭಾ... ಶಿಕ್ಷಣ ನೀತಿ ಬಂದರೆ ನಾನು ಈ ದೇಶದ ಯಾವು... ರಾಜ್ಯಕ್ಕೆ ಶಿಕ್ಷಣಾರ್ಥಿಯಾಗಿ ಹೋದರೂ ಅಲ್ಲಿ ನ... ಕನ್ನಡದಲ್ಲಿ ಬೋಧಿಸುವ ಸಿಬ್ಬಂದಿ ನೇಮಿಸಬೇಕು; ಕನ್ನಡ... ನನ್ನನ್ನು ಪರೀಕ್ಷಿಸಿ ಮೌಲ್ಯಮಾಪನ ಮಾಡುವ ವ್ಯವಸ್ಥೆ... ಗಬೇಕು. ಎಲ್ಲ ಭಾಷೆಗಳಲ್ಲೂ ಮೌಲ್ಯಯುತ ಪಠ್ಯ ಆ... ಗ್ರಂಥ, ಬೋಧಕ ಸಿಬ್ಬಂದಿ ಸಿದ್ಧವಾಗಬೇಕು. ಕಾಲಕಾ... ಬೇರೆಭಾಷೆಗಳಲ್ಲಿ ಬಂದ ಜ್ಞಾನಶಿಸ್ತುಗಳು ನಮ್ಮ ಮಾತೃಭಾ... ತರ್ಜುಮೆಗೊಳ್ಳುವಂತೆ ಅಕಾಡೆಮಿಯೊಂದು ಕೆ... ಮಾಡಬೇಕು. ಇದು ಕೇವಲ ಕನ್ನಡವಷ್ಟೇ ಅಲ್ಲ, ಮೆಡಿ... ಶಿಕ್ಷಣವಷ್ಟೇ ಅಲ್ಲ; ಷೆಡ್ಯೂಲಿನಲ್ಲಿರುವ 22 ಭಾಷೆಗಳಿ... ಎಲ್ಲ ತೆರನ ಶಿಕ್ಷಣದ ಕೋರ್ಸುಗಳಿಗೂ ಅನ್ವಯಿಸಬೇ... ಆಗ ಮಾತೃಭಾಷೆ ಉಳಿಯುತ್ತದೆ. ವಿದ್ಯಾರ್ಥಿಗ... ನಿಜಾರ್ಥದಲ್ಲಿ ಸುಶಿಕ್ಷಿತರಾಗುತ್ತಾರೆ; ಮೊದಲಿನಂತೆ ಹೆಚ... ಜನ ವೈಜ್ಞಾನಿಕ ಮನೋಭಾವ ಹೊಂದುತ್ತಾರೆ; ವಿ... ಕಲಿತು ವಿಜ್ಞಾನಿಗಳಾಗುತ್ತಾರೆ. ಒಟ್ಟಾರೆ ಕಲಿಕೆ... ಸುಲಭವಾಗುತ್ತದೆ..

ಆದರೆ ಮೊದಲೆಲ್ಲ ಮಾತೃಭಾಷೆಯಲ್ಲೇ ಜ... ಲಭ್ಯವಿದ್ದಾಗಲೂ ಅಕ್ಷರ ಕಲಿವ ಅವಕಾಶವಿದ್ದವರೆಲ್ಲ... ಚರಕ, ಸುಶ್ರುತ, ಪಾಣಿನಿ, ಪೈಥಾಗೊರಸ, ಪ್ಲೇಟೊ... ಆಗಲಿಲ್ಲ? ಅಥವಾ ಇಂಗ್ಲಿಷ್ ಮಾತೃಭಾಷೆಯ... ಹೊಂದಿರುವ ವಿದೇಶದ ಮಕ್ಕಳೆಲ್ಲ ಏಕೆ ವಿಜ್ಞಾ... ಸಂಶೋಧಕರಾಗಲಿಲ್ಲ? ಕಲಿಕೆ ಮತ್ತು ಜ್ಞಾನ ಭಾಷೆ... ಹೆಚ್ಚು ವೈಯಕ್ತಿಕ ಆಸಕ್ತಿಗೆ ಸಂಬಂಧಿಸಿದ್ದೂ ಅಲ್ಲ... ಕಲಿಕೆ ಕೇವಲ ಭಾಷೆಯ ಪ್ರಶ್ನೆ ಮಾತ್ರ ಅಲ್ಲವಷ್ಟೆ? ... ನನ್ನ ಅನುಮಾನಗಳು.

ಹೌದು. ಆದರೆ ಈಗ ಎಲ್ಲರಿಗೂ ಕಲಿಕೆಗೆ ಸಮ... ಹಕ್ಕು, ಅವಕಾಶವಿರುವಾಗ ಜ್ಞಾನ ಮಾತೃಭಾಷೆಯ... ದೊರೆತರೆ ಸಂಶೋಧನೆ, ಸಂವಹನದ ಗುಣಮಟ್ಟ ಇ...





ಇವೆಲ್ಲದರ ಮುಂದುವರಿದ ಭಾಗವಾಗಿ ಧಾರವಾಡದ ಕರ್ನಾಟಕ ಜನಸಾಹಿತ್ಯ ಸಂಘಟನೆಯ ಸಂಗಾತಿಗಳು ಏಪ್ರಿಲ್ ಮೊದಲ ವಾರದಲ್ಲಿ ಎರಡು ದಿನದ ಮಾತೃಭಾಷಾ ಮಾಧ್ಯಮ ಕುರಿತ ರಾಷ್ಟ್ರೀಯ ಚಿಂತನಾ ಶಿಬಿರವೊಂದನ್ನು ನಡೆಸಿದರು. ಅದರಲ್ಲಿ ಮಾತೃಭಾಷಾ ಮಾಧ್ಯಮ ಕಲಿಕೆಯ ವಿವಿಧ ಆಯಾಮಗಳ ಕುರಿತು, ಸಾಧಕ-ಬಾಧಕಗಳ ಕುರಿತು ಸಾಹಿತ್ಯ ಕಾನೂನು, ರಾಜಕೀಯ ಕ್ಷೇತ್ರಗಳ ಅನುಭವಿಗಳೊಡನೆ; ಶಿಕ್ಷಕ ಬಂಧುಗಳ ಜೊತೆ ಸಂವಾದ ಏರ್ಪಡಿಸಲಾಗಿತ್ತು. ಕಾರ್ಯಕ್ರಮದಲ್ಲಿ ದೇವನೂರು ಸೇರಿದಂತೆ ಕನ್ನಡದ ಬಹುತೇಕ ಆರೋಗ್ಯಕರ ಮನಸುಗಳ ದಂಡೇ ನೆರೆದಿತ್ತು.

ಮಾತೃಭಾಷಾ ಶಿಕ್ಷಣ ಕುರಿತು ಸಾಹಿತ್ಯಿಕ, ಸಾಂಸ್ಕೃತಿಕ ಸಂಘಟನೆಗಳೂ ತಮ್ಮ ಗಮನ ಹರಿಸಬೇಕಾಗಿದೆ ಎಂದು ಹೇಳುತ್ತ ಜನಸಾಹಿತ್ಯ ಸಂಘಟನೆ ತಾನೇ ಅದಕ್ಕೊಂದು ಮಾದರಿಯಾದದ್ದು ಅನುಕರಣೀಯ ಪ್ರಯತ್ನ ಎನ್ನಬಹುದು. ನಾನು ಪಾಲ್ಗೊಂಡ ದಿನ ಚಿಂತನಾ ಶಿಬಿರದಲ್ಲಿ ಕಂಡದ್ದು ಕೇಳಿದ್ದು ಮನದಲ್ಲಿ ಅನುಮಾನವಾಗಿ ಸುಳಿದಾಡಿದ್ದು ನಿಮ್ಮೊಂದಿಗೆ..

* * * *

ನೋಡಲು ಥೇಟ್ ಕಡಿದಾಳು ಶಾಮಣ್ಣನವರನ್ನು

ಮಾನವ ಹಕ್ಕು ಚಳವಳಿಯಲ್ಲಿ ಕೆಲಸ ಮಾಡಿದ ಅವರು ನಂತರ ಭೋಪಾಲಿನ ವಿಷಾನಿಲ ಪೀಡಿತ ಜನರೊಂದಿಗೂ ಕೈಜೋಡಿಸಿದ್ದರು. ಅನೇಕ ಸರ್ಕಾರಿ ಕಮಿಷನ್-ಇಲಾಖೆಗಳ ಮುಖ್ಯಸ್ಥರಾಗಿ ಕೆಲಸ ಮಾಡಿ ಶಿಕ್ಷಣ ಹಕ್ಕು ಕಾಯ್ದೆ ಬರಲು ಶ್ರಮಿಸಿದರು. ಜೊತೆಗೆ ಲೋಪದೋಷಗಳಿದ್ದ ಉದ್ದೇಶಿತ ಕಾಯ್ದೆಗೆ ಸೂಕ್ತ ತಿದ್ದುಪಡಿ ತರುವಲ್ಲಿ, ಸಮಾನ ಶಿಕ್ಷಣ-ಮಾತೃಭಾಷಾ ಶಿಕ್ಷಣದ ಸಲುವಾಗಿ ಅಖಿಲ ಭಾರತ ಮಟ್ಟದ ಜಾಗೃತಿ ಹಾಗೂ ಹೋರಾಟ ರೂಪಿಸುವಲ್ಲಿ ಅವರ ಪಾತ್ರ ಹಿರಿದು.

ಅವರಂತೇ ಮತ್ತೊಬ್ಬ ಹಿರಿಯರು ಅಲ್ಲಿ ಕಂಡು ಬಂದರು. ಅವರು ಜೋಗಾಸಿಂಗ್. ಪಂಜಾಬ್ ವಿಶ್ವವಿದ್ಯಾಲಯದ ಪ್ರೊಫೆಸರರು. ಇವರಿಬ್ಬರೂ ಕನ್ನಡದಲ್ಲಿ ನಡೆದ ಇಡಿಯ ದಿನದ ಕಲಾಪಗಳನ್ನು ಪಕ್ಕ ಕುಳಿತ ದುಭಾಷಿಗಳ ಸಹಾಯದಿಂದ ಕೇಳಿ, ತಿಳಿದು ಸಂವಾದದಲ್ಲೂ ಭಾಗವಹಿಸಿದರು. ಇಬ್ಬರೂ ಹಿರಿಯರು ಮಾತೃಭಾಷಾ ಶಿಕ್ಷಣ ಅವಶ್ಯ ಏಕೆ ಎನ್ನುವುದನ್ನು, ಶಿಕ್ಷಣ ಹಕ್ಕು ಕಾಯ್ದೆಯ ಕಲಂಗಳನ್ನು, ಸಂವಿಧಾನದ ಕೆಲವು ಪರಿಚ್ಛೇದಗಳನ್ನು ಅರೆದು ಕುಡಿದಿರುವರೇನೋ ಎಂಬಂತೆ ಲೀಲಾಜಾಲವಾಗಿ ಮಾತನಾಡಿದರು, ವಿವರಿಸಿದರು, ಪ್ರಶ್ನಿಸಿದರು. ಸಭೆಯೊಳಗೆ, ಕಳವಳವಾಯಿತು.

ರೋಗಿಗಳ ನೋಡಲು, ಅವರ ಭಾಷೆಯಲ್ಲಿ ಸಂಭಾಷಣೆ ನಡೆಸಲು ಯಾವುದೇ ಭಾಷೆಯನ್ನು ಅಲ್ಪಕಾಲದಲ್ಲಿ ಕಲಿಯಬಹುದು. ಆದರೆ ಸಿದ್ಧ ಪಠ್ಯವೇ ಇಲ್ಲದ, ವಿಸ್ತೃತ ಅಧ್ಯಯನ ಬಯಸುವ ಎಂಬಿಬಿಎಸ್ ಅನ್ನು ಕನ್ನಡ ಭಾಷೆಯಲ್ಲಿ ಕಲಿತು, ನಂತರ ಸ್ನಾತಕೋತ್ತರ ಕಲಿಕೆಗಾಗಿ ಅಖಿಲ ಭಾರತ ಮಟ್ಟದ ಪ್ರವೇಶ ಪರೀಕ್ಷೆ ಬರೆದು, ಗೌಹಾತಿಯಲ್ಲೋ ಪಾಂಡಿಚೆರಿಯಲ್ಲೋ ಅಮೃತಸರದಲ್ಲೋ ಸೀಟು ಸಿಕ್ಕರೆ, ಆಗ ಆ ರಾಜ್ಯದ ಭಾಷೆ ಕಲಿತು, ಅದರ ಲಿಪಿ ಕಲಿತು, ಅದರಲ್ಲಿರುವ ಸ್ನಾತಕೋತ್ತರ ಪಠ್ಯಗಳನ್ನು ಓದಿ, ಪರೀಕ್ಷೆ ಬರೆಯುವುದು ಸುಲಭವೇ? ನಾನು ಓದುವುದನ್ನು ನನ್ನ ಭಾಷೆಗೆ ತರ್ಜುಮೆ ಮಾಡಿಕೊಂಡು, ಪಠ್ಯವಾಗಿಸಿಕೊಳ್ಳುವುದು ಕಲಿಕೆಯ ಹೊರೆಯನ್ನು ಇನ್ನಷ್ಟು ಹೆಚ್ಚಿಸದೆ? ಹೊಸ ವೈದ್ಯಕೀಯ ಉಪಕರಣ/ಅವುಗಳ ಬಳಕೆ/ಹೊಸ ಔಷಧ/ಶಸ್ತ್ರಚಿಕಿತ್ಸೆಯ ಹೊಸಹೊಸ ವಿಧಾನಗಳ ಕುರಿತ ಸಂಶೋಧನೆ/ಮಾಹಿತಿಗಾಗಿ ಭಾರತದ ಎಲ್ಲ ರಾಜ್ಯಗಳ ವೈದ್ಯರ ಹಾಗೂ ವಿಶ್ವದ ಹಲವು ಪ್ರತಿಷ್ಠಿತ ವೈದ್ಯವಿದ್ಯಾಲಯಗಳ ಜರ್ನಲ್‌ಗಳ ನೆರವನ್ನು ವೈದ್ಯರು ಹಂಚಿಕೊಳ್ಳಬೇಕಾಗುತ್ತದೆ. ಅದು ಸಂಪರ್ಕ ಭಾಷೆಯಾದ ಇಂಗ್ಲಿಷ್ ಮೂಲಕ ಸುಲಲಿತವಾಗಿ ನಡೆಯುತ್ತಿದೆ.

ಹೆಚ್ಚುತ್ತದೆ ಎಂದರು ತಾತ.

ನಿಜ. ಅವರ ಕನಸುಗಳು ಒಂದು ವೇಳೆ ನನಸಾ... ಆಗ ಉದ್ಭವಿಸುವ ಶಿಕ್ಷಿತ ಸಮಾಜದ ಕಲ್ಪನೆ - ... ವಾಗೇನೋ ಇದೆ. ಆದರೆ ಭಾರತವೆಂಬೋ ಬಹುಭಾಷಾ... ದೇಶದ ಎಷ್ಟೊಂದು ಭಾಷೆಗಳಿಗೆ ತರ್ಜುಮೆಗೊಳ್ಳಬೇ... ಜ್ಞಾನ, ಅದರ ಆಯ್ಕೆ, ಅನುವಾದಕರ ಆಯ್ಕೆ, ಲ... ಅಕಾಡೆಮಿ, ಇದೆಲ್ಲದರ ಗುಣಮಟ್ಟ ನಿರ್ವಹಣೆ ಸಾಧ್ಯ...

ನನ್ನ ಅನುಮಾನಗಳಿಗೆ ಹಿರಿಯರು ತುಂಬ ಉತ್ಸಾ... ದಿಂದ ಎಳೆಎಳೆಯಾಗಿ ವಿವರಿಸುವಾಗ ಅವರ ... ಹೊಳಪಿಗೆ, ವಿಶ್ವಾಸಕ್ಕೆ ಶರಣಾದೆನಾದರೂ ಹಲವು ... ಅನುಮಾನ ಗಂಟಲಲ್ಲಿ ಹೂತುಹೋದವು. ಬೇರೆ... ದೇಶಗಳು ತಂತಮ್ಮ ಮಾತೃಭಾಷೆಯಲ್ಲೇ ಸಾಧನೆ ಮಾಡಿ... 120 ಕೋಟಿ ಜನರ ನೂರಾರು ಭಾಷೆಗಳ ಭ... ದೇಶವು ಮಾತೃಭಾಷೆಗಳನ್ನಷ್ಟೇ ಮಾಧ್ಯಮವಾಗಿ ... ಪ್ರಜೆಗಳಿಗೆ ಕಲಿಸಿದರೆ ಹೇಗೆ ಸಾಧನೆ ಮಾಡಬಹ... ಎಂಬ ಬಗ್ಗೆ ಗೊಂದಲಗಳೇ ಉಳಿದವು. ಸಾಮಾ... ಜಾಲತಾಣಗಳ ಮೂಲಕ ತಮ್ಮನ್ನು ತಾವು ... ಮೂಲೆಮೂಲೆಯ ಜನರೊಡನೆ ತಾದಾತ್ಮ್ಯ... ಕಲ್ಪಿಸಿಕೊಂಡು 'ವಿಶ್ವಮಾನವ'ರಾಗಿರುವಂತೆ ಭಾವಿ...

ಇವತ್ತಿನ ಪೀಳಿಗೆ ಮಾತೃಭಾಷೆಯಲ್ಲೇ ಎಲ್ಲ ಕಲಿಕೆ ಎನ್ನುವುದನ್ನು ಹೇಗೆ ಸ್ವೀಕರಿಸಿಯಾರು ಎಂಬ ಅನುಮಾನವಾಯಿತು. ಇದೇ ಆತಂಕವನ್ನು ಹೊರಗೆ ಸೂಸುತ್ತಿದ್ದ ಹಲವು ಎಳೆಯ ಜೀವಗಳು ಹಂಚಿಕೊಂಡವು.

ಇದೆಲ್ಲದರ ನಡುವೆಯೇ 'ಮಾತೃಭಾಷೆಗಾಗಿ ನಡೆಯುತ್ತ ಹಿರಿಕಿರಿಯ ಜೀವಗಳು ಒಂದಷ್ಟು ದೂರ ಒಟ್ಟಿಗೇ ಕ್ರಮಿಸಿದೆವು..

* * * *

ಈಗ ಕನ್ನಡ ಶಾಲೆ ಮತ್ತು ಸರ್ಕಾರಿ ಶಾಲೆ ಸಮಾನಾರ್ಥಕ ಪದಗಳು. ಸರ್ಕಾರಿ ಶಾಲೆಗಳಲ್ಲಿ ನೀಡುತ್ತಿರುವುದು ಗುಣಮಟ್ಟದ ಶಿಕ್ಷಣವಲ್ಲ, ಅದರ ನೆರಳು ಮಾತ್ರ ಎನ್ನುವುದು ಹಲವರ ಅಳಲು. 7ನೇ ತರಗತಿವರೆಗೆ ನಪಾಸು ಮಾಡುವಂತಿಲ್ಲ; ಒಂದೇ ಕೋಣೆಯಲ್ಲಿ ಅದೇ ಶಿಕ್ಷಕ ಬೇರೆಬೇರೆ ತರಗತಿಗೆ ಬೇರೆಬೇರೆ ಪಾಠ ಮಾಡುವುದು; ಶಿಕ್ಷಕರಿಗೆ ಚುನಾವಣೆ/ಬಿಸಿಯೂಟ/ಜನಗಣತಿ/ವಿಕೋಪ ನಿರ್ವಹಣೆಯಂತಹ ಬೋಧನೇತರ ಕೆಲಸಗಳ ಹೊರೆ ಹೆಚ್ಚಾಗಿರುವುದು – ಇದೆಲ್ಲದರಿಂದ ಸರ್ಕಾರಿ ಶಾಲೆಯ ಉಚಿತ ಶಿಕ್ಷಣವು ಸ್ಪರ್ಧಾತ್ಮಕ ಜಗತ್ತಿಗೆ ತಕ್ಕಂತೆ ತಮ್ಮ ಮಕ್ಕಳನ್ನು ರೂಪಿಸಬಲ್ಲುದೇ? ಎಂಬ ಬಗ್ಗೆ ಪಾಲಕರಿಗೆ ಅನುಮಾನವಿದೆ. ಯಾರನ್ನೂ ನಪಾಸು ಮಾಡದೇ, ಪರೀಕ್ಷೆಯೇ ಇಲ್ಲದೆ, ಎಲ್ಲರನ್ನೂ ಸಮಾನವಾಗಿ ತಯಾರು ಮಾಡುವುದು ತುಂಬ ಉದಾತ್ತ ಗುರಿಯೇನೋ ಹೌದು. ಆದರೆ ಅದಕ್ಕೆ ತುಂಬ ಪೂರ್ವತಯಾರಿ, ಸೂಕ್ತ ಪಠ್ಯ ಮೌಲ್ಯಮಾಪನ, ನುರಿತ ಶಿಕ್ಷಕರು ಬೇಕು. ಆ ವ್ಯವಸ್ಥೆ ನಮ್ಮ ಶಾಲೆಗಳಲ್ಲಿ ಇದೆಯೇ? ಸ್ಪರ್ಧೆಯ ಸೋಲುಗೆಲುವಿನ ಭಯ ಸಾಲಸೋಲ ಮಾಡಿಯಾದರೂ ಮಕ್ಕಳನ್ನು ಖಾಸಗಿ ಇಂಗ್ಲಿಷ್ ಮೀಡಿಯಂ ಶಾಲೆಗೆ ಕಳಿಸುವಂತೆ ಮಾಡಿದೆ.

ಏಕರೂಪ ಪಠ್ಯ ಮತ್ತು ಶಿಕ್ಷಣದ ಸಲುವಾಗಿ ಎಲ್ಲ ಶಾಲೆಗಳನ್ನು ಸರ್ಕಾರವೇ ವಹಿಸಿಕೊಳ್ಳಬೇಕು, ಖಾಸಗಿ ಶಾಲೆಗಳು ಬೇಡವೇ ಬೇಡ ಎಂಬ ಕೂಗು ಕೇಳಿಸುತ್ತಿದೆ. ಆದರೆ ಶಿಕ್ಷಣವಷ್ಟೇ ಅಲ್ಲ, ಯಾವುದೇ ಕ್ಷೇತ್ರವೂ ಖಾಸಗೀಕರಣಗೊಳ್ಳದಂತೆ ತಡೆಯಲು ಆಳುವವರಲ್ಲಿ ಉತ್ಸುಕತೆಯೇ ಇಲ್ಲ. ಅದಕ್ಕೆ ಬದಲು ಪೊಲೀಸ್/ಸೇನೆಯಂತಹ ಕೆಲವೇ ವ್ಯವಸ್ಥೆಗಳನ್ನು ಹೊರತುಪಡಿಸಿ ಮಿಕ್ಕೆಲ್ಲವನ್ನು ವ್ಯವಸ್ಥಿತವಾಗಿ ಖಾಸಗಿಯವರಿಗೆ ಮಾರಿಬಿಡುವ ಧಾವಂತ ಆಳುವವರಲ್ಲಿದೆ. ಈ ಧೋರಣೆಯಿಂದಲೇ ಸರ್ಕಾರಿ ಶಾಲೆ ಕ್ಷೀಣಿಸಿ, ಖಾಸಗಿ ಶಾಲೆ ತೆರೆಯಲು ಸೂಕ್ತ ಸನ್ನಿವೇಶವನ್ನು ಸರ್ಕಾರಗಳೇ ನಿರ್ಮಿಸಿವೆ. ಈಗ ಡೀಮ್ಡ್ ಯೂನಿವರ್ಸಿಟಿಗಳು ತಲೆಯೆತ್ತತೊಡಗಿವೆ. ಅವರನ್ನು ಯಾರೂ 'ಪ್ರಶ್ನಿಸುವಂತಿಲ್ಲ. ಸ್ಟೇಟ್ ಸಿಲಬಸ್ ಮಾತೃಭಾಷೆಯಲ್ಲಿರಲೇಬೇಕು ಎಂದಮೇಲೆ ಎಲ್ಲ ಶಾಲೆಗಳೂ ಸಿಬಿಎಸ್ಸಿ, ಐಸಿಎಸ್ಸಿಯಂತಹ ಸೆಂಟ್ರಲ್ ಸಿಲಬಸ್ಸಿಗೆ ವರ್ಗಾವಣೆಗೊಂಡಿವೆ. 5ನೇ ತರಗತಿಯವರೆಗೆ ಮಾತೃಭಾಷೆಯಲ್ಲಿ ಕಡ್ಡಾಯ ಶಿಕ್ಷಣ ಎಂದಕೂಡಲೇ ಪಾಲಕರನ್ನೆಲ್ಲ ಒಗ್ಗೂಡಿಸಿ ಖಾಸಗಿ ಶಾಲೆಗಳ ಸಂಘದವರು ಸುಪ್ರೀಂಕೋರ್ಟಿನ ತನಕ ಹೋಗಿ ಕೇಸು ಗೆದ್ದರು. ಅವರ ಬಳಿ 'ಮಕ್ಕಳ ಭವಿಷ್ಯ', 'ಆಯ್ಕೆಯ ಅವಕಾಶ' ಎಂಬ ಅಸ್ತ್ರಗಳಿವೆ.

ಹೀಗಿರುತ್ತ ತಮ್ಮ ಖಾಸಗಿ ಆಸ್ತಿಯಾಗಿರುವ ಶಾಲೆ-ಕಾಲೇಜು-ವಿಶ್ವವಿದ್ಯಾಲಯಗಳನ್ನು ಅದರ ಮಾಲೀಕರು ಸಮಾನ ಶಿಕ್ಷಣ ಎಂಬ ಉದಾತ್ತ ಧ್ಯೇಯಕ್ಕಾಗಿ ಎಂದಾದರೂ ಸರ್ಕಾರಕ್ಕೆ ವಹಿಸಿಕೊಟ್ಟಾರು ಎಂದು ಕನಸಬಹುದೆ?

* * * *

ಒಂದು ಕಡೆ ತಾಂತ್ರಿಕ/ವೃತ್ತಿಪರ/ಉನ್ನತ ಶಿಕ್ಷಣವೂ ಮಾತೃಭಾಷೆಯಲ್ಲಿರಬೇಕೆನ್ನುವ ಸದ್ಗೋಪಾಲ ತಾರನಂತಹವರು ಇದ್ದರೆ; ಮತ್ತೊಂದೆಡೆ ಪ್ರಾಥಮಿಕ ಹಂತದಿಂದಲೇ ಇಂಗ್ಲಿಷ್ ಅನ್ನೂ ಕಲಿಸಬೇಕೆಂದು ಒಂದು ಗುಂಪು ಒತ್ತಾಯಿಸುತ್ತಿದೆ. ಕನ್ನಡ ಶಾಲೆಗಳಲ್ಲಿ ಓದುತ್ತಿರುವವರಲ್ಲಿ ಬಹುತೇಕರು ದಲಿತ/ತಳ ಸಮುದಾಯದ ಹಾಗೂ ಬಡ ಮಕ್ಕಳು. ಗ್ರಾಮೀಣ ಭಾಗದ ಕನ್ನಡ ಶಾಲೆಗಳಲ್ಲಿ ಕಲಿತ ಮಕ್ಕಳು ಇಂಗ್ಲಿಷ್ ವಿಷಯದಲ್ಲಿ ಫೇಲಾಗುವುದು, ಇಂಗ್ಲಿಷ್ ಭಾಷೆ ಕಷ್ಟವಾದ ಕಾರಣಕ್ಕೇ ಕಾಲೇಜು, ಹೈಸ್ಕೂಲು ಬಿಡುವುದು ಜಾಸ್ತಿ. ಆದ್ದರಿಂದ ಪ್ರಾಥಮಿಕ ಹಂತದಿಂದ ಇಂಗ್ಲಿಷ್ ಕಲಿಕೆಯನ್ನು ಸರ್ಕಾರಿ ಶಾಲೆಗಳಲ್ಲಿ ತರಬೇಕೆಂಬ ಒತ್ತಾಯ ಕೇಳಿಬಂದು ಕರ್ನಾಟಕದಲ್ಲಿ ಒಂದನೇ ತರಗತಿಯಿಂದ ಇಂಗ್ಲಿಷ್ ಅನ್ನು ಸರ್ಕಾರಿ ಶಾಲೆಗಳಲ್ಲಿ ಕಲಿಸಲಾಗುತ್ತಿದೆ.

ಸಾವಿತ್ರಿಬಾಯಿ ಫುಲೆ, ಅಂಬೇಡ್ಕರರಿಂದ ಹಿಡಿದು ಇವತ್ತಿನ ಚಂದ್ರಭಾನ್ ಪ್ರಸಾದ್ ಮತ್ತವರ ಸಹವರ್ತಿಗಳ ತನಕ ಹಲವು ದಲಿತ ಚಿಂತಕರು, ಹಿತೈಷಿಗಳು ಇಂಗ್ಲಿಷ್ ಭಾಷೆಯೇ ಶೋಷಿತನ ಹೊಸ ಅರಿವಿಗೆ, ಜಾಗೃತಿಗೆ, ಕೀಳರಿಮೆ ಕಳೆದುಕೊಳ್ಳಲಿಕ್ಕೆ ಇರುವ ಮೊದಲ ಮೆಟ್ಟಿಲು ಎಂದು ಭಾವಿಸಿದ್ದಾರೆ. ಚಂದ್ರಭಾನ್ ಪ್ರಸಾದ್ ಇಂಗ್ಲಿಷಮ್ಮನ ಗುಡಿ ಕಟ್ಟಿದ್ದಾರೆ. ಭಾಷೆ ಅದರೊಂದಿಗೆ ಬರುವ ಪರಂಪರೆ ಹಾಗೂ ಸಂಸ್ಕೃತಿಗಳು ತಮ್ಮನ್ನು ಪಾರಂಪರಿಕವಾಗಿ ಅದೇ ನೆಲೆಯಲ್ಲಿರುವಂತೆ ಮಾಡುತ್ತವೆ ಎನ್ನುವುದು ಅವರ ಅಭಿಮತ.

ಮಾತೃಭಾಷಾ ಶಿಕ್ಷಣದ ಪರವಾಗಿರುವವರು ಮತ್ತು ಇಂಗ್ಲಿಷ್ ಕಲಿಕೆ ಬೇಕೆನ್ನುವವರು ಇಬ್ಬರೂ ಸಮಾನ ಅಂಶಗಳನ್ನು ಕಾರಣವಾಗಿ ಮುಂದೊಡ್ಡುತ್ತಾರೆ. ಆದರೆ ಮಾತೃಭಾಷಾ ಶಿಕ್ಷಣ ಜಾಗೃತಿ ಅಭಿಯಾನದಲ್ಲಿ ಇಂಗ್ಲಿಷ್ ಪರ ಗುಂಪಿನ ಇಲ್ಲದಿರುವಿಕೆ ಎದ್ದು ಕಾಣುತ್ತಿದೆ. ಹೀಗಾಗಬಾರದು. ಅವರ ಅಭಿಪ್ರಾಯಗಳನ್ನು ಪರಿಗಣಿಸಬೇಕು, ಚರ್ಚೆ ನಡೆಯಬೇಕು, ಒಗ್ಗಟ್ಟಾಗಿ ಶಿಕ್ಷಣ ನೀತಿ ರೂಪಿಸಬೇಕು. ಆಗ ಮಾತ್ರ ದ್ವಂದ್ವಗಳಿಲ್ಲದ ಏಕರೂಪ ಶಿಕ್ಷಣ ನೀತಿಗಾಗಿ ಸರ್ಕಾರವನ್ನು ಒತ್ತಾಯಿಸುವುದು, ಖಾಸಗಿ ಶಾಲೆಗಳನ್ನು ಸುಮ್ಮನಿರಿಸುವುದೂ ಸುಲಭವಾಗುತ್ತದೆ. ವಿಸ್ತತ ಜನಬೆಂಬಲ ದೊರೆತರಷ್ಟೆ ಮಾತೃಭಾಷಾ ಶಿಕ್ಷಣ ಆಂದೋಲನ ಚಳವಳಿಯ ರೂಪ ಪಡೆಯಲು ಸಾಧ್ಯವಾಗುತ್ತದೆ


* * * *

ಬಲಪಂಥೀಯ ರಾಜಕಾರಣವೂ ಈಗ ಮಾತೃಭಾಷೆಯ ಮಾತನಾಡುತ್ತಿದೆ. ಭಾಷೆಯ ಹೆಸರಿನಲ್ಲಿ ಸೇನೆಗಳು ಹುಟ್ಟಿಕೊಂಡಿವೆ. ಭಾಷೆ ಬೌದ್ಧಿಕ ವಿಕಸನಕ್ಕೆ ಹೇಗೋ ಹಾಗೇ ಅಂಧಾಭಿಮಾನ, ದುರಭಿಮಾನಕ್ಕೂ ಕಾರಣವಾಗಬಲ್ಲುದು; ಇಂಗ್ಲಿಷ್ ಕಲಿಸುವತ್ತ ತೋರುವ ಅನಾದರ ಇಂಗ್ಲಿಷ್ ಬರುವ-ಬರದಿರುವವರ ನಡುವಿನ ಕಂದಕ ಅಗಲ ಮಾಡಬಹುದು; ಇದು ಇನ್ನಷ್ಟು ಉದ್ಯೋಗಾವಕಾಶ ಕಡಿಮೆ ಮಾಡಬಹುದು – ಹೀಗಾಗದು ಎನ್ನಲು ಗಟ್ಟಿ ನೆಲೆಯ ಕಾರಣಗಳ ಶೋಧಿಸಿ ತೋರಿಸುವ ಕೆಲಸವಾಗಬೇಕು. ನಾವುಗಳು ನಮ್ಮ ಮಕ್ಕಳನ್ನು ಕನ್ನಡ ಇಂಗ್ಲಿಷ್ ಎರಡರಲ್ಲೂ ಸಮಾನ ಪಂಡಿತರಾಗುವಂತೆ ಮಾಡುತ್ತ ಜನರಿಗೆ ಮಾತ್ರ ನಿಮ್ಮ ಮಕ್ಕಳನ್ನು ಮಾತೃಭಾಷಾ ಶಿಕ್ಷಣಕ್ಕೆ ಕಳಿಸಿ ಎಂದು ಬೋಧಿಸುವುದು ಆಷಾಢಭೂತಿತನವಾಗುತ್ತದೆ.

ನಮ್ಮ ದ್ವಂದ್ವವನ್ನು ಜನರಿಗೆ ದಾಟಿಸದಂತೆ; ತಾಯಿ, ತಾಯ್ನುಡಿಯೆಂದು ಭಾವುಕರೂ ಆಗದಂತೆ ಎಚ್ಚರದೊಂದಿಗೆ ಮುಂದಿನ ಹೆಜ್ಜೆಗಳಿಡುವ ಕಾಲ ಇದು. 'ಸದ್ಯಕ್ಕೆ ಪ್ರೌಢಶಾಲೆವರೆಗೆ ಮಾತೃಭಾಷಾ ಶಿಕ್ಷಣ ಕೇಳುವತ್ತ ನಮ್ಮ ಆಂದೋಲನವನ್ನು ಫೋಕಸ್ ಮಾಡುವುದು ಒಳ್ಳೆಯದು' ಎಂದ ದೇವನೂರರ ಮಾತನ್ನು ಎಲ್ಲರೂ ಗಮನಿಸಬೇಕು ಎನಿಸುತ್ತಿದೆ..

■ ಡಾ.ಎಚ್.ಎಸ್.ಅನುಪಮಾ

ಬೀಡಿ ಕಾರ್ಮಿಕರ ಬವಣೆ



ದಿನಾಂಕ 30.3.2015ನೇ ಸೋಮವಾರ ದಾವಣಗೆರೆಯಲ್ಲಿ 'ನೆರಳು' ಎಂಬ ರಾಜ್ಯ ಬೀಡಿ ಕಾರ್ಮಿಕರ ಯೂನಿಯನ್ ವತಿಯಿಂದ ಮಹಿಳಾ ದಿನಾಚರಣೆಯನ್ನು ಹಮ್ಮಿಕೊಳ್ಳಲಾಗಿತ್ತು. ಈ ಸಮಾವೇಶದ ಉದ್ಘಾಟನೆಗಾಗಿ ನನ್ನನ್ನು ಆಹ್ವಾನಿಸಿದ್ದರು. ಇದು ಒಂದು ಮುಸ್ಲಿಂ ಮಹಿಳಾ ಸಮಾವೇಶವಾಗಿರುವುದರಿಂದ ದಾವಣಗೆರೆಯ ಮುಸ್ಲಿಂ ಮಹಿಳೆಯರ ಸ್ಥಿತಿಗತಿ ತಿಳಿಯಲು ದೊರೆತ ಈ ಸಂದರ್ಭವನ್ನು ಕಳೆದುಕೊಳ್ಳಲಾಗದೆ ನಾನು ಈ ಸಮಾವೇಶದಲ್ಲಿ ಭಾಗವಹಿಸಿದೆ.

ಈ ಸಭೆಯ ಅಧ್ಯಕ್ಷತೆಯನ್ನು ಸಂಘದ ಸದಸ್ಯೆಯಾದ ಜಬೀನಾ ಬಾನು ಎಂಬುವರು ವಹಿಸಿದ್ದರು. ರಾಜ್ಯದ ಪ್ರಧಾನ ಕಾರ್ಯದರ್ಶಿಗಳಾದ ಜಬೀನಾ ಖಾನಂ ಎಂಬುವರು ಪ್ರಾಸ್ತಾವಿಕ ಮಾತುಗಳನ್ನಾಡಿದರು. ಟ್ರೇಡ್ ಯೂನಿಯನ್ ಮುಖಂಡರು ಹಾಗೂ ರಾಜ್ಯ ಬೀಡಿ ಕಾರ್ಮಿಕರ ಯೂನಿಯನ್‌ನ ಕಾನೂನು ಸಲಹೆಗಾರರೂ ಆದ ಉಷಾ ರವಿಕುಮಾರ್ ಅವರು ಮುಖ್ಯ ಅತಿಥಿಗಳಾಗಿ ಸಮಾವೇಶದಲ್ಲಿ ಭಾಗವಹಿಸಿದ್ದರು. ಈ ಕಾರ್ಯಕ್ರಮದಲ್ಲಿ ಸುಮಾರು ನಾನೂರು ಜನ ಬೀಡಿ ಕಾರ್ಮಿಕರಾದ ಮುಸ್ಲಿಂ ಮಹಿಳೆಯರು ಭಾಗವಹಿಸಿದ್ದರು. ಕಾರ್ಯಕ್ರಮವನ್ನು ಯೂನಿಯನ್ ಅಧ್ಯಕ್ಷರಾದ ಕರಿಬಸಪ್ಪ ಅವರು ಆಯೋಜಿಸಿದ್ದರು.

ಕರ್ನಾಟಕ ರಾಜ್ಯದಲ್ಲಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳನ್ನು ಹೊರತುಪಡಿಸಿ ಇತರ ಎಲ್ಲಾ ಜಿಲ್ಲೆಗಳಲ್ಲೂ ಬಡ ಮುಸ್ಲಿಂ ಮಹಿಳೆಯರು ಮಾತ್ರ ಬೀಡಿ ಕಾರ್ಮಿಕರಾಗಿದ್ದಾರೆ. ಈ ಬಡ ಮುಸ್ಲಿಂ ಮಹಿಳೆಯರು ತೀರಾ ಅನಕ್ಷರಸ್ಥರಾಗಿದ್ದು ಈ ಕುಟುಂಬಗಳಲ್ಲಿ ತಾಯಂದಿರ ಅನಕ್ಷರತೆಯಿಂದಾಗಿ ಹೆಣ್ಣುಮಕ್ಕಳು ಮಾತ್ರವಲ್ಲ ಗಂಡು ಮಕ್ಕಳೂ ಶಿಕ್ಷಣದಲ್ಲಿ ಹಿಂದುಳಿದಿದ್ದಾರೆ. ತಾಯಂದಿರು ಅನಕ್ಷರಸ್ಥರಾಗಿದ್ದು ಅವರು ಮಕ್ಕಳ ಶಿಕ್ಷಣಕ್ಕೆ ಪ್ರೋತ್ಸಾಹ ನೀಡದಿರುವುದು ಹಾಗೂ ಅವರ ಬಡತನವೂ ಶಿಕ್ಷಣದ ಹಿಂದುಳಿದಿರುವಿಕೆಗೆ ಕಾರಣವಾಗಿದೆ. 'ಹೆಣ್ಣು ಮಕ್ಕಳಾಗಲಿ, ಗಂಡು ಮಕ್ಕಳಾಗಲಿ ವಿದ್ಯೆ ಕಲಿತರೆ ಕೆಲಸ ದೊರೆಯುತ್ತದೆಯೇ? ಗಂಡುಮಕ್ಕಳಿಗೆ ಶಿಕ್ಷಣ ನೀಡಬೇಕಾದರೆ ಹಣವೂ ಬೇಕಾಗುತ್ತದೆ. ಕೂಲಿ ಕೆಲಸಕ್ಕೆ ಹೋದರೆ ನಾಲ್ಕು ಕಾಸಾದರೂ ದೊರೆಯುತ್ತದೆ' ಎನ್ನುತ್ತಾರೆ ಇವರು. ಇಂದಿನ ಸರ್ಕಾರೀ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣವೂ ಇಲ್ಲ. ಕೆಲವು ಕೋಮುವಾದಿ ಸಂಘಟನೆಗಳು ಶಾಲೆಗೆ ಹೋಗುವ ಹಿಂದುಳಿದ ಮತ್ತು ದಲಿತ ವಿದ್ಯಾರ್ಥಿಗಳನ್ನು ತಮ್ಮ ಸಂಘಟನೆಗಳೊಳಗೆ ಎಳೆದುಕೊಂಡು ಅವರ ಮೆದುಳು ತೊಳೆಯಲಾರಂಭಿಸಿವೆ ಎನ್ನಲಾಗುತ್ತಿದೆ. ಒಬ್ಬ ಹುಡುಗ ಇನ್ನೋರ್ವನೊಡನೆ, 'ನೀನೇಕೆ ಆ ಸಂಘಟನೆಗೆ ಸೇರಿದೆ?' ಎಂದು ಕೇಳಿದ್ದಕ್ಕೆ ಮರುದಿನ ಆ ಸಂಘಟನೆಯ ಕೆಲವು ಗೂಂಡಾಗಳು ಶಾಲಾ ತರಗತಿಯೊಳಗೆ ನುಗ್ಗಿ ಆ ಹುಡುಗನ ಮೇಲೆ ಆಕ್ರಮಣ ಮಾಡಿದರು. ಈಗ ಆ ಇಬ್ಬರೂ ಹುಡುಗರು ರಿಮ್ಯಾಂಡ್ ಹೋಂನಲ್ಲಿದ್ದಾರೆ. ಶಾಲೆಯ ವರ್ಷದ ಕೊನೆಯ ಪರೀಕ್ಷೆಯ ಸಮಯದಲ್ಲಿ ರಿಮ್ಯಾಂಡ್ ಹೋಂ ಸೇರಿದ (12 ಅಥವಾ 13 ವರ್ಷ ಪ್ರಾಯದ) ಈರ್ವರು ಹುಡುಗರ ಭವಿಷ್ಯದ ಕುರಿತು ಯಾರಾದರೂ ಚಿಂತಿಸಿದ್ದಾರೆಯೇ?

ದಾವಣಗೆರೆಯ ಬಡ ಮುಸ್ಲಿಂ ಮಹಿಳೆಯರೆಲ್ಲರೂ ಬೀಡಿ ಕಾರ್ಮಿಕರಾಗಿದ್ದಾರೆ. ಇವರು ದಿನವಿಡೀ ಸೊಂಟ ಬಗ್ಗಿಸಿ ಕುಳಿತಲ್ಲೇ ಕುಳಿತು ಬೀಡಿ ಕಟ್ಟಿದರೆ ದಿನವೊಂದಕ್ಕೆ ಹೆಚ್ಚೆಂದರೆ ಒಂದು ಸಾವಿರದ ಐನೂರು ಬೀಡಿಗಳಾಗಬಹುದು. ಮುಸ್ಲಿಂ ಮಹಿಳೆಯರು ದಕ್ಷಿಣ ಕನ್ನಡದಲ್ಲಿ ಕೂಡಾ ಬೇರೆ ಯಾವ ದುಡಿಮೆಗೂ ಮುಂದಾಗುವುದಿಲ್ಲ, ದಕ್ಷಿಣ ಕನ್ನಡದಲ್ಲಿ ಗೇರು ಬೀಜ (ಗೋಡಂಬಿ) ಕಾರ್ಖಾನೆ, ಹೆಂಚಿನ ಕಾರ್ಖಾನೆ, ಮೀನು ಮಾರಾಟ ಮುಂತಾದ ಮನೆಯಿಂದ ಹೊರಗಿನ ಯಾವ ದುಡಿತಕ್ಕೂ ಇವರು ಹೋಗುವ ಪದ್ಧತಿ ಇಲ್ಲ, ಮನೆಯಿಂದ ಹೊರಗೆ ದುಡಿಯಲು ಇವರ ಗಂಡಂದಿರ ಅನುಮತಿ ದೊರೆಯದು. ಮನೆಯಲ್ಲಿ ಕುಳಿತು ಬೀಡಿ ಕಟ್ಟಿದರೂ ಎಲೆ, ಹೊಗೆಸೊಪ್ಪು ತರುವುದು ಹಾಗೂ ಕಟ್ಟಿದ ಬೀಡಿಗಳನ್ನು ಏಜೆಂಟರ ಬಳಿಗೆ ಕೊಂಡೊಯ್ಯುವುದು ಗಂಡಸರು ಮತ್ತು ಗಂಡು ಮಕ್ಕಳ ಕೆಲಸ. ಹಣದ ವಹಿವಾಟೆಲ್ಲವೂ ಗಂಡಸರದು! ದಿನದ ಹನ್ನೆರಡು ಗಂಟೆ ದುಡಿದರೂ ಈ ಮಹಿಳೆಯರಿಗೆ ಆರ್ಥಿಕ ಸ್ವಾತಂತ್ರ್ಯ ದೊರೆಯದು. 'ಹಣದ ವ್ಯವಹಾರ ನಮಗೇನು ಗೊತ್ತು? ಅದೆಲ್ಲ ಗಂಡಸರ ಕೆಲಸ ತಾನೇ? ಅದನ್ನೆಲ್ಲ ಅವರೇ ನೋಡಿಕೊಳ್ಳಲಿ' ಎಂದು ಈ ಮಹಿಳೆಯರು ತಾವೇ ಗುಲಾಮತನವನ್ನಪ್ಪಿಕೊಳ್ಳುತ್ತಾರೆ.

ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಬೀಡಿ ಕಾರ್ಮಿಕರು ಸಂಘಟಿತರಾಗಿ ಅವರ ಯೂನಿಯನ್ ಇದ್ದು ಸರ್ಕಾರದ ಕಾನೂನಿನಂತೆ ಅವರ ಬಳಿ ಗುರುತಿನ ಚೀಟಿ ಇದ್ದು ಅವರಿಗೆ ಬೋನಸ್, ಪಿಂಚಣಿ, ಇಎಸ್‌ಐ ಸೌಲಭ್ಯ ಪಿಎಫ್, ಕನಿಷ್ಠ ಕೂಲಿ ಮುಂತಾದ ಎಲ್ಲ ಸೌಲಭ್ಯಗಳಿವೆ. ಆದರೆ ರಾಜ್ಯದ ಇತರೆಡೆಗಳಲ್ಲಿ ಇವರು ಅಸಂಘಟಿತ ಕಾರ್ಮಿಕರಾಗಿದ್ದು ಸರ್ಕಾರದಿಂದ ಯಾವುದೇ ಸೌಲಭ್ಯ ದೊರೆಯುವುದಿಲ್ಲವೆನ್ನುತ್ತಾರೆ.

ಕರ್ನಾಟಕದಲ್ಲಿ ಸುಮಾರು ಹತ್ತು, ಹದಿನೈದು ಲಕ್ಷ ಬೀಡಿ ಕಾರ್ಮಿಕರಿದ್ದಾರೆನ್ನಲಾಗಿದೆ. ಒಂದೆಡೆಯಲ್ಲಿ ಕೆಲವು ಕಂಪೆನಿಗಳು, ಮಾಲೀಕರು ಮತ್ತು ಗುತ್ತಿಗೆದಾರರು ಇವರನ್ನು ಹಗಲಿರುಳೂ ದುಡಿಸಿಕೊಂಡು ಕೂಲಿಯಲ್ಲಿ ವಂಚನೆ ಮಾಡುತ್ತಾರೆ. ಕನಿಷ್ಠ ಕೂಲಿ ಕಾಯ್ದೆ ಪ್ರಕಾರ ಒಂದು ಸಾವಿರ ಬೀಡಿಗಳಿಗೆ ರೂ. 150.88 ಪೈಸೆಗಳನ್ನು ಕೊಡಬೇಕು. ಆದರೆ ಕಂಪೆನಿಗಳು ಮತ್ತು ಗುತ್ತಿಗೆದಾರರು ಕಾರ್ಮಿಕ ಕಾನೂನುಗಳನ್ನು ಗಾಳಿಗೆ ತೂರಿ ಸಾವಿರ ಬೀಡಿಗಳಿಗೆ 80 ರಿಂದ 100 ರೂ. ಗಳನ್ನು ಮಾತ್ರ ಕೂಲಿ ಕೊಡುತ್ತಿದ್ದಾರೆ. ಐದು ವರ್ಷಗಳಿಗೊಮ್ಮೆ ಓಟು ಕೇಳಲು ಇವರ ಬಳಿಗೆ ಬರುವ ರಾಜಕಾರಣಿಗಳು ಆ ಬಳಿಕ ಇವರೆಡೆಗೆ ತಿರುಗಿಯೂ ನೋಡುವುದಿಲ್ಲ, ಹೀಗಾಗಿ ದಾವಣಗೆರೆಯ ಬೀಡಿ ಕಾರ್ಮಿಕರು ಅಸಂಘಟಿತ ಕಾರ್ಮಿಕ ವಲಯದಲ್ಲಿದ್ದು ಹೀನಾಯ ಪರಿಸ್ಥಿತಿಯಲ್ಲಿ ಬದುಕುತ್ತಿದ್ದಾರೆ. ಕೆಲವು ಕಂಪೆನಿಗಳು ಮತ್ತು ಮಾಲೀಕರು, ಗುತ್ತಿಗೆದಾರರು ಅನ್‌ಬ್ರ್ಯಾಂಡೆಡ್ ಹೆಸರಿನಲ್ಲಿ ಬೀಡಿ ಕಾರ್ಮಿಕರನ್ನು ದುಡಿಸಿಕೊಂಡು ಲಾಭಗಳಿಸುತ್ತಿದ್ದಾರೆ. ಕೆಲವು ಗುತ್ತಿಗೆದಾರರು ಕಾರ್ಮಿಕ ಇಲಾಖೆಯಲ್ಲಿ ನೋಂದಣಿ ಮಾಡಿಸಿಕೊಳ್ಳುವುದೂ ಇಲ್ಲ, ಕಾರ್ಮಿಕ ಇಲಾಖೆ ಕೂಡಾ ತಮ್ಮ ಜವಾಬ್ದಾರಿಗಳನ್ನು ಸಮನಾಗಿ ನಿರ್ವಹಿಸುವುದೂ ಇಲ್ಲ.

ಕಳೆದ ಒಂದು ವರ್ಷದಲ್ಲಿ ಬೀಡಿ ಕಂಪೆನಿ ಮಾಲೀಕ ವರ್ಗದ ಜೊತೆ ದಾವಣಗೆರೆ ಸಹಾಯಕ ಕಾರ್ಮಿಕ ಆಯುಕ್ತರ ನೇತೃತ್ವದಲ್ಲಿ ಬೀಡಿ ಕಾರ್ಮಿಕರ 12 ಸಂಧಾನ ಸಭೆಗಳನ್ನು ನಡೆಸಿದ್ದಾರೆ. ಹಾಗಾಗಿ ಈ ಯೂನಿಯನ್ ವತಿಯಿಂದ 12.1.2015 ರಂದು ನಡೆದ ಬೀಡಿ ಕಾರ್ಮಿಕರು ಮತ್ತು ಕಂಪೆನಿಗಳ ಗುತ್ತಿಗೆದಾರರ ಸಂಧಾನ ಸಭೆಯಲ್ಲಿ ಒಂದು ಸಾವಿರ ಬೀಡಿಗಳಿಗೆ ರೂ. 140 ನೀಡಬೇಕು ಮತ್ತು ಒಂದು ಕೆ.ಜಿ. ಎಲೆಗೆ 2000 ಬೀಡಿಗಳನ್ನು ಕೊಡಲು ಒಪ್ಪಂದವಾಗಿದೆ. ಹಾಗಾಗಿ ದಾವಣಗೆರೆಯ ಎಲ್ಲಾ ಬೀಡಿ ಕಾರ್ಮಿಕರು ಇವತ್ತಿನಿಂದ ಒಂದು ಸಾವಿರ ಬೀಡಿಗಳಿಗೆ 140 ರೂಗಳನ್ನು ಬೀಡಿ ಕಂಪೆನಿ ಗುತ್ತಿಗೆದಾರರಿಂದ ಹಕ್ಕಾಗಿ ಕೇಳಬೇಕೆಂದು 'ನೆರಳು' ರಾಜ್ಯ ಬೀಡಿ ಕಾರ್ಮಿಕರಲ್ಲಿ ಮನವಿ ಮಾಡಿದೆ ಹಾಗೂ ಸರ್ಕಾರದ ಮುಂದೆ ಹಕ್ಕೊತ್ತಾಯಗಳನ್ನಿಟ್ಟಿದೆ. ವಿವರಗಳು ಈ ಕೆಳಗಿನಂತಿವೆ.

ಕರ್ನಾಟಕ ರಾಜ್ಯ ಬೀಡಿ ಕಾರ್ಮಿಕರ ಕಲ್ಯಾಣ ಮಂಡಳಿ ರಚನೆಯಾಗಬೇಕು.


ಮಂಡಳಿ ವತಿಯಿಂದ ಗುರುತಿನ ಚೀಟಿಯನ್ನು ನೀಡಬೇಕು. (ಅದರಲ್ಲಿ ಮಕ್ಕಳ ಸ್ಕಾಲರ್‌ಶಿಪ್, ಮದುವೆ, ಸಹಜ ಸಾವು, ಅಪಘಾತ, ಆರೋಗ್ಯ, ಮನೆ ನಿರ್ಮಾಣ ಸೇರಿಸಬೇಕು).

[illegible] ಕ್ಷೇತ್ರದ ಕಾರ್ಮಿಕರಿಗೆ ಸಿಗುವ ಇಎಸ್‌ಐ ಸೌಲಭ್ಯಗಳು ಬೀಡಿ ಕಾರ್ಮಿಕರಿಗೂ ಸಿಗಬೇಕು.

[illegible] ಬೀಡಿ ಕಾರ್ಮಿಕರ ಸಮೀಕ್ಷೆಯಾಗಬೇಕು.

■ ಸಾರಾ ಅಬೂಬಕ್ಕರ್

ಪಾಠ ಕಲಿಸುವ ವಿಸ್ಮಯದ ಕೀಟಜಗತ್ತು



ಡಾ ಟಿ ಎಸ್ ಚನ್ನೇಶ್
channeshts@gmail.com

ನಮ್ಮ ಬದುಕಿಗೆ ಏನೆಲ್ಲಾ ಕಲಿತಿದ್ದೇವೆ, ಕಲಿಯುತ್ತಿದ್ದೇವೆ, ಅಲ್ಲವೇ? ಆಹಾರಕ್ಕೆಂದು ಕೃಷಿ ಮಾಡುತ್ತೇವೆ, ವಾಸಕ್ಕೆ ಮನೆ ಕಟ್ಟಿಕೊಳ್ಳುತ್ತೇವೆ, ಹವ್ಯಾಸಕ್ಕೆ ಪ್ರಾಣಿಸಾಕುತ್ತೇವೆ, ಆನಂದಿಸಲು ಸಂಗೀತ ಕೇಳುತ್ತೇವೆ, ಆಹ್ಲಾದಕರ ಪರಿಸರಕ್ಕೆ ವಿದ್ಯುತ್ ಫ್ಯಾನ್ ಹಾಗೂ ಏರ್ ಕಂಡೀಷನ್ ಕಂಡುಹಿಡಿದಿದ್ದೇವೆ. ಹೀಗೆ ಪಟ್ಟಿ ಮಾಡುತ್ತಾ ಹೋದರೆ ತುಂಬಾ ಉದ್ದವಾಗುತ್ತದೆ. ಅಚ್ಚರಿ ಇದಲ್ಲ! ಇದೆಲ್ಲವನ್ನು ನಾವು ಕೀಟಗಳಿಂದ ಕಲಿತಿದ್ದೇವೆ ಎನ್ನುವುದು ಅಚ್ಚರಿ. ಇದೀಗ ಎಲ್ಲೆಡೆ ಮಳೆ ಬೀಳಲು ಆರಂಭವಾಗಿದೆ. ತಂಪಾದ ಗಾಳಿಯ ಸುಯ್‌ಗುಟ್ಟುವ ದನಿ ನಮ್ಮೆಲ್ಲಾ ಕೆಲಸಗಳಿಗೂ ಬದಲಾವಣೆಯ ಮೆರಗನ್ನು ತರುತ್ತಿದೆ. ಇದುವರೆಗೂ ಎಲ್ಲಾ ಕಡೆಗಳಲ್ಲೂ ಸದಾ ಚುರುಕಾಗಿ ಓಡಾಡುವ ಇರುವೆ ಸಾಲು ಕಂಡಿರುತ್ತೀರಿ. ಮಳೆ ಬೀಳುವುದರೊಳಗೆ ಜೀವನಕ್ಕೆ ಬೇಕಾದನ್ನು ಸಂಗ್ರಹಿಸುವ ಧಾವಂತ ಅವುಗಳಿಗೆ. ನಮಗೂ ಅಷ್ಟೇ ಅಲ್ಲವೇ? ಮಳೆ ಬೀಳುವುದಕ್ಕೆ ಅಣಿಯಾಗಿ ಎಲ್ಲಾ ಅಣಿಮಾಡಿಟ್ಟು ಕಾಯುತ್ತೇವೆ. ಮಳೆ ಬಂದಕೂಡಲೇ ಬಿತ್ತಿ ಬೆಳೆಯ ದಿನಗಳ ಎಣಿಸುತ್ತೇವೆ. ಸುತ್ತಲು ಕಣ್ಣು ಹಾಯಿಸಿದರೆ ಇರುವೆ, ನೊಣ, ಜಿರಲೆ, ಸೊಳ್ಳೆ, ತಿಗಣೆ, ಮಿಡತೆ, ಜೀರುಂಡೆ, ಬಣ್ಣ ಬಣ್ಣದ ಚಿಟ್ಟೆ, ಪತಂಗ ಮುಂತಾದವುಗಳನ್ನು ನೋಡಬಹುದು. ಇವೆಲ್ಲವೂ ತಮ್ಮ ಸಂಕುಲದ ಜತೆ ಸೇರಿ ನಮ್ಮ ಈ ಬದುಕನ್ನು ವಿಕಾಸದಲ್ಲಿ ಕಲಿಸಿವೆ ಎಂಬುದೇ ಬಲು ದೊಡ್ಡ ಅಚ್ಚರಿ.

ಕೀಟ ಜಗತ್ತಿನ ವ್ಯಾಪ್ತಿ ಅಗಾಧ, ವಿಸ್ಮಯ. ವೈವಿಧ್ಯದ ಕೀಟಗಳ ಪ್ರಪಂಚದ ಕೇವಲ ಶೇ. 1 ರಷ್ಟು ಪ್ರಭೇದಗಳು ಅಪಾಯಕಾರಿ ಕೀಟಗಳಾದರೆ, ಬಹಳಷ್ಟು ಉಪಕಾರಿಗಳು. ಈ ಕೀಟ ಜಗತ್ತು ತುಂಬಾ ದೊಡ್ಡದು. ಈವರೆವಿಗೂ ಆರೇಳು ಲಕ್ಷಕ್ಕೂ ಹೆಚ್ಚು ಕೀಟಗಳನ್ನು ಅರಿತಿದ್ದರೂ, ಒಟ್ಟು ಕೀಟ ಸಮೂಹಕ್ಕೆ ಹೋಲಿಸಿದಲ್ಲಿ ಇವು ಏನೂ ಅಲ್ಲ, ಇರುವ ಒಟ್ಟು ಕೀಟಗಳಲ್ಲಿ ಶೇ. 10 ರಷ್ಟು ಮಾತ್ರ ತಿಳಿದಿರಬಹುದು ಎಂಬದು ಒಂದು ಅಂದಾಜು. ಇದರಲ್ಲಿ ಜೀರುಂಡೆಯ ಪ್ರಕಾರಗಳೇ 2,50,000 ಕ್ಕೂ ಹೆಚ್ಚು ಇವೆ. ಬಣ್ಣದ ಚಿಟ್ಟೆಗಳು ಮತ್ತು ಪತಂಗಗಳು ಸೇರಿ ಸುಮಾರು 1,10,000 ಇದ್ದರೆ, ಇರುವೆ ಜೇನ್ನೊಣಗಳ ಪ್ರಭೇದ ಪ್ರಕಾರಗಳಲ್ಲಿ 1,00,000 ರಷ್ಟಿದೆ. ತಗಣೆಯ ವಂಶಸ್ಥರು 55,000 ಕ್ಕೂ ಹೆಚ್ಚು ಇವೆ. ಹೀಗೆ ಮತ್ತೆ ಹಲವಾರು ಇವೆ.

ಭೂಮಿಯ ಮೇಲಿನ ಅಗಾಧ ಜೀವಜಾಲದ ನಂಟು ಮಾನವನಿಗೆ ಇದ್ದೇ ಇದೆ. ಅದರಲ್ಲೂ ಕೀಟಗಳ ಜತೆಗೆ ಇನ್ನೂ ಹೆಚ್ಚೇ ಇದೆ. ಏಕೆಂದರೆ ಜೀವಿ ಜೀವಿಗಳ ನಂಟನ್ನು ನಿರ್ವಹಿಸುವ ಕಲೆಯನ್ನು ಕೀಟಗಳು ತಮ್ಮೊಟ್ಟಿಗೆ ಇಟ್ಟುಕೊಂಡು ಬದುಕುತ್ತವೆ. ಇದೊಂದು ಅಭೂತಪೂರ್ವವಾದ ಜ್ಞಾನ ಭಂಡಾರ. ಸಾಮಾಜಿಕ ಹೊಂದಾಣಿಕೆಯ ಅನಿವಾರ್ಯತೆಯನ್ನು ಕೀಟಗಳಿಂದಲೇ ಕಲಿಯಬೇಕು, ಅಷ್ಟಕ್ಕೇ ಮುಗಿಯಲಾರದು, ಅರಿತಷ್ಟೂ ಉಳಿಯುವ ಅನೇಕ ಬಗೆಯ ಜೀವನ ಮಾರ್ಗಗಳನ್ನು ಕೀಟಗಳು ನಮಗೆ ಕಲಿಸಿವೆ. ಕೃಷಿ ಮಾಡುವುದರಿಂದ ಮೊದಲುಗೊಂಡು ದಾರಿ ತೋರುವ ಸ್ಕೌಟ್ ಕೆಲಸದವರೆಗೂ ಕೀಟಗಳು ಮಾರ್ಗದರ್ಶನ ಮಾಡಿವೆ. ಸಾಮಾಜಿಕ ಜೀವನವೂ ಸೇರಿಕೊಂಡು ಕೀಟಗಳಿಂದ ಮಾನವರು ವಿಕಾಸದಲ್ಲಿ ಏನೆಲ್ಲಾ ಕಲಿತಿದ್ದಾರೆ. ಅವೆಲ್ಲವುಗಳ ಜತೆಗೆ ಕೀಟ ಸಂಕುಲದ ವಿಸ್ಮಯದ ಕಥನ ಇಲ್ಲಿದೆ.

ಹುಟ್ಟು ಅನಾಥರು

ಪ್ರತಿ ಪ್ರಭೇದವೂ ಒಂದೊಂದು ವಿಚಿತ್ರದ ಆಗರ. ಹೆಚ್ಚು ಕೀಟಗಳು ಹುಟ್ಟು ಅನಾಥರು. ಪಾಯಸ್ಸಿಗೆ ಬಂದ ಕೀಟ ವರ್ಷಾಕಾಲದ ಕೊನೆಯಲ್ಲಿ ಇಟ್ಟ ಮೊಟ್ಟೆಗಳು, ತಿರುಗಿ ವಸಂತವ ಕಳೆದು ಮರಿ ಹೊರಬರುವ ಮೊದಲೇ ಚಳಿಗಾಲದಲ್ಲಿ ಅದರ ತಾಯಿತಂದೆಯರು ಸಾವನ್ನಪ್ಪಿರುತ್ತಾರೆ. ತಮ್ಮ ಮೊದಲ ಹುಟ್ಟು ಹಬ್ಬವನ್ನೇ ಆಚರಿಸದ ಕೀಟಗಳಿಗೆ ತಾವಿಟ್ಟ ಮೊಟ್ಟೆಯೊಡೆಯುವ ಸಂಭ್ರಮವನ್ನು ಅನುಭವಿಸುವ ಅದೃಷ್ಟವಿಲ್ಲ! ತಮ್ಮ ಮರಿಯನ್ನು ಸಾಕುವ ಹೊಣೆ ಹೊರದ ಕೀಟಗಳು. ಹಾಗಾಗಿ ಮರಿಗಳು ಸ್ವಾವಲಂಬಿಗಳು. ಅಪ್ಪ ಅಮ್ಮಂದಿರಿಲ್ಲದ ಅನಾಥ ಕೀಟಗಳು ತಮ್ಮಷ್ಟಕ್ಕೆ ತಾವೇ ಬದುಕಲು ಕಲಿಯುತ್ತವೆ. ತಮ್ಮಂತೆ ಇರದ ತಮ್ಮ ಮರಿಯನ್ನ ನೋಡಿ ಅದರ ತಾಯಿತಂದೆಯರು ಅದನ್ನು ಸಾಕುತ್ತಿರಲಿಲ್ಲವೋ ಏನೋ. ಯಾಕೆಂದರೆ ಮೊಟ್ಟೆಯೊಡೆದು ಹೊರಬಂದ ಲಾರ್ವಾ ಕಂಬಳಿ ಹುಳು ತಾಯಿ ತಂದೆಯನ್ನು ಹೋಲುವುದೇ ಇಲ್ಲ, ನಿಸರ್ಗದ ಈ ವಿಚಿತ್ರಕ್ಕೇನೇ ಬಹಳಷ್ಟು ಕೀಟಗಳು ತಮ್ಮ ಮಕ್ಕಳನ್ನು ನೋಡುವ ಭಾಗ್ಯ ಪಡೆದಿಲ್ಲ.

ವಾಕಿಂಗ್ ಸ್ಟಿಕ್

ಒಂದು ಕೀಟ ಅದೆಷ್ಟು ದೊಡ್ಡದಿರಬಹುದು? ಮಲಯನ್ ಕಡ್ಡಿ ಹುಳ (ಮಲಯನ್ ವಾಕಿಂಗ್ ಸ್ಟಿಕ್) ಹದಿನೈದು ಇಂಚು ಉದ್ದವಿರುತ್ತದೆ. ಬಹಳ ಹೆದರುವ ಈ ಪುಕ್ಕಲು ಹುಳ, ಸ್ವಲ್ಪ ಭಯಗೊಂಡರೂ ಸತ್ತು ಹೋದಂತೆ ನಟಿಸುತ್ತದೆ. ಆಗ ಒಂದು ಪುಟ್ಟ ಕೊಂಬೆಯ ತುಂಡಿನಂತೆ ಕಾಣುತ್ತದೆ. ಹೀಗೆ ಒಂದು ಕೋಲಿನಂತೆ ಅಲುಗಾಡದೆ ಗಂಟೆಗಟ್ಟಲೇ ಇದ್ದು ಬಿಡುತ್ತದೆ. ಈ ಕೀಟ ಆರು ಗಂಟೆಗೂ ಹೆಚ್ಚು ಕಾಲ ಚಲಿಸದೇ ಇದ್ದ ದಾಖಲೆ ಇದೆ.

ಆನೆ ಬಲದ ಕೀಟ ಜಗತ್ತು

ಆನೆ ಬಲಶಾಲಿಯಾದದ್ದು ತನ್ನಷ್ಟೇ ಭಾರವನ್ನು ಹೊತ್ತು ನಡೆಯಬಲ್ಲದು. ಕೀಟಗಳ ಬಲವನ್ನು ಊಹಿಸಿದ್ದೀರಾ? ಕೆಲವು ಜೀರುಂಡೆಗಳು ತಮ್ಮ ಭಾರದ 850ರಷ್ಟು ಭಾರವನ್ನು ಸುಲಭವಾಗಿ ಸಾಗಬಲ್ಲವು. ಇರುವೆಯೊಂದೇ, ಸತ್ತ ಮಿಡತೆಯನ್ನೋ, ಜಿರಲೆಯನ್ನೋ ಎಳೆಯುವುದನ್ನು ನೋಡಿರಬೇಕಲ್ಲವೇ. ನಾವೇನಾದ್ರೂ ಅಷ್ಟೇ ಬಲವುಳ್ಳವರಾಗಿದ್ದರೆ ಸುಲಭವಾಗಿ ರೈಲೊಂದನ್ನು ಎಳೆಯಬಹುದಿತ್ತು.





ಹಾರುವ ಹೆಲಿಕಾಪ್ಟರ್

ಹಾರುವ ಹೆಲಿಕಾಪ್ಟರ್ ಎಂದೇ ಹೆಸರಾದ ಡ್ರಾಗನ್ ಫ್ಲೈ ಹಾರುವಲ್ಲಿ ಹೆಸರುವಾಸಿ. ಗಂಟೆಗೆ ಸುಮಾರು 60 ಮೈಲಿ ವೇಗವಾಗಿ ಹಾರಬಲ್ಲದು. ದೂರ ದೂರ ಹಾರುತ್ತಾ ಕಡಲಲ್ಲಿ 200 ಮೈಲಿಗಳಾಚೆಯ ಹಡಗನ್ನು ತಲುಪಿವೆ. ಎಲ್ಲ ದಿಕ್ಕುಗಳಲ್ಲೂ ಕ್ಷಣ...ಕ್ಷಣಕ್ಕೂ ತಿರುಗಿ ಹಾರಬಲ್ಲ ಈ ಕೀಟ ಮಾನವನಿಗೆ ಉಪಕಾರಿ, ಹಾರುತ್ತಾ ಹಾರುತ್ತಿದ್ದಂತೆಯೆ ಅಂತರಿಕ್ಷದಲ್ಲಿ ಸ್ಥಿರವಾಗಿ ಹೆಲಿಕಾಪ್ಟರ್‌ನಂತೆ ನಿಲ್ಲಬಲ್ಲದು, ರೆಕ್ಕೆ ಬಡಿಯುವ ವೇಗ ಎಷ್ಟೆಂದರೆ ರೆಕ್ಕೆ ಕಾಣುವುದೇ ಕಷ್ಟ.

ಕೀಟಗಳ ಆರ್ಕೆಸ್ಟ್ರಾ

ಹಕ್ಕಿಗಳಷ್ಟೇ ಮಧುರವಾಗಿ ಹಾಡಬಲ್ಲ ಕೀಟಗಳಿವೆ! ಕ್ರಿಕೆಟ್‌ಗಳು ಮತ್ತು ಹಾರುವ ಮಿಡತೆಗಳು ಈ ಬಗೆಯ ಗಾಯಕರು. ಈ ಗಾಯಕರು ಸಾಮಾನ್ಯ ಮುದ್ದು ಸಾಕು ಪ್ರಾಣಿಗಳಾಗಲು ಯೋಗ್ಯ; ಹಾಗೆಯೇ ಸುಂದರವೂ ಕೂಡ. ಅಂದಮಾತ್ರಕ್ಕೆ ಮಧುರವಾದ ಗಾಯನ ಬಾಯಲ್ಲೇ ಅದೂ ಗಂಟಲಿನಿಂದಲೇ ಬರಬೇಕೆಂದಿಲ್ಲ, ಕೆಲವು ಕಾಲುಗಳನ್ನು ಉಜ್ಜಿ ಮತ್ತೆ ಕೆಲವು ರೆಕ್ಕೆಗಳ ಬಡಿದು, ಇನ್ನೂ ಹಲವು ದೇಹದಿಂದ ಗಾಳಿಯನ್ನು ಹೊರತಳ್ಳಿ ಸದ್ದು ಮಾಡಬಲ್ಲವು ಕೂಡ ಏಕೆಂದರೆ ಅವು ಕಿವುಡು ಪಾಪ!

ನೊರೆಮನೆಯಲ್ಲಿ ಕೀಟ

ಪಾರ್ಕಿನಲ್ಲಿ ಹುಲ್ಲಿನ ಮೇಲೆ ನಡೆಯುವಾಗ ಜೋಕೆ! ಹುಲ್ಲುಕಡ್ಡಿಯಲ್ಲಿ ಯಾರೋ ಉಗುಳಿದಂತೆ ಉಗುಳು ನೊರೆ ಕಂಡೀತು. ಅದು ಯಾರ ಉಗುಳೂ ಅಲ್ಲ, ಆ ನೊರೆಯೇ ಹಲವು ಕೀಟಗಳ ಮನೆ. ಹುಲ್ಲುಕಡ್ಡಿಯ ರಸ ಅಗೆದು ಬಾಯಲ್ಲಿ ಊದಿ ನೊರೆ ಮಾಡಿ ಕೆಲವೇ ನಿಮಿಷಗಳಲ್ಲಿ ಮನೆಯನ್ನು ಕಟ್ಟಿ ಗೃಹ ಪ್ರವೇಶ ಮಾಡಿಯೇ ಬಿಡುತ್ತವೆ. ಸಾಲದ್ದಕ್ಕೆ ನೊರೆಮನೆಯಲ್ಲಿಯೇ ಏರ್ ಕಂಡೀಷನ್ ಬೇರೆ. ಈ ಬಗೆಯ ಕೀಟಗಳೆಲ್ಲ ಫ್ರಾಗ್ ಹಾಪರ್ ಜಾತಿಗೆ ಸೇರಿದವು.

ಪ್ರೈವೇಟ್ ಬೆಡ್‌ರೂಮ್

ಸೂರ್ಯ ಅಸ್ತಮಿಸಿದಂತೆ ಕತ್ತಲಾಗುವ ಸೂಚನೆ ಬಂದೊಡನೆಯೇ ಕಾರ್ಯನಿರತ ಬಂಬಲ್ ಬೀ ಮನೆಗೆ ಹಿಂತಿರುಗಲು ತಯಾರಾಗುತ್ತದೆ. ಕೆಲವೊಮ್ಮೆ ಬಹುದೂರ ಬಂದು ವಾಪಸಾಗಲು ಆಗದೆ ಲಾಡ್ಜ್‌ಗೆ ಅರಸುತ್ತದೆ. ಕೀಟಗಳಿಗೆ ಒಳ್ಳೆಯ ಹೋಟೆಲ್ ಎಂದರೆ ಕತ್ತಲಾದಂತೆ ಮುಚ್ಚಿಕೊಳ್ಳುವ ಹೂ ಅಲ್ಲವೇ. ರಾತ್ರಿ ಕಳೆಯಲು ಮುಚ್ಚುವ ಹೂವೇ ಈ ನೊಣಕ್ಕೆ ಪ್ರೈವೇಟ್ ಬೆಡ್ ರೂಂ. ಮುಂಜಾನೆಯ ಬೆಳಕಿನ ಕಿರಣಗಳು ದಳವನ್ನು ತೆರೆಸಿದೊಡನೆಯೇ, ಮತ್ತೆ ಹೊಸ ದಿನಕ್ಕೆ ಅಣಿಯಾಗುತ್ತದೆ.

ಮೀನುಗಾರರ ಕೀಟ

ವಾಟರ್ ಬಗ್ ಎನ್ನುವ ಜೀರುಂಡೆಗೆ ಊಟಕ್ಕೆ ಮೀನೆಂದರೆ ಬಹಳ ಇಷ್ಟ. ಅದ್ಭುತ ಈಜುಗಾರನಾದ ಈ ಕೀಟ ಚಿಕ್ಕ ಚಿಕ್ಕ ಮೀನುಗಳನ್ನು ಕಬಳಿಸುವುದರಲ್ಲಿ ನಿಸ್ಸೀಮ. ಬಲವಾದ ತನ್ನೆರಡೂ ಮುಂಗಾಲುಗಳ ಚೂಪನೆಯ ಉಗುರು ಬಳಸಿ ಈಜುವ ಮೀನನ್ನು ಹಿಡಿದು ಹೊಟ್ಟೆಗೆ ಸೇರಿಸುತ್ತದೆ. ಹಾಂ ಅಂದಹಾಗೆ ಇದು ಈಜುವುದಷ್ಟೇ ಬಲ್ಲ ಕೀಟ ಅಲ್ಲ, ಚೆನ್ನಾಗಿ ಹಾರಬಲ್ಲದು ಕೂಡ.

ಸ್ಕೌಟ್ ಇರುವೆಗಳು

ಬೆಡೆನ್ ಪಾವೆಲ್‌ಗೂ ಮೊದಲೇ ಸ್ಕೌಟ್ ಪದ್ಧತಿ ಇರುವೆಗಳಿಗೆ ಹೊಳೆದಿತ್ತು, ಮಾರ್ಗದರ್ಶಕ ಇರುವೆಗಳು ತೀರಾ ಸಾಮಾನ್ಯ. ಒಂದು ಚೂರು ತಿಂಡಿ ಬಿದ್ದದ್ದು ಕಾಣಿಸಿದಲ್ಲಿ, ಈ ಸ್ಕೌಟ್‌ಗಳು ಮೊದಲು ಹಾಜರ್. ಸುದ್ದಿ ಮುಟ್ಟಿಸಲು ಮನೆಗೆ ಧಾವಿಸುತ್ತವೆ, ಕೆಲ ಹೊತ್ತಿನಲ್ಲಿ ಅಲ್ಲಿಗೆ ಕೆಲಸಗಾರರ ದಂಡೇ ಸಾಲುಗಟ್ಟಿ ದಾಳಿಯಿಟ್ಟಿರುತ್ತದೆ.. ಬರಿ ಸುದ್ದಿಯಿಂದಲೇ ಬರುವ ಇರುವೆಗೆ ಇದು ಹೇಗೆ ಸಾಧ್ಯವಾಯಿತು ಅನ್ನಿಸುವುದೇ? ಸ್ಕೌಟ್‌ಗಳು ಅಲ್ಲಿಂದ ಮನೆಯವರೆಗೂ ಇಂಚಿಗೊಂದರಂತೆ ಒಂದು ವಾಸನೆಯುಕ್ತ ರಸಾಯನಿಕವನ್ನು ಹಾಕುತ್ತಾ ಸಾಗುತ್ತವೆ. ಪ್ರತಿ ಗೂಡಿಗೂ ಬೇರೆಬೇರೆಯಾದ ವಾಸನೆ ಇರುವುದರಿಂದ ಇರುವೆಗಳು ಹಾದಿ ತಪ್ಪುವುದಿಲ್ಲ ವಾಸನೆ ಹಿಡಿದು ಕೆಲಸ ಸಾಧಿಸಿಯೇ ಬಿಡುತ್ತವೆ.

ರಾಜ ಕೈದಿಗಳು

ಇಡೀ ಜೀವವನ್ನೇ ಜೈಲಿನಲ್ಲಿ ಕಳೆಯಲಾದಿತೇ? ಹೌದು ಗೆದ್ದಲು ಸಾಮ್ರಾಜ್ಯವನ್ನಾಳುವ ರಾಜರಾಣಿಯರ ಅಂತಃಪುರವೇ ಒಂದು ಜೈಲು. ಈ ಅಂತಃಪುರವನ್ನು ಭದ್ರವಾಗಿ ಕಟ್ಟಿದ ಗೆದ್ದಲುಗಳು ಅದರ ಬಾಗಿಲನ್ನು ಕಿರಿದುಗೊಳಿಸಿ ರಾಜರಾಣಿಯರು ಹೊರಬಾರದಂತೆ ನೋಡಿಕೊಳ್ಳುತ್ತವೆ. ಇಡೀ ಗೂಡನ್ನೇ ನಿಯಂತ್ರಿಸುವ ಈ ರಾಜರಾಣಿಯರಿಗೆ ಸ್ವಾತಂತ್ರವೆಂಬುದೇ ಇಲ್ಲ. ಬೇರೆಲ್ಲ ಕೆಲಸಗಾರ ಗೆದ್ದಲುಗಳು ಓಡಾಡಿಕೊಂಡಿದ್ದರೆ ಇವರು ಜೀವನವಿಡೀ ಈ ಜೈಲಿನಲ್ಲೇ ಕಳೆಯಬೇಕು.

ಪನಾಮಾ ಕಾಲುವೆ ಮತ್ತು ಸೊಳ್ಳೆ

ಅಮೆರಿಕನ್ನರಿಗೂ ಬಹಳ ಮೊದಲೇ ಪನಾಮಾ ಕಾಲುವೆ ನಿರ್ಮಿಸಲು ಫ್ರೆಂಚರು ಯತ್ನಿಸಿದರು. ಆದರೆ ಸೋತರು. ಅದಕ್ಕೆ ಕಾರಣ ಚಿಕ್ಕ ಸೊಳ್ಳೆ ಎಂದರೆ ಅಚ್ಚರಿಯಾದೀತು ಆದರೆ ನಿಜ. ಪನಾಮಾದ ತುಂಬೆಲ್ಲಾ ತುಂಬಿದ್ದ ಸೊಳ್ಳೆಗಳು ಫ್ರೆಂಚರಿಗೆ ಮಲೇರಿಯಾ ಮತ್ತು ಹಳದೀ ಜ್ವರ ತಂದಿಟ್ಟವು. ಎಂಟು ವರ್ಷಗಳ ಅವಧಿಯಲ್ಲಿ 50,000 ಫ್ರೆಂಚ್ ಕೆಲಸಗಾರರು ಬಲಿಯಾದರು. ಆದರೆ ಅಮೆರಿಕನ್ನರು ವಿಲಿಯಂ ಗಾರ್ಗೆಸ್ ಎನ್ನುವ ಸೇನಾ ವೈದ್ಯನ ನೆರವಿನಿಂದ ಕೋಟಿಗಟ್ಟಲೇ ಸೊಳ್ಳೆಗಳನ್ನು ಕೊಂದರು. ಅಂತೂ ಕಾಲುವೆ ಮಾಡಲು ಅವರು ಹತ್ತು ವರ್ಷಗಳ ಕಾಲ ಸೊಳ್ಳೆಗಳೊಡನೆ 'ಯುದ್ಧ' ಮಾಡಬೇಕಾಯಿತು.

ಇನ್ಸೆಕ್ಟ್ ಸ್ನ್ಯಾಕ್ಸ್

ಸ್ನ್ಯಾಕ್ಸ್ ಎಂದರೆ ಬಾಯಲ್ಲಿ ನೀರೂರಬಹುದು. ಅದು ಕೀಟಗಳಿಂದ ತಯಾರಿಸಿದ ಸ್ನ್ಯಾಕ್ಸ್ ಎಂದರೆ ಹೇಗನಿಸುತ್ತದೆ? ಆದರೆ ಕೀಟಗಳೂ ಉತ್ತಮ ಆಹಾರ. ಆಫ್ರಿಕಾದಲ್ಲಿ ಜೀರುಂಡೆಗಳ ಲಾರ್ವಾಗಳನ್ನು ಒಣಗಿಸಿ, ನಾವು ಕಡಲೇ ಕಾಯಿಯನ್ನು ತಿಂದಂತೆ ತಿನ್ನುತ್ತಾರೆ. ಚೀನಾದಲ್ಲಿ ಕೆಲವು ಮಿಡತೆಗಳನ್ನು ಬೇಯಿಸಿ ರುಚಿರುಚಿಯಾಗಿ ಮಾಡಿ ಭಕ್ಷಿಸುತ್ತಾರೆ. ಅಷ್ಟೇಕೆ, ಅಮೆರಿಕಾದಲ್ಲಿ ಕೀಟಗಳಿಗೆ ಚಾಕಲೇಟ್ ಲೇಪಿಸಿ ಮಾರುವುದನ್ನು ನಾವು ನೋಡಬಹುದು. ನಮ್ಮ ದೇಶದಲ್ಲಾದರೆ ಬಿಸಿಬಿಸಿ ಬೋಂಡಾ ಮಾಡಬಹುದಿತ್ತು! ಅಲ್ಲವೇ?

ಗೋಪಾಲಕ ಇರುವೆ

ಏನಿದು ಇರುವೆ ಹಸು ಸಾಕುತ್ತದೆಯೇ? ಅಲ್ಲ, ಆದರೆ ಹಸುವನ್ನು ಸಾಕಿದಂತೆ ತನಗಿಷ್ಟವಾದ ಸಿಹಿಯನ್ನು ಉತ್ಪಾದಿಸುವ, ಏಫಿಡ್ ಎಂಬ ಹೇನಿನ ಜಾತಿಯ ಕೀಟವನ್ನು ಸಾಕುತ್ತದೆ. ಏಫಿಡ್ ಎಂಬುದು ಸಸ್ಯಗಳ ರಸವನ್ನು ಹೀರಿ ಬದುಕುವಂಥದು. ಅದರ ಮೈಮೇಲೆ ಒಂದು ರೀತಿಯ ಸಿಹಿ ದ್ರವ ಸೂಸುತ್ತಿರುತ್ತದೆ. ಇರುವೆಗೆ ಸಿಹಿ ಎಂದರೆ ಪ್ರಾಣ. ಸರಿ, ಏಫಿಡ್‌ಗೆಂದೇ ಮನೆಕಟ್ಟಿ, ಊಟಕೊಟ್ಟು ಸಾಕುತ್ತದಲ್ಲದೆ, ಅವಕ್ಕೇನೂ ಅಪಾಯವಾಗದಂತೆ ಕಾಪಾಡುತ್ತದೆ. ಮೆಲ್ಲಗೆ ತನಗಿಷ್ಟವಾದ ಸಿಹಿಯನ್ನು ಪಡೆಯಲು, ಅವನ್ನು ಜೋಪಾನ ಮಾಡುತ್ತದೆ.

ಸದ್ದು ಮಾಡುವ ಥರ್ಮಾಮೀಟರ್

ಥರ್ಮಾಮೀಟರ್ ಸದ್ದು ಮಾಡುವುದೇ? ಅಲ್ಲ! ಕೆಲವು ಕೀಟಗಳು ಸದ್ದು ಮಾಡಿ ಶಾಖವನ್ನು ತಿಳಿಸುತ್ತವೆ. ಇವು ಚಿಟ್ಟೆ ಜಾತಿಯ ಕೀಟಗಳು. ಪ್ರತಿ 15 ಸೆಕೆಂಡಿಗೆ ಮಾಡುವ ಸದ್ದನ್ನು ಎಣಿಸಿ ಅದಕ್ಕೆ ಉಷ್ಣತೆಯಾಗಿರುತ್ತದೆ. ರಾತ್ರಿಯಾದಂತೆ ವಾತಾವರಣ ತಂಪಾಗುವುದರಿಂದ ಈ ಸದ್ದೂ ಕಡಿಮೆಯಾಗುತ್ತದೆ. ಕಾರಣ ತುಂಬಾ ಸರಳ. ಚಿಟ್ಟೆಗಳು ಶೀತ ರಕ್ತ ಪ್ರಾಣಿಗಳು. ಅವು ಮೈಯನ್ನು ಬಿಸಿಯಾಗಿಡಲು ಹೆಚ್ಚು ವೇಗವಾಗಿ ಅವುಗಳ ಮಾಂಸಖಂಡಗಳು ಕೆಲಸಮಾಡಿ ಗಾಳಿಯನ್ನು ಹೊರಹಾಕುತ್ತವೆ. ಹೀಗಾಗಿ ಆ ಸದ್ದು ರಾತ್ರಿಯಾದಂತೆ ಸಹಜವಾಗಿಯೇ ಕಡಿಮೆಯಾಗುತ್ತದೆ.

ಜೀವಂತ ಫ್ಯಾನ್‌ಗಳು

ನಮ್ಮ ಮನೆಯ ಕೋಣೆಗಳನ್ನು ತಂಪಾಗಿಡಲು ವಿದ್ಯುತ್ ಫ್ಯಾನ್ ಹಾಕುತ್ತೇವಷ್ಟೆ. ಜೇನು ಮನೆಯು ನಮ್ಮ ಮನೆಯಷ್ಟೇ ತಂಪಾಗಿರುತ್ತದೆ. ಆದರೆ ವಿದ್ಯುತ್ ಫ್ಯಾನಿನಿಂದಲ್ಲ, ಅವು ಮನೆಯ ಬಾಗಿಲಲ್ಲೆ ನಿಂತು ರೆಕ್ಕೆಯನ್ನು ಫ್ಯಾನಿನಂತೆ ಬೀಸುತ್ತಿರುತ್ತವೆ. ಪ್ರತಿ ಜೇನುನೊಣಕ್ಕೂ ಗಾಳಿ ಬೀಸುವ ತನ್ನ ಸರದಿ ಯಾವಾಗ ಬರುವುದೆಂದು ನಿಖರವಾಗಿ ಗೊತ್ತು, ಬೇಸಿಗೆಯಲ್ಲಿ ಶಖೆ ಹೆಚ್ಚಾದರೆ ನೀರು ತಂದಿಟ್ಟು, ಅದರ ಮೇಲೆ ರೆಕ್ಕೆ ಬಡಿದು 'ಮಂಜು' ಸೃಷ್ಟಿಸಿ ಗೂಡನ್ನು ತಂಪು ಮಾಡುತ್ತವೆ. ಅವಕ್ಕೂ ಏರ್‌ಕಂಡೀಷನ್ ನಿಯಮ ಗೊತ್ತು!

ಉಪದ್ರವ ಕೀಟಕ್ಕೊಂದು ಸ್ಮಾರಕ

ಕೀಟಗಳಿಗೆ ಸ್ಮಾರಕವೇ! ಹೌದು, ಅದೂ ಉಪದ್ರವ ಕೀಟಕ್ಕೆ!! ಅಚ್ಚರಿಯಾಗುತ್ತಿದೆಯೇ? ಅಮೆರಿಕದ ಅಲಾಬಾಮಾದ ಎಂಟರ್‌ಪ್ರೈಸ್ ನಗರದಲ್ಲಿ ಉಪದ್ರವ ಕೀಟಕ್ಕೊಂದು ಸ್ಮಾರಕ ನಿಲ್ಲಿಸಲಾಗಿದೆ. ಮೆಕ್ಸಿಕೋದಿಂದ ಅಮೆರಿಕದ ದಕ್ಷಿಣ ಪ್ರಾಂತ್ಯಗಳ ಮೇಲೆ ದಾಳಿ ಇಟ್ಟ ಮೆಕ್ಸಿಕನ್ ನುಸಿಯಿಂದಾಗಿ ಮಿಲಿಯನ್‌ಗಟ್ಟಲೆ ಡಾಲರ್‌ಗಳ ಬೆಳೆ ನಷ್ಟವಾಯಿತು. ಅಲ್ಲಿಯ ಹತ್ತಿ ಬೆಳೆಯ ಕಾಯಿ ಕೊರೆದು ಬೆಳೆಯನ್ನೆಲ್ಲಾ ನಾಶ ಮಾಡತೊಡಗಿತು. ರೈತರು ವಿಧಿಯಿಲ್ಲದೆ ಹಣ್ಣು ಗೋಧಿ ಮೆಕ್ಕೆಜೋಳ ಮತ್ತಿತರ ಬೆಳೆಗಳನ್ನು ಬೆಳೆಯತೊಡಗಿದರು. ಈ ಬೆಳೆ ಬದಲಾವಣೆ ನೈಸರ್ಗಿಕ ಸಮತೋಲನ ಕಾಪಾಡಲು ಸಹಕಾರಿಯಾಗಿತ್ತಲ್ಲದೆ, ಲಾಭವನ್ನೂ ತಂದಿತು. ಈ ಹೊಸ ಪದ್ಧತಿಯನ್ನು ಕಲಿಸಿದ ಕೀಟಕ್ಕೆ ಗೌರವಸೂಚಕವಾಗಿಯೇ ಈ ಸ್ಮಾರಕ ನಿಲ್ಲಿಸಲಾಗಿದೆ. ಹೀಗೆ ಹತ್ತು ಹಲವು ಪಾಠಗಳು ನಮಗೆ ಕೀಟಗಳಿಂದಲೇ ಬಂದಿವೆ.

ಇಲ್ಲಿಗೇ ಮುಗಿಯುವದಿಲ್ಲ ಕೀಟ ಪ್ರಪಂಚದ ವಿಸ್ಮಯ. ಇನ್ನೂ ಲಕ್ಷಗಟ್ಟಲೆ ಕೀಟಗಳ ಬಗ್ಗೆಯೇ ನಮಗೆ ತಿಳಿಯದಿರುವಾಗ ಇನ್ನು ಅವುಗಳ ವಿಸ್ಮಯಗಳು ಹೇಗೆ ತಿಳಿದಾವು? ಅವನ್ನು ಅರಿತುಕೊಳ್ಳಲು ಶತಮಾನಗಳೇ ಬೇಕಾಗಬಹುದು! ■



ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ಕುಲೆ ಮತ್ತು ಪ್ರೇತಾತ್ಮ

ಪ್ರಕೃತಿಯಲ್ಲಿನ ವಿಸ್ಮಯಗಳನ್ನು, ಮಾನವನೆಂದಿಗೂ ಸೃಷ್ಟಿಸಲಾಗದ ಅದ್ಭುತ ವಿದ್ಯಮಾನಗಳನ್ನು ಕಂಡು ಭಯ ಮತ್ತು ಅಚ್ಚರಿಗಳಿಂದ ಮನುಷ್ಯನು ದೇವರೆಂಬ ಪರಿಕಲ್ಪನೆಯನ್ನು ಹೇಗೆ ಪಡೆದನೋ, ಹಾಗೆಯೇ ತನ್ನ ಕಣ್ಣೆದುರು ಬದುಕಿ ಬಾಳುತ್ತಿದ್ದವರು ಇದ್ದಕ್ಕಿದ್ದಂತೆ ಲೋಕದ ವ್ಯವಹಾರಗಳನ್ನೆಲ್ಲಾ ಮುಗಿಸಿ ಇನ್ನಿಲ್ಲವಾದಾಗ ಭೂತಗಳ ಅಥವಾ ಪ್ರೇತಾತ್ಮಗಳ ಪರಿಕಲ್ಪನೆಗಳನ್ನೂ ಪಡೆದನು.

ಹೌದು, ಸತ್ತ ನಂತರ ಉಂಟಾಗುವ ಮೌನವು ಅತ್ಯಂತ ನಿಗೂಢವೂ, ಬಾಧಿಸುವಂತದ್ದೂ ಆಗಿರುತ್ತದೆ. ಗಮನಿಸಿ ನೋಡಿ, ನಮಗೆ ತೀರಾ ತಿಳಿದಿರುವವರು ಸತ್ತ ಮೇಲೆ, ರಸ್ತೆಯಲ್ಲಿ ಹೋಗುತ್ತಿರುವಾಗ ಅಥವಾ ಇನ್ನೆಲ್ಲಾದರೂ ಸಾರ್ವಜನಿಕ ಸ್ಥಳಗಳಲ್ಲಿ ಇರುವಾಗ ಸತ್ತವರ ಮುಖಭಾವವನ್ನೋ ಅಥವಾ ಮೈಮಾಟವನ್ನೋ ಉಳ್ಳವರು, ಯಾವುದೇ ರೀತಿಯಲ್ಲಿ ಹೋಲಿಕೆಯಿರುವವರು ಗಮನಕ್ಕೆ ಬರುತ್ತಾರೆ. ಆಗ ಸತ್ತವರನ್ನು ನೋಡಿದಂತೆಯೇ ಆಗುತ್ತದೆ. ಇದಕ್ಕೆ ಮುಖ್ಯ ಕಾರಣ ಅವರ ಸಾವಿನ ಸಮಯ ಮತ್ತು ನಂತರದ ಕೆಲವು ದಿನಗಳಲ್ಲಿ ಅವರ ಮೇಲೆಯೇ ನಮ್ಮ ತೀವ್ರ ನಿಗಾ ಇರುವುದರಿಂದ. ಹಾಗೆಯೇ, ಮನೆಯಲ್ಲಿ ಅವರು ಇದ್ದಂತೆಯೇ ಅನ್ನಿಸುವುದು, ಹೊರಗಿನಿಂದ ಬಂದಕೂಡಲೇ ಅವರ ಮಾಮೂಲಿನ ಸ್ಥಳದ ಕಡೆಗೆ ನೋಡುವುದು, ಕೆಲವೊಮ್ಮೆ ಅವರ ದನಿಯನ್ನು ಕೇಳಿಸಿದಂತೆಯೂ ಭಾಸವಾಗುತ್ತದೆ. ಇವೆಲ್ಲವೂ ಮನಸ್ಸು ಅವರ ಸಾವನ್ನು ಒಪ್ಪಿಕೊಂಡಿಲ್ಲವಿರುವದಷ್ಟೇ ಅಲ್ಲ, ಬದುಕಿದ್ದಾಗ ಆಗಿರುವಂತಹ ಕೇವಲ ರೂಢಿಗಳು.

ಮನುಷ್ಯರು ಸತ್ತ ಮೇಲೂ ಅವರು ಬದುಕಿದ್ದ ಸಮಯದಲ್ಲಿ ಇಟ್ಟುಕೊಂಡಂತಹ ಆಸೆಗಳನ್ನು ಇಟ್ಟುಕೊಂಡಿರುತ್ತಾರೆ ಎಂದೂ ಅಂದುಕೊಳ್ಳುವುದರಿಂದ, ಅವರ ಆತ್ಮಗಳು ಆಸೆಗಳು ಈಡೇರದಿದ್ದರೆ ಬದುಕಿದ್ದವರಿಗೆ ತೊಂದರೆ ಕೊಡುತ್ತಾರೆ ಎಂದು ಭಾವಿಸುವುದರಿಂದ, ಪಿತೃಗಳ ಪೂಜೆಯ ಸಮಯದಲ್ಲಿ ವ್ಯಕ್ತಿ ನಿರ್ದಿಷ್ಟವಾಗಿದ್ದರೆ, ಬೀಡಿ, ಸಿಗರೇಟು, ಮದ್ಯದ ಬಾಟಲಿಂದ ಹಿಡಿದು, ಮಾಂಸದಡಿಗೆ ಅಥವಾ ಇತರೆ ತಿನಿಸುಗಳನ್ನು ಇರಿಸುವುದು ಕೂಡ ರೂಢಿಯಲ್ಲಿದೆ. ಹಾಗೆಯೇ ಮಾಂಸದಡಿಗೆಯನ್ನು ಹೊರಕ್ಕೊಯ್ಯುವಾಗ, ಕತ್ತಲಿನಲ್ಲಿ ಅತೃಪ್ತ ಆತ್ಮಗಳು ಆಹಾರಕ್ಕೆ ವಶಪಡಿಸಿಕೊಳ್ಳುವವು ಎಂಬ ಭಯದಿಂದ ಹಳ್ಳಿಗಳಲ್ಲಿ ಅವುಗಳ ಸೋಂಕನ್ನು ನಿವಾರಿಸಲು ಅಥವಾ ತಡೆಯಲು ಇದ್ದಿಲು, ಒಣ ಮೆಣಸಿನ ಕಾಯಿ ಇತ್ಯಾದಿಗಳನ್ನು ಊಟದ ಜೊತೆಗೆ ಒಯ್ಯುವರು.

ಸತ್ತವರ ತೀರದೇ ಇರುವ ಅನೇಕ ವ್ಯವಹಾರಗಳೂ ಜನರಿಗೆ ನಿದ್ದೆಗೆಡಿಸುವ ಕಾರಣದಿಂದ ಹಲವಾರು ರೀತಿಗಳಲ್ಲಿ ಅವುಗಳ ಪ್ರಭಾವವನ್ನು ನಿತ್ಯ ಆಗುವ ಸಾಮಾನ್ಯ ತೊಂದರೆಗಳಿಗೇ ತಳುಕು ಹಾಕುತ್ತಾರೆ.

ಕುಲೆಯ ಆರಾಧನೆ ಅಥವಾ ಪಿತೃಪೂಜೆ

ಪಾಲ್ತಾಡಿ ರಾಮಕೃಷ್ಣ ಆಚಾರ್ 'ಮಾಡಾವುರವರು ಕುಲೆಯ ಆರಾಧನೆ ಅಥವಾ ಪಿತೃಪೂಜೆ' ಎಂಬ ಲೇಖನದಲ್ಲಿ ಸುದೀರ್ಘವಾಗಿ ತುಳುನಾಡಿನ ಪಿತೃಗಳ ಪರಿಕಲ್ಪನೆಯನ್ನು ವಿವರಿಸುತ್ತಾರೆ. ಅದನ್ನು ಅನುಸರಿಸಿದರೆ, ಇತರ ಸಂಸ್ಕೃತಿಗಳಲ್ಲೂ ಅವು ಅದೇ ರೀತಿಯಲ್ಲಿ ಆದರೆ ಬಳಕೆಯ ಶಬ್ದಗಳು ಬೇರೆ ಬೇರೆ ರೀತಿಯಲ್ಲಿದ್ದು, ಸಾಮಾನ್ಯವಾಗಿ ಪರಿಕಲ್ಪನೆ ಒಂದೇ ಇರುತ್ತದೆ.

ಪಾಲ್ತಾಡಿ ರಾಮಕೃಷ್ಣ ಆಚಾರ್ ವಿವರಿಸುತ್ತಾ ಹೇಳುತ್ತಾರೆ; ಸತ್ತವರ ಆತ್ಮವನ್ನು ಪೂಜಿಸುವ ಪದ್ಧತಿ ಪುರಾತನಕಾಲದಿಂದಲೂ ಮಾನವ ಜನಾಂಗದಲ್ಲಿ ರೂಢಿಯಾಗಿ ಬಂದಿದೆ. ಪುರಾತನ ನಾಗರಿಕಾ ಕೇಂದ್ರಗಳೆಂದು ಪರಿಗಣಿಸಲ್ಪಟ್ಟ ಸ್ಥಳಗಳಲ್ಲಿ ನಡೆದ ಸಂಶೋಧನೆಗಳಿಂದ ಇದು ಸ್ಪಷ್ಟವಾಗಿದೆ. ತುಳುನಾಡಿನಲ್ಲಿ ಸತ್ತವರನ್ನು ಆರಾಧಿಸುವ ಪಿತೃ ಪೂಜಾ ಪದ್ಧತಿ ಈಗಲೂ ಇದೆ. ಮನುಷ್ಯ ಸಾವಿನೊಂದಿಗೆ ತನ್ನ ದೇಹವನ್ನು ಕಳೆದುಕೊಂಡರೂ ಅದೃಶ್ಯ ರೂಪದಲ್ಲಿ ಆತನ ಅಸ್ತಿತ್ವವಿರುತ್ತದೆ. ಆತ ನಿರಾಕಾರನಾಗಿ ಜೀವಂತವಿರುವ ತನ್ನ ಕಿರಿಯರ ಇಷ್ಟವನ್ನು ಈಡೇರಿಸುತ್ತಾನೆ. ಹಾಗೆಯೇ ಆತನಿಗೆ ಕಾಲಕಾಲಕ್ಕೆ,




ಅನ್ನಪಾನಾದಿಗಳನ್ನು ನೀಡದೇ ಹೋದರೆ, ಅನಿಷ್ಟವನ್ನು ತಂದೊಡ್ಡುತ್ತಾನೆ ಎಂದು ಅಲ್ಲಿನ ಜನರು ನಂಬುತ್ತಾರೆ.

ತುಳುನಾಡಿನಲ್ಲಿ ಸತ್ತವನ ಆತ್ಮಕ್ಕೆ 'ಕುಲೆ' ಎಂದು ಕರೆಯುತ್ತಾರೆ. ಶವಸಂಸ್ಕಾರದ ಹನ್ನೆರಡು ದಿನಗಳ ಮೇಲೆ ಸತ್ತವರ ಆತ್ಮ ಕುಲೆಯ ಅಸ್ತಿತ್ವಕ್ಕೆ ಬರುತ್ತದೆ. ಬಹಳ ಹಿಂದಿನ ಕಾಲದಲ್ಲಿ, ತುಳುನಾಡಿನಲ್ಲಿ ಶವಸಂಸ್ಕಾರ ಮಾಡಿ ಗೋರಿ ಕಟ್ಟಿದ ಸ್ಥಳದಲ್ಲಿ, ಸತ್ತ ಹನ್ನೆರಡನೆಯ ದಿನ ಕುಲೆಯ ವೇಷ ಹಾಕಿಸಿ ಹರಿಜನರಿಂದ ಕುಣಿತ ಏರ್ಪಾಡು ನಡೆಸುವ ಪದ್ಧತಿ ಇತ್ತು. ಡೋಲು ಬಡಿದುಕೊಂಡು ಸುಣ್ಣ ಮಸಿಯಿಂದ ವೇಷ ಹಾಕಿ ಕುಣಿಯುವ ಈ ಕುಣಿತಕ್ಕೆ 'ಕುಲೆ ನಲಿಕೆ' ಎನ್ನುತ್ತಿದ್ದರು.

ಸತ್ತ ಹದಿನಾರನೇ ದಿನ ಕುಲೆಯನ್ನು ಮನೆಯೊಳಗೆ ಕರೆಯುವ ಒಂದು ಕ್ರಮವಿದೆ. ಇದಕ್ಕೆ ಹದಿನಾರು ಕುಲೆಗಳೊಂದಿಗೆ ಸೇರಿಸುವ ಕ್ರಮ ಎನ್ನುತ್ತಾರೆ. ಮನೆಯೊಳಗೆ ಹದಿನಾರು ಎಲೆಗಳಲ್ಲಿ ಅನ್ನ ಕೋಳಿಪಲ್ಯ ಬಡಿಸಬೇಕು. ಹದಿನೈದನ್ನು ಒಂದೇ ಸಾಲಿನಲ್ಲಿ ಬಡಿಸಿ, ಒಂದನ್ನು ಬೇರೆಯೇ ಬಡಿಸಬೇಕು. ಮನೆಯ ಹಿರಿಯವ ಅಂಗಳದಿಂದ ಸತ್ತವನನ್ನು ಕರೆದು ಮನೆಯೊಳಗೆ ಹಿಂದೆ ಹಿಂದೆ ಬಂದು ಹಿರಿಯ ರೊಂದಿಗೆ ಕೂಡಿಕೋ ಎಂದು ಪ್ರಾರ್ಥನೆ ಮಾಡಿಕೊಂಡು ಹದಿನೈದು ಎಡೆಗೆ ಒಂದನ್ನು ಸೇರಿಸಿ ಹದಿನಾರು ಮಾಡುತ್ತಾನೆ. ಸತ್ತ ಹದಿನಾರನೇ ದಿನದಂದು ಕುಲೆ ಮನೆಗೆ ಪ್ರವೇಶಿಸಿ ಮನೆಯೊಳಗೆ ವಾಸ ಮಾಡುತ್ತದೆಂದು ನಂಬಿಕೆ.

ಹೊಟ್ಟೆಬಾಕ ಆತ್ಮಗಳು

ಮನೆಯಲ್ಲಿ ಯಾವುದೇ ವಿಶೇಷ ಪಲ್ಯ, ಪಾಯಸ, ಭಕ್ಷ್ಯ ಮಾಡಿದರೂ ಒಂದು ಎಲೆಯಲ್ಲಿ ಊಟಕ್ಕೆ ಮೊದಲು ಕತ್ತಲೆ ಕೋಣೆಯಲ್ಲಿ ಬಡಿಸಿಟ್ಟು ಆಮೇಲೆಯೇ ಮನೆಯವರು ಊಟ ಮಾಡುವುದು



ರೂಢಿ. ಒಂದು ವೇಳೆ ಹಾಗೆ ಬಡಿಸದೇ ಊಟ ಮಾಡಿದರೆ ಹೊಟ್ಟೆನೋವು ಪ್ರಾರಂಭವಾಗುತ್ತದೆ. ಇದಕ್ಕೆ ಕುಲೆಗಳ ಕೊಧಿ ಬದ್ದಿದೆ ಎನ್ನುತ್ತಾರೆ. ಕೊದಿ ಎಂದರೆ ತುಳುವಿನಲ್ಲಿ ಆಸೆ ಎಂದರ್ಥ. ಈ ರೀತಿ ಹೊಟ್ಟೆನೋವು ಉಂಟಾಗಿ ಹೊಟ್ಟೆ ಉಬ್ಬರಿಸಿಕೊಂಡು ಬಂದವನಿಗೆ ಊಟ ಮಾಡಿಸಿ, ಊಟ ಮಾಡಿದ ಎಂಜಲು ಬಟ್ಟಲಲ್ಲಿ ಒಂದು ಬತ್ತಿ ಹಚ್ಚಿಟ್ಟು ಬಟ್ಟಲಿಗೆ ನೀರು ಹಾಕಿ, ಆ ಬತ್ತಿಯ ಮೇಲೆ ಒಂದು ಮಣ್ಣಿನ ಕೊಡಪಾನ ಮುಚ್ಚಿಡುತ್ತಾರೆ. ಬತ್ತಿ ನಂದಿದ ಕೂಡಲೇ ಗೊರಗೊರ ಶಬ್ದದೊಂದಿಗೆ ನೀರು ಕೊಡಪಾನದೊಳಗೆ ಹೋಗುತ್ತದೆ. ಆಗ, ಕೊದಿ ಹೋಯಿತೆಂದು ನಂಬುತ್ತಾರೆ.

ಕುಲೆಗಳನ್ನು ನಂಬುವವರು ವರ್ಷಕ್ಕೆ ಒಂದೆರಡು ಸಲ ಕೋಳಿಪಲ್ಯ ಮಾಡಿ ಅನ್ನ ಬಡಿಸುವ, ಎಡೆ ಇಡುವ ಕ್ರಮವಿರುತ್ತದೆ. ಅಲ್ಲದೇ ಭೂತಗಳಿಗೆ ಅಗೆಲು ಹಾಕುವ ಸಂದರ್ಭದಲ್ಲಿ, ಅಂದರೆ, ಎಡೆ ಹಾಕುವ ಸಂದರ್ಭದಲ್ಲಿ ಅಡ್ಪಸಾಲಿನಲ್ಲಿ ಮೂರು ಎಲೆಗಳಲ್ಲಿ ಬಡಿಸಿ, ಪ್ರಾರ್ಥನೆ ಮಾಡಿಕೊಳ್ಳುವಾಗ ಗುರುಕಾರ್ನವರೆಂದು ಗೌರವ ಸೂಚಿತವಾಗಿ ಕರೆಯುವುದು ಪದ್ಧತಿ.


ಕುಲೆಗೆ ಆಕಾರವಿಲ್ಲದಿದ್ದರೂ ಅದು ಬೇಕಾದ ಆಕಾರದಲ್ಲಿ ಕಾಣಿಸಿಕೊಳ್ಳಬಹುದು. ಹೆಚ್ಚಾಗಿ ಅದು ಕಪ್ಪು ನಾಯಿಯಂತೆ, ಬಿಳಿ ಮುಸುಕು ಹಾಕಿದ ವ್ಯಕ್ತಿಯಂತೆ ಕಾಣಿಸಿಕೊಳ್ಳುತ್ತದಂತೆ. ರಾತ್ರಿ ಹೊತ್ತಿನಲ್ಲಿ ಒಬ್ಬಂಟಿಗನಾಗಿ ಕಾಡುದಾರಿಯಲ್ಲಿ ಹೋಗುವಾಗ ಕಲ್ಲೆಸೆತದ ಸದ್ದು ಮಾಡಿ ಮರಗಳನ್ನು ಅಲುಗಾಡಿಸಿ ಅಥವಾ ಬೇರೆ ಬೇರೆ ರೂಪಗಳಲ್ಲಿ ಕಾಣಿಸಿಕೊಂಡು ಹೆದರಿಸುವುದಿದೆ. ಇದನ್ನು ಕಂಡು, ಕೇಳಿ ಹೆದರಿದ ವ್ಯಕ್ತಿಗಳಿಗೆ ಜ್ವರ ಬರುತ್ತದೆ. ಕೆಲವೊಮ್ಮೆ ಮನೆಯ ಒಳಗಡೆ ಕೂಡ ಕುಲೆ ಸದ್ದು ಮಾಡುವುದೆಂದಿದೆ. ಕುಲೆ ಕೂಗುವುದೂ ಇದೆ. ಇದರ ಕೂಗು ಸಿಳ್ಳು ಹಾಕುವ ಸದ್ದಿನಂತಿರುತ್ತದೆ. ಅದಕ್ಕಾಗಿಯೇ ರಾತ್ರಿ ಹೊತ್ತು ಸಿಳ್ಳು ಹಾಕಬಾರದೆಂದು ಹಿರಿಯರು ಆಡಿಕೊಳ್ಳುತ್ತಾರೆ.

ಸೋಂಕುವುದು

ನಡು ಮಧ್ಯಾಹ್ನದ ಬಿಸಿಲಿಗೆ ಅಥವಾ ಮುಸ್ಸಂಜೆಯ ಹೊತ್ತಿಗೆ ಸ್ಮಶಾನದ ಬದಿಯಿಂದ ಇಲ್ಲವೇ ನಿರ್ಜನ ಪ್ರದೇಶದಿಂದ ಒಬ್ಬೊಂಟಿಗನಾಗಿ ಹಾದು ಹೋದಂತಹ ವ್ಯಕ್ತಿಗೆ ಕಣ್ಣು ಉರಿಯುತ್ತದೆ, ತಲೆ ಸಿಡಿಯುತ್ತದೆ, ಜ್ವರ ಬರುತ್ತದೆ. ಇದಕ್ಕೆ ಹೋಯ್ಗೆ ಬಿಸಾಡಿದ್ದು ಎನ್ನುತ್ತಾರೆ. ಇದನ್ನು ಹೋಗಲಾಡಿಸಲು ಹೋಯ್ಗೆ ತೆಗೆಯುವ ಒಂದು ಕ್ರಮವಿದೆ. ಒಂದು ಬಟ್ಟಲಲ್ಲಿ ಸುಣ್ಣ ಮಿಶ್ರಿತ ಅರಿಶಿಣ ನೀರನ್ನು (ಕುರ್ದಿ) ಇಟ್ಟುಕೊಳ್ಳುವುದು. ಹೊಯ್ಗೆ ತಾಗಿದ ವ್ಯಕ್ತಿಯನ್ನು ಅಂಗಳದಲ್ಲಿ ನಿಲ್ಲಿಸಿ ಹೊಯ್ಗೆ ಸೊಪ್ಪು ಎಂಬ ಒಂದು ಜಾತಿಯ ಸೊಪ್ಪನ್ನು ಅರಿಶಿನ ನೀರಿನಲ್ಲಿ ಅದ್ದಿ ವ್ಯಕ್ತಿಯ ತಲೆಯಿಂದ ಕಾಲಿನವರೆಗೂ ಪೂಸಿ ಸೊಪ್ಪನ್ನು ಆ ನೀರಿಗೇ ಹಾಕಬೇಕು. ನಂತರ ನೀರನ್ನು ಚೆಲ್ಲಿದಾಗ ಬಟ್ಟಲ ಅಡಿಯಲ್ಲಿ ಹೊಯ್ಗೆ ಇರುತ್ತದೆ. ಇದನ್ನು ಒಲೆಗೆ ಹಾಕಬೇಕು. ಹೊಯ್ಗೆ ತಾಗಿದ ವ್ಯಕ್ತಿಗೆ ಗುಣವಾಗುತ್ತದೆ ಎಂದು ನಂಬುತ್ತಾರೆ.

ಕೆಲವೊಮ್ಮೆ ಮಕ್ಕಳು ನಿದ್ರೆಯಲ್ಲಿ ಬೆಚ್ಚಿ ಬೀಳುತ್ತಾರೆ. ಹೆದರಿಕೊಂಡಾಗ ಜ್ವರ ಬರುತ್ತದೆ. ಹಾಗೆಯೇ ಆದಲ್ಲಿ ಇದಕ್ಕೆ ಬತ್ತಿ ನಂದಿಸುವ ಒಂದು ಕ್ರಮವಿದೆ. ಬತ್ತಿ ನಂದಿಸಲು ಒಂದು ಬಟ್ಟಲು ಕುರ್ದಿ, ಬಟ್ಟೆಯ ಬತ್ತಿಗಳು, ಗಾಳಿಯರಿವೆ (ತೆಂಗಿನ ಗರಿಗೆ ಬಟ್ಟೆ ಸುತ್ತಿ ಅರ್ಧ ನೇತಾಡಿಸಿ ಎಣ್ಣೆಯಲ್ಲಿ ಅದ್ದಿ ತೆಗೆಯುವುದು), ಸ್ವಲ್ಪ ಹೊದ್ಲು; ಇವಿಷ್ಟೂ ಬೇಕು. ಬೆಚ್ಚಿ ಬೀಳುವ ಅಥವಾ ಜ್ವರ ಬರುವ ವ್ಯಕ್ತಿಯನ್ನು ಮೆಟ್ಟಲಲ್ಲಿ ಕುಳ್ಳರಿಸಿ ಹೊದ್ಲನ್ನು ಆತನಿಗೆ ನಿವಾಳಿಸಿ ಕುರ್ದಿಗೆ ಹಾಕುತ್ತಾರೆ. ನಂತರ ಬತ್ತಿಯನ್ನು ಹಚ್ಚಿ ವ್ಯಕ್ತಿಯ ಎದುರು ಹಿಡಿದು, ಕುರ್ದಿಯನ್ನು ಆ ಉರಿಗೆ ಸಿಂಪಡಿಸಿ ಕುರ್ದಿಗೆ ಹಾಕುತ್ತಾರೆ. ನಂತರ ಗಾಳ್ಯರಿವೆಗೆ ಬೆಂಕಿಕೊಟ್ಟು ಅದನ್ನು ವ್ಯಕ್ತಿಯ ಎದುರು ಹಿಡಿದು ಕುರ್ದಿಯನ್ನು ಜೋರಾಗಿ ಸಿಂಪಡಿಸುತ್ತಾರೆ. ಹೀಗೆ ಸಿಂಪಡಿಸಿದಾಗ ಭರ್ ಎಂಬ ಸದ್ದು ಉಂಟಾಗುತ್ತದೆ. ನಂತರ ಆ ಗಾಳ್ಯರಿವೆಯನ್ನು ಕುರ್ದೆಗೆ ಹಾಕಿ ದೂರಕ್ಕೆ ಚೆಲ್ಲುತ್ತಾರೆ. ಬರೀ ಸಣ್ಣ ಮಕ್ಕಳಾದರೆ, ಕುರ್ದಿಗೆ ಉರಿಯುತ್ತಿರುವ ಗೆರೆಡೆಯನ್ನು ಹಾಕಿದರೂ ಆಗುತ್ತದೆ. ಈ ರೀತಿ ಮಾಡುವುದರಿಂದ ಹೆದರಿಕೊಂಡು ಜ್ವರ ಬರುತ್ತಿರುವ ವ್ಯಕ್ತಿಗಳಿಗೆ ಗುಣವಾಗುತ್ತದೆ.

ಕುಲೆಗಳು ಇದ್ದಲ್ಲಿಯೇ ಇರಬೇಕೆಂದಿಲ್ಲ. ಅವು ಒಂದು ಮನೆಯಿಂದ ಇನ್ನೊಂದು ಮನೆಗೆ ಸಂಚಾರ ಮಾಡುತ್ತವೆ. ಹೆಚ್ಚಾಗಿ ಹೆಣ್ಣು ಕೊಟ್ಟ ಮನೆಗೆ ಹೋಗುತ್ತವೆ. ಮನುಷ್ಯರಿಗೆ ಕುಲೆ ಹಿಡಿಯುವ ಕ್ರಮವೂ ಇದೆ. ಕುಲೆ ಹೆಚ್ಚಾಗಿ ಹೆಂಗಸರಿಗೇ ಹಿಡಿಯುತ್ತದೆ. ಕುಲೆ ಹಿಡಿಯಿತೆಂದರೆ ಜೋರಾಗಿ ಆಕಳಿಕೆ ಬರುತ್ತದೆ. ನಂತರ ತಲೆ ಸುತ್ತುತ್ತದೆ, ಕಣ್ಣು ಕತ್ತಲೆ ಹೋಗುತ್ತದೆ, ಸ್ಮೃತಿ ಇಲ್ಲದಂತಾಗಿ ಹೋಗುತ್ತದೆ. ಕುಲೆ ಹಿಡಿದು ಮಾತಾಡುವುದೂ ಇದೆ. ಹೀಗೆ ಮಾತಾಡಿದರೆ, ತಾನು ಯಾರು, ಯಾಕೆ ಬಂದುದೆಂಬ ಎಲ್ಲಾ ವಿಚಾರವನ್ನೂ ತಿಳಿಸುತ್ತದೆ. ಕೆಲವು ಮಾತಾಡುವುದಿಲ್ಲ, ಬರೀ ಅಳುವುದು ಇಲ್ಲವೇ ನಗುವುದು ಮಾತ್ರ. ಹೆಚ್ಚಾಗಿ ಎಲ್ಲಾ ಕುಲೆಗಳು ನೀರು ಅಥವಾ ಎಳನೀರು ಕುಡಿದು ಬಿಟ್ಟು ಹೋಗುತ್ತವೆ. ಕುಲೆ ಬಿಟ್ಟು ಹೋದ ಮೇಲೆ ಕುಲೆ ಹಿಡಿದ ವ್ಯಕ್ತಿ ನಿದ್ದೆಯಿಂದ ಎಚ್ಚೆತ್ತವನಂತೆ ವರ್ತಿಸುತ್ತಾನೆ. ನಮಗೆ ಅರಿವಿಲ್ಲದೆಯೋ ಕೆಲವೊಮ್ಮೆ ಕುಲೆಗಳು ನಮ್ಮನ್ನು ಪೂಸಿ ಹೋಗುವುದೂ ಇದೆ. ಹೀಗೆ ಮಾಡಿದರೆ ನಮ್ಮ ಮೈ ಮೇಲೆ ಮುಳ್ಳಿನಿಂದ ಗೆರೆ ಎಳೆದಂತೆ ಗಾಯಗಳು ಕಂಡುಬರುತ್ತವೆ. ಅದು ಉರಿಯಲು ಪ್ರಾರಂಭಿಸಿದಾಗಲೇ ನಮಗೆ ಗೋಚರವಾಗುವುದು. ಕುಲೆ ತೊಂದರೆ ಕೊಡಲೆಂದೇ ಬರುವುದಿಲ್ಲ,




ಪ್ರೀತಿಯಿಂದ ಬಂದು ಸೋಕಿ ಹೋಗುವುದೂ ಇದೆ. ಕುಲೆ ಹಿಡಿದಾಗ ಬಯ್ಯುವುದರಿಂದ, ಕಸ ಬರಿಕೆ, ಚಪ್ಪಲಿಯಿಂದ ಹೊಡೆಯುವುದರಿಂದ ಕೂಡಲೇ ಬಿಟ್ಟು ಹೋಗುತ್ತದೆಯೆಂದು ನಂಬುತ್ತಾರೆ.

ಪ್ರೇತಾತ್ಮಗಳ ಮದುವೆ


ಸಣ್ಣ ಪ್ರಾಯದಲ್ಲಿ ಸತ್ತವರ ಕುಲೆಗಳು ಮದುವೆಯ ಪ್ರಾಯಕ್ಕೆ ಮುಟ್ಟಿದಾಗ ತನಗೆ ಮದುವೆ ಮಾಡಿಸಬೇಕೆಂದು ಕೇಳುವುದೂ ಇದೆ. ಹೀಗೆ ಕೇಳಿದಲ್ಲಿ, ಜೋಡಿಯಾಗುವ ಸಂಪ್ರದಾಯದ ಕುಲೆಗಳು ಯಾವ ಮನೆಯಲ್ಲಿವೆ ಎಂದು ಹುಡುಕಬೇಕಾಗುತ್ತದೆ. ಆನಂತರ ಆ ಮನೆಯವರೊಡನೆ ಸಂಬಂಧ ಯೋಚಿಸಿ ಮದುವೆಯ ದಿನ ನಿಶ್ಚಯಿಸುತ್ತಾರೆ. ಗಂಡಿನ ಮನೆಯಿಂದ ದಿಬ್ಬಣ ಹೋಗಬೇಕು. ಹೋಗುವಾಗ ಅಡಿಕೆ ಹೂವಿನ ಹಾಳೆಯಲ್ಲಿ ಸೀರೆ, ರವಿಕೆ, ಕರಿಮಣಿ, ತಾಳಿ, ಕಾಲುಂಗುರ, ಹೂವು, ಬಳೆ ಇತ್ಯಾದಿಗಳನ್ನು ಕೊಂಡೊಯ್ಯಬೇಕು. ಹೆಣ್ಣಿನ ಕಡೆಯವರು ಅಂಗಿ, ಧೋತಿ ಸಿದ್ಧಪಡಿಸಬೇಕು. ಎರಡು ನಾಗ ಸಂಪಿಗೆಯ ಕೋಲುಗಳನ್ನು ಹೆಣ್ಣುಗಂಡುಗಳಾಗಿ ಸಿಂಗರಿಸಿ ಧಾರೆಯೆರೆಯುತ್ತಾರೆ. ನಂತರ ಆ ಕೋಲುಗಳನ್ನು ಗಂಡಿನ ಮನೆಗೆ ತಂದು ಜೊತೆಯಾಗಿ ನೆಡುತ್ತಾರೆ. ಈ ಕ್ರಮಕ್ಕೆ ಕುಲೆಗಳ ಮದುವೆ ಎನ್ನುತ್ತಾರೆ.

ಸಣ್ಣ ಮಕ್ಕಳು ಸತ್ತು ಹೋದರೆ, ಅವರ ಕುಲೆಗಳಿಗೆ ಕನ್ಯಾವು ಎನ್ನುತ್ತಾರೆ. ಕನ್ಯಾವುಗಳಿಗೆ ವರ್ಷಕ್ಕೊಮ್ಮೆ ಬಡಿಸುವ ಕ್ರಮವಿದೆ. ಇದಕ್ಕೆ ಸಣ್ಣ ಎಲೆಗಳಲ್ಲಿ ಅನ್ನ ಮತ್ತು ನುಗ್ಗೆ ಸೊಪ್ಪಿನ ಪಲ್ಯ ಬಡಿಸುತ್ತಾರೆ. ಮರದ ಕುಡ್ತೆ(ಅಕ್ಕಿ ಅಳೆಯುವ ಸಾಧನ)ಗೆ ಕಲ್ಲು ಹಾಕಿ ಕಟಕಟ ಸದ್ದು ಮಾಡಿ ಎಲೆಗೆ ಸುತ್ತು ತರುತ್ತಾರೆ. ನಂತರ ಕೋಣೆಯ ಬಾಗಿಲು ಹಾಕಿ ಹೊರಗೆ ಬಂದು ಸ್ವಲ್ಪ ಹೊತ್ತು ಕಳೆದ ಮೇಲೆ ಬಾಗಿಲು ತೆರೆದು ಮನೆಯ ಮಕ್ಕಳಿಗೆ ಅದನ್ನು ಉಣ್ಣಿಸುತ್ತಾರೆ. ಮನೆಯಲ್ಲಿ ಮಗುವಿಗೆ ಊಟ ಕೊಡುವ ಮೊದಲು ಒಂದು ತುತ್ತು ಅನ್ನವನ್ನು ಮಗುವಿನ ತಾಯಂದಿರು ಮಗುವಿನ ತಲೆ ನಿವಾಳಿಸಿ ಹೊರಗೆ ಚೆಲ್ಲಿ ಮತ್ತೆ ಊಟ ಕೊಡುತ್ತಾರೆ.

ಈ ರೀತಿ ಅನೇಕ ಬಗೆಯ ಆಚರಣೆಗಳು ಮತ್ತು ನಂಬಿಕೆಗಳು ಪ್ರೇತಾತ್ಮಗಳ ಸುತ್ತಲೂ ಹರಡಿಕೊಂಡಿವೆ. ತಿಳಿಯಲು ಅವು ಬಹು ಸ್ವಾರಸ್ಯವಾಗಿವೆ. ■



ಭಾರತೀಯರ ಮನೋಧರ್ಮಕ್ಕೆ ಅನುಗುಣವಾಗಿ ಸಾವಿರಾರು ಜಾತಿಗಳಿವೆ



ಕರ್ನಾಟಕದಲ್ಲಿ ಜಾತಿ ಜನಗಣತಿ ಶುರುವಾಗಿದೆ. ಕೇವಲ ಕೆಲವು ಮೇಲ್ಜಾತಿಯವರು ತಮ್ಮ ಸ್ವಾರ್ಥಕ್ಕೆ ಇದನ್ನು ವಿರೋಧಿಸುತ್ತಿದ್ದಾರೆ ಅಷ್ಟೇ. ಯುಪಿಎ ಸರಕಾರ ಜಾರಿಗೆ ತಂದ ಆಧಾರ್ ಕಾರ್ಡ್ ಯೋಜನೆಯನ್ನು ಹೀನಾಮಾನವಾಗಿ ಬೈದವರೇ ಕೊನೆಗೆ ತಮ್ಮ ಸರಕಾರ ಅಧಿಕಾರಕ್ಕೆ ಬಂದ ಮೇಲೆ ಅದೇ ಆಧಾರ್ ಕಾರ್ಡನ್ನು ಇನ್ನೂ ಹೆಚ್ಚು ವಿಸ್ತರಿಸಿದರು. ಕರ್ನಾಟಕ ಸರಕಾರದ ಜಾತಿ ಜನಗಣತಿ ಯೋಜನೆಯನ್ನೂ ಇತರ ಬಿಜೆಪಿ ರಾಜ್ಯಗಳು ಅನುಸರಿಸುವುದು ಖಂಡಿತ.

ಈ ಜನಗಣತಿಯಿಂದ ಎಷ್ಟು ಮೇಲ್ಜಾತಿ ಹಾಗೂ ಮಧ್ಯಮ ಜಾತಿಗಳು ಆರ್ಯ ಹಾಗೂ ಕ್ಷತ್ರಿಯ ಎಂಬ ಜಂಬದ ಬಾಲಂಗೋಚಿಯನ್ನು ತಮ್ಮ ಜಾತಿಗೆ ಜೋಡಿಸಿ ಒಣ ಹೆಮ್ಮೆಯಿಂದ ಬೀಗುತ್ತಾರೆ ಎಂಬುದು ಗೊತ್ತಾಗಲಿದೆ. ಭಾರತದ ಜಾತಿ ವ್ಯವಸ್ಥೆಯಲ್ಲಿರುವ ಅತ್ಯಂತ ಕುತೂಹಲಕಾರಿ ವಿಷಯವೆಂದರೆ ಒಂದೇ ಜಾತಿಗೆ ಬೇರೆ ಬೇರೆ ಪ್ರದೇಶದಲ್ಲಿ ಬೇರೆ ಬೇರೆ ಹೆಮ್ಮೆಯ ಮೇಲ್ಜಾತಿ ಬಾಲಂಗೋಚಿ ಸೇರಿಕೊಳ್ಳುತ್ತದೆ. ಉದಾಹರಣೆಗೆ ಮಹಾರಾಷ್ಟ್ರದಲ್ಲಿ ಕೇವಲ ಮರಾಠಾ ಹಾಗೂ ಶಿಂಪಿ (ದರ್ಜಿ) ಎಂದು ಕರೆದುಕೊಳ್ಳುವ ಜಾತಿಗಳು ಉತ್ತರ ಕರ್ನಾಟಕದಲ್ಲೂ ಅದೇ ಹೆಸರಿನಿಂದ ಕರೆದುಕೊಳ್ಳುತ್ತವೆ. ಆದರೆ ಟಿಪ್ಪು ಸುಲ್ತಾನನ ಸಮಯದಲ್ಲಿ ಮೈಸೂರಿಗೆ ಬಂದು ನೆಲೆನಿಂತ ಇವೇ ಮರಾಠಿ ಭಾಷಿಕ ಜಾತಿಗಳು ಮೈಸೂರಿನಲ್ಲಿ ತಮ್ಮನ್ನು ಮರಾಠಾ-ಕ್ಷತ್ರಿಯ ಹಾಗೂ ಭಾವಸಾರ್-ಕ್ಷತ್ರಿಯ ಎಂದು ಕರೆದುಕೊಳ್ಳುತ್ತವೆ. ಅದರಂತೆ ಕಾಯಸ್ಥ ಎಂಬ ಜಾತಿ ಬಂಗಾಳ, ಒಡಿಶಾ, ಮಹಾರಾಷ್ಟ್ರ ಮತ್ತು ಹಿಂದಿ ಭಾಷಿಕ ಪ್ರದೇಶಗಳಿಗೆ ಮೀಸಲಾದ ಜಾತಿ. ಆದರೆ ಈ ಜಾತಿಯವರು ಬಂಗಾಳದಲ್ಲಿ ತಾವು ಕ್ಷತ್ರಿಯರು ಎಂದು ಕರೆದುಕೊಂಡರೆ ಒಡಿಶಾದಲ್ಲಿ ಕರಣ್ ಎಂದು ಕರೆದುಕೊಳ್ಳುತ್ತಾರೆ. ಹಿಂದಿ ಭಾಷಿಕ ರಾಜ್ಯಗಳಲ್ಲಿ ಇವರು ಕೇವಲ ಕಾಯಸ್ಥ ಜಾತಿ ಎಂದು ಕರೆದುಕೊಳ್ಳುತ್ತಾರೆ. ಮಹಾರಾಷ್ಟ್ರದಲ್ಲಿ ಕಾಯಸ್ಥರು ತಮ್ಮನ್ನು ಚಂದ್ರಸೇನೀಯ ಕಾಯಸ್ಥ ಪ್ರಭು ಎಂಬ ಉದ್ದ ಹೆಸರಿನಿಂದ ಕರೆದುಕೊಳ್ಳುತ್ತಾರೆ. ಅದರಂತೆ ಉತ್ತರ ಪ್ರದೇಶದಲ್ಲಿ ಕ್ಷೌರಿಕ ಜನಾಂಗದವರು ತಾವು ನಾಯೀ-ಕ್ಷತ್ರಿಯರು ಎಂದು ಕರೆದುಕೊಂಡರೆ ಆಂಧ್ರದಲ್ಲಿ ಸವಿತಾ-ಬ್ರಾಹ್ಮಣ ಎಂದು ಕರೆಯುತ್ತಾರೆ, ಆದರೆ ಕರ್ನಾಟಕದಲ್ಲಿ ಕೇವಲ ಸವಿತಾ, ಹಡಪದ್ ಅಥವಾ ಭಂಡಾರಿ ಎಂಬ ಓಬಿಸಿ ಜಾತಿ ಎನ್ನುತ್ತಾರೆ. ಒಂದೇ ಜಾತಿಯವರು ಒಂದೆಡೆ ತಾವು ಕ್ಷತ್ರಿಯರಾದರೆ ಇನ್ನೊಂದೆಡೆ ಬ್ರಾಹ್ಮಣರಾಗಿ ಮತ್ತೊಂದೆಡೆ ಓಬಿಸಿ ಆಗುವ ವೈಚಿತ್ರ್ಯ ಭಾರತದ ವಿಚಿತ್ರ ಜಾತಿ ವ್ಯವಸ್ಥೆಯಲ್ಲಿ ಮಾತ್ರ ಸಾಧ್ಯ.

ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಹವ್ಯಕರು ತಮ್ಮನ್ನು ತಾವು ಕ್ಷಾತ್ರ-ಬ್ರಾಹ್ಮಣ ಎಂದು ಕರೆಯುತ್ತಾರೆ (ಇದರ ಅರ್ಥ ತಮ್ಮನ್ನು ಬಿಟ್ಟು ಉಳಿದ ಬ್ರಾಹ್ಮಣರು ಪುಕ್ಕಲ ಬ್ರಾಹ್ಮಣರು ಎಂದು ತಾನೇ!) ತಾವು ಕ್ಷತ್ರಿಯರು ಅಥವಾ ಆರ್ಯ ಮೂಲದವರು ಎಂದು ಹೇಳಿಕೊಳ್ಳುವುದರಲ್ಲಿ ಅನೇಕ ಮಧ್ಯಮ ಜಾತಿಯ ದಕ್ಷಿಣ ಭಾರತೀಯರು ಹೆಮ್ಮೆ ಪಡುತ್ತಾರೆ. ಕರಾವಳಿಯಲ್ಲಿ

ಕರಿಮೆಣಸಿನ ವ್ಯಾಪಾರದ ಸ್ವರ್ಣ ಕಾಲದಲ್ಲಿ ದಕ್ಷಿಣ ಕನ್ನಡ-ಉಡುಪಿ ಜಿಲ್ಲೆಯಲ್ಲಿ ಜೈನ ಧರ್ಮದ ಪ್ರಭಾವದಿಂದ ಮೂಲತಃ ಒಕ್ಕಲಿಗ ಮತ್ತು ವೈಶ್ಯ ಜಾತಿ ಎರಡೂ ಒಂದಾಗಿ ಬಂಟ ಜಾತಿ ಉದಯಿಸಿತು. ಅದರಿಂದಾಗಿ ಕರ್ನಾಟಕದ ಉಳಿದ ಜಿಲ್ಲೆಗಳಲ್ಲಿ ವೈಶ್ಯ ಅಥವಾ ಬಣಜಿಗ ಜಾತಿಗಳು ಇದ್ದರೂ ಕರಾವಳಿಯ ಈ ಎರಡು ಜಿಲ್ಲೆಯಲ್ಲಿ ವೈಶ್ಯ ಜಾತಿ ಎಂಬುದೇ ಉಳಿದಿಲ್ಲ, ಒಕ್ಕಲಿಗರಿಗೆ ಶೆಟ್ಟಿ ಎಂಬ ಉಪನಾಮ ದಕ್ಷಿಣ ಭಾರತದಲ್ಲಿ ಎಲ್ಲಿಯೂ ಅಲ್ಲ, ಆದರೂ ತುಳುನಾಡಿನ ಈ ಬಂಟ ಶೆಟ್ಟಿಗಳು ತಾವು ಶುದ್ಧ ನಾಗವಂಶಿ ಕ್ಷತ್ರಿಯರು ಎಂದು ಮಾತುಮಾತಿಗೆ ತಮ್ಮ ಹೆಗಲು ತಾವೇ ತಟ್ಟಿಕೊಳ್ಳುತ್ತಾರೆ. ಇಂತಹ ಕೆಲವು ಜಾತಿಗಳ ಆಕ್ರಮಣಶೀಲ ಗುಣಕ್ಕೆ ನಾಯಕತ್ವ ಗುಣ ಎಂದು ತಪ್ಪಾಗಿ ಹೊಗಳಲಾಗುತ್ತದೆ.

ಭಾರತೀಯರ ವಿಚ್ಛಿದ್ರಕಾರಿ ಮನೋಧರ್ಮಕ್ಕೆ ಅನುಗುಣವಾಗಿಯೇ ಭಾರತದಲ್ಲಿ ಒಟ್ಟು ಆರು ಸಾವಿರಕ್ಕೂ ಮಿಕ್ಕಿ ಜಾತಿಗಳಿವೆ. ಹಿಂದಿನ 10-15 ವರ್ಷಗಳಿಂದ ಬೆಂಗಳೂರು, ಮೈಸೂರು ಹಾಗೂ ಮಂಗಳೂರಿಗೆ ದೊಡ್ಡ ಸಂಖ್ಯೆಯಲ್ಲಿ ಉತ್ತರ ಭಾರತೀಯ ಕಾರ್ಮಿಕರು ಬಂದು ಇಲ್ಲಿ ಶಾಶ್ವತವಾಗಿ ನೆಲೆಸಿದ್ದಾರೆ. ಕರ್ನಾಟಕದ ಜಾತಿಗಣತಿಯಲ್ಲಿ ಇವರನ್ನು ಸೇರಿಸಬೇಕಾಗುತ್ತದೆ. ಕರ್ನಾಟಕದಲ್ಲಿ ಕೇವಲ ಒಂದು ಸಾವಿರದಷ್ಟು ಜಾತಿಗಳಿದ್ದರೆ ಉತ್ತರ ಭಾರತದಲ್ಲಿ ಐದು ಸಾವಿರಕ್ಕೂ ಮಿಕ್ಕಿ ಜಾತಿಗಳಿವೆಯಂತೆ. ಇದನ್ನು ನಮ್ಮ ಜನಗಣತಿದಾರರು ಹೇಗೆ ನಿಭಾಯಿಸುತ್ತಾರೆ ಎಂದು ಕಾದು ನೋಡಬೇಕಾಗಿದೆ.

ಬ್ರಿಟಿಷರು ಉತ್ತರ ಭಾರತದಲ್ಲಿ ಅನೇಕ ಹಿಂದೂ ಜನಾಂಗಗಳನ್ನು "ಮಾರ್ಷಿಯಲ್ ರೇಸ್" ಎಂದು ವರ್ಗೀಕರಿಸಿದರು. ಆದರೆ ದಕ್ಷಿಣ ಭಾರತದಲ್ಲಿ ಬ್ರಿಟಿಷರು ಕೊಡವರನ್ನು ಹೊರತುಪಡಿಸಿ ಬೇರೆ ಯಾವ ಜನಾಂಗವನ್ನೂ ಮಾರ್ಷಿಯಲ್ ರೇಸ್ ಎಂದು ಕರೆಯಲಿಲ್ಲ. ಈ ಬಗ್ಗೆ ಆಗಿನ ಬ್ರಿಟಿಷ್ ವೈಸ್ರಾಯ್‌ರನ್ನು ಯಾರೋ ಕೇಳಿದಾಗ ಅವನು ಹೇಳಿದ್ದೇನೆಂದರೆ- "ದಕ್ಷಿಣದ ಕೊಡವರನ್ನು ಹೊರತುಪಡಿಸಿ ಉಳಿದ ಯೋಧ ಜನಾಂಗವೆಂದು ನಾವು ಹೆಸರಿಸಿದ ಭಾರತೀಯರೆಲ್ಲಾ ಮೂಲತಃ ಹೆಚ್ಚು ಅಪರಾಧಿ ಪ್ರವೃತ್ತಿ ಇರುವ ಜನಾಂಗಗಳು. ದಕ್ಷಿಣ ಭಾರತೀಯರು ದ್ರಾವಿಡ ಮೂಲದವರಾದುದರಿಂದ ಅವರಲ್ಲಿ ಅಪರಾಧಿ ಪ್ರವೃತ್ತಿ ಕಡಿಮೆ. ಆದರೆ ಉತ್ತರ ಭಾರತೀಯರು ಆರ್ಯ ಮೂಲದವರಾದುದರಿಂದ ಅವರಲ್ಲಿ ಅಪರಾಧಿ ಪ್ರವೃತ್ತಿ ರಕ್ತಗತವಾಗಿ ಬಂದಿದೆ, ಅದಕ್ಕಾಗಿ ಈ ಕರಾಳ ಸತ್ಯವನ್ನು ನೇರವಾಗಿ ಹೇಳಿ ಇಡೀ ಜನಾಂಗದ ಮನ ನೋಯಿಸುವ ಬದಲು ಅವರನ್ನು ಯೋಧ ಜನಾಂಗ ಅರ್ಥಾತ್ ಕ್ಷತ್ರಿಯ ವರ್ಗ ಎಂದು ಕರೆದು ಅವರ ಸ್ವಪ್ರತಿಷ್ಠೆಗೆ ಸ್ವಲ್ಪ ಗಾಳಿ ಊದಿದ್ದೇವೆ ಅಷ್ಟೇ!"

ಹಾಗಾಗಿ ಆ ಬ್ರಿಟಿಷ್ ವೈಸ್ರಾಯ್ ಹೇಳಿದಂತೆ ಕನ್ನಡಿಗರಲ್ಲೂ ಕೆಲವರು ತಮ್ಮದು ಆರ್ಯ-ಮೂಲ ಕ್ಷತ್ರಿಯ-ವರ್ಗ ಎಂದು ಹೆಮ್ಮೆ ಪಡುವುದು ತಾವು ಅಪರಾಧಿ ಜನಾಂಗ (ಕ್ರಿಮಿನಲ್ ಟ್ರೈಬ್) ಎಂದು ಹೆಮ್ಮೆ ಪಡುವುದಕ್ಕೆ ಸಮ ಅಲ್ಲವೇ?

-ಪ್ರವೀಣ್ ಎಸ್ ಶೆಟ್ಟಿ, ಮಂಗಳೂರು

ಪುರಾಣದ ಇನ್ವಿಸಿಬಲ್ ಪತ್ನಿಯರು

ದ್ರುಪದ ಮಹಾರಾಜ ಏರ್ಪಡಿಸಿದ್ದ ಸ್ವಯಂವರದಲ್ಲಿ ಯಾರಿಂದಲೂ ನೆರವೇರಿಸಲಾಗದ ಪಂದ್ಯವನ್ನು ಗೆದ್ದು ನ್ಯಾಯಯುತವಾಗಿ ದ್ರೌಪದಿಯನ್ನು ಗೆದ್ದದ್ದು ಅರ್ಜುನನಾದರೆ ಭಾವನಾತ್ಮಕವಾಗಿ ಗಂಡನಂತೆ ವರ್ತಿಸಿದ್ದು ಭೀಮ (ಹೆಂಡತಿಗಾಗಿ ಗೊತ್ತುಗುರಿಯಿಲ್ಲದೇ ಸೌಗಂಧಿಕಾ ಪುಷ್ಪವನ್ನು ಹುಡುಕಿ ತರಲು ಹೋದದ್ದು, ವಸ್ತ್ರಾಪಹರಣವಾದಾಗ ಭೀಮನೊಬ್ಬನೇ ಹೆಂಡತಿಗಾಗಿ ಉಗ್ರ ಶಪಥ ಮಾಡಿ ಸೇಡು ತೀರಿಸಿಕೊಂಡದ್ದು ಇತ್ಯಾದಿ) ಆದರೂ ಪಟ್ಟದರಸಿಯಂತೆ ಆಕೆ ಕೊನೆಗೆ ಕಂಗೊಳಿಸಿದ್ದು ಮಾತ್ರ ಧರ್ಮರಾಯನ ಜೊತೆಗೆ. ಇವನ್ನೆಲ್ಲ ನೋಡಿದರೆ ಇವರೆಲ್ಲ ಏಕ ಪತ್ನಿ ವ್ರತಸ್ಥರಿಗಿಂತಲೂ ಮೇಲ್ಮಟ್ಟದ ಕೇವಲ ಐದನೇ ಒಂದು ಭಾಗ ಪತ್ನಿ ವ್ರತಸ್ಥರು ಎಂಬ "ಹೆಮ್ಮೆ" ಉಂಟಾಗುವುದಿಲ್ಲವೇ? ಹೌದು, ಇಡೀ ಮಹಾಭಾರತ ಎಂಬ ಕತೆಯೇ ನಿಂತಿರುವುದು ಈ ದ್ರೌಪದಿ ಎಂಬ ಹೆಣ್ಣಿನ ಮೇಲೆಯೇ. ತನ್ನ ಮಕ್ಕಳು ಒಗ್ಗಟ್ಟಾಗಿರಲಿ ಎಂಬ ಕಾರಣಕ್ಕಾಗಿ ಕುಂತಿದೇವಿ ಈ ದ್ರೌಪದಿಯನ್ನು ಉಪಾಯವಾಗಿ ಐವರಿಗೆ ಕಟ್ಟಿದಳು ಎಂಬ ಉಪಕಥೆ ಬೇರೆಯಿದೆ. ಹಾಗಾದರೆ ನಿಜಕ್ಕೂ ಈ ಪಾಂಡವರು ಕಾಲು (ಐದನೇ ಒಂದು ಅಂಶಕ್ಕೆ ಹತ್ತಿರದ ಮೊತ್ತ) ಪತ್ನಿ ವ್ರತಸ್ಥರೆಂಬುದು ಹೌದೇ? ಉಹುಂ ಇದನ್ನು ಕೆದಕ ಹೋದರೆ ಇನ್ನೂ ಕೆಲ ಇನ್ವಿಸಿಬಲ್ ಪತ್ನಿಯರಲ್ಲದೇ ಅವರ ಮಕ್ಕಳೂ ಸಹ ಇಲ್ಲವೆಂದರೂ ಕೂಡ ಗೋಚರಿಸುತ್ತಾರೆ ಅದು ಸತ್ಯ.


ಮಹಾಭಾರತದಲ್ಲೇ ಉಲ್ಲೇಖ ಇರುವಂತೆ ಗೋವಸನ ಎಂಬುವವನ ಪುತ್ರಿ ದೇವಿಕಾ ಎಂಬುವವಳು ಪಾಂಡವಾಗ್ರಜ



ಧರ್ಮರಾಯನ ಪತ್ನಿಯಾದರೆ ಇವರಿಗೆ ಜನಿಸಿದ ಪುತ್ರನ ಹೆಸರು ಯೌಧೇಯ. ಅದೇ ರೀತಿ ಭೀಮನಿಗೆ ಘಟೋತ್ಕಚನ ತಾಯಿ ಹಿಡಿಂಬೆಯೆಂಬ ತಾತ್ಕಾಲಿಕ ಪತ್ನಿ ಸಿಕ್ಕಿದ್ದರೂ ಆತನಿಗೂ ಕಾಶಿ ರಾಜನ ಮಗಳು ವಲಂಧರಾ ಎಂಬುವಳ ಜೊತೆ ವಿವಾಹವಾಗಿ ಸರ್ವಗ ಎಂಬ ಮಗನಿದ್ದ. ಅದೇ ರೀತಿ ತಂದೆ ಇಂದ್ರನಂತೆ ಅರ್ಜುನನಂತೂ ಮಹಾರಸಿಕರ ರಾಜ. ಆತನಿಗೂ ಚಿತ್ರಾಂಗದಾ ಉಲೂಪಿಯಂತಹ ತಾತ್ಕಾಲಿಕ ಪತ್ನಿಯರಿದ್ದರೂ ಕೃಷ್ಣನ ತಂಗಿ ಸುಭದ್ರೆಯಂತೆ ಶಾಶ್ವತ ಪತ್ನಿಯೂ ಕೂಡ ಜತೆಗಿದ್ದಳು. (ಅಭಿಮನ್ಯು ಬಭ್ರುವಾಹನ ಹಾಗು ಇರವಂತ ಅರ್ಜುನನಿಗೆ ಇವರುಗಳು ದಯಪಾಲಿಸಿದ ಮಕ್ಕಳ ಹೆಸರು) ಅದೇ ರೀತಿ ನಕುಲನಿಗೆ ಚೇದಿ ರಾಜ್ಯದ ರಾಜಕುವರಿ ಕರೇಣುಮತಿ ಪತ್ನಿಯಾದರೆ ಇವರ ಮಗನ ಹೆಸರು ನಿರೇಣುಮಿತ್ರ. ಹಾಗೆಯೇ ಸಹದೇವನ ಹೆಂಡತಿ ಮದ್ರ ದೇಶದ ದ್ಯುತಿಮತ್‌ನ ಮಗಳು ವಿಜಯಾ ಅವರಿಬ್ಬರ ಮಗ ಸುಹೋತ್ರ. ಇನ್ನೂ ವಿಶೇಷವೆಂದರೆ ಪಾಂಡವ- ಕೌರವರ ಹೆತ್ತವರಿಗೆ ನೈಜ ಮಕ್ಕಳಿಲ್ಲ ಎನ್ನುವುದು ಕಥೆಯಾದರೆ (ಪಾಂಡವರು ದುರ್ವಾಸನ ಮಂತ್ರಪ್ರಸಾದದಿಂದ ಹುಟ್ಟಿದರೆ ನೂರೊಂದು ಕೌರವರು ವ್ಯಾಸನ ಕೃಪೆಯಿಂದ ಜನಿಸಿದ್ದರು) ಧೃತರಾಷ್ಟ್ರನಿಗೊಬ್ಬ ನೈಜ ಮಗನೂ ಇದ್ದ. ಆತ ಧೃತರಾಷ್ಟ್ರನ ಅನಧಿಕೃತ ಪತ್ನಿಗೆ ಹುಟ್ಟಿದ ಯುಯುತ್ಸು ಎಂಬಾತ (ಯುದ್ಧ ಕಾಲದಲ್ಲಿ ಆತ ಪಾಂಡವರನ್ನು ಸೇರುತ್ತಾನೆ).

ರಾಜಾ ಬಹುಬಾರ್ಯಾ ವಲ್ಲಭ ಎನ್ನುವುದು ಅಂದಿನ ಸಾಮಾನ್ಯ ನೀತಿ. ಅದರಲ್ಲಿ ತಪ್ಪು ಇದ್ದಂತೆಯೂ ಇಲ್ಲ. ರಾಮನ ತಂದೆಗೆ 60 ಸಾವಿರ ಪತ್ನಿಯರಿದ್ದರೆ (ರಾಮ ಜನಿಸುವಾಗ ದಶರಥನಿಗೆ 70 ಸಾವಿರ ವಯಸ್ಸಾಗಿತ್ತಂತೆ) ರಾಮ ತನ್ನ ಬಳಿಕದ ಅವತಾರದಲ್ಲಿ ತಂದೆಯನ್ನು ಮೀರಿಸದಿದ್ದರೂ ಸಾವಿರದ ಲೆಕ್ಕದಲ್ಲಿಯೇ ಪತ್ನಿಯರನ್ನು ಹೊಂದಿದ್ದ ತಾನೆ? ಒಟ್ಟಾರೆ ಆ ಕಾಲದಲ್ಲಿ ರಾಜ ಪರಿವಾರದಲ್ಲಿ ಅವಿವಾಹಿತರಿರಬಹುದೇ ವಿನಹ ಏಕಪತ್ನಿತ್ವಕ್ಕೆ ಮಾನ್ಯತೆ ಇದ್ದಿರಲಿಲ್ಲ, ರಾಮಾಯಣದಲ್ಲಿ ಪ್ರೇಮ ಭಿಕ್ಷೆಯ ನೆಪದಲ್ಲಿ ರಾಮನಿಂದ ಹಿಂಸಾತ್ಮಕವಾಗಿ ಪೀಡನೆಗೊಳಗಾದ ಶೂರ್ಪನಖಾ ಪ್ರಸಂಗದ ಸಮರ್ಥನೆಗೋಸ್ಕರವಾಗಿ ರಾಮನ ಏಕಪತ್ನಿವ್ರತ ಹೆಚ್ಚು ಬಿಂಬಿಸಲ್ಪಟ್ಟಿತೇ ವಿನಹ ರಾಮಾಯಣದಲ್ಲಿ ಹೊಸತಾಗಿ ಮದುವೆಯಾಗಿಯೂ ಕೂಡ ಹೆಣ್ಣಿನ ವಿಚಾರದಲ್ಲಿ ನಿಜ ಸಂಯಮ ಕಾಯ್ದವನೆಂದರೆ ಅದು ಲಕ್ಷ್ಮಣ ಮಾತ್ರ.

ಕೆ.ಎಸ್.ಭಗವಾನರು ಯಾವುದೋ ಸಮಾರಂಭದಲ್ಲಿ ಸಾಂದರ್ಭಿಕವಾಗಿ ವಾಲ್ಮೀಕಿಯ ಕಾವ್ಯವನ್ನುಲ್ಲೇಖಿಸಿಯೇ ರಾಮನ ಕುರಿತಾದ ಇಂತಹ ಕೆಲ ಮಾತುಗಳನ್ನಾಡಿದ್ದರು. ಅದು ಸತ್ಯವೋ ಸುಳ್ಳೋ ಎಂಬುವುದರ ಕುರಿತು ಪ್ರಾಮಾಣಿಕ ಚರ್ಚೆಗಳಾಗಲಿ ಉದ್ವೇಗದ ಹೇಳಿಕೆಗಳು ಖಂಡಿತ ಬೇಡ. ಭಗವಾನರಿಗೆ ಇಂತಹ ವಿಚಾರಗಳನ್ನೆತ್ತುವ ಹುಚ್ಚುತನ ಯಾಕೋ? ಎನ್ನುವುದು ಹಲವರ ವಾದ ಹೌದಾದರೂ ಕೇವಲ 'ರಾಮ' ಎಂಬ ಹೆಸರ ನೆಪದಲ್ಲೇ ಜನರನ್ನು ಭಾವನಾತ್ಮಕವಾಗಿ ಕೆರಳಿಸಿ ದೇಶದಲ್ಲಿ ಉತ್ಪಾತವನ್ನು



ಸೃಷ್ಟಿಸಿದ ಇತಿಹಾಸವನ್ನು ನಾವು ಮರೆಯಲಾದೀತೆ? ಇಂತವರ 'ಶ್ಲೋಪಾಯ್ಸನಿಂಗ್' ಕಾರ್ಯಾಚರಣೆಗಳನ್ನೆಲ್ಲ ನೋಡಿಯೂ ನೋಡದವರಂತೆ ಮೌನವಾಗಿರುವ ಬದಲು ಅವರ ಸಿದ್ಧಾಂತದ ಬುಡಕ್ಕೆ ಆಗಾಗ ಇಂತಹ ಹೊಡೆತಗಳನ್ನು ಭಗವಾನರಂತವರು ನೀಡುತ್ತಲೇ ಇದ್ದರೆ ಅವರ ನಾಗಾಲೋಟಕ್ಕೆ ಸ್ವಲ್ಪಮಟ್ಟಿಗಿನ ಬ್ರೇಕಾದರೂ ಬೀಳಬಹುದೇನೋ.. ಪೇಜಾವರರಂತಹ ವೈದಿಕರ ಕೂರಡು ಉರಕೊಳ್ಳುವುದನ್ನ ನೋಡಿದರೇ ಭಗವಾನರ ಈ ಗಟ್ಟಿ ಸಾಕ್ಷ್ಯದ ಹೊಡೆತದ ಪ್ರಭಾವ ಏನೆಂಬುದನ್ನ ಅರ್ಥೈಸಿಕೊಳ್ಳಬಹುದು.

-ಅವಿನಾಶ್ ಎಮ್.ಎಸ್. ನೆಲ್ಲಿಕಾರ್

ಅಪಾಯದಲ್ಲಿರುವ ಆಪ್


ಇದು ಹೀಗೇ ಮುಂದುವರೆದರೆ, ಕೇಜ್ರಿವಾಲ್ ಬರಿ ನಟ ನಿರ್ದೇಶಕ ನಿರ್ಮಾಪಕ ಮಾತ್ರವಾಗಿರದೆ ಕೊನೆಗೆ ಪ್ರೇಕ್ಷಕರು ಕೂಡ ಅವರೇ ಆಗಿಬಿಡುತ್ತಾರೆ. ಇಡೀ ಭಾರತದಲ್ಲಿ ಕೇಜ್ರಿವಾಲ್ ಮತ್ತು ಎಎಪಿ ಪಕ್ಷ ಭ್ರಷ್ಟಾಚಾರ, ಸ್ವಜನಪಕ್ಷಪಾತ ಮತ್ತು ಇತರೆ ಅನೈತಿಕಗಳ ವಿರುದ್ಧ ಹೋರಾಡುವ ವೇದಿಕೆ ಎಂಬ ಉತ್ಸಾಹ ಮೂಡಿತ್ತು, ಆದರೀಗ ಆಪ್ ನಗೆಪಾಟಲಿಗೀಡಾಗುತ್ತಿದೆ.

ಒಂದು ರಾಜಕೀಯ ಪಕ್ಷವನ್ನು ಅಧಿಕಾರಕ್ಕೆ ತಂದು ಅದನ್ನು ಮುನ್ನಡೆಸಬೇಕಾದರೆ ಅನುಭವ ಕೂಡ ಮುಖ್ಯ ಎಂದು ಜನರೇ ಈಗ ಮಾತನಾಡುತ್ತಿದ್ದಾರೆ. ಆ ಮಟ್ಟಿಗೆ ಇಂದು ಕೇಜ್ರಿವಾಲ್ ಮತ್ತು ಅವರ ಕೆಲವು ಶಾಸಕರು ವರ್ತಿಸುತ್ತಿದ್ದಾರೆ. ಸರ್ಕಾರಗಳ ವಿರುದ್ಧ ಘೋಷಣೆ ಕೂಗಿ, ಆಕ್ರೋಶ ವ್ಯಕ್ತಪಡಿಸಿ, ಪ್ರತಿಭಟನೆ ಮಾಡಿ ಬಿಡಬಹುದು. ಆದರೆ ತಾವೇ ಅಧಿಕಾರಕ್ಕೆ ಬಂದು ಸರ್ಕಾರ ಮತ್ತು ಪಕ್ಷವನ್ನು ಮುನ್ನಡೆಸುವುದು ಹೇಗೆ ಎಂದು ಕೇಜ್ರಿವಾಲ್ ಅವರಿಗೆ ಈಗ ಗೊತ್ತಾಗಿದೆ.

ಪಕ್ಷದಲ್ಲಿ ಯಾವುದೇ ರೀತಿಯ ಭಿನ್ನಾಭಿಪ್ರಾಯವಿದ್ದರೂ ಆಪ್ ನಾಯಕರು ಅವುಗಳನ್ನು ಬದಿಗೊತ್ತಿ ತಮ್ಮ ಪಕ್ಷದ ನಾಯಕ ಮತ್ತು ಪಕ್ಷದ ವರ್ಚಸ್ಸು ಕುಂದದಂತೆ ನೋಡಿಕೊಂಡು ಸರ್ಕಾರ ಜನಸಾಮಾನ್ಯರ ಸರ್ಕಾರ ಎಂಬಂತೆ ಕೆಲಸ ಮಾಡಬೇಕು. ಇಡೀ ಭಾರತದಲ್ಲಿ ಇತರೆ ಸಮಾನ ಮನಸ್ಕ ಪಕ್ಷಗಳೊಂದಿಗೆ ಕೈ ಜೋಡಿಸಿ ಭಾರತವನ್ನು ಭ್ರಷ್ಟಾಚಾರ ಮುಕ್ತ ಭಾರತವನ್ನಾಗಿ ಕಟ್ಟುವ ಮೂಲಕ ಆಪ್ ತನ್ನ ಅಜೆಂಡಾವನ್ನು ಸ್ಥಾಪಿಸಬೇಕಾಗಿದೆ.

-ಸಿ ಶಿವಕುಮಾರ್, ತುಮಕೂರು

ಸಾವಿನಲ್ಲೂ ಜಾತಿ, ಸೊರಗಿದ ಪ್ರೀತಿ. ರೋಹಿಣೀ ನಕ್ಷತ್ರಕ್ಕೆ ರವಿ ಬಲಿಯಾಗಿರುವುದು ಖೇದಕ್ಕೆ! ಮಾಜಿ ಡಿಸಿಎಂ ಅಶೋಕ್ ಮಾಜಿ ಸಿಎಂ ಕುಮಾರಸ್ವಾಮಿ ಭಾಯಿ ಭಾಯಿ ಆಗಿ ಖುಷಿಯಾಗಿ ಜೊತೆಜೊತೆಯಲ್ಲಿ ತಿರುಗುತ್ತಿದ್ದರು. ಅಶೋಕ್‌ರವರಂತು ಇಂಗ್ಲಿಷ್





ಚಾನಲ್‌ರವರಿಗೆ ತಪ್ಪುತಪ್ಪಾಗಿ ಇಂಗ್ಲಿಷ್‌ನಲ್ಲಿ ವದರುತ್ತಿದ್ದರು. ಇನ್ನು ಅಪ್ಪ-ಮಕ್ಕಳ ಪಕ್ಷ ಮತ್ತು ಬಿಜೆಪಿ ಪಕ್ಷ ಮತ್ತವರ ಪಕ್ಷವನ್ನು ಬೆಂಬಲಿಸುವರು, ಚೆಡ್ಡಿಗಳು ಸೇರಿಕೊಂಡು ಸಿದ್ದು ಸರ್ಕಾರವನ್ನು ಇನ್ನೇನು ಕೆಳಗೆ ಇಳಿಸಿ ಬಿಡುತ್ತೀವಿ ಎಂಬ ಭ್ರಮೆಯಲ್ಲಿದ್ದರು. ಯಾವಾಗ ಪ್ರಜಾವಾಣಿ ಮತ್ತು ಗೌರಿ ಲಂಕೇಶ್ ಪತ್ರಿಕೆ ನಿಖರವಾದ ವರದಿ ಪ್ರಕಟಿಸಿತೋ ಇವರೆಲ್ಲಾ ತೆಪ್ಪಗಾದರು, ಆ ನಂತರ ಮೀಡಿಯಾ ಮಸಲಾ ನಮಗೂ ಇದಕ್ಕೂ ಸಂಬಂಧವಿಲ್ಲವೆಂಬಂತಾದರು. ಅದರಲ್ಲೂ ಆ ಪೆದ್ದ ಹುಡುಗಿ ಅರ್ರ ಪಕ್ಕದಲ್ಲಿ ಕೂರುವ ಒಣಕಲ (ಕಡ್ಡಿ ಪೈಲ್ವಾನ್) ಬಾಯಿ ಬಡಿದುಕೊಂಡು ಎಲ್ಲರ ಮೇಲೆ (ಕಾಂಗ್ರೆ) ಕೆಂಡ ಕಾರುತ್ತಿದ್ದರು. ಆವೇಶ ಬಂದವರಂತೆ ಕಿರುಚಾಡುತ್ತಿದ್ದವನಿಗೆ ಆ ಶ್ರೀರಂಗನಾಥನೇ ಬಾಯಿಗೆ ಬೀಗ ಹಾಕಿದ್ದಾನೆ. ಯಾವಾಗ ಜಾತಿ ಬಂತೋ ಇತರರು ಹಿಂದೆ ಸರಿದರು ಹೌದು.

-ಜೆ. ಪುಟ್ಟಸ್ವಾಮಿ, ಮೈಸೂರು

ವಿ.ಸೂ.: ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಬಹುದು.

'ಹಿಟ್ಲರ್' ಪ್ರೇಮ್‌ನ 'ಗಾಂಧಿಗಿರಿ'





ಜೋಗಿ ಪ್ರೇಮ್‌ಗೂ ವಿವಾದಕ್ಕೂ ಒಂದು ತರದ ಅವಿನಾಭಾವ ಸಂಬಂಧ. ರಘು ಹಾಸನ್ ನಿರ್ದೇಶನದಲ್ಲಿ 'ಜೋಗಿ' ಪ್ರೇಮ್ ಅಭಿನಯಿಸಲಿರುವ ಹೊಸ ಸಿನಿಮಾಕ್ಕೆ 'ಹಿಟ್ಲರ್' ಎಂದು ಹೆಸರಿಡಲಾಗಿತ್ತು, ಆದರೆ ಹಲವು ವರ್ಷಗಳ ಹಿಂದೆಯೇ 'ಹಿಟ್ಲರ್' ಎಂದು ಟೈಟಲ್‌ಅನ್ನು ಟೇಶಿ ವೆಂಕಟೇಶ್ ಎಂಬುವವರು ವಾಣಿಜ್ಯ ಮಂಡಳಿಯಲ್ಲಿ ರಿಜಿಸ್ಟರ್ ಮಾಡಿಸಿದ್ದರು.

ಪ್ರೇಮ್ ಅವರ ಹೊಸ ಚಿತ್ರ ಅನೌನ್ಸ್ ಆಗುತ್ತಿದ್ದಂತೆ ವಾಣಿಜ್ಯ ಮಂಡಳಿಯ ಮೆಟ್ಟಿಲೇರಿದ ವೆಂಕಟೇಶ್ "ಯಾವ ಕಾರಣಕ್ಕೂ ಟೈಟಲ್ ಬಿಟ್ಟುಕೊಡುವುದಿಲ್ಲ" ಎಂದು ಪಟ್ಟು ಹಿಡಿದರು. ಇತ್ತ ಇಬ್ಬರ ನಡುವೆ ನಡೆದ ಸಂಧಾನ ಮಾತುಕತೆ ಕೂಡ ಯಶಸ್ವಿ ಆಗಲಿಲ್ಲ, ಅತ್ತ ವಾಣಿಜ್ಯ ಮಂಡಳಿ ಕಡೆಯಿಂದಲೂ ಯಾವುದೇ ಪ್ರತಿಕ್ರಿಯೆ ಬರಲಿಲ್ಲ, ಈ ಕಾರಣಕ್ಕೆ ಈಗ ಪ್ರೇಮ್ ಅಭಿನಯಿಸಲಿರುವ ಚಿತ್ರಕ್ಕೆ ಹೊಸ ಶೀರ್ಷಿಕೆ ಇಡಲಾಗಿದೆ. ಅದೇ 'ಗಾಂಧಿಗಿರಿ'.


'ಹಿಟ್ಲರ್'ಗೂ, 'ಗಾಂಧಿಗಿರಿ'ಗೂ ಎತ್ತಿಂದೆತ್ತಣ ಸಂಬಂಧ ಅಂತ ನೀವು ಕೇಳಬಹುದು. ಇದೇ ಪ್ರಶ್ನೆಯನ್ನ ನಾವು ನಿರ್ದೇಶಕ ರಘು ಹಾಸನ್ ಮುಂದೆ ಇಟ್ಟಾಗ "ಸಿನಿಮಾದಲ್ಲಿ ಹಿಟ್ಲರ್ ವಾದವೂ ಇದೆ, ಗಾಂಧಿಗಿರಿ ತತ್ವವೂ ಇದೆ. ಹಿಂಸೆ ನೀಡಿದವರು ಶಾಂತರಾಗಲ್ಲ, ಅಹಿಂಸಾ ತತ್ವ ಪಾಲಿಸಲ್ಲ ಅಂತ ಏನೂ ಇಲ್ಲವಲ್ಲ, ನಮ್ಮ ಹೀರೋನೂ ಹಾಗೆ. ಅದಕ್ಕೆ ಈ ಟೈಟಲ್ ಫಿಕ್ಸ್ ಮಾಡಿದ್ದೀವಿ" ಅಂತ ಉತ್ತರ ಕೊಟ್ಟರು.

ಈಗಾಗಲೇ ರಿಲೀಸ್ ಆಗಿರುವ ಪೋಸ್ಟರ್‌ಗಳಲ್ಲಿ ಪ್ರೇಮ್ 'ಹಿಟ್ಲರ್' ಸ್ಟೈಲ್‌ನಲ್ಲಿ ಖಡಕ್ ಆಗಿ ಪೋಸ್ ಕೊಟ್ಟಿದ್ದಾರೆ. ಇದೇ ತಿಂಗಳ 20 ರಂದು ಚಿತ್ರದ ಮುಹೂರ್ತ ನೆರವೇರಲಿದ್ದು, ಮೇ 1 ರಿಂದ ಶೂಟಿಂಗ್ ಶುರುವಾಗಲಿದೆ. ಪ್ರೇಮ್ ಜೊತೆ ಶರ್ಮಿಳಾ ಮಾಂಡ್ರೆ ನಾಯಕಿಯಾಗಿ ಕಾಣಿಸಿಕೊಂಡರೆ, ತಾಯಿ ಪಾತ್ರದಲ್ಲಿ ಅರುಂಧತಿ ನಾಗ್ ಅಭಿನಯಿಸಲಿದ್ದಾರೆ. ಅಲ್ಲಿಗೆ, ಗಾಂಧಿನಗರದಲ್ಲಿ ಮೇ ತಿಂಗಳಿನಿಂದ ಪ್ರೇಮ್‌ನ ಗಾಂಧಿಗಿರಿ ಶುರುವಾಗಲಿದೆ.

ಜೋರಾದ ರಣವಿಕ್ರಮನ ಪರಾಕ್ರಮ


ಸದ್ಯ ಗಾಂಧಿನಗರದ ಮೂಲೆಮೂಲೆಯಲ್ಲೂ ಕೇಳಿಬರುತ್ತಿರುವ ಹೆಸರು ಒಂದೇ. ಅದೇ 'ರಣವಿಕ್ರಮ'. ಕಾರಣ ಪವರ್ ಸ್ಟಾರ್ ಪುನೀತ್ ರಾಜ್‌ಕುಮಾರ್ ಅಭಿನಯದ 'ರಣವಿಕ್ರಮ' ಚಿತ್ರಕ್ಕೆ ಭರ್ಜರಿ ಓಪನಿಂಗ್ ಸಿಕ್ಕಿದೆ. ರಾಜ್ಯದಾದ್ಯಂತ ಎಲ್ಲಾ ಥಿಯೇಟರ್‌ಗಳಲ್ಲೂ 'ರಣವಿಕ್ರಮ'ನ ಆರ್ಭಟ ಜೋರಾಗಿದ್ದು ಕಲೆಕ್ಷನ್‌ನಲ್ಲೂ ದಾಖಲೆ ಬರೆಯುವುದಕ್ಕೆ ಸಜ್ಜಾಗುತ್ತಿದೆ.

ಗಾಂಧಿನಗರದ ಪಂಡಿತರ ಅಂದಾಜಿನ ಪ್ರಕಾರ ಮೊದಲನೆ ದಿನವೇ 'ರಣವಿಕ್ರಮ' ಕಲೆಕ್ಷನ್ ಮಾಡಿರುವುದು



ಬರೋಬ್ಬರಿ ಮೂರು ಕೋಟಿ 75 ಲಕ್ಷ ರೂಪಾಯಿ! ಕರ್ನಾಟಕದಲ್ಲಿ 200 ಕ್ಕೂ ಹೆಚ್ಚು ಥಿಯೇಟರ್‌ಗಳಲ್ಲಿ ಬಿಡುಗಡೆ ಆಗಿರುವ 'ರಣವಿಕ್ರಮ' ಹೊರ ರಾಜ್ಯಗಳಲ್ಲೂ 40 ಕ್ಕೂ ಹೆಚ್ಚು ಸ್ಕ್ರೀನ್‌ಗಳಲ್ಲಿ ಪ್ರದರ್ಶನವಾಗುತ್ತಿದೆ. ಬೆಂಗಳೂರು, ಚೆನ್ನೈ, ಮುಂಬೈ, ಹೈದರಾಬಾದ್, ಪುಣೆ ಮತ್ತು ದೆಹಲಿಯಲ್ಲಿ 'ರಣವಿಕ್ರಮ'ನ ಟಿಕೆಟ್‌ಗಳು ಸೋಲ್ಡ್ ಔಟ್ ಆಗಿವೆ. ಅಕ್ಷರಮಟ್ಟಿಗೆ ಗಲ್ಲಾಪೆಟ್ಟಿಗೆಯಲ್ಲಿ 'ರಣವಿಕ್ರಮ'ನ ಪರಾಕ್ರಮ ಜೋರಾಗಿದೆ.

ತೆರೆಯ ಮೇಲೆ ಮತ್ತೆ ಒಂದಾದ ಜನಪ್ರಿಯ ಜೋಡಿ




'ಡಿ.ಡಿ.ಎಲ್.ಜೆ' ಚಿತ್ರದ ಮೂಲಕ ಬಾಲಿವುಡ್‌ನಲ್ಲಿ ಮನೆಮಾತಾಗಿದ್ದ ಜನಪ್ರಿಯ ಜೋಡಿ ಶಾರುಖ್ ಖಾನ್ ಮತ್ತು ಕಾಜೋಲ್ 'ದಿಲ್‌ವಾಲೆ' ಚಿತ್ರದ ಮೂಲಕ ಜನರನ್ನು ಮತ್ತೆ ರಂಜಿಸಲು ತೆರೆ ಮೇಲೆ ಕಾಣಿಸಿಕೊಳ್ಳಲಿದ್ದಾರೆ.

ಬ್ಲಾಕ್ ಬಸ್ಟರ್ ಸಿನಿಮಾಗಳ ನಿರ್ದೇಶಕ ರೋಹಿತ್ ಶೆಟ್ಟಿ ನಿರ್ದೇಶನದಲ್ಲಿ ಮೂಡಿಬರಲಿರುವ ಚಿತ್ರದಲ್ಲಿ ಈ ಜೋಡಿ ಮತ್ತೆ ಮ್ಯಾಜಿಕ್ ಮಾಡಲಿದೆ. ನಟ ಶಾರುಖ್ ಖಾನ್ ಪ್ರಕಾರ "ಕಾಜೋಲ್ ಜೊತೆ ಅಭಿನಯಿಸುವುದು ಯಾವಾಗಲೂ ಖುಷಿ ನೀಡುತ್ತದೆ. ಆಕೆ ನನ್ನ ಆಪ್ತ ಸ್ನೇಹಿತೆ. ಈ ಹಿಂದೆ ನಾವು ಅನೇಕ ಉತ್ತಮ ಸಿನಿಮಾಗಳನ್ನು ಮಾಡಿದ್ದೇವೆ. ಹಾಗೆಯೇ 'ದಿಲ್‌ವಾಲೆ' ಕೂಡ ಉತ್ತಮ ಸಿನಿಮಾವಾಗಲಿದೆ."

ಇಂದಿಗೂ ತೆರೆಯ ಮೇಲೆ ಬೆಸ್ಟ್ ರೋಮ್ಯಾಂಟಿಕ್ ಜೋಡಿಯೆಂದರೆ ಅದು ಶಾರುಖ್ ಖಾನ್ ಮತ್ತು ಕಾಜೋಲ್. ಇವರ ಸಿನಿಮಾಗಳು ಒಂದಕ್ಕಿಂತ ಒಂದು ಬಾಕ್ಸ್ ಆಫೀಸ್‌ನಲ್ಲಿ ಭಾರಿ ಸದ್ದು ಮಾಡಿದ್ದವು. ಈಗ 'ದಿಲ್‌ವಾಲೆ' ಕೂಡ ಅಂತಹ ಯಶಸ್ಸನ್ನು ಕಾಣುತ್ತ ಕಾದುನೋಡಬೇಕು.

ಕ್ರಿಕೆಟರ್ ಆದ ದಿಗಂತ್



ಮೂರು ವರ್ಷಗಳ ಹಿಂದೆ ದಿಗಂತ್ ಅಭಿನಯಿಸಿದ್ದ 'ಬಿಸಿಲೆ' ಎಂಬ ಚಿತ್ರವೊಂದು ಬಿಡುಗಡೆಗೊಂಡಿತ್ತು, ಅದನ್ನು ಸಂದೀಪ್ ಗೌಡ ಎಂಬುವವರು ನಿರ್ದೇಶಿಸಿದ್ದರು.

ಸಂಪೂರ್ಣ ಹಾಸ್ಯಮಯ ಕಥಾವಸ್ತುವನ್ನು ಹೊಂದಿದ್ದ 'ಬಿಸಿಲೆ' ಕೆಲವು ಕಾರಣಗಳಿಂದ ಕುತೂಹಲ ಕೆರಳಿಸಿತ್ತಾದರೂ ಗಲ್ಲಾಪೆಟ್ಟಿಗೆಯಲ್ಲಿ ಅಂತಹ ಯಶಸ್ಸನ್ನು ಗಳಿಸಿರಲಿಲ್ಲ. ಈಗ ಅದೇ ಸಂದೀಪ್ ಗೌಡ ಮತ್ತು ದಿಗಂತ್ ಕಾಂಬಿನೇಷನ್ ಮತ್ತೆ ಒಂದಾಗುತ್ತಿದೆ. 'ಹಿಟ್ ವಿಕೆಟ್' ಹೊಸ ಚಿತ್ರದ ಹೆಸರು.

ಹೌದು ಶೀರ್ಷಿಕೆಗೆ ತಕ್ಕಂತೆ ಚಿತ್ರದ ಕತೆ ಕ್ರಿಕೆಟ್ ಆಟವನ್ನು ಆಧರಿಸಿದೆ. ಒಬ್ಬ ಕ್ರಿಕೆಟ್ ಆಟಗಾರನ ಖಾಸಗಿ ಜೀವನ ಹೇಗಿರುತ್ತದೆ ಎನ್ನುವುದು ಚಿತ್ರದ ತಿರುಳು. ಈ ಚಿತ್ರದ ವಿಶೇಷತೆ ಯಾವುದೆಂದರೆ ಮೊಟ್ಟಮೊದಲ ಬಾರಿಗೆ ಒಂದೇ ಚಿತ್ರಕ್ಕೆ ಐದು ಜನ ಸಂಗೀತ ನಿರ್ದೇಶಕರು ಕಾರ್ಯನಿರ್ವಹಿಸುತ್ತಿರುವುದು. ಮಿಥುನ್, ಗಗನ್, ವಿವೇಕ್, ಜೂಡಾ ಮತ್ತು ಅಭಿಮಾನ್ ಈ ಚಿತ್ರದ ಸಂಗೀತ ನಿರ್ದೇಶಕರು. ಈ ಚಿತ್ರದಲ್ಲಿ ದಿಗಂತ್ ಜೊತೆ ಅಪೂರ್ವ ರೈ ಎಂಬ ಕನ್ನಡದ ಹುಡುಗಿ ನಟಿಸುತ್ತಿದ್ದಾಳೆ. ಅಪೂರ್ವ ರೈ ಈಗಾಗಲೇ ತಮಿಳಿನಲ್ಲಿ ಅರ್ಜುನ್ ಸರ್ಜಾ ಜೊತೆ ಸಿನಿಮಾ ಒಂದರಲ್ಲಿ ನಟಿಸುತ್ತಿದ್ದಾಳೆ. ಕನ್ನಡದಲ್ಲಿ 'ಹಿಟ್ ವಿಕೆಟ್' ಆಕೆಯ ಮೊದಲ ಚಿತ್ರವಾಗಲಿದೆ. ಇನ್ನು ಈ ಚಿತ್ರದ ಬಹುಮುಖ್ಯ ಪಾತ್ರವೊಂದರಲ್ಲಿ ಅನಂತ್ ನಾಗ್ ಕಾಣಿಸಿಕೊಳ್ಳುತ್ತಿದ್ದಾರೆ. ಒಟ್ಟಾರೆ 'ಹಿಟ್ ವಿಕೆಟ್' ಮುಹೂರ್ತಕ್ಕೆ ಅಣಿಯಾಗುತ್ತಿದ್ದು, ಇದೇ ತಿಂಗಳ ಕೊನೆಗೆ ಸೆಟ್ಟೇರಲಿದೆ.

ಏ. 18ರಂದು ಕನ್ನಡ ಚಿತ್ರೋದ್ಯಮ ಬಂದ್

ಕುಡಿಯುವ ನೀರಿಗಾಗಿ ಮೇಕೆದಾಟಿನಲ್ಲಿ ಕರ್ನಾಟದ ನಿರ್ಮಿಸಲಿರುವ ಅಣೆಕಟ್ಟು ಯೋಜನೆಯನ್ನು ವಿರೋಧಿಸಿ ಇತ್ತೀಚಿಗೆ ತಮಿಳುನಾಡು ಬಂದ್‌ಗೆ ಕರೆಕೊಡಲಾಗಿತ್ತು. ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆ ಇದಾಗಿದ್ದು ಕನ್ನಡ ಚಿತ್ರೋದ್ಯಮವೂ ತಮಿಳುನಾಡಿಗೆ ತಿರುಗೇಟು ನೀಡಲು ಸಿದ್ಧವಾಗಿದೆ. ಈ ಸಂಬಂಧ ರಾಜ್ಯದ ಕೆಲವು ಕನ್ನಡ ಪರ ಸಂಘಟನೆಗಳು ಏಪ್ರಿಲ್ 18ರಂದು ಕರ್ನಾಟಕ ಬಂದ್‌ಗೆ ಕರೆ ನೀಡಿವೆ. ರಾಜ್ಯದ ಜನತೆಗೆ ಅವಶ್ಯಕವಾಗಿರುವ ಕುಡಿಯುವ ನೀರನ್ನು ಕಲ್ಪಿಸಲು ರಾಜ್ಯ ಸರ್ಕಾರ ಕೈಗೆತ್ತಿಕೊಂಡಿರುವ ಯೋಜನೆ ಮೇಕೆದಾಟು ಅಣೆಕಟ್ಟು ಯೋಜನೆ. ಇದಕ್ಕೆ ನಮ್ಮ ಸಂಪೂರ್ಣ ಬೆಂಬಲವಿದೆ ಎಂದು ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಪ್ರಕಟಣೆಯಲ್ಲಿ ತಿಳಿಸಿದೆ. ಈ ವಿಷಯವಾಗಿ ಏಪ್ರಿಲ್ 9ರಂದು ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಮತ್ತು ಇತರೆ ಅಂಗಸಂಸ್ಥೆಗಳ ಪ್ರತಿನಿಧಿಗಳು ಹಾಗೂ ಚಿತ್ರೋದ್ಯಮದ ಗಣ್ಯರು ಸಭೆ ಸೇರಿ, ಕನ್ನಡ ನಾಡಿನ ನೆಲ, ಜಲ, ಭಾಷೆಯ ವಿಷಯದಲ್ಲಿ ಅನ್ಯರು ಆಕ್ಷೇಪ ವ್ಯಕ್ತಪಡಿಸಿದಾಗ ಅದನ್ನು ಪ್ರತಿಭಟಿಸುವ ಕೆಲಸದಲ್ಲಿ ಚಲನಚಿತ್ರರಂಗವು ಈ ಹಿಂದಿನಿಂದಲೂ ಭಾಗವಹಿಸಿರುವುದರಿಂದ ಈಗಲೂ ತಮ್ಮ ಒಗ್ಗಟ್ಟನ್ನು ಪ್ರದರ್ಶಿಸಲು ತೀರ್ಮಾನಿಸಿವೆ. ಆದ್ದರಿಂದ ಏಪ್ರಿಲ್ 18ರಂದು ಬೆಳಗ್ಗೆ 6 ರಿಂದ ಸಂಜೆ 6 ಗಂಟೆತನಕ ಚಲನಚಿತ್ರ ಚಿತ್ರೀಕರಣ, ಪ್ರದರ್ಶನ ಹಾಗೂ ಚಿತ್ರೋದ್ಯಮಕ್ಕೆ ಸಂಬಂಧಪಟ್ಟ ಎಲ್ಲಾ ಕಾರ್ಯಚಟುವಟಿಕೆಗಳನ್ನು ಸಂಪೂರ್ಣವಾಗಿ ಸ್ಥಗಿತಗೊಳ್ಳಲಿವೆ.

ಬಂದ್‌ಗೆ ಬೆಂಬಲ ಸೂಚಿಸುವ ಮೂಲಕ ಯಶಸ್ವಿಗೊಳಿಸಬೇಕೆಂದು ಚಿತ್ರೋದ್ಯಮಕ್ಕೆ ವಾಣಿಜ್ಯ ಮಂಡಳಿ ಮನವಿ ಮಾಡಿದೆ. ■


ಹುಲುಮಾನವ ದೇವರ ಕೌಶಲ್ಯವನ್ನು ಪ್ರಶ್ನಿಸುವಷ್ಟು ದೊಡ್ಡವನಾದನೇ?

ಒಂದು ಪತ್ರ

ಕೇಂದ್ರ ಸರಕಾರ ದೊಡ್ಡ ದೇವಸ್ಥಾನಗಳಲ್ಲಿ ನೂರಾರು ವರ್ಷಗಳಿಂದ ಶೇಖರವಾಗಿರುವ ಟನ್ನುಗಟ್ಟಲೆ ಚಿನ್ನವನ್ನು ಬ್ಯಾಂಕುಗಳಲ್ಲಿ ಡಿಪಾಸಿಟ್ ಇರಿಸಿ ಅದರ ಬದಲಿಗೆ ದೇವಸ್ಥಾನಗಳಿಗೆ ಸುವರ್ಣ ಸರ್ಟಿಫಿಕೇಟ್ ಕೊಟ್ಟು ಆ ಭಾರಿ ಚಿನ್ನದ ದಾಸ್ತಾನನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿ ಚಿನ್ನದ ಆಯಾತ ಕಡಿಮೆ ಮಾಡುವ ಉತ್ತಮ ಯೋಜನೆ ತಯಾರಿ ಸುತ್ತಿದೆ (ಕಂದಾಚಾರಿ ಆರೆಸ್ಸೆಸ್ ಇದನ್ನು ವಿರೋಧಿಸುತ್ತಿದೆ ಎಂಬುದು ಬೇರೆ ವಿಷಯ). ಇನ್ನೊಂದೆಡೆ ಇದೇ ಮೋದಿ ಸರಕಾರ ಮೊದಲ ಬಾರಿಗೆ ಅಕ್ಷಯ ತೃತೀಯದ ಹಿನ್ನೆಲೆಯಲ್ಲಿ ಅಶೋಕ ಚಕ್ರ ಮತ್ತು ರಾಷ್ಟ್ರ ಲಾಂಛನವುಳ್ಳ ಚಿನ್ನದ ನಾಣ್ಯಗಳನ್ನು ಬಿಡುಗಡೆ ಮಾಡಿ ರಾಷ್ಟ್ರೀಯ ಬ್ಯಾಂಕುಗಳಲ್ಲಿ ಮಾರಾಟಕ್ಕೆ ಇಟ್ಟಿದ್ದು, ಈ ಮೂಲಕ ಜನರಿಗೆ ಚಿನ್ನ ಶೇಖರಣೆಗೆ ನೇರ ಪ್ರೋತ್ಸಾಹ ಕೊಡುತ್ತಿದೆ. ಇಂತಹ ವೈರುಧ್ಯಮಯವಾದ ಕೇಂದ್ರ ಸರಕಾರದ ನೀತಿ ಖೇದಕರ.

ಅಕ್ಷಯ ತೃತೀಯ ಎಂಬುದು ಕೇವಲ 7-8 ವರ್ಷಗಳ ಹಿಂದೆ ಶುರುವಾದ ಶುದ್ಧ ಮೂಢನಂಬಿಕೆ. ಸರಕಾರದ ಇಲಾಖೆಗಳು ಅಥವಾ ಸರಕಾರಿ ಸಂಸ್ಥೆಗಳು ನೇರವಾಗಿ ಮೂಢನಂಬಿಕೆಗಳಿಗೆ ಪ್ರೋತ್ಸಾಹ ಕೊಡುವುದನ್ನು ಸಂವಿಧಾನದಲ್ಲಿ ನಿಷೇಧಿಸಲಾಗಿದೆ. ಹಾಗಾಗಿ ಕೇಂದ್ರ ಸರಕಾರದಿಂದ ಆ ಅಕ್ಷಯ ತೃತೀಯ ದಿನದಲ್ಲಿ ಚಿನ್ನದ ನಾಣ್ಯ ಮಾರುವುದು ಸಂವಿಧಾನದ ಆಶಯಕ್ಕೆ ವಿರುದ್ಧವಾಗಿದೆ.

ಮಹಾತ್ಮ ಬಸವೇಶ್ವರರು ಮೂಢನಂಬಿಕೆಗಳ ವಿರುದ್ಧ ಬಹಿರಂಗ ಸಮರ ಸಾರಿದ್ದರು. ಆದರೆ ಈಗ ಅದೇ ಬಸವೇಶ್ವರರ ಜಯಂತಿಯಂದು ಬ್ಯಾಂಕುಗಳಿಗೆ ರಜೆಯಿದ್ದರೂ ಅಕ್ಷಯ ತೃತೀಯ ಎಂಬ ಮೌಢ್ಯಕ್ಕೆ ಇಂಬು ಕೊಟ್ಟು ಚಿನ್ನದ ನಾಣ್ಯ ಮಾರಲು ಬ್ಯಾಂಕುಗಳನ್ನು ಆ ದಿನ ತೆರೆದಿಡಬೇಕೆಂದು ಸರಕಾರ ಅಧಿಕೃತ



ಆದೇಶ ಹೊರಡಿಸಿರುವುದು ಮೌಢ್ಯ ವಿರೋಧಿ ಬಸವೇಶ್ವರರಿಗೆ ಘೋರ ಅವಮಾನ. ಬಸವೇಶ್ವರ ಜಯಂತಿ ಎಲ್ಲ ಕನ್ನಡಿಗರಿಗೂ ಅತ್ಯಂತ ಪವಿತ್ರವಾದ ದಿನವಾದರೂ ಆಯಾ ಬ್ಯಾಂಕುಗಳ ಲಿಂಗಾಯತ ಅಧಿಕಾರಿಗಳು ತಮ್ಮ ಮನೆಯಲ್ಲಿ ಪವಿತ್ರ ಬಸವೇಶ್ವರ ಜಯಂತಿ ಆಚರಿಸುವುದನ್ನು ಬಿಟ್ಟು ಬ್ಯಾಂಕಿಗೆ ಹೋಗಿ ಚಿನ್ನದ ನಾಣ್ಯ ಮಾರಲು ಕುಳಿತುಕೊಳ್ಳಬೇಕೆಂದು ಆದೇಶ ಹೊರಡಿಸಿರುವುದರಿಂದ ಕನ್ನಡಿಗರ ಧಾರ್ಮಿಕ ಭಾವನೆಗಳಿಗೆ ನೋವಾಗಿದೆ.

ಕೇವಲ ಶ್ರೀಮಂತರು ಹಾಗೂ ಮೇಲ್ಮಧ್ಯಮ ವರ್ಗದವರು ಮಾತ್ರ ಅಕ್ಷಯ ತೃತೀಯದಂದು ಚಿನ್ನ ಬೆಳ್ಳಿ ಖರೀದಿಸಲು ಸಾಧ್ಯ. ಇದರ ಅರ್ಥ ಸಂಪತ್ತು ಇದ್ದವರಿಗೆ ಮಾತ್ರ ದೇವರು ಇನ್ನೂ ಸಂಪತ್ತು ಕೊಡುವುದು ಹಾಗೂ ಬಡವರೆಂದರೆ ದೇವರಿಗೂ ಅಲರ್ಜಿ! ಇಂತಹ ದೇವರು ನಿಜವಾಗಿ ದೇವರೆನಿಸಿಕೊಳ್ಳಲು ಯೋಗ್ಯನೇ? ಭ್ರಷ್ಟ ರಾಜಕಾರಣಿಗಳು, ಲಂಚಕೋರ ಅಧಿಕಾರಿಗಳು ಹಾಗೂ ಮಾನವತೆಯಿಲ್ಲದ ಡಾಕ್ಟರುಗಳು ಅಕ್ಷಯ ತೃತೀಯದಂದು ಕಿಲೋಗಟ್ಟಲೆ ಚಿನ್ನ ಬೆಳ್ಳಿ ಕೊಳ್ಳುತ್ತಾರೆ, ಅಂದರೆ ಮುಂದಿನ ದಿನಗಳಲ್ಲಿ ಅವರ ಭ್ರಷ್ಟಾಚಾರ ಹಾಗೂ ನೀಚತನಕ್ಕೆ ದೇವರು ಇನ್ನೂ ಹೆಚ್ಚು ಬೆಂಬಲ ಕೊಡುತ್ತಾನೆ ಎಂದು ಅರ್ಥವೇ?

ಪ್ರಜ್ಞಾವಂತ ಆಸ್ತಿಕರ ತರ್ಕವೆಂದರೆ - ದೇವರ ಶುಭ ಕೈಗಳಿಂದ ಸೃಷ್ಟಿಯಾದ ಪ್ರತಿಯೊಂದೂ ಶುಭವೇ ಆಗಿದೆ. ಹಾಗಿರುವಾಗ ಯಃಕಶ್ಚಿತ್ ಮಾನವರು ದೇವರ ಸೃಷ್ಟಿಯನ್ನು ಶುಭ-ಅಶುಭ ಎಂದು ವಿಂಗಡಿಸುವುದು ದೇವರ ದಕ್ಷತೆ ಹಾಗೂ ಕರ್ತೃತ್ವ ಶಕ್ತಿಯನ್ನೇ ಪ್ರಶ್ನಿಸಿದಂತೆ. ದಿನ-ಸಮಯ-ಕ್ಷಣ-ದಿಕ್ಕು-ಗ್ರಹ-ನಕ್ಷತ್ರ-ವಸ್ತುಗಳು- ಜೀವಿಗಳು ಇವಾವುದೇ ಇರಲಿ ಅವೆಲ್ಲವನ್ನೂ ದೇವರೇ ತನ್ನ ಶುಭ ಕೈಗಳಿಂದಲೇ ಸೃಷ್ಟಿಸಿರುವುದರಿಂದ ಅವುಗಳನ್ನು ಮಾನವರು ಶುಭ -ಅಶುಭ ಎಂದು ವಿಂಗಡಿಸುವುದು ನೇರವಾಗಿ ಸೃಷ್ಟಿಕರ್ತ ದೇವರಿಗೇನೇ ಅವಮಾನ ಮಾಡಿದಂತೆ.

ದೇವರೇ ಸೃಷ್ಟಿಸಿರುವ ಹುಲುಮಾನವನೇ ದೇವರ ಕೌಶಲ್ಯ ಮತ್ತು ಕಾರ್ಯಕ್ಷಮತೆಗೆ ಕ್ವಾಲಿಟಿ ಸರ್ಟಿಫಿಕೇಟ್ ಕೊಡುವಷ್ಟು ದೊಡ್ಡವನಾದನೇ? ದೇವರೇ ಸೃಷ್ಟಿಸಿದ ಗ್ರಹ ನಕ್ಷತ್ರಗಳು ದೇವರನ್ನೆ ಧಿಕ್ಕರಿಸಿ ಅದೇ ದೇವರ ಇನ್ನೊಂದು ಸೃಷ್ಟಿಯಾದ ಮನುಷ್ಯನನ್ನು ಬಾಧಿಸಲು ಸಾಧ್ಯವೇ ಇಲ್ಲ ಎಂಬುದು ವಿವೇಕಿ ಆಸ್ತಿಕರ ನಂಬಿಕೆ. ಈ ನಂಬಿಕೆಗೆ ವಿಚಾರವಾದಿಗಳೂ ಬೆಂಬಲಿಸುತ್ತಾರೆ.

-ಪ್ರವೀಣ್ ಎಸ್ ಶೆಟ್ಟಿ, ಮಂಗಳೂರು

Registered No.RNP/KA/BGS/2036/2014-16 Posted at :BGPSO, Mysore Road, Bangalore-26 Friday R B P LANKESH, Kannada Weekly Price Rs. 15/- 29-04-2015 RNI No. KARKAN2005/14...

ಎಚ್.ಎಂ.ರೇವಣ್ಣನ ಪುತ್ರ ಬೆಳ್ಳಿತೆರೆಗೆ



ರಾಜ್ಯ ರಾಜಕಾರಣಿಗಳ ಮಕ್ಕಳು ನಟರಾಗಿ ಕನ್ನಡ ಚಿತ್ರರಂಗಕ್ಕೆ ಬರುವುದು ಹೊಸದೇನಲ್ಲ. 1993ರಲ್ಲಿ ರಾಜೇಂದ್ರ ಸಿಂಗ್ ಬಾಬು ನಿರ್ದೇಶನದ 'ಹೂವು ಹಣ್ಣು' ಸಿನಿಮಾದಲ್ಲಿ ದಿ. ಗುಂಡೂರಾವ್ ಅವರ ಪುತ್ರ ರಾಜೇಶ್ ನಟಿಸಿದ್ದರೂ ಆನಂತರ ಅವರು ಅದೆಲ್ಲಿಗೋ ಮಾಯವಾಗಿದ್ದರು (ರಾಜೇಶ್ ಇತ್ತೀಚೆಗೆ ತೀರಿಕೊಂಡರು). ಅದಾದ ನಂತರ ದಿ. ಬಂಗಾರಪ್ಪನವರ ಮಗ ಕುಮಾರ್ ಬಂಗರಪ್ಪ ನಾಯಕ ನಟರಾಗಿ ಕೊಂಚ ಹೆಸರು ಮಾಡಿದರೂ ಆನಂತರ ಚಿತ್ರ ರಂಗದಿಂದ ಮರೆಯಾಗಿ ರಾಜಕೀಯದಲ್ಲಿ ಸಕ್ರಿಯರಾದರು. ಆಮೇಲೆ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಸುಪುತ್ರ ರಾಕೇಶ್ ಒಂದು ಚಿತ್ರದಲ್ಲಿ ನಾಯಕನಾಗಿ ನಟಿಸಿದ್ದರೂ ಆ ಸಿನಿಮಾ ತೆರೆ ಕಾಣಲೇ ಇಲ್ಲ.

ಈಗ ಮಾಜಿಮುಖ್ಯಮಂತ್ರಿ ಕುಮಾರಸ್ವಾಮಿಯವರ ಪುತ್ರ ನಿಖಿಲ್ ಕೂಡ ನಟನೆಯತ್ತ ಗಮನ ಹರಿಸಿದ್ದು ಸದ್ಯದಲ್ಲೇ ದೊಡ್ಡ ಮಟ್ಟದ ಬಜೆಟ್‌ನ ಚಿತ್ರ ಸೆಟ್ಟೇರಲಿದೆ. ಇದೇ ಹೊತ್ತಿಗೆ ಮತ್ತೊಬ್ಬ ಪ್ರಸಿದ್ಧ ರಾಜಕಾರಣಿ ಮಗನೂ ಸ್ಯಾಂಡಲ್‌ವುಡ್‌ಗೆ ಎಂಟ್ರಿ ಕೊಡುತ್ತಿದ್ದಾನೆ. ಯಾರು ಆ ಪ್ರಸಿದ್ಧ ರಾಜಕಾರಣಿ ಮತ್ತವರ ಪುತ್ರ?

ನಾವು ಹೇಳುತ್ತಿರುವುದು ಮಾಗಡಿ ಕ್ಷೇತ್ರದ ಮಾಜಿ ಶಾಸಕ ಹಾಗೂ ಹಾಲಿ ವಿಧಾನ ಪರಿಷತ್ ಸದಸ್ಯ, ಮುಖ್ಯಮಂತ್ರಿ ಸಿದ್ದರಾಮಯ್ಯನವರ ಪರಮಾಪ್ತರಾದ ಎಚ್.ಎಂ.ರೇವಣ್ಣನವರ ಪುತ್ರ ಅನೂಪ್. ಹೌದು ಅನೂಪ್ ಸದ್ಯದಲ್ಲೇ ನಾಯಕ ನಟರಾಗುತ್ತಿದ್ದಾರೆ.

ಚಿಕ್ಕಂದಿನಿಂದಲೂ ಅನೂಪ್‌ಗೆ ಬಣ್ಣದ ಬದುಕಿನ ಬಗ್ಗೆ ಸೆಳೆತ. ದೊಡ್ಡ ಹೀರೋ ಆಗ್ಬೇಕು ಅಂತ ಸದಾ ಕನಸು ಕಾಣುತ್ತಿದ್ದ ಅನೂಪ್, ತಮ್ಮ ಗ್ರ್ಯಾಂಡ್ ಎಂಟ್ರಿಗೆ ನಿರ್ದೇಶಕ ಆರ್.ಚಂದ್ರು ಬೆಸ್ಟ್ ಅಂತ ಫೈನಲ್ ಮಾಡಿದ್ದಾರೆ. ಈಗಾಗಲೇ ಸಿನಿಮಾದ ಕಥೆ ಬಗ್ಗೆ ಮಾತುಕತೆ ನಡೆದಿದ್ದು, ಬಂಡವಾಳ ಹಾಕುವುದಕ್ಕೆ ಎಚ್.ಎಂ.ರೇವಣ್ಣ ನಿರ್ಧರಿಸಿದ್ದಾರೆ.

ನಾಯಕನಾಗುವುದಕ್ಕೆ ರೇವಣ್ಣ ಪುತ್ರ ಅನೂಪ್ ಸಕಲ ತಯಾರಿಯಲ್ಲಿ ತೊಡಗಿದ್ದು ಸದ್ಯಕ್ಕೆ ಮುಂಬೈಯಲ್ಲಿ ಅಭಿನಯ ತರಬೇತಿ, ನೃತ್ಯ ಸಾಹಸವನ್ನು ಕಲಿಯುತ್ತಿದ್ದಾರೆ. ಈ ಚಿತ್ರ ಇದೇ ತಿಂಗಳು ಮೂಹೂರ್ತ ಆಚರಿಸಿಕೊಳ್ಳಲಿದೆ.

ಮತ್ತೊಂದು 'ಮಂಜಿನ ಹನಿ' ಆಗಲಿದೆಯ 'ಅಪೂರ್ವ'?



ಒಂದು ಕಾಲವಿತ್ತು; ಕ್ರೇಜಿಸ್ಟಾರ್ ರವಿಚಂದ್ರನ್ ಅವರು ನಿರ್ದೇಶಿಸಿದ್ದ/ನಿರ್ಮಿಸಿದ್ದ ಚಿತ್ರವನ್ನು ಅಂದುಕೊಂಡ ಸಮಯಕ್ಕೆ ಮುಗಿಸಿ, ಹೇಳಿದ ಸಮಯಕ್ಕೆ ಬಿಡುಗಡೆ ಮಾಡುತ್ತಿದ್ದರು, ಆದರೆ ಯಾವಾಗ ಇವರು 'ಮಂಜಿನ ಹನಿ' ಸಿನಿಮಾವನ್ನು ಮಾಡಲು ಪ್ರಾರಂಭಿಸಿದರೋ ಅವಾಗಿನಿಂದ ಕ್ರೇಜಿ ಸ್ಟಾರ್ ರವಿಚಂದ್ರನ್ ಅವರ ಕಾರ್ಯಕ್ಷಮತೆಯೇ ಬದಲಾಯಿತು.

ಮೊದಲು 'ಮಂಜಿನ ಹನಿ' ಸಿನಿಮಾದ ಚಿತ್ರೀಕರಣವನ್ನೆಲ್ಲಾ ಮುಗಿಸಿ, ಗ್ರಾಫಿಕ್ಸ್ ಹಂತದವರೆಗೂ ಬಂದು ನಂತರ ಅದ್ಯಾಕೋ ಸರಿ ಇಲ್ಲ ಎಂದು ನಿರ್ಧರಿಸಿದ ರವಿ ಪುನಃ ನಾಲ್ಕೈದು ಬಾರಿ ಚಿತ್ರೀಕರಿಸಿದರು. ಆದರೆ ಆ ಸಿನಿಮಾ ಇಲ್ಲೀವರೆಗೂ ತೆರೆ ಕಂಡಿಲ್ಲ, ಆ ಸಿನಿಮಾ ಬಗ್ಗೆ ಪತ್ರಕರ್ತರು, ಅಭಿಮಾನಿಗಳು ವಿಚಾರಿಸಿದರೆ "ಗ್ರಾಫಿಕ್ಸ್ ಕೆಲಸಕ್ಕೆ ಇನ್ನು ಸಮಯ ಬೇಕು" ಎಂದು ಉತ್ತರಿಸುವುದನ್ನು ರವಿ ನಿಲ್ಲಿಸಿಲ್ಲ.

ಅದಾದನಂತರ ತಮ್ಮ ಮಗನನ್ನು ಬೆಳ್ಳಿತೆರೆಗೆ ಪರಿಚಯಿಸಲು ಮುಂದಾದ ರವಿಚಂದ್ರನ್ 'ರಣಧೀರ' ಸಿನಿಮಾವನ್ನು ಕೈಗೆತ್ತಿಕೊಂಡರು. ಆದರೆ ಸ್ವಲ್ಪ ದಿನಗಳಲ್ಲೇ ಆ ಚಿತ್ರಕ್ಕೆ ನಾಯಕಿ ಸಿಕ್ಕಿಲ್ಲವೆಂದು ಅದನ್ನು ಅರ್ಧಕ್ಕೆ ನಿಲ್ಲಿಸಿದರು. ಅದ್ಯಾವಾಗ ಅವರ ಪುತ್ರ ತೆರೆಯ ಮೇಲೆ ನಾಯಕನಾಗಿ ಮಿಂಚುತ್ತಾನೋ ಅದು ಕ್ರೇಜಿಸ್ಟಾರ್‌ಗೇ ಗೊತ್ತು.

ಈಗ ಈ ಪಟ್ಟಿಗೆ ಮತ್ತೊಂದು ಸೇರ್ಪಡೆ 'ಅಪೂರ್ವ'. ಮೊದಲು ಏಪ್ರಿಲ್ ತಿಂಗಳಲ್ಲೇ 'ಅಪೂರ್ವ' ಚಿತ್ರ ಬಿಡುಗಡೆಯಾಗುತ್ತದೆ ಎನ್ನಲಾಗಿತ್ತು, ಆದರೆ ರವಿಚಂದ್ರನ್ ಈಗ ಆ ಸುದ್ದಿಯನ್ನು ಅಲ್ಲಗಳೆದಿದ್ದಾರೆ. ಅವರೇ ಹೇಳುವ ಪ್ರಕಾರ ಚಿತ್ರದ ಕೆಲಸಗಳು ಇನ್ನೂ ಸಾಕಷ್ಟು ಬಾಕಿ ಉಳಿದಿವೆಯಂತೆ. "ಬಿಡುಗಡೆ ದಿನಾಂಕವನ್ನು ಮುಂಚಿತವಾಗಿಯೇ ಹೇಳಿ ಪ್ರೇಕ್ಷಕರನ್ನು ಕಾಯಿಸುವುದು ನನಗಿಷ್ಟವಿಲ್ಲ, ನನಗೆ ಸಂಪೂರ್ಣ ತೃಪ್ತಿಯಾದ ನಂತರವಷ್ಟೆ ಚಿತ್ರ ಬಿಡುಗಡೆ ಅನೌನ್ಸ್ ಮಾಡ್ತೀನಿ" ಎಂದಿದ್ದಾರೆ.

"ಈ ಚಿತ್ರದ ಪ್ರತಿ ಸನ್ನಿವೇಶ, ದೃಶ್ಯಗಳು ಹೇಗಿರಬೇಕು ಎಂಬುದು ನನಗೆ ಚೆನ್ನಾಗಿ ಗೊತ್ತು. ಹಾಗಾಗಿ ನಾನೇ ರೀ ರೆಕಾರ್ಡಿಂಗ್ ಮಾಡುತ್ತಿದ್ದೇನೆ. ಇದಕ್ಕೆ ಸಾಕಷ್ಟು ಸಮಯ ತೆಗೆದುಕೊಳ್ಳುತ್ತದೆ. ಹಾಗಾಗಿ ತಡವಾಗಬಹುದು" ಎಂದೂ ರವಿ ಹೇಳುತ್ತಾರೆ.

ಒಟ್ಟಿನಲ್ಲಿ 'ಅಪೂರ್ವ' ಮತ್ತೊಂದು 'ಮಂಜಿನ ಹನಿ' ಆಗದಿದ್ದರೆ ಅಷ್ಟೇ ಸಾಕು ಎನ್ನುವುದು ಅವರ ಅಭಿಮಾನಿಗಳ ಆಸೆ.

ಮತ್ತೆ ನಿರ್ದೇಶನಕ್ಕೆ ಪ್ರಕಾಶ್ ರೈ



'ನಾನೂ ನನ್ನ ಕನಸು', 'ಒಗ್ಗರಣೆ' ತರಹದ ಸದಭಿರುಚಿಯ ಆದರೆ ರಿಮೇಕ್ ಚಿತ್ರಗಳನ್ನು ಕನ್ನಡಕ್ಕೆ ನೀಡಿದ ಪ್ರಕಾಶ್ ರೈ ಈಗ ಮತ್ತೊಂದು ಸಿನಿಮಾವನ್ನು ಕನ್ನಡದಲ್ಲಿ ರಿಮೇಕ್ ಮಾಡಲು ರೆಡಿಯಾಗುತ್ತಿದ್ದಾರೆ. ಹೌದು, ಮಲಯಾಳಂನಲ್ಲಿ ಸಂಚಲನವುಂಟುಮಾಡಿದ 'ಶಟರ್' ಎಂಬ ಚಿತ್ರವನ್ನು ರೈ ಕನ್ನಡಕ್ಕೆ ತರುತ್ತಿದ್ದಾರೆ. ಪ್ರಮುಖ ನಾಲ್ಕು ಪಾತ್ರಗಳ ಸುತ್ತ ನಾಲ್ಕು ದಿನದ ಬದುಕಿನಲ್ಲಿ ಏನೆಲ್ಲ ನಡೆಯಬಹುದು ಎಂದು ತೋರಿಸುವ ಸಿನಿಮಾವಿದು.

ನಾಲ್ಕು ಪಾತ್ರಗಳಲ್ಲಿ ಪ್ರಕಾಶ್ ರೈ, ಗಾಯಕಿ ಎಂ.ಡಿ.ಪಲ್ಲವಿ, ಅಚ್ಯುತ್ ಕುಮಾರ್ ಮತ್ತು ಮೊನ್ನೆಯಷ್ಟೇ ರಾಷ್ಟ್ರ ಪ್ರಶಸ್ತಿ ಪಡೆದ ಸಂಚಾರಿ ವಿಜಯ್ ಅಭಿನಯಿಸಲಿದ್ದಾರೆ. "ಇನ್ನೆರಡು ದಿನದಲ್ಲಿ ಈ ಚಿತ್ರಕ್ಕೆ ಅಂತಿಮ ರೂಪ ಸಿಗಲಿದ್ದು, ಈಗಾಗಲೇ ಕಲಾವಿದರಿಗೆ ಕಥೆ ಹೇಳಿದ್ದೇನೆ. ನಾನೂ ಕೂಡ ಹಲವು ಸಿದ್ಧತೆಗಳನ್ನು ಮಾಡಿಕೊಂಡಿದ್ದೇನೆ" ಅಂತಾರೆ ರೈ. ಅಂದಹಾಗೆ ಈ ಚಿತ್ರವನ್ನೂ ರೈ ಅವರೇ ನಿರ್ದೇಶಿಸಲಿದ್ದಾರೆ.

ಇದೇ ಹೊತ್ತಿಗೆ ಪ್ರಕಾಶ ರೈ ಅವರ ಬಹುದಿನದ ಕನಸೊಂದು ನನಸಾಗಿದೆಯಂತೆ. ವಿಷಯ ಏನಪ್ಪ ಅಂದರೆ ಖ್ಯಾತ ನಿರ್ದೇಶಕ ದಿನೇಶ್ ಬಾಬು 'ಪ್ರಿಯಾಂಕ' ಚಿತ್ರದಲ್ಲಿ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಳ್ಳುವ ಮೂಲಕ ಅವರು ಸಿನಿಮಾದಲ್ಲಿ ನಟಿಸಬೇಕೆನ್ನುವ ಕನಸು ನನಸಾಗಲಿದೆಯಂತೆ.

ಪ್ರಕಾಶ್ ರೈ ಮತ್ತು ಪ್ರಿಯಾಂಕ ಉಪೇಂದ್ರ ಪ್ರಮುಖ ಪಾತ್ರಗಳಲ್ಲಿ ಅಭಿನಯಿಸುತ್ತಿರುವ 'ಪ್ರಿಯಾಂಕ' ಚಿತ್ರದಲ್ಲಿ ಒಬ್ಬ ತನಿಖಾಧಿಕಾರಿ ಪಾತ್ರದಲ್ಲಿ ರೈ ಕಾಣಿಸಿಕೊಳ್ಳುತ್ತಿದ್ದಾರೆ. ರೈ ಪ್ರಕಾರ "ನಾನು ಇಲ್ಲಿಯವರೆಗೆ ಸುಮಾರು ಮುನ್ನೂರು ಜನ ನಿರ್ದೇಶಕರ ಚಿತ್ರಗಳಲ್ಲಿ ಅಭಿನಯಿಸಿದ್ದೇನೆ, ಹೊಸಬರು, ಹಿರಿಯರು, ಕಿರಿಯರು, ಎಲ್ಲಾ ಭಾಷಿಕರು ಆ ಪಟ್ಟಿಯಲ್ಲಿದ್ದಾರೆ. ಆದರೆ ದಿನೇಶ್ ಬಾಬು ಅವರ ಚಿತ್ರದಲ್ಲಿ ಕಾಣಿಸಿಕೊಳ್ಳುವ ಅವಕಾಶ ಸಿಕ್ಕಿರಲಿಲ್ಲ. ನನಗೆ ಅದೀಗ ದೊರೆತಿದೆ. ಅವರ ಸಿನಿಮಾಗಳೆಂದರೆ ನನಗೆ ಅಚ್ಚುಮೆಚ್ಚು. ಕಳೆದ ವರ್ಷ ಬಾಬು ನನಗೆ ಕರೆ ಮಾಡಿ 'ಒಗ್ಗರಣೆ' ಚಿತ್ರದಲ್ಲಿ ಅಭಿನಯಿಸಿದ್ದ ತೇಜಸ್ ಸಂಪರ್ಕ ಕೇಳಿದ್ದರು. ಆವಾಗ ನನ್ನ ಚಿತ್ರದಲ್ಲಿ ಅಭಿನಯಿಸುತ್ತೀರಾ ಎಂದರು. ನಾನು ಹಿಂದೆಮುಂದೆ ನೋಡದೆ ಒಪ್ಪಿಕೊಂಡೆ."

'ಮಾರ್ಗರಿಟಾ' ನೋಡಿ ಭಾವುಕರಾದ ಅಮೀರ್

ನಟಿ ಕಲ್ಕಿ ಅಭಿನಯದ 'ಮಾರ್ಗರಿಟಾ ವಿತ್ ಎ ಸ್ಟ್ರಾ' ಚಿತ್ರ ನೋಡಿದ ಬಾಲಿವುಡ್‌ನ 'ಮಿಸ್ಟರ್ ಪರ್ಫೆಕ್ಷನಿಸ್ಟ್' ಅಮೀರ್ ಖಾನ್ ತುಂಬಾ ಭಾವುಕರಾದರಂತೆ. ಮಿದುಳಿಗೆ ಪಾರ್ಶ್ವವಾಯು ಬಡಿದ ಪಾತ್ರದಲ್ಲಿ ಮನೋಜ್ಞವಾಗಿ ಅಭಿನಯಿಸಿರುವ ಕಲ್ಕಿಯ ನಟನೆಯನ್ನು ನೋಡಿ ಅಮೀರ್‌ಖಾನ್‌ಗೆ ಅಚ್ಚರಿ ಆಯಿತಂತೆ.

ಹಾಗೆಯೇ ಈ ಚಿತ್ರವನ್ನು ವೀಕ್ಷಿಸಿದ 'ಬಿಗ್ ಬಿ' ಅಮಿತಾಭ್ ಬಚ್ಚನ್ ಕೂಡ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. "ತುಂಬಾ ಸೂಕ್ಷ್ಮವಾದ ಚಿತ್ರವಿದು. ಕಲಾವಿದರೂ ಅಷ್ಟೇ, ಸಮರ್ಥವಾಗಿ ಅಭಿನಯಿಸಿದ್ದಾರೆ. ಇದು ಧೈರ್ಯದಿಂದ ಮಾಡಿದ ನೈಜ ಸಿನಿಮಾ" ಎಂದು ಬಚ್ಚನ್ ಟ್ವೀಟ್ ಮಾಡಿದ್ದಾರೆ.

ಅಂತಾರಾಷ್ಟ್ರೀಯ ಚಿತ್ರೋತ್ಸವಗಳಲ್ಲಿ ಎಲ್ಲರ ಪ್ರಶಂಸೆ ಗಳಿಸಿರುವ ಈ ಚಿತ್ರ ಇದೇ ತಿಂಗಳು 17 ರಂದು ತೆರೆ ಕಾಣಲಿದೆ.



ಸಿನಿಮಾ ಸುದ್ದಿ

ಕಾರ್ತಿಕ್ ಸಿ.ಎಸ್

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com